ಮುಂಬಯಿ-ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿ ಒಂದು ಅಧ್ಯಯನ

ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಶ್ರೀ. ಎಸ್. ಎಂ. ಹತ್ತಿ
ಕೆ.ಇ.ಎಸ್

ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌಢ ಶಾಲೆ, ಮುತ್ತಗಿ
ತಾ. ಕಲಘಟಗಿ, ಜಿ. ಧಾರವಾಡ

ಮಾರ್ಗದರ್ಶಕರು

ಡಾ. ಎನ್.ಬಿ. ಕೊಂಗವಾಡ
ಎಂ.ಎ., ಪಿಎಚ್.ಡಿ

ಪ್ರಾಚಾರ್ಯರು
ಸನಾ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ
ಹಾಗೂ
ಬಾಹ್ಯ ಮಾರ್ಗದರ್ಶಕರು
ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ

ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩೨೭೬

೨೦೦೭

ಮುಂಬಯಿ-ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿ ಒಂದು ಅಧ್ಯಯನ

ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಶ್ರೀ. ಎಸ್. ಎಂ. ಹತ್ತಿ

ಕೆ.ಇ.ಎಸ್

ಮುಖ್ಯೋಪಾಧ್ಯಾಯರು
ಸರಕಾರಿ ಪ್ರೌಢ ಶಾಲೆ, ಮುತ್ತಗಿ
ತಾ. ಕಲಘಟಗಿ, ಜಿ. ಧಾರವಾಡ

ಮಾರ್ಗದರ್ಶಕರು

ಡಾ. ಎನ್.ಬಿ. ಕೊಂಗವಾಡ

ಎಂ.ಎ., ಪಿಎಚ್.ಡಿ

ಪ್ರಾಚಾರ್ಯರು
ಸನಾ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ
ಹಾಗೂ
ಬಾಹ್ಯ ಮಾರ್ಗದರ್ಶಕರು
ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ

ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩೨೭೬

೨೦೦೭

ಸಮರ್ಪಣೆ

ಸದಾ ನಮ್ಮ ಏಳಿಗೆಯನ್ನು
ಬಯಸುತ್ತಿರುವ
ಪೂಜ್ಯ ತಂದೆ - ತಾಯಿಯವರ
ಅಡಿದಾವರೆಗಳಿಗೆ
ಈ ಕೃತಿ
ಸಮರ್ಪಿತ

- ಎಸ್. ಎಂ. ಹತ್ತಿ



ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣ ಪತ್ರ

ಶ್ರೀ ಶಿವಾಜಿ ಮನೋಹರ ಹತ್ತಿ ಇವರು **''ಮುಂಬಯಿ - ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿ''** ಒಂದು ಅಧ್ಯಯನ ಎಂಬ ವಿಷಯದ ಮೇಲೆ ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ (ಕನ್ನಡ ವಿಶ್ವವಿದ್ಯಾಲಯ, ಹಂಪಿ) ಇಲ್ಲಿ ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನ ಕೈಗೊಂಡು ಕನ್ನಡ ವಿಶ್ವವಿದ್ಯಾಲಯದ ಪಿ ಎಚ್.ಡಿ ಪದವಿ ಪ್ರಾಪ್ತಿಗಾಗಿ, ಸಾದರಪಡಿಸಿರುವ ಈ ಮಹಾಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು ಇದುವರೆಗೂ ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಹಾಗೂ ಯಾವುದೇ ಪದವಿ, ಡಿಪ್ಲೋಮಾಗಳಿಗೆ ಅಂಗೀಕಾರವಾಗಿಲ್ಲವೆಂದು ಈ ಪ್ರಮಾಣ ಪತ್ರದ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಧಾರವಾಡ
ದಿನಾಂಕ: ೮-೫-೨೦೦೭

ಮಾರ್ಗದರ್ಶಕರು
ಡಾ. ಎನ್.ಬಿ.ಕೊಂಗವಾಡ
ಎಂ.ಎ., ಪಿಎಚ್.ಡಿ
ಪ್ರಾಚಾರ್ಯರು
ಸನಾ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ
ಹಾಗೂ
ಬಾಹ್ಯ ಮಾರ್ಗದರ್ಶಕರು
ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ

ಘೋಷಣಾ ಪತ್ರ

ನಾನು ಶಿವಾಜಿ ಮನೋಹರ ಹತ್ತಿ, ''ಮುಂಬಯಿ - ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿ'' ಒಂದು ಅಧ್ಯಯನ ಎಂಬ ವಿಷಯದ ಮೇಲೆ ಡಾ. ಎನ್.ಬಿ. ಕೊಂಗವಾಡ, ಪ್ರಾಚಾರ್ಯರು, ಸನಾ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ ಹಾಗೂ ಬಾಹ್ಯ ಮಾರ್ಗದರ್ಶಕರು, ಕುವೆಂಪು ಅಧ್ಯಯನಕೇಂದ್ರ, ಕುಪ್ಪಳಿ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನ ಕೈಗೊಂಡು ಕನ್ನಡ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪ್ರಾಪ್ತಿಗಾಗಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿರುವೆ. ಇದು ಸಂಶೋಧನಾ ಕೃತಿಯಾಗಿದ್ದು, ಈ ಮೊದಲು ಎಲ್ಲಿಯೂ ಇಡಿಯಾಗಿ ಇಲ್ಲವೇ ಬಿಡಿಯಾಗಿ ಬಳಸಿ ಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಧಾರವಾಡ

ದಿನಾಂಕ: ೮-೫-೨೦೦೭

ಸಂಶೋಧಕರು

ಎಸ್. ಎಂ. ಹತ್ತಿ

ಅರಿಕೆ

ಮುಂಬಯಿ - ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ಇದುವರೆಗೂ ಆಳವಾದ ಅಧ್ಯಯನ ನಡೆದಿರುವುದಿಲ್ಲ. ಕೇವಲ ಕೆಲವು ಲೇಖನಗಳಿಂದ ಸಂಕ್ಷಿಪ್ತವಾಗಿ ಅರಿತುಕೊಳ್ಳಬಹುದಾಗಿದೆ. ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿಗಳ ಕುರಿತಂತೆ ವಿವರಗಳನ್ನು ಹೊಂದಿರುವ ಮೊಟ್ಟಮೊದಲನೆಯ ಸಂಶೋಧನೆ ಇದಾಗಿದೆ. ಈ ದೃಷ್ಟಿಯಿಂದ ಈ ಸಂಶೋಧನೆಗೆ ತನ್ನದೇ ಆದ ಮಹತ್ವವಿದೆ. ಇಂತಹ ಪ್ರಬಂಧವನ್ನು ರಚಿಸುವಲ್ಲಿ ನನಗೆ ನೆರವಾದ, ಸಹಾಯ, ಸಲಹೆ ನೀಡಿದವರಿಗೆ ಉಪಕಾರ ಸ್ಮರಿಸುವುದು ನನ್ನ ಆದ್ಯ ಕರ್ತವ್ಯವಾಗಿದೆ. ಸರ್ವ ಪ್ರಥಮವಾಗಿ ನನ್ನ ಜೀವಂತ ದೇವರುಗಳಾದ ತಂದೆ-ತಾಯಿ ಮತ್ತು ಸಾಕಿ ಸಲುಹಿದ ಅಜ್ಜಿಯವರ ಅಡಿದಾವರೆಗಳಿಗೆ ವಿನಮ್ರವಾಗಿ ನಮಸ್ಕರಿಸಿ ಹಾಗೂ ಎರಡನೇ ದೈವ ನನ್ನ ಮಹಾಪ್ರಬಂಧದ ವಿಷಯವಸ್ತು ಸೂಚಿಸಿ ಮಾರ್ಗದರ್ಶನ ಮಾಡಿದ ಅತ್ಯಂತ ಜನಪ್ರಿಯ ಪ್ರಾಚಾರ್ಯರೂ, ಶಿಕ್ಷಣತಜ್ಞರೂ ಆದ ಪೂಜ್ಯ ಡಾ. ಎನ್. ಬಿ. ಕೊಂಗವಾಡ ವಿದ್ಯಾಗುರುಗಳಿಗೆ ನನ್ನ ಅನಂತ ನಮನಗಳು.

ಶಿಕ್ಷಣ ಇಲಾಖೆಯಲ್ಲಿಯೇ ಕಾರ್ಯ ನಿರ್ವಹಿಸುತ್ತಿರುವ ನನಗೆ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿ ಬಗ್ಗೆ ಅಧ್ಯಯನ ಮಾಡಲು ಪ್ರೇರೇಪಿಸಿ, ಸಲಹೆಗಳನ್ನು ನೀಡಿದ ಡಾ. ಎಫ್.ಟಿ. ಹಳ್ಳಿಕೇರಿ, ಮುಖ್ಯಸ್ಥರು ಹಾಗೂ ಡಾ. ಎಸ್.-ಎಸ್. ಅಂಗಡಿ ಪ್ರಾಧ್ಯಾಪಕರು, ಹಸ್ತಪ್ರತಿ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಅವರಿಗೆ ಹಾಗೂ ಈ ಸಂಶೋಧನೆ ಅರ್ಥಪೂರ್ಣವಾಗಲು ಸೂಚನೆಗಳನ್ನು ನೀಡಿದ ಡಾ. ಅಮರೇಶ ನುಗಡೋಣಿ, ಮುಖ್ಯಸ್ಥರು ಮತ್ತು ಡಾ. ರಹಮತ್ ತರೀಕೆರೆ ಪ್ರಾಧ್ಯಾಪಕರು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಅವರಿಗೆ ಮತ್ತು ಡಾ. ಕೆ.ಸಿ. ಶಿವಾರೆಡ್ಡಿ ಪ್ರಾಧ್ಯಾಪಕರು, ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ ಅವರಿಗೆ ಅನಂತಾನಂತ ನಮನಗಳು.

ನನ್ನ ಈ ಸಂಶೋಧನಾ ಕಾರ್ಯಕ್ಕೆ ಪ್ರೋತ್ಸಾಹಿಸಿ, ನೆರವು ನೀಡಿದ ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಅವರಿಗೆ ಹಾಗೂ ಆಯುಕ್ತರ ಕಾರ್ಯಾಲಯದ ಅಧಿಕಾರಿ ವರ್ಗದವರಿಗೂ, ಸಿಬ್ಬಂದಿ ವರ್ಗದವರಿಗೂ ಮತ್ತು ಎಲ್ಲ ಜಿಲ್ಲೆ ಹಾಗೂ ತಾಲೂಕು ಮಟ್ಟದ ಅಧಿಕಾರಿ ವರ್ಗದವರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ತುಂಬ ಉಪಕೃತನಾಗಿದ್ದೇನೆ.

ನನ್ನ ಸಂಶೋಧನೆಗೆ ಹಾಗೂ ಸಾಹಿತ್ಯ ಕೃಷಿಗೆ ಸದಾ ಸ್ಫೂರ್ತಿಯ ಸೆಲೆಯಾಗಿರುವ ಡಾ. ಗಿರಡ್ಡಿ ಗೋವಿಂದರಾಜ ಹಿರಿಯ ಸಾಹಿತಿ, ವಿಮರ್ಶಕರು ಮತ್ತು ಶ್ರೀ ಮೋಹನ ನಾಗಮ್ಮನವರ ಸಾಹಿತಿ ಅವರನ್ನು ಹೃದಯಪೂರ್ವಕವಾಗಿ ನೆನೆಯುತ್ತೇನೆ. ಅಲ್ಲದೇ ಈ ಸಂಶೋಧನೆಗೆ ಅನೇಕ ಸಲಹೆ ಸೂಚನೆ ನೀಡಿದ ಕನ್ನಡ ನಾಡು, ನುಡಿ ಹಾಗೂ ಗಡಿಗಳ ಬಗೆಗೆ ಅಪಾರ ಅನುಭವ ಹೊಂದಿರುವ ಹಿರಿಯರಾದ ಬೆಳಗಾವಿಯ ಶ್ರೀ ಎಸ್.ವ್ಹಿ. ಪಾಟೀಲ ರವರಿಗೆ ಹಾಗೂ ಬೆಳಗಾವಿಯ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿಯ ಅಧ್ಯಕ್ಷರು, ಕನ್ನಡ ಹೋರಾಟಗಾರರೂ ಆದ ಶ್ರೀ ಅಶೋಕ ಚಂದರಗಿ ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಸಂಶೋಧನೆಗೆ ಯಾವಾಗಲೂ ಮೆಚ್ಚುಗೆಯ ಮಾತುಗಳನ್ನಿತ್ತು ಪ್ರೋತ್ಸಾಹಿಸಿದ ಶ್ರೀ ಗೋವಿಂದಹಳ್ಳಿ ದೇವೇಗೌಡ, ಕನ್ನಡ ಕಣ್ಮಣಿ ಪ್ರಕಾಶನ, ಬೆಂಗಳೂರು ಅವರಿಗೆ ಹಾಗೂ ನನ್ನ ಆತ್ಮೀಯ ಹಿತೈಷಿಗಳಾದ ಶ್ರೀ ಆಯ್.ಜಿ.ಬೆನಕೊಪ್ಪ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗದಗ (ನಗರವಲಯ), ಡಾ. ಜಿ.ಕೆ. ಎಸ್. ವರ್ಧನ್ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೊಪ್ಪಳ ಮತ್ತು ಶ್ರೀ ವ್ಹಿ.ಜಿ.ಮಠಪತಿ (ಬಸವಕಂದ) ಸೊರಟೂರು ಅವರಿಗೂ, ನನ್ನ ಸಹೋದ್ಯೋಗಿಗಳಾದ ಶ್ರೀಮತಿ ಬಿ. ಎಂ. ಜೋಶಿ ಸ.ಶಿ, ಶ್ರೀಮತಿ ಬಿ. ಎನ್. ಅನ್ನಪೂರ್ಣ ಸ.ಶಿ, ಶ್ರೀ ಎಸ್. ಎಸ್. ಜಾಡರ ಸ.ಶಿ, ಶ್ರೀಮತಿ ಎಸ್. ಎಂ. ಶಾನಭಾಗ ಸ.ಶಿ, ಶ್ರೀ ಎಸ್. ಎಸ್. ಅಚ್ಚಮ್ಮನವರ ಹಾಗೂ ಎಲ್ಲ ಗುರು - ಹಿರಿಯ ಸನ್ಮಿತ್ರರಿಗೂ ನನ್ನ ನಮನಗಳು.

ಈ ಸಂಶೋಧನೆಗೆ ಸೂಕ್ತ ಸಹಾಯ ನೀಡಿದ ಡಾ. ಬಿ. ಎಸ್. ಗಿರೆಪ್ಪಗೌಡರ ನಿವೃತ್ತ ಮುಖ್ಯಸ್ಥರು, ಅಪರಾಧ ಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅವರಿಗೂ, ಶ್ರೀ ವಸಂತಕುಮಾರ ಜಿ. ಎಸ್ ಅವರಿಗೂ, ಅಚ್ಚುಕಟ್ಟಾಗಿ ಪುಟ ವಿನ್ಯಾಸಗೊಳಿಸಿದ ಶ್ರೀ ಬಸವರಾಜ ಮ್ಯಾಗೇರಿ ಅವರಿಗೂ ನನ್ನ ವಂದನೆಗಳು.

ಈ ಸಂಶೋಧನೆಗೆ ಸಹಕರಿಸಿದ ನನ್ನ ಕುಟುಂಬ ವರ್ಗದ ಸರ್ವರಿಗೂ ನಾನು ಚಿರ ಋಣಿಯಾಗಿದ್ದೇನೆ. ಒಟ್ಟಾರೆ ಈ ಸಂಶೋಧನಾ ಕಾರ್ಯದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಾಯ ಮಾಡಿದವರೆಲ್ಲರ ಋಣಭಾರ ನನ್ನ ಮೇಲಿದೆ. ಎಲ್ಲರ ಉಪಕಾರವನ್ನು ಸದಾಮರೆಯದೇ ಸ್ಮರಿಸುತ್ತೇನೆ.

(ಎಸ್. ಎಂ. ಹತ್ತಿ)

ಸ್ಥಳ : ಧಾರವಾಡ

ದಿನಾಂಕ : ೮-೫-೨೦೦೭

ಪರಿವಿಡಿ

ಅಧ್ಯಾಯ - ೧ ೧-೧೩

ಅಧ್ಯಯನದ ಸ್ವರೂಪ, ವ್ಯಾಪ್ತಿ, ಉದ್ದೇಶ ಮತ್ತು ಮಹತ್ವ

ಅಧ್ಯಾಯ - ೨ ೧೪-೪೧

ಮುಂಬಯಿ - ಕರ್ನಾಟಕದ ಐತಿಹಾಸಿಕ- ಶೈಕ್ಷಣಿಕ ಹಿನ್ನೆಲೆ

ಅಧ್ಯಾಯ - ೩ ೪೨-೬೧

ಮುಂಬಯಿ - ಕರ್ನಾಟಕದ ಗಡಿನಾಡ ಪ್ರದೇಶಗಳಲ್ಲಿಯ

ಕನ್ನಡಿಗರ ಶೈಕ್ಷಣಿಕ ಸ್ವರೂಪ

ಅದ್ಯಾಯ - ೪ ೬೨-೧೦೩

ಮುಂಬಯಿ - ಕರ್ನಾಟಕದ ಗಡಿನಾಡ ಕನ್ನಡಿಗರ ಶಿಕ್ಷಣ
ಪದ್ಧತಿಗಳ ಅನುಷ್ಠಾನದ ವಿವಿಧ ಆಯೋಗ/
ಸಮಿತಿಗಳ ಶಿಫಾರಸ್ಸುಗಳ ಪರಿಶೀಲನೆ

ಅಧ್ಯಾಯ- ೫ ೧೦೪-೨೪೧

ಮುಂಬಯಿ - ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ

ಸ್ಥಿತಿಗತಿಗಳ ವಿಶ್ಲೇಷಣೆ ಮತ್ತು ಅರ್ಥವಿವರಣೆ

ಅಧ್ಯಾಯ - ೬ ೨೪೨-೨೬೮

ಮುಂಬಯಿ - ಕರ್ನಾಟಕದ ಗಡಿನಾಡ ಕನ್ನಡಿಗರ

ಶೈಕ್ಷಣಿಕ ಸಮಸ್ಯೆಗಳು

ಅಧ್ಯಾಯ- ೭ ೨೬೯-೨೭೩

ಉಪಸಂಹಾರ

ಆಧಾರ ಗ್ರಂಥಗಳು ೨೭೪-೨೮೧

ಅಧ್ಯಾಯ - ೧

ಅಧ್ಯಯನದ ಸ್ವರೂಪ, ವ್ಯಾಪ್ತಿ, ಉದ್ದೇಶ ಮತ್ತು ಮಹತ್ವ

೧೯೫೬ರಲ್ಲಿ ವಿಶಾಲ ಕರ್ನಾಟಕ ರಾಜ್ಯ ಉದಯವಾದಾಗ ಕಾಣಿಸಿಕೊಂಡ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮತೋಲನಗಳು ಇಂದಿಗೂ ಕಾಣಿಸಿಕೊಳ್ಳುತ್ತಿರುವುದು ಒಂದು ದುರಂತವಾಗಿದೆ. ಮುಂಬಯಿ, ಮದ್ರಾಸ್, ಹೈದರಾಬಾದಗಳ ಗಡಿ ಪ್ರದೇಶಗಳಲ್ಲಿ ಹರಿದು ಹಂಚಿ ಹೋದಂತಹ ಕನ್ನಡಿಗರ ಬದುಕು ಉನ್ನತಕ್ಕೆ ಏರಿಸಬೇಕು ಎಂಬುದು ಏಕೀಕರಣದ ಮೂಲ ಉದ್ದೇಶವಾಗಿತ್ತು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಮುಂಬಯಿ- ಕರ್ನಾಟಕದ ಜನರು ಮುಂಚೂಣಿಯಲ್ಲಿದ್ದರು. ಆದರೆ ಗಡಿನಾಡಿನ ಜನರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಯ ಏಕೀಕರಣವು ಬದಲಾಗುತ್ತಿದೆಯೋ ಅಥವಾ ಕನಸಾಗಿದೆಯೋ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಸಾಪೇಕ್ಷವಾಗಿ ಇಂದಿಗೂ ಮುಂಬಯಿ- ಕರ್ನಾಟಕ ಪ್ರದೇಶವು ಮೈಸೂರು- ದಕ್ಷಿಣ ಕರ್ನಾಟಕ ಪ್ರದೇಶಕ್ಕಿಂತ ಎಲ್ಲ ರೀತಿಯಲ್ಲೂ ಹಿಂದುಳಿದಿದೆ ಎಂಬ ಭಾವನೆ ಜನರಲ್ಲಿ ಮೂಡಿಬಿಟ್ಟ ಕಾರಣ ಇದೊಂದು ಶೈಕ್ಷಣಿಕ ಅಪಾಯಕಾರಿ ಬೆಳವಣಿಗೆಯ ಸಮಸ್ಯೆಯಾಗಿದೆ. ಭಾಷೆ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ಚದುರಿ ಹೋದ ಜನರನ್ನು ಭಾವನಾತ್ಮಕವಾಗಿ ನಾವೆಲ್ಲ ಭಾರತೀಯರೆಂದು ಒಂದುಗೂಡಿಸಬಹುದಾಗಿದೆ. ಆದರೆ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಸಮಾನತೆಗಳಿಂದ ಕೊರಗುತ್ತಿರುವವರ ಸಮಸ್ಯೆಗಳನ್ನು ಭಾಷೆ , ಸಂಸ್ಕೃತಿ ಹೆಸರಿನಲ್ಲಿ ಬಹಳ ಕಾಲದವರೆಗೆ ಒಂದಾಗಿ ಹಿಡಿದಿಡುವುದು ಕಠಿಣವಾಗಿದೆ. ಅನೇಕ ರಾಜ್ಯಗಳ ವಿಭಜನೆಗೆ ಕಾರಣವಾದ ಗಂಡಾಂತರ ಪರಿಸ್ಥಿತಿಗಳು, ಕರ್ನಾಟಕಕ್ಕೂ ಒದಗಿಬಂದಿವೆ. ಯಾವ ಜನರು ಕನ್ನಡಿಗರನ್ನು ಒಂದುಗೂಡಿಸಬೇಕೆಂದು ಹೋರಾಟ ಮಾಡಿದ್ದಾರೋ, ಅವರೇ ಇಂದು ಪ್ರಾದೇಶಿಕ ಅಸಮತೋಲನದ ಹೆಸರಿನಲ್ಲಿ ತಮ್ಮ ಶೈಕ್ಷಣಿಕ ಮತ್ತು ಉದ್ಯೋಗತನ ಗಳಿಸುವುದಕ್ಕೆ ವಿಫಲರಾಗುತ್ತಿರುವುದನ್ನು ಮುಂದಿಟ್ಟುಕೊಂಡು, ಹೈದರಾಬಾದ- ಕರ್ನಾಟಕ ಮತ್ತು ಮುಂಬಯಿ- ಕರ್ನಾಟಕ ರಾಜ್ಯಗಳು ಬೇಕಾಗಿವೆ, ಎಂದು ಚಳವಳಿ ನಡೆಸುತ್ತಲೇ ಬರುತ್ತಿದ್ದಾರೆ. ಇದು ಪ್ರತ್ಯೇಕ ರಾಜ್ಯವೇ ಅಸಮತೋಲನಕ್ಕೆ ಪರಿಹಾರ ಎನ್ನುವುದು ಗಡಿನಾಡ ಜನರಲ್ಲಿ ಜಾಗೃತವಾಗಿಬಿಟ್ಟಿದೆ.

ಕರ್ನಾಟಕ ರಾಜ್ಯವು ಕನ್ನಡ ಭಾಷೆಯನ್ನು ಪ್ರಧಾನವಾಗಿ ಮಾತನಾಡುವ ಜನರು ವಾಸವಾಗಿರುವ ಪ್ರದೇಶವಾಗಿದ್ದು, ಭಾರತ ಪರ್ಯಾಯ ದ್ವೀಪದ ಪಶ್ಚಿಮ- ಮಧ್ಯಭಾಗದಲ್ಲಿದೆ.[೧]

ಬಹಳ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದ ಭಾರತದಲ್ಲಿ ಅಷ್ಟೇ ಉಜ್ವಲವಾದ ಮತ್ತು ಮಹತ್ತರವಾದ ಸ್ಥಾನವನ್ನು ಕನ್ನಡನಾಡು ಅಥವಾ ಕರ್ನಾಟಕವು ಹೊಂದಿದೆ. ಇದು ಪುರಾತನಕಾಲದಿಂದಲೂ ಪೌರಾಣಿಕ ಮತ್ತು ಐತಿಹಾಸಿಕ, ಭೌಗೋಳಿಕ, ಚಾರಿತ್ರಿಕ ಹಿರಿಮೆ, ಸಾಮಾಜಿಕ , ಧಾರ್ಮಿಕ ಮತ್ತು ಕಲಾತ್ಮಕ ಸಂಗತಿಗಳಿಂದಾಗಿ ಮಹತ್ವದ ಸ್ಥಾನವನ್ನು ಪಡೆದ ನಾಡಾಗಿದೆ ಮತ್ತು ವಿಶಿಷ್ಟ ಸಂಸ್ಕೃತಿಯ ನೆಲೆಯಾಗಿದೆ. ಹಲವಾರು ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟು ಸುದೀರ್ಘಕಾಲದ ಪರಂಪರೆಯನ್ನು ಹೊಂದಿ, ಸರ್ವಧರ್ಮಗಳ ಸಮನ್ವಯದ ಭೂಮಿಯಾಗಿದೆ. ಕರ್ನಾಟಕದ ಇತಿಹಾಸ ಪುಟಗಳನ್ನು ತಿರುವಿ ಹಾಕುತ್ತಾ ಹೋದರೆ ಇಲ್ಲಿಯ ರಮ್ಯ ಇತಿಹಾಸ ನಮಗೆ ತಿಳಿದು ಬರುತ್ತದೆ.

ಕರ್ನಾಟಕಕ್ಕೆ ತನ್ನದೇ ಆದ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಸಾಂಸ್ಕೃತಿಕ, ರಾಜಕೀಯ ಪರಂಪರೆಯನ್ನು ಉಳಿಸಿ ಬೆಳೆಸಿಕೊಳ್ಳುವುದರೊಂದಿಗೆ ಶಾತವಾಹನ, ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ಯಾದವರು ವಿಜಯನಗರ, ಕೆಳದಿಯ ಅರಸರಿಂದ ಹಿಡಿದು ಮೈಸೂರಿನ ಅರಮನೆವರೆಗೆ ಪರಂಪರೆ ಹರಡಿದೆ. ಕನ್ನಡದ ಅತ್ಯಂತ ಪ್ರಾಚೀನ ಕೃತಿ 'ಕವಿರಾಜ ಮಾರ್ಗ'ದಲ್ಲಿ ''ಕಾವೇರಿಯಿಂದ ಮಾ ಗೋದಾವರಿ ವರಮಿರ್ಪ ನಾಡದು ಕನ್ನಡದೊಳ್'' ಎಂಬ ಉಕ್ತಿಯಲ್ಲಿ ಕನ್ನಡ ನಾಡು ಕಾವೇರಿಯಿಂದ ಗೋದಾವರಿಯವರೆಗೆ ಪಸರಿಸಿತ್ತೆಂದು ವರ್ಣಿಸಿರುವುದು ಒಂದು ಐತಿಹಾಸಿಕ ಸತ್ಯ. ವಿವಿಧ ರಾಜ್ಯಾಡಳಿತದಲ್ಲಿ ಕರ್ನಾಟಕದ ಗಡಿ ಹಿಗ್ಗಿದಂತೆ ಕುಗ್ಗಿದ್ದೂ ಉಂಟು. ಉಲ್ಕೆಯಂತೆ ಕಾಣಿಸಿ ಉರಿದು ಹೋದ ಮುಸ್ಲಿಂ ಆಳ್ವಿಕೆಯ ನಂತರ ಹರಿದು ಹಂಚಿಹೋಗಿತ್ತು. ಚಿಕ್ಕಪುಟ್ಟ ಹಲವು ದೇಶಿಯ ಸಂಸ್ಥಾನಗಳಲ್ಲದೆ ಮದ್ರಾಸ್, ಮುಂಬಯಿ, ಹೈದರಾಬಾದ ಪ್ರದೇಶಗಳಲ್ಲಿಯೂ ಕನ್ನಡದ ಭೂಭಾಗ ಸೇರಿಕೊಂಡಿತ್ತು. ಈ ಕಾರಣಗಳಿಂದಾಗಿ, ಕರ್ನಾಟಕದ ಪ್ರಗತಿ ಕುಂಠಿತವಾಗಿತ್ತು. ಆದ್ದರಿಂದ ಕನ್ನಡ ಮಾತನಾಡುವ ಜನರೆಲ್ಲರೂ ಒಂದೇ ಆಡಳಿತಕ್ಕೆ ಸೇರಬೇಕೆಂದು ಕನ್ನಡಿಗರ ಆಶೆಯಾಗಿತ್ತು. ಹರಿದು ಹಂಚಿಹೋಗಿದ್ದ ನಾಡಿನ ಏಕೀಕರಣವಾಗಬೇಕೆಂದು ಕನ್ನಡಿಗರು ವಿವಿಧ ಭಾಗಗಳ ಜನರಂತೆ ತಮ್ಮ ಪ್ರಾಂತದ ನಿರ್ಮಾಣಕ್ಕಾಗಿ ಕಂಕಣ ಬದ್ಧರಾಗಿ ನಿಸ್ವಾರ್ಥ ಮತ್ತು ದೀರ್ಘ ಹೋರಾಟದ ಫಲದಿಂದಾಗಿ ಅಖಂಡ ಕರ್ನಾಟಕ ರೂಪುಗೊಂಡಿತು. ಹರಿದು ಹಂಚಿಹೋಗಿದ್ದ ಕನ್ನಡಿಗರ ಭೂಭಾಗ ಒಂದುಗೂಡಿಸಿ ೧೯೫೬ ನವೆಂಬರ ೧ ರಂದು 'ಮೈಸೂರು ರಾಜ್ಯ' ಎಂದು ನಾಮಕರಣ ಮಾಡಿದರು.[೨]

೧೯೫೬ ರ ರಾಜ್ಯ ಪುನರ್ವಿಂಗಡಣಾ ಕಾಯಿದೆಯ ಪ್ರಕಾರ ರಾಜ್ಯದ ಪ್ರಾಕೃತಿಕ ಮೇರೆಗಳಲ್ಲಿ ಮತ್ತು ವಿಸ್ತೀರ್ಣದಲ್ಲಿ ಆದ ಬದಲಾವಣೆ ಕೊನೆಯದು. ನವೆಂಬರ ೧, ೧೯೫೬ ರಲ್ಲಿ ಮೇಲಿನ ಕಾನೂನಿನಂತೆ ರಚಿತವಾದ ಈಗಿನ ರಾಜ್ಯವು ಈ ಕೆಳಗಿನ ಪ್ರಾಂತಗಳಿಂದ ಕೂಡಿದೆ.

ಅವುಗಳಾವುವೆಂದರೆ,

೧. ೧೯೫೬ ರ ಹಿಂದಿನ 'ಬಿ' ವಿಭಾಗದ ರಾಜ್ಯವಾದ ಮೈಸೂರು ರಾಜ್ಯ(ಬಳ್ಳಾರಿ ಜಿಲ್ಲೆ ಸೇರಿದಂತೆ)

೨. ಮೊದಲಿನ ಮುಂಬಯಿ ರಾಜ್ಯದ ಬೆಳಗಾವಿ ಜಿಲ್ಲೆ (ಚಂದಗಡ ತಾಲೂಕು ಬಿಟ್ಟು) ಮತ್ತು ಬಿಜಾಪೂರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು.

೩.. ಹಿಂದಿನ ಹೈದರಾಬಾದ್ ರಾಜ್ಯದ ಕಲ್ಬುರ್ಗಿ ಜಿಲ್ಲೆ(ಕೋಡಂಗಲ್ ಮತ್ತು ತಾಂಡೂರ್ ತಾಲೂಕುಗಳನ್ನು ಬಿಟ್ಟು), ರಾಯಚೂರು ಜಿಲ್ಲೆ(ಆಲಂಪುರ ಮತ್ತು ಗದ್ವಾಲ್ ತಾಲೂಕುಗಳನ್ನು ಬಿಟ್ಟು) ಮತ್ತು ಬೀದರ ಜಿಲ್ಲೆ (ಅಹಮದ್‌ಪುರ, ನೀಲಂಗಾ ಮತ್ತು ಉದ್ಗೀರ್ ತಾಲೂಕುಗಳನ್ನು ಬಿಟ್ಟು)ಗಳು.

೪. ಹಿಂದಿನ ಮದ್ರಾಸ್ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡು ತಾಲೂಕು ಮತ್ತು ಅಮ್ಮಿನ್‌ದೀವ್ ದ್ವೀಪಗಳನ್ನು ಬಿಟ್ಟು) ಮತ್ತು ಕೊಯಮತ್ತೂರು ಜಿಲ್ಲೆಗೆ ಸೇರಿದ ಕೊಳ್ಳೇಗಾಲ ತಾಲೂಕು, ಮತ್ತು

೫. 'ಸಿ' ವಿಭಾಗಕ್ಕೆ ಸೇರಿದ ಕೊಡಗು ರಾಜ್ಯ.

ಹೊಸ ಮೈಸೂರು ರಾಜ್ಯ(ಕರ್ನಾಟಕ) ದ ಈ ಐದು ಭಾಗಗಳ ಪೈಕಿ ಪ್ರತಿಯೊಂದರ ವಿಸ್ತೀರ್ಣ ಮತ್ತು ಜನಸಂಖ್ಯೆ(೧೯೫೧ ರ ಜನಗಣತಿಯಂತೆ) ಕೆಳಗಿನಂತಿವೆ.

ಪ್ರದೇಶಗಳು	ವಿಸ್ತೀರ್ಣ (ಚದರ ಕಿ.ಮೀ)	ಜನಸಂಖ್ಯೆ
೧. ಹಳೆಯ ಮೈಸೂರು ರಾಜ್ಯ (ಬಳ್ಳಾರಿ ಜಿಲ್ಲೆಯೂ ಸೇರಿ)	೮೬,೨೭೩ (೩೩,೩೧೦)	೯೩,೪೩,೬೩೪
೨. ರಾಜ್ಯ ಪುನರ್ವಿಂಗಡಣಾ ಕಾನೂನಿನ ಪ್ರಕಾರ ಮುಂಬಯಿ ರಾಜ್ಯದಿಂದ ವರ್ಗಾಯಿಸಲ್ಪಟ್ಟ ಪ್ರದೇಶಗಳು	೫೪,೪೬೪ (೨೧,೦೨೯)	೫೧,೩೫,೭೪೬
೩.ಹೈದರಾಬಾದ್ ರಾಜ್ಯದಿಂದ ವರ್ಗಾಯಿಸಲ್ಪಟ್ಟ ಪ್ರದೇಶಗಳು	೩೫,೬೮೭ (೧೩,೭೭೯)	೨೭,೧೮,೨೯೬
೪. ಮದ್ರಾಸ್ ರಾಜ್ಯದಿಂದ ವರ್ಗಾಯಿಸಲ್ಪಟ್ಟ ಪ್ರದೇಶಗಳು	೧೧,೨೨೩ (೪,೩೩೩)	೧೪,೬೯,೮೨೫
೫. ಕೊಡಗು ರಾಜ್ಯ	೪,೧೧೦ (೧,೫೮೭)	೨,೨೯,೪೦೫

ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲೂಕಿನಲ್ಲಿ ಅಬ್ಬವಾರಿಪಲ್ಲಿಯ ೦.೦೩. ಚ.ಕಿ.ಮೀ. ನ ಸಣ್ಣ ಪ್ರದೇಶವು ಆಂಧ್ರಕ್ಕೆ ವರ್ಗಾಯಿಸಲ್ಪಟ್ಟುದನ್ನು ಬಿಟ್ಟರೆ, ೧೯೬೧ ಮತ್ತು ೧೯೭೧ರ ಮಧ್ಯ ರಾಜ್ಯದ ವಿಸ್ತೀರ್ಣದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ.[೩]

ನವಮೈಸೂರು ರಾಜ್ಯ ಉದಯಗೊಂಡು, ಇತಿಹಾಸ ಪ್ರಸಿದ್ಧವಾದ ಕನ್ನಡ ರಾಜ್ಯದ ಹಳೆಯ ಗಡಿಗಳು ಕೆಲಮಟ್ಟಿಗಾದರೂ ಕೂಡಿಕೊಳ್ಳುವಂತಾದ ಮೇಲೆ, ಸಹಜವಾಗಿಯೇ ಇದು ಕರ್ನಾಟಕವೆಂಬ ಹಿರಿಮೆಯ, ಹೆಮ್ಮೆಯ ಹೆಸರನ್ನು ಪಡೆದುಕೊಳ್ಳಲು ಸಿದ್ಧವಾದಂತೆ ಆಯಿತು. ಇದಕ್ಕಾಗಿ ಪ್ರತ್ಯೇಕವಾದ ಪ್ರಯತ್ನಗಳು ಸಾಹಿತಿಗಳ ಕಡೆಯಿಂದಲೂ ಸಾಮಾನ್ಯ ಜನತೆಯ ಕಡೆಯಿಂದಲೂ ನಿರಂತರವಾಗಿ ನಡೆಯತೊಡಗಿತು. ಈ ಪ್ರಯತ್ನಗಳು ಹೆಚ್ಚು ಉದ್ವೇಗಕ್ಕೆ ಅವಕಾಶ ಕೊಡದೆ ಹೋರಾಟವಾಗಿ ಪರಿಣಮಿಸಿ, ಕಡೆಗೆ ಫಲಿಸಿ 'ಮೈಸೂರು ರಾಜ್ಯ'ವಾಗಿದ್ದ ಕನ್ನಡ ನಾಡು ೧೯೭೩.ರ ನವೆಂಬರ ೧ರಿಂದ 'ಕರ್ನಾಟಕ ರಾಜ್ಯ' ಎಂಬ ಹೆಸರಿನಲ್ಲಿ ಬೆಳಗುತ್ತಿದೆ. ಅನಧಿಕೃತವಾಗಿ ಕನ್ನಡ ಜನರ ವ್ಯವಹಾರದಲ್ಲಿ ಎಂದಿನಿಂದಲೂ ರೂಢಿಯಲ್ಲಿದ್ದ ದೇಶ, ಭಾಷೆ ಹಾಗೂ ಜನಸಮುದಾಯದ ಅಭಿಮಾನದ ಸಂಕೇತವಾಗಿದ್ದ ಆ ಹೆಸರು ಈಗ ಅಧಿಕೃತವಾಗಿಯೂ ವ್ಯವಹಾರಗೊಳ್ಳುವುದಕ್ಕೆ ಸಾಧ್ಯವಾಯಿತು. ೧೯೮೯ರ ನವೆಂಬರ ೧ರಿಂದ ಕರ್ನಾಟಕದ ಆಡಳಿತಭಾಷೆ ಕನ್ನಡವೆಂದು ಅಧಿಕೃತವಾಗಿ ಘೋಷಿಸಲ್ಪಟ್ಟಿತು.[೪] ಕರ್ನಾಟಕ ಏಕೀಕರಣಗೊಂಡಿತ್ತೆಂದು ನಾವು ಹೆಮ್ಮೆಯಿಂದ ಹೇಳುವ ಧೈರ್ಯಮಾಡಿದರೂ ಸಹ, ಗಡಿನಾಡಿನ ಕನ್ನಡಿಗರಿಗೆ ಇದು ಇಂದಿಗೂ ಬಾಯಿ ತೆರೆಯದಂತೆ ಮಾಡಿದೆ. ಕಾರಣ ಗಡಿನಾಡಿನ ಕನ್ನಡಿಗರು ಅನುಭವಿಸುತ್ತಿರುವ ಅನೇಕ ಸಂಕಷ್ಟಗಳಿವೆ. ಗಡಿನಾಡಿನ ಕನ್ನಡಿಗರಿಗೆ ಉನ್ನತ ಶಿಕ್ಷಣವಿರಲಿ; ಪ್ರಾಥಮಿಕ ಶಿಕ್ಷಣದಲ್ಲಿಯೇ ಅನೇಕ ತೊಂದರೆ ಎದ್ದು ಕಾಣುತ್ತಿದೆ.[೫] ಆದ್ದರಿಂದ ಗಡಿನಾಡಿನ ಕನ್ನಡಿಗರ ಶಿಕ್ಷಣದ ಸಮಸ್ಯೆಗಳನ್ನು ಕುರಿತು ಈ ಮಹಾಪ್ರಬಂಧದಲ್ಲಿ ಆಳವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಶೈಕ್ಷಣಿಕ ಪ್ರಮುಖ ಆಯಾಮಗಳನ್ನು ಅರಿತುಕೊಂಡು ಗಡಿನಾಡ ಕನ್ನಡಿಗರ ಸ್ಥಿತಿಗತಿಗಳನ್ನು ಸಂಶೋಧನೆಯಿಂದ ಪರಿಚಯ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಶೈಕ್ಷಣಿಕ ಅಭಿವೃದ್ಧಿ, ಅಸಮಾನತೆಗಳನ್ನು ತೂಗಿ ನೋಡಿದರೆ, ಇಡಿಯಾಗಿ ನೋಡಿದ್ದು ನಮಗೆ ದೊರೆಯುವ ಚಿತ್ರ ಮತ್ತು ಬಿಡಿಯಾಗಿ ನೋಡಿದ್ದು ಕಂಡುಕೊಂಡಂತಹ ಚಿತ್ರ ಒಂದೇ ತೆರನಾಗಿ ಕಾಣಿಸುತ್ತಿಲ್ಲ. ಗಡಿನಾಡಿನ ಜನರಲ್ಲಿದ್ದ ಭಾವನೆಗಳನ್ನು ಆಳವಾಗಿ ನೋಡಿದರೆ, ನಮಗೆ ಕಾಣುವ ರೂಪರೇಷೆಗಳು ಭಿನ್ನವಾಗಿರುವುದು ಕಾಣಿಸುತ್ತದೆ. ಅದೇ ರೀತಿ ಪ್ರದೇಶ ಮತ್ತು ವಿಭಾಗಗಳ, ಶೈಕ್ಷಣಿಕ ಅಸಮತೋಲನದ ಚಿತ್ರವನ್ನು ಜಿಲ್ಲಾ ಮತ್ತು ತಾಲೂಕುವಾರು ವಿಶ್ಲೇಷಣೆ ಮಾಡಿದಾಗ ಒಡಮೂಡುವ ಚಿತ್ರಕ್ಕಿಂತಲೂ ಭಿನ್ನವಾಗಿ ಕಾಣಿಸುತ್ತದೆ. ಆದ್ದರಿಂದ ಈ ಸಂಶೋಧನೆಯಲ್ಲಿ

ಇವುಗಳ ಜೊತೆಗೆ ಪ್ರಾದೇಶಿಕ ಸಂಕಷ್ಟಗಳ ದುಸ್ಥಿತಿಯ ಕಡೆಯಿಂದಲೂ ಸಮೀಕ್ಷೆ ಮೂಲಕ ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಮಾಹಿತಿ ದೊರೆತ ದತ್ತಾಂಶಗಳಲ್ಲಿ ವ್ಯಕ್ತವಾಗುವ ಸಂಶೋಧಕನ ವಿಚಾರಗಳಿಗೆ ಅಂತಿಮತೆಯನ್ನಾಗಲಿ ಇಲ್ಲವೇ ಸಂಪೂರ್ಣತೆಯನ್ನಾಗಲಿ ಅಪೇಕ್ಷಿಸುವಂತಿಲ್ಲ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಜನರಿಗೆ, ಅದರಲ್ಲೂ ಬಡಜನರಿಗೆ, ಅಂಚಿನಲ್ಲಿರುವವರಿಗೆ ಪ್ರಧಾನ ಸ್ಥಾನ ನೀಡಲಾಗಿದೆ. ಡಾ. ಡಿ. ಎಂ. ನಂಜುಂಡಪ್ಪನವರ ಸಮಿತಿಯಲ್ಲಿ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮತೋಲನಗಳ ಅಡಿಯಲ್ಲಿ ಶೈಕ್ಷಣಿಕ ವಿಷಯಗಳನ್ನೂ ಕೂಡ ತಮ್ಮ ಶಿಫಾರಸ್ಸುಗಳಲ್ಲಿ ತಿಳಿಸಲಾಗಿದೆ. ಉತ್ತರ ಕರ್ನಾಟಕ ಪ್ರದೇಶದ ಅಭಿವೃದ್ಧಿ ಹೊಂದದ ೨೧ ತಾಲೂಕುಗಳಲ್ಲಿ ೧೮ ಮುಂಬಯಿ- ಕರ್ನಾಟಕದ ಭಾಗದಲ್ಲಿವೆ. ಗಡಿನಾಡ ಪ್ರದೇಶವು ಬಹಳ ಹಿಂದುಳಿದಿರುವುದನ್ನು ಈಗಲೂ ಕಾಣಬಹುದು . ಈ ಸಮಿತಿಯು ಕೆಳಗಿನ ಮೂರು ವಿಷಯಗಳಿಗೆ ಸಂಬಂಧಪಟ್ಟಂತೆ ದುಸ್ಥಿತಿಯ ಮಾಪನ ಮಾಡಿದೆ.

೧) ವರಮಾನ ದುಸ್ಥಿತಿ ೨) ಆರೋಗ್ಯ ದುಸ್ಥಿತಿ ೩) ಶಿಕ್ಷಣ ದುಸ್ಥಿತಿ.

ಈ ಶಿಕ್ಷಣ ದುಸ್ಥಿತಿಯನ್ನು ಶಾಲೆಯ ಹೊರಗಿರುವ ೬-೧೪ ವಯೋಮಾನದ ಮಕ್ಕಳು ಮತ್ತು ಸಾಕ್ಷರತೆಯಲ್ಲಿ ಲಿಂಗ ಸಂಬಂಧಿ ಅಸಮಾನತೆಗಳೆಂಬ ಸೂಚಿಗಳನ್ನು ಆಧರಿಸಿ ಮಾಪನ ಮಾಡಲಾಗಿದೆ. ಈ ಸಮಿತಿಯು ಪ್ರಾದೇಶಿಕವಾಗಿ ಮುಂಬಯಿ- ಕರ್ನಾಟಕದ ಪ್ರದೇಶವು ದಕ್ಷಿಣ ಕರ್ನಾಟಕದ ಪ್ರದೇಶಕ್ಕಿಂತ ಹೆಚ್ಚು ದುಸ್ಥಿತಿಯಿಂದ ನರಳುತ್ತಿದೆ ಎಂದು ಹೇಳಿದೆ.[೬]

ಸಂಶೋಧನೆಯು ಜ್ಞಾನದ ಉತ್ಪಾದನೆಯೆಂದು ಬದಲಾಯಿಸಿಕೊಳ್ಳುವುದು, ಸಮಾಜವನ್ನು ಬದಲಾಯಿಸುತ್ತೇವೆ ಎನ್ನುವ ಅಹಂಕಾರ ಯಾಕೆಂದು ಗದರಿಸುವುದು, ಸತ್ಯ ಮತ್ತು ಸುಖದ ಕಲ್ಪನೆಯ ಊಹೆಗಳನ್ನು ಮುಂದಿಡುವುದು ಮತ್ತು ಆ ವಿಚಾರಗಳ ಹಿನ್ನೆಲೆಯನ್ನು ಪ್ರಶ್ನಿಸುವಂತಹ ಪ್ರಾಕ್‌ಕಲ್ಪನೆಗಳನ್ನು ವಿಶ್ಲೇಷಿಸುವುದು, ದೃಢೀಕರಿಸುವುದು ಮತ್ತು ನಿರಾಕರಿಸುವಂತಹ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವಂತಹ ಜ್ಞಾನದ ಶಿಕ್ಷಣವನ್ನು ಒಳಗೊಂಡಿದೆ. ದೊರೆತ ದತ್ತಾಂಶಗಳಿಂದ ಊಹಿಸಿದ ವಿಷಯಗಳನ್ನು ವಿಧಾನ ಶಾಸ್ತ್ರದಿಂದ ಸ್ಪಷ್ಟಪಡಿಸಲು ಪ್ರಯತ್ನಿಸಲಾಗಿದೆ. ಆ್ಯಕ್ಷನ್ ಥೇಯರಿ ಪ್ರಕಾರ ಅಸಮಾಧಾನ, ಅತೃಪ್ತಿ, ಸಂಕಷ್ಟಗಳಂತಹ ಸಮಸ್ಯೆಗಳು ಜನರನ್ನು ಕ್ರಿಯೆಗೆ ಪ್ರೇರೇಪಿಸುತ್ತದೆ. ತಾನು ಇರುವ ಸ್ಥಿತಿಗತಿ ಮತ್ತು ಪರಿಸರದ ಬಗ್ಗೆ ಅಸಹನೆ ಇದ್ದರೆ, ಅವನು ಆ ಸ್ಥಿತಿಯಿಂದ ಹೊರಗೆ ಬರಲು ಅಥವಾ ಆ ಸ್ಥಿತಿಗಳ ಪರಿಸರವನ್ನು ತನಗೆ ಅನುಕೂಲವಾಗುವಂತೆ ಪರಿವರ್ತಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತಾನೆ. ಎಷ್ಟೋ ಸಲ ಅಂತಹ

ಸ್ಥಿತಿಯ ಪರಿಸ್ಥಿತಿಯೊಂದಿಗೆ, ರಾಜಿ ಮಾಡಿಕೊಂಡು ಜೀವನ ಸಾಗಿಸುವುದೇ ಒಂದು ದಾರಿಯೆಂದು ಭಾವಿಸಲಾಗಿದೆ. ಇದ್ದ ಪರಿಸ್ಥಿತಿಯನ್ನು ಪರಿವರ್ತಿಸಬೇಕೆಂಬ ಇಚ್ಛಾಶಕ್ತಿ ಬಲಗೊಳ್ಳುವಲ್ಲಿ, ತನ್ನ ವಾತಾವರಣದ ಬಗೆಗಿನ ಜನರ ತಿಳುವಳಿಕೆಯು ಪ್ರಧಾನ ಪಾತ್ರವನ್ನು ವಹಿಸುತ್ತದೆ.

ಗಡಿನಾಡ ಜನರ ಪರಿಸರದ ಬದುಕಿನ ಸಂಬಂಧವನ್ನು ಅರಿವಿನ ತಿಳುವಳಿಕೆ ನೆಲೆಯಲ್ಲಿ ಶಿಕ್ಷಣದ ಮೂಲವನ್ನು ಅರಿತುಕೊಳ್ಳಲು ಪ್ರಯತ್ನಿಸಲಾಗಿದೆ. ಸಂಶೋಧನೆಗೆ ಇಳಿದಾಗ, ಅಲ್ಲಿಯ ಜನರ ದಿನನಿತ್ಯದ ಬದುಕು ಗಾಢವಾಗಿ ಕಾಣಿಸುತ್ತದೆ. ಅವುಗಳಿಂದ , ಮುಕ್ತಿಗಾಗಿ ಈಗಿನ ಶೈಕ್ಷಣಿಕ ವ್ಯವಸ್ಥೆ ಬದಲಾಗಬೇಕೆಂಬ ಸಾಮಾಜಿಕ ಪರಿವರ್ತನೆಗೆ ಎಡೆಮಾಡಿಕೊಡುತ್ತದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ಸಾಂಘಿಕ ರಚನೆಗಳನ್ನು ತಮ್ಮಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಾಮಾಜಿಕ ಶೈಕ್ಷಣಿಕ ಪರಿವರ್ತನೆ ಸಾಧ್ಯವಾಗುತ್ತದೆ ಎಂದು ಗ್ರಹಿಸುವುದು ತುಂಬಾ ಸೀಮಿತ ದೃಷ್ಟಿಕೋನ. ಈಗಿದ್ದ ವಾತಾವರಣದ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪುಗೊಂಡ ಸಾಮಾಜಿಕ ಸಂಸ್ಥೆಗಳನ್ನು ಗಣನೆಗೆ ತೆಗೆದುಕೊಂಡು, ಅವುಗಳನ್ನು ಪುನರ್ ಸ್ಥಾಪಿಸುವ ಮೂಲಕ ನಮ್ಮ ವರ್ತಮಾನದ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ವರ್ತಮಾನವನ್ನು ಭೂತಕಾಲಕ್ಕೆ ಹೋಲಿಸಿ ತಿದ್ದಿಕೊಳ್ಳುವ ಇಲ್ಲವೇ ಪರಿವರ್ತನೆಗೆ ಪ್ರಯತ್ನಿಸಲೇಬೇಕಾಗಿದೆ.

ಸಂಶೋಧನೆಯು ಸರಳವಾಗಿ ಸಾಮಾಜಿಕ ಪರಿಸರವನ್ನು ಅರ್ಥ ಮಾಡಿಕೊಳ್ಳುವ ಒಂದು ಪ್ರಯತ್ನವಾಗಿದೆ. ಇದು ಜ್ಞಾನದ ಉತ್ಪಾದನೆಯಾಗಿದೆ. ಸಂಶೋಧನೆ ಸರಕಿನ ಮಾರುಕಟ್ಟೆಯ ನಿಯಮಕ್ಕೆ ಒಳಪಡಿಸಿದರೆ, ಲಾಭ ನಷ್ಟಗಳು ಇದರ ಗತಿಯನ್ನು ನಿರ್ಧರಿಸಬಹುದು. ಸಾಮಾಜಿಕ ವ್ಯವಸ್ಥೆಯು ಬಹು ದೊಡ್ಡ ಸಾಗರವಾಗಿದೆ. ಜನರು ಬದುಕುವ ಪರಿಸರ ಅಸಹನೀಯವಾದಾಗ, ಅದು ಬದಲಾಗಬೇಕಾಗಿದೆ ಎಂದು ಅನ್ನಿಸುವುದು ಸಹಜ. ಆದರೆ ಗಡಿ ಪ್ರದೇಶದಲ್ಲಿರುವವರೆಲ್ಲರೂ, ಏಕ ಕಾಲದಲ್ಲಿ ಅಸಹನೀಯರಾಗಿದ್ದಾರೆಂದು ಅನ್ನಲು ಸಾಧ್ಯವಿಲ್ಲ. ಅಲ್ಲಿಯ ಜನರ ವಾಸ್ತವ ಸ್ಥಿತಿಯನ್ನು ಅರಿತುಕೊಳ್ಳಬೇಕಾಗಿದೆ. ಸಂಶೋಧನೆಯು ಗಡಿನಾಡಿನ ಜನರ ಸಾಮಾಜಿಕ ಪರಿಸರವನ್ನು ಬದಲಾಯಿಸುವ ಉದ್ದೇಶದ ರೂಪವಾಗಿದೆ. ಕೆಲವು ಜನರ ಸುಖದ ಕಲ್ಪನೆಯಾಗಿದ್ದರೆ, ಇನ್ನು ಕೆಲವರ ಊಹೆಯು ಸುಖವಿಲ್ಲವೆನ್ನುವ ದೃಷ್ಟಿಕೋನವಾಗಿರುತ್ತದೆ. ಇದನ್ನು ಸಾಮಾಜಿಕ ಮಾನದಂಡದ ಮೇಲೆ ಅಳೆಯಲೇಬೇಕಾಗುತ್ತದೆ. ಅಲ್ಲಿಯ ಸಮುದಾಯದ ಜನರ ಸ್ಥಿತಿಗತಿಯ ದುಸ್ಥಿತಿಯನ್ನು ಹೇಗೆ ಬದಲಾವಣೆ ಮಾಡಲು ಸಾಧ್ಯವೆಂಬುದನ್ನು ಅರಿತುಕೊಳ್ಳಲಾಗಿದೆ.

ಇದುವರೆಗೆ ಯಾರೂ ಕಂಡುಹಿಡಿಯದಿರುವುದನ್ನು ಹುಡುಕಿ ತೆಗೆಯುವುದು ಸಂಶೋಧನೆಯಾಗಿದೆ. ಇದು ವಸ್ತುಸ್ಥಿತಿ ಏನೆಂದು ಕಂಡುಕೊಳ್ಳುವುದು, ಗಡಿನಾಡಿನ ಕನ್ನಡಿಗರಲ್ಲಿ

ಇರುವ ಜ್ಞಾನದ ದಿಗಂತವನ್ನು ಇನ್ನಷ್ಟು ವಿಸ್ತರಿಸುವುದಾಗಿದೆ. ಅಲ್ಲಿಯ ಶೈಕ್ಷಣಿಕ ಸ್ಥಿತಿಗಳ ಸತ್ಯದ ಸಾಕ್ಷಾತ್ಕಾರದ ಸತ್ಯ ಶೋಧನೆಯ ಪ್ರಾಮಾಣಿಕ ಪ್ರಯತ್ನವಾಗಿದೆ. ಗಡಿನಾಡಿನ ಜನರಲ್ಲಿ ಜನಪ್ರಿಯವಾಗಿರುವ ನಂಬಿಕೆ, ಕಲ್ಪನೆ, ಸುದ್ದಿಗಳನ್ನು ಆಳವಾಗಿ ಶೋಧಿಸಿ ಆಧಾರಸಹಿತವಾಗಿ ಸಮರ್ಥಿಸುವ ಅಥವಾ ನಿರಾಕರಿಸುವ ಪ್ರಕ್ರಿಯೆಯನ್ನು ಇದು ಒಳಗೊಂಡಿದೆ. ಇದು ಅನುಭವ ಜನ್ಯವಾದ ಒಂದು ಅನಿಸಿಕೆಯ ಪ್ರಾಕ್‌ಕಲ್ಪನೆಯಾಗಿಟ್ಟುಕೊಂಡು, ಪ್ರಶ್ನಾವಳಿಗಳು ಮತ್ತು ಸಂದರ್ಶನಗಳ ನೆರವಿನಿಂದ ಸರ್ವೇಕ್ಷಣೆ ಮಾಡಿ ಸಮಸ್ಯೆಗಳನ್ನು ನಿವಾರಿಸುವುದಾಗಿದೆ. ಆದ್ದರಿಂದ ಈ ಸಂಶೋಧನೆಯು ಗಡಿನಾಡಿನ ಸ್ಥಿತಿಗತಿಗಳ ಮೇಲೆ ಹೊಸ ಬೆಳಕು ಚೆಲ್ಲುವ ಸೃಷ್ಟಿಶೀಲ ಕ್ರಿಯೆಯಾಗಿದೆ. ಸಂಶೋಧಕನು ಅಂತಹ ಬದಲಾವಣೆಯ ಬಗೆಗೆ ಏನು ಹೇಳುತ್ತಾರೆ ಎಂಬುದನ್ನು ತಿಳಿದುಕೊಳ್ಳಲಾಗಿದೆ. ಅಂತಹ, ಪುರಾವೆಗಳ ಪ್ರಶ್ನೆಹಿಂದಿರುವ ತಾತ್ವಿಕ ಸಂದೇಹವನ್ನು ಸಮಾಧಾನಪಡಿಸುವ ಪ್ರಯತ್ನಮಾಡಲಾಗಿದೆ.

ಅಧ್ಯಯನದ ಆಯ್ಕೆ :

ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿಯ ವಿಷಯಗಳನ್ನು ಕುರಿತು ಇಲ್ಲಿಯವರೆಗೂ ಸಂಶೋಧನೆಗಳಾಗಿಲ್ಲ. ಆದ್ದರಿಂದ ''**ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿ ಒಂದು ಅಧ್ಯಯನ**'' ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಸಂಶೋಧನ ಸಾಹಿತ್ಯ ಸಮೀಕ್ಷೆ ಮತ್ತು ಪುನರ್ ವಿಮರ್ಶೆ:

ಪ್ರಾಥಮಿಕ ಶಿಕ್ಷಣ ಹಂತ ಕುರಿತು ೧೯೯೯ ರಲ್ಲಿ ಪ್ರೋಬ್ ತಂಡದವರು ಅಧ್ಯಯನವನ್ನು ಮಾಡಿದ್ದಾರೆ. ಶಾಲಾ ಶಿಕ್ಷಣವನ್ನು ಕೇವಲ ಭೌತಿಕ ಅಂತರದಿಂದ ಪರಿಗಣಿಸದೆ, ಸಾಮಾಜಿಕ ಅಂತರವನ್ನು ಕೂಡ ಪರಿಗಣಿಸಬೇಕಾಗಿದೆ. ಇದರಲ್ಲಿ ಸ್ಥಳೀಯ ಶಾಲೆಗೆ ಮಕ್ಕಳು ಹೋಗುವಾಗ, ಇರಬಹುದಾದಂತಹ ಅನೇಕ ಸಾಮಾಜಿಕ ಅಡೆತಡೆಗಳನ್ನು ಮಾತ್ರ ಪರಿಗಣಿಸಲಾಗಿದೆ. ಗ್ರಾಮೀಣ ಪೋಷಕರು ವಿಶೇಷವಾಗಿ ಹೆಣ್ಣು ಮಕ್ಕಳನ್ನು ಸಮೀಪದ ಗ್ರಾಮದ ಶಾಲೆಗೆ ಕಳುಹಿಸಲು ಆಸಕ್ತಿಯನ್ನು ತೋರಿಸಿಲ್ಲ. ಆದರೆ, ೫,೬,೭ ನೇ ತರಗತಿಯ ನಂತರ, ಹೆಣ್ಣು ಮಕ್ಕಳು ಶಾಲೆಗೆ ಹೋಗಬೇಕೆಂದು ಹೇಳಿದ್ದರೂ ಕೂಡ, ಪೋಷಕರು ಯಾಕೆ ಕಳುಹಿಸುತ್ತಿಲ್ಲ ಎಂಬುದನ್ನು ಕಂಡುಹಿಡಿಯಲಾಗಿದೆ.

ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ಈಗಾಗಲೇ ಕೆಲವು ಲೇಖಕರು, ಸಾಹಿತಿಗಳು, ಚಿಂತಕರು ಬರೆದ ಗ್ರಂಥಗಳಲ್ಲಿ ಮತ್ತು ಲೇಖನಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಅವುಗಳನ್ನು ಸುವ್ಯವಸ್ಥಿತವಾಗಿ ಪರಾಮರ್ಶಿಸಲಾಗಿದೆ.

ಮುಂಬಯಿ- ಕರ್ನಾಟಕದ ಗಡಿನಾಡಿನ ಐತಿಹಾಸಿಕ-ಶೈಕ್ಷಣಿಕ ಹಿನ್ನೆಲೆಯ ರಚನೆಗೆ ಹಾಗೂ ಆ ಪ್ರದೇಶದ ಚಾರಿತ್ರಿಕ ಹಿನ್ನೆಲೆಯ ಮಾಹಿತಿಗೆ ಎಂ. ಚಿದಾನಂದ ಮೂರ್ತಿರವರ 'ಕರ್ನಾಟಕ ಸಂಸ್ಕೃತಿ' ಗ್ರಂಥ, ಕೃಷ್ಣರಾವ ಎಂ.ವ್ಹಿ. ಮತ್ತು ಕೇಶವಭಟ್ ಎಂ. ರವರ 'ಕರ್ನಾಟಕ ಇತಿಹಾಸ ದರ್ಶನ', ಡಿ.ಪಿ.ಕರಮರಕರರವರ 'ಕಲ್ಚರಲ್ ಹಿಸ್ಟರಿ ಆಫ್ ಕರ್ನಾಟಕ್' ಮತ್ತು ಪಿ. ಪದ್ಮನಾಭರವರ ಸಹಯೋಗದಲ್ಲಿ ರಚಿತವಾದ ಸೆನ್ಸಸ್ ಆಫ್ ಇಂಡಿಯಾ ಮಾಲಿಕೆಯಲ್ಲಿ 'ಡಿಸ್ಟ್ರಿಕ್ಟ್ ಸೆನ್ಸ್‌ಸ್ ಹ್ಯಾಂಡ್ ಬುಕ್ ಇನ್ ಧಾರವಾಡ ಡಿಸ್ಟ್ರಿಕ್ಟ್' ಗ್ರಂಥ, ವೆಂಕಟರಂಗೊ ಕಟ್ಟಿಯವರ 'ಗೆಜೆಟಿಯರ್ ಆಫ್ ಬಾಂಬೆ- ಕರ್ನಾಟಕ', ಕರ್ನಾಟಕ ರಾಜ್ಯ ಸರಕಾರ ಪ್ರಕಟಿಸಿದ ಧಾರವಾಡ, ಬೆಳಗಾವಿ, ಬಿಜಾಪೂರ, ಉತ್ತರ ಕನ್ನಡ ಜಿಲ್ಲಾ ಗ್ಯಾಜೆಟಿಯರ್ ಗ್ರಂಥಗಳು ಈ ಪ್ರದೇಶದ ರಾಜಕೀಯ ಇತಿಹಾಸವನ್ನು ತಿಳಿಯಲು ಸಹಾಯವಾಗಿವೆ.

ಮುಂಬಯಿ- ಕರ್ನಾಟಕದ ಶೈಕ್ಷಣಿಕ ಸ್ಥಿತಿ-ಗತಿಯನ್ನು ಕುರಿತು ಎಚ್.ಡಿ. ಪ್ರಶಾಂತ್‌ರವರ 'ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ', ಆರ್. ಎನ್.ಚಂದ್ರಶೇಖರರವರ 'ಇದು ನಮ್ಮ ಕರ್ನಾಟಕ', ಸಿ. ಆರ್. ಗೋವಿಂದರಾಜುರವರ 'ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ' ಗ್ರಂಥ, ಎಚ್.ವ್ಹಿ. ನಾಗೇಶ ಮತ್ತು ಜಿ. ಎಂ. ಹೆಗಡೆ ಸಂಪಾದಕತ್ವದ 'ಸಾರ್ಥಕ ಶಿಕ್ಷಣ' ಗ್ರಂಥ, ಎನ್.ಚಿನ್ನಸ್ವಾಮಿ ಸೊಸಲೆಯವರ 'ಗಡಿ ಚಳವಳಿಗಳು' ಎಸ್.ವ್ಹಿ. ಪಾಟೀಲರವರ 'ನಮ್ಮ ನಾಡು ನುಡಿ ಮತ್ತು ಗಡಿ' ಕೃತಿ, ಪಾಟೀಲ ಪುಟ್ಟಪ್ಪನವರ 'ಕರ್ನಾಟಕ ಕಥೆ', 'ನಮ್ಮ ಚೆಲುವಕನ್ನಡನಾಡು' ಮತ್ತು 'ಕನ್ನಡ ಕಂಪು', 'ಕನ್ನಡ ಕಾವಲು' ಗ್ರಂಥಗಳು ಮುಖ್ಯವಾದವುಗಳು, ಎಸ್.ಪಿ. ಪದ್ಮಪ್ರಸಾದರವರ 'ಶೈಕ್ಷಣಿಕ ಸಂಶೋಧನೆ ಮತ್ತು ಭಾರತದಲ್ಲಿ ಪ್ರೌಢಶಿಕ್ಷಣ', ಎಸ್.ಬಿ. ಕೊಂಗವಾಡರವರ 'ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು' ಮತ್ತು ಕರ್ನಾಟಕ ಪುಸ್ತಕ ಪ್ರಾಧಿಕಾರ ವತಿಯಿಂದ ಜನಪ್ರಿಯ ಪುಸ್ತಕಮಾಲೆಯ ಎಲ್. ಎಸ್.ಶೇಷಗಿರಿರಾವ್‌ರವರ ಸಂಪಾದಕತ್ವದ 'ಕನ್ನಡ- ಕನ್ನಡಿಗ- ಕರ್ನಾಟಕ' ಗ್ರಂಥ, ಬಿ.ವ್ಹಿ. ವೀರಭದ್ರಪ್ಪನವರ 'ಶಿಕ್ಷಣ ಮತ್ತು ಸಂಸ್ಕೃತಿ' ಹಾಗೂ ಎಸ್.ಜಿ. ಕೆರೂರರವರ 'ಶಿಕ್ಷಣಮಾರ್ಗ', ಜಯಕುಮಾರ್ ಅನುಗೋಳ್‌ರವರ 'ಕಡ್ಡಾಯ ಪ್ರಾಥಮಿಕ ಶಿಕ್ಷಣ', ಎಲ್.ರಾಘವೇಂದ್ರರವರ 'ಕರ್ನಾಟಕ ಶಿಕ್ಷಣ ಅಧಿನಿಯಮ ೧೯೮೩', ಎಸ್.ಬಿ. ಯಾದವಾಡರವರ 'ಪ್ರಗತಿಶೀಲಭಾರತದಲ್ಲಿ ಶಿಕ್ಷಣ' ಗ್ರಂಥ, ಇ. ಎಂ. ಎಸ್.ನಂಬೂದರಿ ಪ್ಪಾದ್‌ರವರ 'ಭಾರತದ ಚರಿತ್ರೆಯ ಸಿಂಹಾವಲೋಕನ', ಟಿ. ಆರ್. ಮಹಾದೇವಯ್ಯರವರ ಸಂಪಾದಕತ್ವದ 'ಚನ್ನ ಶಿಕ್ಷಣಸಿರಿ' ಗ್ರಂಥ.

ಓಂಕಾರ ಕಾಕಡೆಯವರ 'ಮಹಾಜನವರದಿಯ ಅವಲೋಕನ' ಕೃತಿ, ಕೆ. ರಾಜಕುಮಾರರವರ ಸಂಪಾದಕತ್ವದ 'ಮಹಿಷಿ ವರದಿ ಮತ್ತು ಸರ್ಕಾರಿ ಆಜ್ಞೆ' ಕೃತಿ, ಬರಗೂರು ರಾಮಚಂದ್ರಪ್ಪರವರ

'ಶಿಕ್ಷಣ ಮತ್ತು ಮಾಧ್ಯಮ ನೀತಿ ನಿರೂಪಣಾವರದಿ', ಅಶೋಕ ಚಂದರಗಿಯವರ 'ಚಂದರಗಿ ಸಮಿತಿ ವರದಿ', ಕೃತಿಗಳು ಶೈಕ್ಷಣಿಕ ಸ್ವರೂಪ, ಸ್ಥಿತಿಗತಿ ವಿಶ್ಲೇಷಣೆಗೆ ತುಂಬಾ ಉಪಯುಕ್ತ ಗ್ರಂಥಗಳಾಗಿವೆ. ಟಿ. ಆರ್. ಚಂದ್ರಶೇಖರರವರ ಮತ್ತು ಎಂ.ಚಂದ್ರಪೂಜಾರಿರವರ ಸಂಪಾದಕತ್ವದ 'ಅಭಿವೃದ್ಧಿ ಅಧ್ಯಯನ' ಸಮಾಜ ವಿಜ್ಞಾನ ಪತ್ರಿಕೆಗಳು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ 'ಶಿಕ್ಷಣವಾರ್ತೆ' ಪತ್ರಿಕೆ, 'ಸಮರ್ಥ' ಶಿಕ್ಷಕರ ಕೈಪಿಡಿ, 'ಮಾರ್ಗದರ್ಶಿ' ಕಿರುಹೊತ್ತಿಗೆ, 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ. ಇ.ಪಿ.) ಕರ್ನಾಟಕ ಒಂದು ಅವಲೋಕನ' ಪತ್ರಿಕೆ, ಭಾರತಜ್ಞಾನ ವಿಜ್ಞಾನ ಸಮಿತಿಯವರ 'ಟೀಚರ್' ಮಾಸಪತ್ರಿಕೆ, 'ಜೀವನ ಶಿಕ್ಷಣ' ಮಾಸಪತ್ರಿಕೆಗಳು, ವಾರಪತ್ರಿಕೆಗಳು, ಕನ್ನಡ ದಿನಪತ್ರಿಕೆಗಳು ಹಾಗೂ ಕೆಲವೊಂದು ಇಂಗ್ಲೀಷ್‌ಗ್ರಂಥಗಳು ಶೈಕ್ಷಣಿಕ ಇತಿಹಾಸವನ್ನು ಅರಿಯಲಿಕ್ಕೆ, ಶಿಕ್ಷಣದ ಆಗುಹೋಗುಗಳನ್ನು ಕುರಿತು ವಿಶ್ಲೇಷಣೆಗೆ ತುಂಬ ಉಪಯುಕ್ತ ಗ್ರಂಥಗಳಾಗಿವೆ.

ಕರ್ನಾಟಕದ ಮಾಜಿ ಮಂತ್ರಿಗಳು ಹಾಗೂ ಇಂದಿನ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ಆದ ಶ್ರೀ ಎಚ್.ಕೆ. ಪಾಟೀಲರವರು ಬರೆದಿರುವ 'ಚೆಲುವ ಕನ್ನಡ ನಾಡು-ನನಸಾಗದ ಕನಸು' ಈ ಗ್ರಂಥವು ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಇರುವುದನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ.

ಮುಂಬಯಿ- ಕರ್ನಾಟಕದ ಗಡಿನಾಡಿನ ಶಿಕ್ಷಣದ ಬಗ್ಗೆ ಸಂಪೂರ್ಣವಾದ ವಿವರ ಮತ್ತು ಸಮಗ್ರ ಅಧ್ಯಯನಗಳು ಇನ್ನು ಹೆಚ್ಚು ಆಧಾರ ಸಹಿತವಾಗಿ ನಡೆಯಬೇಕಾಗಿದೆ. ಇಲ್ಲಿಯವರೆಗೆ, ಬರೆದಿರುವ ಬಿಡಿ ಲೇಖನಗಳು, ಲಭ್ಯವಿರುವ ಮಾಹಿತಿಗಳು, ಶಿಕ್ಷಣದ ಪ್ರಗತಿಗೆ ಪೂರ್ಣ ಉಪಯೋಗವಾಗಿಲ್ಲ. ಹೀಗೆ ಇನ್ನೂ ಅನೇಕ ಲೇಖನಗಳು, ಪುಸ್ತಕಗಳು ಗಡಿಭಾಗದ ಕನ್ನಡಿಗರ ಶಿಕ್ಷಣದ ಸ್ಥಿತಿಗತಿ ಕುರಿತಂತೆ ಮೂಡಿಬಂದಿವೆ. ಆದರೆ ಅವು ಯಾವುದೂ ಸಮಗ್ರವಾಗಿ ಸಂಶೋಧನಾತ್ಮಕವಾಗಿಲ್ಲವಾದ್ದರಿಂದ, ಸೀಮಿತ ಪ್ರದೇಶವನ್ನು ತೆಗೆದುಕೊಂಡು ಆದಿಯಿಂದ -ಅಂತ್ಯದವರೆಗೂ ಸಂಶೋಧನಾ ದೃಷ್ಟಿಯನ್ನು ಇಟ್ಟುಕೊಂಡು, ಈ ''ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿ'' ಒಂದು ಅಧ್ಯಯನ ಎಂಬ ಮಹಾಪ್ರಬಂಧವನ್ನು ರಚಿಸಲಾಗಿದೆ. ವಿವಿಧ ಆಯೋಗ/ ಸಮಿತಿಗಳ ಶಿಫಾರಸ್ಸುಗಳನ್ನು ರಚನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಮಹಾಪ್ರಬಂಧವು ಶೈಕ್ಷಣಿಕ ದೃಷ್ಟಿಕೋನದಿಂದ ಮೂಡಿಬಂದುದ್ದರಿಂದ ಈ ಕೃತಿ ಭಿನ್ನವಾಗಿದೆ.

ಅಧ್ಯಯನ ವಿಧಾನ :

ಈ ಅಧ್ಯಯನವು ಸಮೀಕ್ಷೆಯಿಂದ ದೊರೆತ ದತ್ತಾಂಶಗಳನ್ನು ವಿಶ್ಲೇಷಿಸುವುದಾಗಿದೆ. ವಿಶ್ಲೇಷಣೆಗೆ ಒಳಪಡಿಸುವ ಸಂದರ್ಭಗಳಲ್ಲಿ, ಸೈದ್ಧಾಂತಿಕ ಸಂಗತಿಗಳನ್ನು ಪರಿಗಣಿಸಲಾಗಿದೆ. ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಗುಣಾತ್ಮಕ ಮತ್ತು ಪರಿಮಾಣಾತ್ಮಕ ದತ್ತಾಂಶಗಳ ಮಾಹಿತಿಯನ್ನು ಮೌಲ್ಯಮಾಪನ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ವಿಧಾನ ಆಯ್ಕೆಗೆ ಬಹುಹಂತದ ಶ್ರೇಣೀಕೃತ ನಮೂನೆಯನ್ನು ಉಪಯೋಗಿಸಲಾಗಿದೆ. ಅಲ್ಲಿಯ ಶೈಕ್ಷಣಿಕ ಸ್ಥಿತಿಗತಿಗಳ ಪ್ರಾದೇಶಿಕ ಸ್ವರೂಪವನ್ನು ಹಿಡಿದಿಡುವ ದೃಷ್ಟಿಕೋನದಿಂದ ಬೆಳಗಾವಿ, ಉತ್ತರ ಕನ್ನಡ ಮತ್ತು ಧಾರವಾಡ ಬಿಜಾಪೂರ ಜಿಲ್ಲೆಗಳ ಗಡಿಯಲ್ಲಿರುವ ತಾಲೂಕುಗಳ ಸಮುದಾಯಗಳಲ್ಲಿಯ ಜನರ ಮನೋಭಾವಗಳನ್ನು ಗುರುತಿಸಲಾಗಿದೆ. ಅಲ್ಲಿ ದೊರೆತ ಆನುಷಂಗಿಕ ದತ್ತಾಂಶಗಳ ಮಾಹಿತಿಯನ್ನು ಕುಟುಂಬಗಳಲ್ಲಿದ್ದ ಸಮಸ್ಯೆಗಳನ್ನು ಭಾಷಾವಾರು ಪರಿಶೀಲಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಕುಟುಂಬಗಳು, ಶಿಕ್ಷಕರು, ಸಾರ್ವಜನಿಕರು, ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳ ಸದಸ್ಯರ ನೇರ ಸಂದರ್ಶನ, ಚರ್ಚೆ ಮತ್ತು ಕ್ಷೇತ್ರಕಾರ್ಯದ ಟಿಪ್ಪಣೆಗಳಿಂದ ಸಂಗ್ರಹಿಸಲಾಗಿದೆ.

ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ ತಾಳೆ ನೋಡಲಾಗಿದೆ. ಸ್ಥಳೀಯ ವಾಸ್ತವಿಕ ಅಂಶಗಳನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಇಲ್ಲಿಯ ಗ್ರಾಮಗಳಲ್ಲಿಯ ಶಿಕ್ಷಣ ವ್ಯವಸ್ಥೆಯ ಅಂಶಗಳನ್ನೂ ಸಹ ಸೂಕ್ಷ್ಮವಾಗಿ ಪರಿಗಣಿಸಲಾಗಿದೆ. ಅಲ್ಲಿ ಉಂಟಾದ ಅನುಕೂಲ ಹಾಗೂ ಅನಾನುಕೂಲತೆಗಳನ್ನು ತಿಳಿದುಕೊಳ್ಳಲಾಗಿದೆ. ಮಾಹಿತಿಯನ್ನು ಕೋಷ್ಟಕ ರೂಪದಲ್ಲಿ ಪ್ರಸ್ತುತಪಡಿಸಲಾಗಿದೆ. ಕೋಷ್ಟಕಗಳನ್ನು ಉಪಯೋಗಿಸದೆ ಇರುವ ವಿಷಯಗಳಲ್ಲಿ ಶೇಕಡಾವಾರು ಪ್ರಮಾಣದಲ್ಲಿ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನವು ಪ್ರಾಥಮಿಕ ಮತ್ತು ಆನುಷಂಗಿಕ ಅಂಕಿ- ಅಂಶಗಳ ಮಾಹಿತಿಯ ಮೇಲೆ ಅವಲಂಬಿಸಿದೆ. ಶೈಕ್ಷಣಿಕ ಸ್ಥಿತಿಗತಿಯ ವಸ್ತುವನ್ನು ನೋಡುವ ನೋಟ ಹಾಗೂ ವಿಧಾನಗಳನ್ನು ಬಳಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಪ್ರಶ್ನಾವಳಿ ತಯಾರಿಸಿ ಮುಂಬಯಿ- ಕರ್ನಾಟಕದ ಗಡಿನಾಡ ಜನರಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಅಧ್ಯಯನದ ಉದ್ದೇಶಗಳು :

೧. ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಶಿಕ್ಷಣ ಸಾಕ್ಷರತೆಯಲ್ಲಿ ಇರುವ ಅಸಮಾನತೆಯನ್ನು ಗುರುತಿಸುವುದು.

೨. ಮಕ್ಕಳ ಶಿಕ್ಷಣದ ಬಗ್ಗೆ ಪೋಷಕರ ಅಡೆತಡೆಗಳನ್ನು ಅರಿಯುವುದು.

೩. ವಿಭಾಗೀಯ ಮಟ್ಟದಲ್ಲಿ ಶಿಕ್ಷಣದ ಆಡಳಿತಾತ್ಮಕ ಸವಾಲುಗಳನ್ನು ಪರೀಕ್ಷಿಸುವುದು.

೪. ಶೈಕ್ಷಣಿಕ, ಭೌತಿಕ, ಭೌದ್ಧಿಕ, ಪ್ರಾಯೋಗಿಕ ಸೌಲಭ್ಯ- ಸಲಕರಣೆಗಳ ಸ್ವರೂಪವನ್ನು ಕಂಡುಹಿಡಿಯುವುದು.

೫. ಚಾರಿತ್ರಿಕ ದಾಖಲೆಗಳನ್ನು ಇಟ್ಟುಕೊಂಡು ಮುಂಬಯಿ- ಕರ್ನಾಟಕದ ಗಡಿ ಭಾಗದಲ್ಲಿರುವ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿಯ ಬಗ್ಗೆ ತಿಳಿದುಕೊಳ್ಳುವುದು.

೬. ಕರ್ನಾಟಕದ ಏಕೀಕರಣವಾದ ನಂತರ ಬಂದ ವಿವಿಧ ಆಯೋಗಗಳ ಬಗ್ಗೆ ವಿಶ್ಲೇಷಿಸುವುದು.

೭. ಸರಕಾರಿ ಮತ್ತು ಸರಕಾರೇತರ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶೈಕ್ಷಣಿಕ ಸ್ಥಿತಿಗಳನ್ನು ಗುರುತಿಸುವುದು.

೮. ಗಡಿನಾಡ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಅಸಮತೋಲನದ ಕಾರಣಗಳನ್ನು ಅನ್ವೇಷಣೆ ಮಾಡುವುದು.

೯. ಮಕ್ಕಳ ಭಾಷಾ ಕಲಿಕೆಯ ಮೇಲೆ ಪ್ರಾದೇಶಿಕತೆಯ ಪ್ರಭಾವವನ್ನು ಗುರುತಿಸುವುದು.

೧೦. ಗಡಿನಾಡ ಮಕ್ಕಳ ಶೈಕ್ಷಣಿಕ ಸಾಧನೆಯ ಮಟ್ಟ ಹೆಚ್ಚದಂತಹ ಕಾರಣಗಳನ್ನು ಕಂಡುಹಿಡಿಯುವುದು.

೧೧. ಗಡಿನಾಡ ಕನ್ನಡ ಶಾಲೆಗಳ ಶಿಕ್ಷಕರ ಮನೋಧೋರಣೆಗಳನ್ನು ಅರಿತುಕೊಳ್ಳುವುದು.

೧೨. ಗಡಿನಾಡ ಕನ್ನಡ ಸಂಸ್ಥೆಗಳ ಬಗ್ಗೆ ಸರಕಾರದ ಧೋರಣೆಗಳನ್ನು ಅರಿತುಕೊಳ್ಳುವುದು.

೧೩.. ಗಡಿನಾಡ ಶಾಲೆಗಳ ಶಿಕ್ಷಣ ಕುರಿತು ಮೇಲ್ವಚಾರಣೆಯ ತನಿಖೆಯ ಗುಣಮಟ್ಟವನ್ನು ಗುರುತಿಸುವುದು.

೧೪. ಗಡಿನಾಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಪ್ರವೇಶ ಪಡೆಯುವ ಬಾಲಕ- ಬಾಲಕಿಯರ ಅನುಪಾತವನ್ನು ಅಭ್ಯಸಿಸುವುದು.

೧೫. ಮುಂಬಯಿ- ಕರ್ನಾಟಕದ ಗಡಿನಾಡಿನ ಶಿಕ್ಷಣದ ಸ್ಥಿತಿಗತಿಯ ಪರಿಸ್ಥಿತಿಯ ಬಗ್ಗೆ ಜನರ ಅಭಿಪ್ರಾಯಗಳನ್ನು ಸಂಗ್ರಹಿಸುವುದು.

ಅಧ್ಯಯನ ವ್ಯಾಪ್ತಿ :

ಮುಂಬಯಿ- ಕರ್ನಾಟಕದ ಗಡಿಯಲ್ಲಿರುವ ತಾಲೂಕುಗಳನ್ನು ಶೈಕ್ಷಣಿಕ ಸ್ಥಿತಿಗತಿಗಳನ್ನು ಗುರುತಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿಯ ಶಿಕ್ಷಣದ ಮೂಲ ಸೌಲಭ್ಯಗಳನ್ನು ಪರಿಶೀಲಿಸಲಾಗಿದೆ. ವ್ಯಾಪ್ತಿ ಎಂದರೆ ಆ ಕ್ಷೇತ್ರದ ವಿಷಯದ ಬಗ್ಗೆ ಹಲವು ವಿಷಯಗಳ ಮೇರೆಯನ್ನು ನಿರ್ಧರಿಸುವುದು. ಪ್ರತಿಯೊಂದು ವಿಷಯವು ತನ್ನದೇ ಆದ ಮಾಹಿತಿಗಾಗಿ ಗುರುತಿಸಬೇಕಾದ ಕ್ಷೇತ್ರವನ್ನು ಹೊಂದಿರುತ್ತದೆ. ಆ ಕ್ಷೇತ್ರದ ವಿಸ್ತಾರದಲ್ಲಿ ಐತಿಹಾಸಿಕ, ರಾಜಕೀಯ, ಸಾಹಿತ್ಯಿಕ, ಶೈಕ್ಷಣಿಕ ಬೆಳವಣಿಗೆಯ ಘಟನೆಗಳ ಅವಲೋಕನ ಉದ್ದೇಶವನ್ನು ಈ ಸಂಶೋಧನೆಯು ಹೊಂದಿರುವುದರಿಂದ ಭಾಷೆ- ಸಂಪ್ರದಾಯಗಳ ವಿಸ್ತಾರಗಳನ್ನು ಅನುಲಕ್ಷಿಸಿ ಮುಂಬಯಿ-

ಕರ್ನಾಟಕದ ಗಡಿನಾಡ ಪ್ರದೇಶವನ್ನು ಆಯ್ದುಕೊಳ್ಳಲಾಗಿದೆ. ಮುಂಬಯಿ- ಕರ್ನಾಟಕವೆಂದರೆ ಬಿಜಾಪೂರ, ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಹೊಂದಿತ್ತು. ಆದರೆ ಇತ್ತೀಚೆಗೆ ೧೯೯೭ರಲ್ಲಿ ಜಿಲ್ಲೆಗಳ ಮರುವಿಂಗಡನೆಯಾಗಿ ಜಿಲ್ಲಾ ಸ್ಥಾನ ಪಡೆದ ಹಾವೇರಿ, ಗದಗ, ಬಾಗಲಕೋಟ ಜಿಲ್ಲೆಗಳು ಮುಂಬಯಿ- ಕರ್ನಾಟಕದಲ್ಲಿ ಸೇರಿವೆ.

ಅಧ್ಯಯನದ ಮಿತಿ :

ಈ ಅಧ್ಯಯನದಲ್ಲಿ ಅಂಕಿ - ಅಂಶಗಳು ಮತ್ತು ದತ್ತಾಂಶಗಳ ಮಾಹಿತಿ ಸಂಗ್ರಹಣೆಯ ಮೂಲಕ ಫಲಿತಗಳನ್ನು ಗುರುತಿಸಲಾಗಿದೆ. ಹೀಗೆ ಅಧ್ಯಯನ ಮಾಡುವಾಗ ವಿವರಣಾತ್ಮಕ ವಿವರಣೆಯನ್ನು ನೀಡಲಾಗಿದೆ. ಈ ವಿವರಣೆಯನ್ನು ಪರಿಗಣಿಸಲು ಪ್ರಯತ್ನಿಸಲಾಗಿದೆ. ಶಾಲೆಯಲ್ಲಿ ಲಭ್ಯವಿರುವ ಮಾಹಿತಿಯನ್ನು ಹೆಚ್ಚಾಗಿ ಅವಲಂಬಿಸಲಾಗಿದೆ. ಇದರಿಂದ, ಅಂಕಿ- ಅಂಶಗಳ ಕೊರತೆಯು ಎದುರಾಗಬಹುದು. ಇದರ ಜೊತೆಗೆ, ಅಧ್ಯಯನದ ವ್ಯಾಪ್ತಿಯ ಮಾಹಿತಿಯೂ ಸಹ ಮಿತಿಯಾಗಿದೆ. ಸಂಶೋಧಕನು ಸಮಯದ ಪರಿಕಲ್ಪನೆಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನದ ಉದ್ದೇಶಗಳನ್ನಾಧರಿಸಿ ಮಿತಿಯನ್ನು ೧೯೫೬ರಿಂದ ೨೦೦೬ ರ ವರೆಗಿನ ಗಡಿನಾಡಿನ ಪ್ರದೇಶಗಳ ಶೈಕ್ಷಣಿಕ ಹಂತವನ್ನು ಸೀಮಿತಗೊಳಿಸಲಾಗಿದೆ.

ಅಧ್ಯಯನದ ಮಹತ್ವ :

ಈ ಸಂಶೋಧನೆಯು ಅನುಭವ ಸಿದ್ಧ ಪ್ರಾಯೋಗಿಕ ಮಾದರಿಯ ಮೂಲಕ ಕಂಡುಕೊಂಡ ಫಲಿತಗಳ ಆಧಾರದ ಮೇಲೆ ಶೈಕ್ಷಣಿಕ ಸ್ಥಿತಿಗತಿಗಳ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅಧ್ಯಯನವಾಗಿರುತ್ತದೆ. ಶೈಕ್ಷಣಿಕ ಸ್ಥಿತಿಗತಿಗಳ ಮಾಹಿತಿ ದತ್ತಾಂಶಗಳಿಂದ, ವಿಶ್ಲೇಷಣೆಯ ಆಧಾರದ ಮೇಲೆ ಉತ್ತಮ ಪರಿಣಾಮಗಳನ್ನು ಎತ್ತಿ ತೋರಿಸುತ್ತದೆ. ಸರಕಾರಕ್ಕೆ ವಿಶೇಷವಾಗಿ ಶಿಕ್ಷಣ ಇಲಾಖೆಗೆ ಮತ್ತು ಎಲ್ಲರೂ ಕಲಿಯುವಂತಹ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಈ ಅಧ್ಯಯನವು ತುಂಬಾ ಉಪಯುಕ್ತವಾಗಿದೆ. ಈ ಸಂಶೋಧನೆಯಿಂದ ಅರಿತ ಶೈಕ್ಷಣಿಕ ಸುಧಾರಣೆಯ ಕ್ರಮಗಳನ್ನು ಅಳವಡಿಸಿಕೊಳ್ಳುವ ಸಂದರ್ಭಗಳಲ್ಲಿ ಬೇಕಾಗುತ್ತದೆ. ಶೈಕ್ಷಣಿಕ ಕಾರ್ಯಕ್ರಮದ ಸಾಧಕ-ಬಾಧಕಗಳನ್ನು ಅನಕ್ಷರಸ್ಥರಾದಂತಹ ಹಳ್ಳಿಯ ಜನರೊಂದಿಗೆ ಚರ್ಚಿಸುವ ಮೂಲಕ, ನಿವಾರಣಾತ್ಮಕ ಯೋಜನೆಗಳನ್ನು ಕೈಗೊಳ್ಳಲು ಇದು ಉಪಯುಕ್ತವಾಗಿದೆ. ಈ ಸಂಶೋಧನೆಯು ತನ್ನದೇ ಆದ ಕಾಣಿಕೆಯನ್ನು ಗಡಿನಾಡಿನ ಶೈಕ್ಷಣಿಕ ಅಭಿವೃದ್ಧಿಗೆ ನೀಡುವುದರಲ್ಲಿ ಸಂದೇಹವೇ ಇಲ್ಲ. ಒಟ್ಟಾರೆ, ಇದು ಗಡಿನಾಡಿನ ಜನರ ಉತ್ತಮ ಭವಿಷ್ಯಕ್ಕಾಗಿ ಚಿಂತನಶೀಲರಾಗುವಂತೆ ಮತ್ತು ಕಾರ್ಯಶೀಲರಾಗುವಂತೆ ಪ್ರೇರೇಪಿಸುವುದಕ್ಕೆ ಈ ಅಧ್ಯಯನವು ಅತ್ಯಂತ ಉಪಯುಕ್ತವಾಗಿದೆ.

ಟಿಪ್ಪಣಿಗಳು :

೧. ಕಾಮತ್, ಸೂರ್ಯನಾಥ(ಸಂ), 'ಕರ್ನಾಟಕ ರಾಜ್ಯ ಗ್ಯಾಜಿಟಿಯರ್' ಭಾಗ-೧ ಬೆಂಗಳೂರು-೧೯೮೪ ಪುಟ-೧.

೨. 'ಶಿಕ್ಷಣ ಧ್ವನಿ' ಶೈಕ್ಷಣಿಕ ಮಾಸ ಪತ್ರಿಕೆ ಗುಲಬುರ್ಗಾ . ನವಂಬರ-೧೯೯೬ ಪುಟ -೬

೩. ಟಿಪ್ಪಣಿ೧ರಲ್ಲಿದ್ದಂತೆ ಪುಟ-೫.

೪. ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ 'ನಮ್ಮ ಕರ್ನಾಟಕ' ಕನ್ನಡ ಸಾಹಿತ್ಯ ಪರಿಷತ್ತು' ಬೆಂಗಳೂರು ೨೦೦೧ ಪುಟ-೨.

೫. ಎನ್. ಚಿನ್ನಸ್ವಾಮಿ ಸೋಸಲೆ 'ಗಡಿ ಚಳವಳಿಗಳು' ಕನ್ನಡ ವಿಶ್ವವಿದ್ಯಾಲಯ, ಹಂಪಿ೧೯೯೯, ಪುಟ-೫೪.

೬. 'ಅಭಿವೃದ್ಧಿ ಅಧ್ಯಯನ' ಸಮಾಜ ವಿಜ್ಞಾನ ಪತ್ರಿಕೆ, ಸಂಪುಟ-೨ ಸಂಚಿಕೆ-೨ ಜನೇವರಿ - ಜೂನ್ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೩, ಪುಟ -೩೯-೪೦.

ಅಧ್ಯಾಯ -೨

ಮುಂಬಯಿ- ಕರ್ನಾಟಕದ ಐತಿಹಾಸಿಕ -ಶೈಕ್ಷಣಿಕ ಹಿನ್ನೆಲೆ

ಮುಂಬಯಿ -ಕರ್ನಾಟಕದ ಭೌಗೋಳಿಕ ಅಂಶಗಳು :

ಈಗಿನ ಕರ್ನಾಟಕ ರಾಜ್ಯದ ವಾಯುವ್ಯ ಭಾಗವೇ ಮುಂಬಯಿ- ಕರ್ನಾಟಕ. ಸುಮಾರು ೫೪.೯೯೧ ಚದುರ ಕಿಲೋಮೀಟರ ವಿಸ್ತೀರ್ಣವುಳ್ಳ ಈ ಭಾಗವು ೧೩° ೫೩' ಮತ್ತು ೧೭° ೨೯' ಉತ್ತರ ಅಕ್ಷಾಂಶ ಮತ್ತು ೭೪° ೨' ಮತ್ತು ೭೬° ೩೫' ಪೂರ್ವ ರೇಖಾಂಶಗಳ ಮಧ್ಯ ಇದೆ. ಇದರಲ್ಲಿ ಈ ಮೊದಲು ನಾಲ್ಕು ಜಿಲ್ಲೆಗಳಿದ್ದು ಅವುಗಳೆಂದರೆ ಬೆಳಗಾವಿ, ಧಾರವಾಡ, ಬಿಜಾಪೂರ ಮತ್ತು ಉತ್ತರ ಕನ್ನಡ. ಪ್ರತಿಯೊಂದು ಜಿಲ್ಲೆಯ ವಿಸ್ತೀರ್ಣವು ಈ ಕೆಳಗಿನಂತಿದೆ.

ಕ್ರ.ಸಂ.	ಜಿಲ್ಲೆಯ ಹೆಸರು	ವಿಸ್ತೀರ್ಣ ಚದುರ ಕಿ.ಮೀ.ನಲ್ಲಿ
೧.	ಬೆಳಗಾವಿ	೧೩.೪೧೦
೨.	ಬಿಜಾಪೂರ	೧೭.೦೫೬
೩..	ಧಾರವಾಡ	೧೩.೭೯೯
೪.	ಉತ್ತರ ಕನ್ನಡ	೧೦.೨೭೬
	ಒಟ್ಟು	**೫೪.೯೯೧**

ಮುಂಬಯಿ- ಕರ್ನಾಟಕ ಪ್ರದೇಶವು ಉತ್ತರದಿಂದ ದಕ್ಷಿಣಕ್ಕೆ ಸುಮಾರು ೨೨೦ಮೈಲಿಗಳು ಉದ್ದಕ್ಕೂ ಪೂರ್ವದಿಂದ ಪಶ್ಚಿಮಕ್ಕೆ ಸುಮಾರು ೧೫೦ ಮೈಲಿಗಳ ಉದ್ದಕ್ಕೂ ಚಾಚಿಕೊಂಡಿದೆ. ಅದರ ಉತ್ತರ ಗಡಿಯಲ್ಲಿ ಮಹಾರಾಷ್ಟ್ರದ ಸಾಂಗ್ಲಿ, ಕೊಲ್ಲಾಪೂರ ಮತ್ತು ಸೊಲ್ಲಾಪೂರ ಜಿಲ್ಲೆಗಳ ಕೆಲವು ಭಾಗಗಳು, ಅದರ ಪಶ್ಚಿಮದಲ್ಲಿ ಮಹಾರಾಷ್ಟ್ರದ ಕೊಲ್ಲಾಪೂರ ಮತ್ತು ರತ್ನಾಗಿರಿ ಜಿಲ್ಲೆಗಳ ಕೆಲವು ಭಾಗಗಳು, ಗೋವಾ ಮತ್ತು ಅರಬ್ಬಿ ಸಮುದ್ರಗಳು ಇವೆ. ಇದರ ಪೂರ್ವಗಡಿಯಲ್ಲಿ ಗುಲ್ಬರ್ಗಾ, ರಾಯಚೂರ ಮತ್ತು ಬಳ್ಳಾರಿ ಜಿಲ್ಲೆಗಳಿವೆ. ಅದರ ದಕ್ಷಿಣ ಗಡಿಯಲ್ಲಿ ಈಗಿನ ಕರ್ನಾಟಕದ ಚಿತ್ರದುರ್ಗ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿವೆ.

ಘಟ್ಟಗಳು ಮತ್ತು ಪ್ರಸ್ಥಭೂಮಿಯ ಪ್ರದೇಶ :

ಘಟ್ಟಗಳು ದಕ್ಷಿಣದಲ್ಲಿ ಸಮುದ್ರಮಟ್ಟದಿಂದ ೧೫೦೦ ರಿಂದ ೨೫೦೦ ವರೆಗೆ ಮೇಲಿದ್ದರೆ, ಬೆಳಗಾವಿ ಜಿಲ್ಲೆಯಲ್ಲಿ ಸಮುದ್ರ ಮಟ್ಟದಿಂದ ೨೦೦೦ ದಿಂದ ೩.೦೦೦ ವರೆಗೆ ಮೇಲಿದೆ. ಘಟ್ಟಗಳು ಪೂರ್ವದ ಕಡೆಗೆ ಇಳಿಯುತ್ತಾ ಹೋಗಿ ಅವು ಪ್ರಸ್ಥ ಭೂಮಿಯ ಎತ್ತರದ ಪಶ್ಚಿಮ ಭಾಗವಾಗಿದೆ. ಈ ಭಾಗದ ಎಲ್ಲೆಯು ಹಾನಗಲ್(ಹಾವೇರಿ ಜಿಲ್ಲೆ) ನಿಂದ ಪ್ರಾರಂಭವಾಗಿ, ಹಳಿಯಾಳ(ಉತ್ತರ ಕನ್ನಡ ಜಿಲ್ಲೆ), ಖಾನಾಪೂರ ಮತ್ತು ಬೆಳಗಾವಿ ಹಾಗೂ ಸಂಕೇಶ್ವರ(ಬೆಳಗಾವಿ ಜಿಲ್ಲೆ) ಇವುಗಳ ಮೂಲಕ ಹಾಯ್ದು ನಿಪ್ಪಾಣಿಯವರೆಗೂ ಹಬ್ಬಿಕೊಂಡಿದೆ.

ನದಿಗಳು :

ಇವುಗಳಲ್ಲಿ ಅತೀ ಮುಖ್ಯವಾದವುಗಳೆಂದರೆ ಕೃಷ್ಣಾ, ಭೀಮಾ, ಘಟಪ್ರಭಾ, ಮಲಪ್ರಭಾ, ಮತ್ತು ವರದಾ. ಇವೆಲ್ಲ ನದಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಬೇಸಾಯಕ್ಕಾಗಿ ಬಳಸಿಕೊಳ್ಳಲಾಗುತ್ತದೆ.

ಖನಿಜಗಳು :

ಧಾರವಾಡ ಜಿಲ್ಲೆಯಲ್ಲಿ ಮ್ಯಾಂಗನೀಸ್, ಕಬ್ಬಿಣ, ತಾಮ್ರ, ಸೀಸ ಮತ್ತು ಚಿನ್ನ ಸಿಗುತ್ತವೆ. ಬೆಳಗಾವಿ ಜಿಲ್ಲೆಯಲ್ಲಿಯೂ ಬಿಜಾಪೂರ ಮತ್ತು ಬಾಗಲಕೋಟ ಪ್ರದೇಶಗಳಲ್ಲಿಯೂ ಹೇರಳವಾದ ಸುಣ್ಣದ ಕಲ್ಲಿನ ನಿಕ್ಷೇಪಗಳು ಕಂಡುಬರುತ್ತವೆ. ಬೆಳಗಾವಿ ಜಿಲ್ಲೆಯಲ್ಲಿ ದೊಡ್ಡ ಮೊತ್ತದ ಅಲ್ಯುಮಿನಿಯಂ ಅದಿರಿನ ನಿಕ್ಷೇಪಗಳು ಸಿಕ್ಕಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೇಡಿ ಮಣ್ಣಿನ ನಿಕ್ಷೇಪಗಳು ಪತ್ತೆಯಾಗಿವೆ.

ಮಳೆ :

ಈ ಭಾಗದಲ್ಲಿನ ಮಳೆಯು ಬೆಳಗಾವಿ-೭೮೪.೭ಮಿ.ಮಿ, ಬಿಜಾಪೂರ-೫೫೨.೮ ಮಿ.ಮಿ. ಧಾರವಾಡ-೬೯೧ ಮತ್ತು ಉತ್ತರ ಕನ್ನಡ-೨೭೬೪.೧ ಮಿ.ಮಿ. ಆಗುತ್ತದೆ.

ಭೂಗುಣ :

ಮುಂಬಯಿ- ಕರ್ನಾಟಕ ಪ್ರದೇಶದಲ್ಲಿ ಎರೆಮಣ್ಣು(ಹತ್ತಿ ಬೆಳೆಯಲು ಯೋಗ್ಯವಾದುದು), ಕೆಂಪು ಮತ್ತು ಉಸುಕು ರೂಪದ ಮಣ್ಣು, ಉದುರು ಉದುರಾದ ಜೇಡಿ ಮಣ್ಣು ಮತ್ತು ಎರೆಮಣ್ಣು ಅಥವಾ ಮೆಕ್ಕಲು ಮಣ್ಣಿನ ವಿಧಗಳಿವೆ.

ವ್ಯವಸಾಯ :

ಮುಂಬಯಿ - ಕರ್ನಾಟಕವು ವ್ಯವಸಾಯದ ಪ್ರದೇಶವಾಗಿದೆ ಜನರಿಗೆ ವ್ಯವಸಾಯವೇ ಮುಖ್ಯ ಆಧಾರವಾಗಿದೆ.

ಜನಸಾಂದ್ರತೆ :

೧೯೭೧ರ ಜನಗಣತಿಯ ಪ್ರಕಾರ ಮುಂಬಯಿ- ಕರ್ನಾಟಕದ(ಧಾರವಾಡ, ಬೆಳಗಾವಿ ಬಿಜಾಪೂರ ಮತ್ತು ಉತ್ತರಕನ್ನಡ ಜಿಲ್ಲೆಗಳ) ಜನಸಂಖ್ಯೆಯು ೭೬,೦೦,೨೫೧ ಇತ್ತು. ಆದರೆ ೧೯೯೧ರ ಜನಗಣತಿಯ ಪ್ರಕಾರ, ಬಿಜಾಪೂರ ಜಿಲ್ಲೆಯಲ್ಲಿ ೨೯,೨೭,೯೯೦ ರಷ್ಟಿದೆ, ಬೆಳಗಾವಿ ಜಿಲ್ಲೆಯಲ್ಲಿ ೩೫,೮೩,೬೦೬, ಧಾರವಾಡ ಜಿಲ್ಲೆಯಲ್ಲಿ ೩೫,೦೬,೭೫೨, ಉತ್ತರ ಕನ್ನಡ ಜಿಲ್ಲೆಯಲ್ಲಿ ೧೨,೨೦,೨೬೦ ಜನರು ವಾಸಿಸುತ್ತಿದ್ದಾರೆ. ೨೦೦೧ ರ ಜನಗಣತಿಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ ೪೨,೦೭,೨೬೪, ಬಿಜಾಪೂರ ಜಿಲ್ಲೆಯಲ್ಲಿ ೧೮೦೮೮೬೩, ಬಾಗಲಕೋಟ ಜಿಲ್ಲೆಯಲ್ಲಿ ೧೬೫೨೨೩೨,

ಧಾರವಾಡ ಜಿಲ್ಲೆಯಲ್ಲಿ ೧೬೦೩.೭೯೪, ಗದಗ ಜಿಲ್ಲೆಯಲ್ಲಿ ೯೭೧೯೫೫, ಹಾವೇರಿ ಜಿಲ್ಲೆಯಲ್ಲಿ ೧೪೩.೭೮೬೦, ಉತ್ತರ ಕನ್ನಡ ಜಿಲ್ಲೆಯಲ್ಲಿ ೧೩೫೩೬೪೪ ಜನರು ವಾಸಿಸುತ್ತಿದ್ದಾರೆ. ಈ ಮುಂಬಯಿ-ಕರ್ನಾಟಕವು ಅನುಕ್ರಮವಾಗಿ ಬಿಜಾಪೂರ೧೭,೦೬೯ ಚ.ಕಿ.ಮೀ., ಬೆಳಗಾವಿ೧೩,೪೧೫ ಚ.ಕಿ.ಮೀ., ಧಾರವಾಡ೧೩,೭೩೮ ಚ.ಕಿ.ಮೀ ಮತ್ತು ಉತ್ತರ ಕನ್ನಡ೧೦,೨೯೧ ಚ.ಕಿ.ಮೀ ಕ್ಷೇತ್ರ ವ್ಯಾಪ್ತಿಯನ್ನು ಹೊಂದಿದೆ.

ಮುಂಬಯಿ- ಕರ್ನಾಟಕದ ಐತಿಹಾಸಿಕ ಹಿನ್ನೆಲೆ:

ಸಿಂಧು ನದಿಯ ಹರಪ್ಪಾ ಮಹಂಜೋದಾರೊ ಸಂಸ್ಕೃತಿಗೂ, ಕನ್ನಡ ನಾಡಿನ ಸಂಸ್ಕೃತಿಗೂ ಸಂಬಂಧವಿರುವುದನ್ನು ತೋರಿಸಲು ಆಧಾರಗಳಿವೆ. ಒಬ್ಬ ವಿಶ್ವಾಸಾರ್ಹ ತಜ್ಞರ ಪ್ರಕಾರ ಆ ಯುಗದ '' ಕಣ್ಣಾಯರ್'' ಎಂಬುದೇ ಕರ್ನಾಟಕ.[೧] ಆದುದರಿಂದ , ಭೂಮಿಯ ರಚನೆಯ ಮೂರನೇ ಯುಗದಲ್ಲಿ ಪ್ರಥಮ ಮಾನವನು ಇಲ್ಲೇ ಹುಟ್ಟಿರಬಹುದಾದ ಸಾಧ್ಯತೆ ಇದೆ.[೨] ಅಲ್ಲದೆ, ಪುರಾತನ ಶಿಲಾಯುಗದ ಕಾಲದಿಂದಲೂ ಕರ್ನಾಟಕವು ಜನಭರಿತ ಪ್ರದೇಶವಾಗಿದೆ ಎಂದು ಹೇಳಲು ಸಾಕಷ್ಟು ಆಧಾರಗಳಿವೆ. ಈ ಪ್ರದೇಶವು ಮಹಾಪುರಾಣಗಳೊಡನೆ ಸಂಬಂಧ ಹೊಂದಿದೆ. ಅಗಸ್ತ್ಯ ಋಷಿಯ ಹೆಸರಿನ ಜೊತೆಗೆ ಜೋಡಿಸಲಾಗುವ ವಾತಾಪಿಯು ಬಿಜಾಪೂರ ಜಿಲ್ಲೆಯಲ್ಲಿರುವ ಬಾದಾಮಿ ಎಂದು ಗುರುತಿಸಲಾಗಿದೆ. ಪಶ್ಚಿಮ ಘಟ್ಟಗಳ ಅರಬ್ಬಿ ಸಮುದ್ರದ ನಡುವೆ ಇರುವ ಹಾಗೂ ಕನ್ಯಾಕುಮಾರಿಯಿಂದ ಉತ್ತರದಲ್ಲಿ ಗೋಕರ್ಣದವರೆಗಿನ ಪ್ರದೇಶವು ಅಂದರೆ, ಈಗಿನ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶವು '' ಪರಶುರಾಮ ಕ್ಷೇತ್ರ'' ಎಂದು ಹೆಸರಿಸಲಾಗಿದೆ. ಉತ್ತರದಿಂದ ಬಂದ ಆರ್ಯ ಋಷಿಗಳು, ದಕ್ಷಿಣ ಮೂಲನಿವಾಸಿಗಳಾದ ''ವಾನರ'' ಅಥವಾ ''ದ್ರಾವಿಡ'' ಎಂದು ಕರೆಯಲಾಗುತ್ತಿದ್ದ ಒಂದು ಜಾತಿಯ ಅನಾಗರಿಕ ಜನರು ವಾಸಿಸುತ್ತಿದ್ದ '' ದಂಡಕಾರಣ್ಯದ ''[೩] ಬಗ್ಗೆ ಸಹ ಕೆಲವು ಪ್ರಸ್ತಾಪಗಳಿವೆ.

ಕರ್ನಾಟಕದ ಗಡಿ :

ಕರ್ನಾಟಕವು ಹಿಂದೆ ಕನ್ನಡ, ಕನ್ನಾಡು, ಕರಿನಾಡು, ಕರ್ನಾಟ, ಕುಂತಲ ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿತ್ತು ಎಂದು ಹೇಳಲಾಗುತ್ತಿದೆ. ಮಹಾಭಾರತ, ಪುರಾಣಗಳು, ಅನಂತರದ ಶಾಸನದ ದಾಖಲೆಗಳು ಮತ್ತು ಸಾಹಿತ್ಯಗಳಲ್ಲಿ ಕರ್ನಾಟಕವನ್ನು ಕುಂತಲವೆಂದೇ ಕರೆಯಲಾಗಿದೆ. ರಾಷ್ಟ್ರಕೂಟದೊರೆ ನೃಪತುಂಗ ಅಮೋಘವರ್ಷನು (ಕ್ರಿ.ಶ.೮೧೪-೮೮೦) ರಚಿಸಿದನೆಂದು ನಂಬಲಾಗಿರುವ ''ಕವಿರಾಜ ಮಾರ್ಗ''ವು ''ಸುಖದ ಜೀಡಾದ ಕನ್ನಡ ನಾಡಿ''ಗೆ ಉತ್ತರದಲ್ಲಿ ಗೋದಾವರಿಯೂ , ದಕ್ಷಿಣದಲ್ಲಿ ಕಾವೇರಿ ನದಿಯೂ ಗಡಿಗಳಾಗಿದ್ದವು ಎಂದು ವರ್ಣಿಸುತ್ತದೆ. ಕುಂತಲ ದೇಶವು ಉತ್ತರದಲ್ಲಿ ಬೆಳಗಾವಿ, ಮೈಸೂರಿನ ಹರಿಹರ, ಬಳ್ಳಾರಿ ಜಿಲ್ಲೆಯ

ಹಂಪಿ ಮತ್ತು ವಿಜಯನಗರಗಳನ್ನು ಒಳಗೊಂಡಿತ್ತು. ಈ ಪ್ರದೇಶಗಳ ಉತ್ತರ ಭಾಗಗಳಾದ ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ, ಗದಗ, ಲಕ್ಕುಂಡಿ ಮತ್ತು ನರೇಗಲ್‌ಗಳನ್ನು, ನಿಜಾಮನ ರಾಜ್ಯದ ಕುಕ್ಕನೂರನ್ನು, ಉತ್ತರದಲ್ಲಿ ಬೆಳಗಾವಿ ಜಿಲ್ಲೆಯ ಕೊಣ್ಣೂರು, ಕಲ್ಹೊಳೆ, ಸೌದತ್ತಿ ಮತ್ತು ಮುನೋಳಿಗಳನ್ನು, ಬಿಜಾಪೂರ ಜಿಲ್ಲೆಯ ದಕ್ಷಿಣದಲ್ಲಿ ಪಟ್ಟದ ಕಲ್ಲು, ಐಹೊಳೆ ಮತ್ತು ತರ್ದವಾಡಿ(ತದ್ದವಾಡಿ) ಮತ್ತು ಮನಗೂಳಿಯನ್ನು ಒಳಗೊಂಡಿತ್ತು. ಪ್ರಾಯಶಃ ಅದು ಕಲ್ಯಾಣವನ್ನು ಒಳಗೊಂಡಿತ್ತು.[೪] ಮತ್ತೊಂದು ಪೂರ್ವ ಸಂಪ್ರದಾಯದಂತೆ ಕೆನರಾ (ಕರ್ನಾಟಕ) ತೀರವು ದಕ್ಷಿಣದ ರಾಜನೂ ರಾಮನ ಹೆಸರಾಂತ ವೈರಿಯೂ ಆದ ರಾವಣನ ಆಳ್ವಿಕೆಗೆ ಒಳಪಟ್ಟಿತ್ತು. ಹಳೆಗನ್ನಡ ಶೈಲಿಯ ಜೈನ ರಾಮಾಯಣದಲ್ಲಿ (ಕ್ರಿ.ಶ. ೯೪೨) ಪ್ರಸಿದ್ಧ ಇತಿಹಾಸಗಾರನಾದ ಬಿ. ಎಲ್. ರೈಸ್ ಕೆನರಾದ ಬಗೆಗೆ ಎರಡು ಪ್ರಸ್ತಾಪಗಳನ್ನು ಮಾಡಿದ್ದಾನೆ; ರಾವಣನ ರಾಜ್ಯವು ಗೋಕರ್ಣದವರೆಗೆ ಇತ್ತು, ರಾಮನ ಕಾಲದಲ್ಲಿ ಹೊನ್ನಾವರವು ಸ್ವತಂತ್ರ ರಾಜನೊಬ್ಬನ ಸ್ಥಾನವಾಗಿತ್ತು.[೫] ಅಲ್ಲದೆ, ಪೌರಾಣಿಕ ಲಂಕೆಯ ರಾಕ್ಷಸನಾದ ರಾವಣನ ಸಂಗೀತಗಾರನೊಬ್ಬನಿಗೆ ಬಾಗಲಕೋಟೆಯು ಸೇರಿತ್ತು [೬] ಎಂಬುದನ್ನು ಸಹ ಗಮನಿಸಬಹುದು.

ಪುರಾಣಗಳಲ್ಲಿ ಹೇಳಲ್ಪಟ್ಟಿರುವ ಮುಂಬಯಿ- ಕರ್ನಾಟಕದ ಅತ್ಯಂತ ಹಳೆಯ ಮೂಲ ನಿವಾಸಿಗಳೆಂದರೆ ಮತ್ಸ್ಯನ್, ನಾಗರು, ಅಭೀವರರು, ಮಹಿಷಿಕರು. ಅಜರು ಮತ್ತು ವಾನರರು. ಗದಗ ತಾಲೂಕಿನ ಲಕ್ಕುಂಡಿ, ಹಾನಗಲ್ ತಾಲೂಕಿನ ಹಾನಗಲ್ಲ ಹಾಗೂ ಹಿರೇಕೆರೂರು ತಾಲೂಕಿನ ಕೆಲವೊಂದು ವಿಶಿಷ್ಟ ಸ್ಥಳಗಳಾದ ನಾಗವಂದ, ಕಣವಿ ಸಿದ್ದಿಗೇರಿ ಮತ್ತು ಪಡಕನಹಳ್ಳಿ ಇವು ರಾಮ, ಸೀತೆ ಮತ್ತು ಲಕ್ಷ್ಮಣರ ಪರ್ಯಟನೆಗೂ, ಪಾಂಡವರು ಹಾಗೂ ವಿರಾಟ ರಾಜನ ಪರ್ಯಟನೆಗೂ ಸಂಬಂಧಿಸಿವೆ. ''ದ್ರೋಣಪುರ'' (ರೋಣ) ವು ಕೌರವ ಮತ್ತು ಪಾಂಡವರ ಪ್ರಸಿದ್ಧ ಗುರುವೂ ಮಹಾಭಾರತ ಯುದ್ಧದ ಒಬ್ಬ ಪ್ರಮುಖ ದಂಡನಾಯಕನೂ ಆದ ದ್ರೋಣಾಚಾರ್ಯರ ನಗರ ಎಂದು ಕರೆಯಲಾಗುತ್ತಿತ್ತು. ವಿದ್ವಾಂಸರು ಕುಂತಲ (ಕರ್ನಾಟಕ) ದಲ್ಲಿ ಅನಾರ್ಯರು ಮೂಲನಿವಾಸಿಗಳಿದ್ದರೆಂದು ನಂಬುತ್ತಾರೆ. ಆರ್ಯರು ದಕ್ಷಿಣ ದೇಶಗಳಿಗೆ ವಲಸೆ ಬಂದು ಅಲ್ಲಿದ್ದ ದ್ರಾವಿಡರನ್ನು ದ್ವೇಷಭಾವದಿಂದಲೂ ತುಚ್ಛರೀತಿಯಿಂದಲೂ ಕಂಡರೆಂದು ತೋರುತ್ತದೆ. ಅನಂತರ, ಆ ಎರಡು ಮಹಾಜನಾಂಗಗಳೂ ಒಂದಾದವು. ಅಂದರೆ ಈಗಿನ ಕರ್ನಾಟಕದ ನಿವಾಸಿಗಳು ದ್ರಾವಿಡ ಮತ್ತು ಆರ್ಯ ಎಂಬ ಎರಡು ಮಹಾನ್ ಸಂಸ್ಕೃತಿಗಳಿಂದಲೂ ಪಡೆದ ಮೂಲಾಂಶಗಳಿಂದಾದ ಒಂದು ಸಂಯುಕ್ತ ಸಂಸ್ಕೃತಿಯ ಉತ್ತರಾಧಿಕಾರಿಗಳು. ಈ ಎರಡು ಜನಾಂಗಗಳು, ಅದರ ಸಂಸ್ಕೃತಿಗಳೂ ಮಿಲನವಾಗಲು ಪ್ರಾರಂಭವಾದ ನಿಖರವಾದ ಕಾಲದ ಬಗ್ಗೆ ಸ್ವಲ್ಪ ಸಂಶಯವಿದೆಯಾದರೂ , ದಕ್ಷಿಣದ ಈಗಿನ ನಿವಾಸಿಗಳು ಈ ಎರಡು ಸಂಸ್ಕೃತಿಗಳ ಲಕ್ಷಣಗಳನ್ನು ಹೀರಿಕೊಂಡಿದ್ದಾರೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ವೇದ, ಪುರಾಣ ಮತ್ತು ಶಾಸ್ತ್ರಗಳ ಅಧ್ಯಯನದ ಮೂಲಕ ಕನ್ನಡ ಜನಾಂಗವು ಅತ್ಯಂತ ಹಳೆಯ ವೈದಿಕ ಕಾಲದಲ್ಲಿಯೇ ಇತ್ತು ಎಂದು ತೋರಿಸುವ ಕುರಿತು ಎರಡು ಊಹೆಗಳಿವೆ. ಡಾ.ದ.ರಾ. ಬೇಂದ್ರೆಯವರ ಪ್ರಕಾರ '' ಕನ್ನಡ ಕುಲ'' ದ ಮೂಲದಲ್ಲಿ ಎರಡು ಜನಾಂಗಗಳಿದ್ದವು. ಅವುಗಳ ಮಿಸಲದಿಂದ ಉಂಟಾದ ಹಾಗೂ ಅನಂತರದ ಇತಿಹಾಸಕ್ಕೆ ಪರಿಚಿತವಾಗಿರುವ ಕನ್ನಡ ಜನಾಂಗ ಉದ್ಭವವಾಯಿತು. ಆ ಎರಡು ಜನಾಂಗಗಳೆಂದರೆ 'ಕಣ್ಣರು' ಅಥವಾ 'ಕಾಳೆಯರು' ಮತ್ತು 'ನರರು' ಅಥವಾ 'ನಟರು' ಈ ನಟರು ಇತಿಹಾಸಕ್ಕೂ ಪುರಾಣ ಕಥೆಗಳಿಗೂ ಪರಿಚಿತರು. ಈ ನಟರೇ ಕಲ್- ಕಾಳೆಯರೊಂದಿಗೆ ಮಿಶ್ರವಾಗಿ ಕಳಿಂದ ಬೆಟ್ಟ, ಕಾಳಿಂದಿ ನದಿ ಮತ್ತು ಕಾಳಿಂಗ ದೇಶಗಳಿಂದ ಹಿಡಿದು ಪಶ್ಚಿಮ ಸಮುದ್ರದವರೆಗೆ ಹರಡಿಕೊಂಡು ಕರ್ನಾಟಕ ಜನಾಂಗವನ್ನು ಹುಟ್ಟು ಹಾಕಿದರು.[೭] ಇನ್ನೊಂದು ಊಹೆ ಎಂದರೆ ಶಂ.ಬಾ. ಜೋಶಿಯವರ ಪ್ರಕಾರ ಯಾವ 'ಕನ್ನಡ' ಎಂಬ ಪದವನ್ನು ಸಂಸ್ಕೃತದಲ್ಲಿ 'ಕರ್ನಾಟ'ವೆಂದು ಹೇಳಲಾಗುತ್ತದೆಯೋ ಆ ಪದವು 'ಕಣ್' ಮತ್ತು 'ನಾಡು' ಎಂಬ ಧಾತುಗಳಿಂದಾಗಿದ್ದು, ಅದು ಮುಖ್ಯವಾಗಿ ಕನ್ನಡ ನಾಡಿಗೆ ಅನ್ವಯವಾಗುತ್ತದೆ. 'ಕಣ್' ಎಂದರೆ ಈಚೀನ ಕನ್ನಡ ಜನರ ಪೂರ್ವಜರಾದ 'ಕಣ್ಣರ' ಜನಾಂಗ 'ಕಣ್ಣರೂ' ಸಹ ಆರ್ಯ ದ್ರಾವಿಡರಿಗಿಂತ ಬಹಳ ಪೂರ್ವದ ಜನಾಂಗದ ಒಂದು ಶಾಖೆಯಾಗಿದ್ದು, ಅವರನ್ನು 'ಕಳವರ್' ಅಥವಾ 'ಕಳ್ಳರ್' ಎನ್ನಲಾಗುತ್ತಿತ್ತು. ಋಗ್ವೇದದ ಕಾಲಕ್ಕೆ ಸೇರಿದ ಅವರು ವೃತ್ತಿಯಲ್ಲಿ ದನಗಾಹಿಗಳೂ, ದನಗಳ್ಳರೂ ಆಗಿದ್ದು, ರುದ್ರ ಶಿವನನ್ನು ಆರಾಧಿಸುತ್ತಿದ್ದರು. 'ಕಳವರ್' ಜನಾಂಗವು ಮೂಲ ದ್ರಾವಿಡವಾಗಿದ್ದರೆ, ಕಣ್ಣರ್ ಜನಾಂಗವು ಆರ್ಯ- ದ್ರಾವಿಡವಾಗಿದೆ. ಅಂದರೆ, ಆರ್ಯ ಮತ್ತು ದ್ರಾವಿಡರಕ್ತದ ಮಿಶ್ರಣದಿಂದುಂಟಾದ ಜನಾಂಗ, ಈ ಮಿಶ್ರಣವು ಋಗ್ವೇದ ಕಾಲದಲ್ಲೇ ಪ್ರಾರಂಭವಾಗಿತ್ತು ಮತ್ತು ಕರ್ನಾಟಕ ಸಂಸ್ಕೃತಿಯ ಉದಯಕ್ಕೂ ಕಾರಣವಾಗಿತ್ತು.[೮] ಎಂದು ಹೇಳಿದ್ದಾರೆ. ಅಲ್ಲದೆ, ಈ ಮಿಶ್ರಣದಿಂದ ಆ ಕಾಲದ ಆಂಧ್ರದವರೆಗೆ ಅನುಕೂಲವಾಯಿತು. ಆಂಧ್ರ ಕರ್ನಾಟಕದ ಜನರು ಬಹಳ ಕಾಲದವರೆಗೆ ಒಂದೇ ರೀತಿಯ ಸಂಸ್ಕೃತಿ, ಭಾಷೆ ಮತ್ತು ಸಂಪ್ರದಾಯವನ್ನು ಬೆಳೆಸಿಕೊಂಡು ಬಂದರು. ಆದರೆ, ಆಮೇಲೆ ಅಂದರೆ ೧೨ ನೆಯ ಅಥವಾ ೧೩ ನೆಯ ಶತಮಾನದಿಂದೀಚೆಗೆ, ಅವು ಶಾಖೆಗಳಾಗಿ ಒಡೆದು ಪ್ರತ್ಯೇಕವಾಗಿ ಪ್ರವಹಿಸತೊಡಗಿದವು. ಆಂಧ್ರದವರೂ ಕರ್ನಾಟಕದವರೂ ತಮ್ಮ ಭೌಗೋಳಿಕ ಸ್ಥಾನಗಳ ದೆಸೆಯಿಂದಾಗಿ ಉಳಿದವರಿಗಿಂತ ಹೆಚ್ಚು ಆರ್ಯರಾಗಿದ್ದಾರೆ.

ಹೀಗೆ ಎರಡು ಮಹಾನ್ ಸಂಸ್ಕೃತಿಗಳನ್ನು ಸ್ವಾಭಾವಿಕವಾಗಿ ಹಾಗೂ ಬಹಳ ಮೊದಲೇ ಜೀರ್ಣಿಸಿಕೊಂಡಿರುವ ಕರ್ನಾಟಕವು ಬಹಳ ವಿಶಿಷ್ಟವಾದ ಪ್ರಾಂತವಾಗಿದೆ. ಕರ್ನಾಟಕ ಇತಿಹಾಸದ ವಿಕಾಸದಲ್ಲಿ ಮುಂಬಯಿ ಕರ್ನಾಟಕವು ಒಂದು, ಅಷ್ಟೇ ಮಹತ್ವದ ಸ್ಥಾನವನ್ನು ಪಡೆದಿದೆ. ಅದು ಅನೇಕ ಪ್ರಬಲ ರಾಜಕೀಯ ಬದಲಾವಣೆಗಳ ಅನೇಕ ರಾಜರು ಮತ್ತು ಅವರ ವಂಶಗಳ ಏಳು-ಬೀಳುಗಳ ಸ್ಥಾನವಾಗಿದೆ.

ಪುರಾಣಗಳು ನಂದರು ಇಡೀ ಭಾರತವನ್ನೇ ಆಳಿದರು ಎಂದು ಹೇಳುತ್ತವೆ. ಅಲ್ಲದೆ ಕೆಲವು ೧೨ ನೆಯ ಶತಮಾನಕ್ಕೆ ಸಂಬಂಧಿಸಿದ ಶಾಸನಗಳು ನಂದರು, ಕುಂತಲ ಅಥವಾ ಕರ್ನಾಟಕವನ್ನು ಆಳಿದರೆಂಬುದನ್ನು ಉಲ್ಲೇಖಿಸುತ್ತವೆ. ಕರ್ನಾಟಕ ಚರಿತ್ರೆಯ ಬಗೆಗಿನ ಅತ್ಯಂತ ಹಳೆಯ ಉಲ್ಲೇಖವೆಂದರೆ , ಮೌರ್ಯರ ಕಾಲಕ್ಕೆ ಸಂಬಂಧಿಸಿದುದು. ಕರ್ನಾಟಕ ಇತಿಹಾಸದಲ್ಲಿಯೇ ಅಶೋಕನ ಶಾಸನಗಳು ಹೊಸ ಮೈಲುಗಲ್ಲುಗಳಾಗಿವೆ. ಕರ್ನಾಟಕವು ಅವನಿಗೆ ಅಧೀನವಾಗಿತ್ತು. ಅವನು ಬಂಡೆಗಲ್ಲುಗಳ ಮೇಲೆ ಕೆತ್ತಿಸಿದ ಶಾಸನಗಳು ಕರ್ನಾಟಕ ಚಿತ್ರದುರ್ಗಜಿಲ್ಲೆಯ ಜಟ್ಟಿಂಗ ರಾಮೇಶ್ವರ, ಬ್ರಹ್ಮಗಿರಿ, ಸಿದ್ದಾಪುರ ಮತ್ತು ರಾಯಚೂರ ಜಿಲ್ಲೆಯ ಕೊಪ್ಪಳ ಮತ್ತು ಮಸ್ಕಿ ಪಾಲ್ಕಿಗುಂಡದಲ್ಲಿ ದೊರಕಿವೆ. ಅಶೋಕನು ತನ್ನ ಬೌದ್ಧಮತ ಪ್ರಚಾರಕರನ್ನು ವನವಾಸಿ ಅಥವಾ ಬನವಾಸಿಗೆ ಕಳುಹಿಸಿದ್ದನೆಂದು ಹೇಳಲಾಗುತ್ತದೆ.

ಮೌರ್ಯರ ಆಳ್ವಿಕೆಯ ಪತನದ ಹಿಂದೆಯೇ ಶಾತವಾಹನರ ಉದಯವಾಯಿತು.[೧೦] ಕರ್ನಾಟಕದ ಮೇಲೆ ತಮ್ಮ ಪ್ರಭುತ್ವ ಸಾಧಿಸಿದ ಶಾತವಾಹನರು ಕ್ರಿ.ಶ.ಪೂ. ೧೫೦ ರಲ್ಲಿ ಕರ್ನಾಟಕದ ಒಂದು ಮುಖ್ಯ ವಂಶವಾದರು ಹಾಗೂ ಕ್ರಿ.ಶ. ಎರಡನೆಯ ಶತಮಾನದ ಮಧ್ಯಭಾಗದವರೆಗೂ, ಅವರು ತಮ್ಮ ಪ್ರಭಾವವನ್ನು ಬೀರಿದರು. ಈ ಕಾಲದಲ್ಲಿ ಅವರಿಗೆ ಪಾಶ್ಚಾತ್ಯ ದೇಶಗಳೊಡನೆ ನಿಕಟ ಸಂಪರ್ಕವಿತ್ತು. ಗ್ರೀಕ್ ದಾರ್ಶನಿಕ ಟಾಲೆಮಿ(ಕ್ರಿ.ಶ. ೧೫೦) ಬಾದಾಮಿಯೋಯ್(ಬಾದಾಮಿ), ಬನೋನೊಸಾಸೈ(ಬನವಾಸಿ) , ಮೊದೊಗೌಲ್ಲು (ಮುದಗಲ್ಲು), ಇಂಡೆ(ಇಂಡಿ) ಮುಂತಾದ ಮುಖ್ಯವಾದ ವಾಣಿಜ್ಯ ಕೇಂದ್ರಗಳ ಉಲ್ಲೇಖ ಮಾಡಿದ್ದಾನೆ. ಅವರು ಬನವಾಸಿ , ಮುಳವಳ್ಳಿ, ಪಾಲ್ಗುಂಡ ಮತ್ತು ಚಿತ್ರದುರ್ಗದ ಬಳಿಯ ಚಂದ್ರಾವತಿಗಳಲ್ಲಿ ನಡೆಸಿದ ಆಳ್ವಿಕೆಯನ್ನು ಸೂಚಿಸುವ ಪುರಾತತ್ವ ಆಧಾರಗಳ ಮೇಲೆ ಈಗಿನ ಕರ್ನಾಟಕ ರಾಜ್ಯದ ಕೆಲವು ಉತ್ತರ ಭಾಗಗಳು ಶಾತವಾಹನರ ರಾಜ್ಯವಾಗಿದ್ದಿರಬಹುದೆಂದು ಊಹಿಸಲಾಗಿದೆ.[೧೧]

ಕ್ರಿ.ಶ. ಮೂರನೇ ಶತಮಾನದ ಮಧ್ಯ ಭಾಗದ ಸುಮಾರಿಗೆ ಶಾತವಾಹನರ ಪ್ರಾಬಲ್ಯ ಕಡಿಮೆಯಾಯಿತು. ಕದಂಬರ ಪ್ರಾಮುಖ್ಯತೆ ಬೆಳೆಯಿತು. ಕ್ರಿ.ಶ. ನಾಲ್ಕನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಈ ಪ್ರದೇಶದ ಮೇಲೆ ಎರಡು ರಾಜಮನೆತನಗಳು ಪ್ರಭಾವ ಬೀರ ತೊಡಗಿದವು. ಕರ್ನಾಟಕದ ಉತ್ತರ ಭಾಗವನ್ನು ಕದಂಬರು ಆಳಿದರು. ದಕ್ಷಿಣದಲ್ಲಿ ಗಂಗರು ಪ್ರಭಾವ ಬೀರಿದರು.ಕದಂಬರು ಕರ್ನಾಟಕವನ್ನಾಳಿದ ಪ್ರಥಮ ಕನ್ನಡದ ಅರಸರು. ಕದಂಬರು ಎಷ್ಟು ಪ್ರಬಲರಾಗಿದ್ದರೆಂದರೆ, ಉತ್ತರದ ಚಕ್ರಾಧಿಪತಿಗಳೂ ಮಧ್ಯ ಭಾಗದ 'ವಾಕಾಟಕ'ರೂ ಅವರ ಜೊತೆ ಸಖ್ಯ ಬೆಳೆಸಿದರು. ಈ ಸಾಮ್ರಾಜ್ಯದ ಸಂಸ್ಥಾಪಕನೆಂದರೆ ಮಯೂರ ಶರ್ಮ. ಪಶ್ಚಿಮದಲ್ಲಿ ತ್ರಿಕೂಟ ಮತ್ತು ಅಭೀರ ಪೂರ್ವದಲ್ಲಿ ಕಾಂಚಿ ಮೈಸೂರಿನ ಸೆಂದ್ರಕ ಉತ್ತರದ ಪಂಜಾಬ ಮತ್ತು

ಕನೋಜಗಳನ್ನೊಳಗೊಂಡಂತೆ ಬಹಳ ವಿಶಾಲವಾದ ರಾಜ್ಯವನ್ನು ಅವನು ಆಳಿದನು.[೧೨] ಅವರು ಪ್ರದೇಶಗಳನ್ನು ವಿಸ್ತರಿಸುವುದು ಹೆಚ್ಚಿದಂತೆಲ್ಲ ಅವರ ಪ್ರಾಬಲ್ಯವೂ ಬೆಳೆಯಿತು; ಅದರಂತೆ, ರಾಜಧಾನಿಗಳ ಸ್ಥಾಪನೆಯೂ ಹೆಚ್ಚಾಯಿತು. ಹೀಗಾಗಿ, ಅವರ ಮೂಲ ರಾಜಧಾನಿ ಬನವಾಸಿಯಲ್ಲೂ ಅಲ್ಲದೇ ಉಚ್ಚಂಗಿ(ಚಿತ್ರದುರ್ಗ), ಪಲಸಿಕೆ(ಬೆಳಗಾವಿಯ ಹತ್ತಿರದ ಈಗಿನ ಹಲಸಿ), ತ್ರಿಪರ್ವತ(ಇವನ್ನು ಕೆಲವು ವೇಳೆ ಧಾರವಾಡ ಜಿಲ್ಲೆಯ ತೇಗೂರ ಎಂದು, ಹಾವೇರಿ ಜಿಲ್ಲೆಯ ದೇವಗಿರಿ ಎಂದು, ಮತ್ತೆ ಕೆಲವು ಸಾರಿ ಬೆಳಗಾವಿ ಜಿಲ್ಲೆಯ ಮುರಗೋಡ ಎಂದೂ ಮತ್ತೆ ಕೆಲವು ಸಾರಿ ಹಾಸನ ಜಿಲ್ಲೆಯ ಹಳೆಬೀಡು ಎಂದು ಗುರುತಿಸಲಾಗುತ್ತದೆ). ಈ ಸ್ಥಳಗಳಲ್ಲಿಯೂ ರಾಜಧಾನಿಗಳನ್ನು ಸ್ಥಾಪಿಸಲಾಯಿತು. ಆದರೆ, ಕದಂಬರಿಗೆ ತಮ್ಮ ರಾಜ್ಯದಲ್ಲಿ ಒಡಕುಂಟಾಗುವ ಲಕ್ಷಣಗಳು ತೋರಿದಾಗ, ಅವರು ಚಾಳುಕ್ಯರೂ ಸೇರಿದಂತೆ ಬೇರೆ ರಾಜರುಗಳಿಂದ ಹೆಚ್ಚುತ್ತಿದ್ದ ವಿರೋಧವನ್ನು ಎದುರಿಸಬೇಕಾಯಿತು. ಕದಂಬ ವಂಶದವರು ಮೂಲ ಚಾಳುಕ್ಯರಿಂದ ಸುಮಾರು ಕ್ರಿ.ಶ.ಆರನೇ ಶತಮಾನದಲ್ಲಿ ಸೋಲಿಸಲ್ಪಟ್ಟಂತೆ ಕಾಣುತ್ತದೆ. ಹೀಗೆಂದು, ಕ್ರಿ.ಶ. ೫೪೩ ರಲ್ಲಿ ಮೊದಲನೆಯ ಪುಲಕೇಶಿಯು ಬಂಡೆಗಳ ಮೇಲೆ ಬರೆಯಿಸಿದ ಶಾಸನದಿಂದ ಊಹಿಸಬಹುದು. ಆದರೆ, ಕದಂಬರ ರಾಜರ ವಂಶಜರು ಚಾಳುಕ್ಯರ ಸಾಮಂತ ರಾಜರಂತೆ ಆಳುವುದನ್ನು ಮುಂದುವರೆಸಿದರು.

ಕದಂಬರು ಧಾರವಾಡದ ಪಶ್ಚಿಮೋತ್ತರ ಹಾಗೂ ದಕ್ಷಿಣ ಭಾಗಗಳನ್ನು ಅಂದರೆ, ಬನವಾಸಿ-ಹಾನಗಲ್ಲುಗಳ ನಡುವಿನ ಧಾರವಾಡ, ಪಶ್ಚಿಮ ಹುಬ್ಬಳ್ಳಿ, ಕಲಘಟಗಿ, ಶಿಗ್ಗಾವಿ, ಹಾನಗಲ್ಲು ಮತ್ತು ಹಿರೇಕೆರೂರು ತಾಲೂಕುಗಳನ್ನು ಆಳಿದರು. ಗುತ್ತರು ಹಾವೇರಿ ತಾಲೂಕನ್ನು ಮತ್ತು ರಾಣಿಬೆನ್ನೂರ ತಾಲೂಕಿನ ಒಂದು ಭಾಗವನ್ನು ಆಳಿದರು. ಯರಂಬುರ್ಗೆ(ಕೊಪ್ಪಳ ಸಮೀಪದ ಈಗಿನ ಯಲಬುರ್ಗ)ಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಸಿಂಧರು ರೋಣ ಮತ್ತು ಗದಗ ತಾಲೂಕುಗಳನ್ನು ಆಳಿದರು. ಬೆಳಗಾವಿ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಸಿಕ್ಕಿರುವ ಶಾಸನಗಳು, ಗೋವೆಯ ಕದಂಬರು(ಕ್ರಿ.ಶ.೯೮೦-೧೨೫೦)೧೨ ಮತ್ತು ೧೩ ನೆಯ ಶತಮಾನಗಳಲ್ಲಿ 'ವೇಣುಗ್ರಾಮ' ಅಥವಾ ಬೆಳಗಾವಿಯ ಬಳಿ ಇದ್ದ 'ಹಲಸಿ' ಎಂದು ತಿಳಿಯಲಾಗಿದ್ದು ಸ್ಥಳದ ಕೆಲವು ಭಾಗಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರೆಂದು ತಿಳಿಸುತ್ತದೆ.[೧೩]

ಕದಂಬರು ಉತ್ತರ ಕರ್ನಾಟಕವನ್ನು ೪ನೇ ಶತಮಾನದಿಂದ ೬ನೇ ಶತಮಾನದವರೆಗೆ ಆಳಿದರು. ವಾಸ್ತವವಾಗಿ ಕದಂಬರು ಇತಿಹಾಸದಿಂದ ಕಣ್ಮರೆಯಾದುದು ೧೪ ನೇ ಶತಮಾನದಲ್ಲಿ ವಿಜಯನಗರದ ಉದಯದ ನಂತರವೇ. ಕ್ರಿ.ಶ. ೬ ನೇ ಶತಮಾನದ ಆದಿಯಲ್ಲಿ ಪಶ್ಚಿಮ ಚಾಳುಕ್ಯರು ಅಥವಾ ಬಾದಾಮಿ ಚಾಳುಕ್ಯರು ಅಧಿಕಾರದ ಹೊಸ ಯುಗವನ್ನೇ ಆರಂಭಿಸಿದರು. ಚಾಳುಕ್ಯರು (೬ನೇ ಶತಮಾನದ ಆದಿಯಿಂದ ಕ್ರಿ.ಶ. ೭೫೫ ರ ವರೆಗೆ) 'ಮೊದಲನೆಯ ಪುಲಕೇಶಿ'ಯಿಂದಾಗಿ

ಭದ್ರವಾಗಿ ನೆಲೆಯೂರಿದ್ದರು. ಈ ಪುಲಕೇಶಿಯು ಕದಂಬ ರಾಜನಾದ' ಇಮ್ಮಡಿ ಕೃಷ್ಣ ವರ್ಮ'ನನ್ನು ಸೋಲಿಸಿ, ಬಿಜಾಪೂರ ಜಿಲ್ಲೆಯ ಬಾದಾಮಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಮೊದಲನೆಯ ಪುಲಕೇಶಿಯ ಮೊಮ್ಮಗನಾದ 'ಇಮ್ಮಡಿ ಪುಲಕೇಶಿ'ಯು ಅತಿಶಯ ಸಾಮರ್ಥ್ಯ ಉಳ್ಳವನಾಗಿದ್ದು ತನ್ನ ರಾಜ್ಯವನ್ನು ಗಣನೀಯವಾಗಿ ವಿಸ್ತರಿಸಿದನು. ಅವನ ಆಳ್ವಿಕೆಯಲ್ಲಿ ರಾಜ್ಯವು ಹೆಚ್ಚು- ಕಡಿಮೆ ತುತ್ತ ತುದಿಯನ್ನು ಮುಟ್ಟಿತ್ತಲ್ಲದೆ, ಅವನನ್ನು ಸರ್ವಶ್ರೇಷ್ಠ ಚಾಳುಕ್ಯ ಚಕ್ರವರ್ತಿಯೆಂದು, ಕರ್ನಾಟಕದ ಪ್ರಬಲ ರಾಜರಲ್ಲೊಬ್ಬನೆಂದು ನಿಸ್ಸಂಶಯವಾಗಿ ಹೇಳಲಾಗುತ್ತದೆ. ಅವನು ಕದಂಬರನ್ನು, ಗಂಗರನ್ನು, ಆಲೂಪರನ್ನು ಸೋಲಿಸಿದನು. ಅವನು ಒಂದು ದೊಡ್ಡ ನೌಕಾ ಪಡೆಯನ್ನು ಹೊಂದಿದ್ದನೆಂದು ಕಾಣುತ್ತದೆ. ಕನೌಜಿನ ಮಹಾನ್ ರಾಜ'ಹರ್ಷವರ್ಧನ'ನನ್ನು ನರ್ಮದಾ ನದಿಯ ದಂಡೆಯ ಮೇಲೆ ಸೋಲಿಸಿ, ವಿಂಧ್ಯ ಪರ್ವತದ ದಕ್ಷಿಣ ಭಾಗವಾದ ಡೆಕ್ಕನ್ನಿಗೆ ಪ್ರಭುವಾದನು. ಈ ಡೆಕ್ಕನ್ನಿನಲ್ಲಿ ಮೂರು ರಾಜ್ಯಗಳ(ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರ)೯೦,೦೦೦ ಹಳ್ಳಿಗಳಿದ್ದವು. ಅವನ ಕಾಲದಲ್ಲಿ ಅನೇಕ ದೇಶಗಳೊಂದಿಗೆ ರಾಯಭಾರ ಸಂಬಂಧಗಳು ಪ್ರಾರಂಭವಾದವು. ಅವನು ಪರ್ಶಿಯಾದ ದೊರೆ ಆರನೇಯ ಖುಸ್ರು' ರಾಜ್ಯಭಾರ ಮಾಡುತ್ತಿದ್ದಾಗ, ಅವನ ದೇಶಕ್ಕೆ ತನ್ನೊಬ್ಬ ರಾಯಭಾರಿಯನ್ನು ಕಳಿಸಿ ಅಲ್ಲಿಂದ ಬೆಲೆಬಾಳುವ ಕಾಣಿಕೆಗಳನ್ನು ತಂದ ಒಬ್ಬ ರಾಯಭಾರಿಯನ್ನು ಬರಮಾಡಿಕೊಂಡನು.[೧೪] ಇದನ್ನು ಅಜಂತಾ ಗುಹೆಯ ಶಿಲ್ಪಕಲೆಯಲ್ಲಿ ಕಾಣಬಹುದು.

ಚಾಳುಕ್ಯ ರಾಜ್ಯದ ಸಂಸ್ಥಾಪಕನಾದ ಜಯಸಿಂಹನು ಚಿಕ್ಕೋಡಿ ರಾಜನ ಮಗಳನ್ನು ಮದುವೆಯಾದನೆಂದು ನಂಬಲಾಗಿದೆ.[೧೫] ಈ ವಂಶವು ಕ್ರಿ.ಶ.೪೭೯ ರಿಂದ ಕ್ರಿ.ಶ. ೮೯ರ ವರೆಗೆ ಹಂತ ಹಂತವಾಗಿ ತನ್ನ ಪ್ರಭುತ್ವವನ್ನು ಸಾಧಿಸಿತು. ಆಮೇಲೆ 'ರಟ್ಟರು' ತಮ್ಮ ಪ್ರಭುಗಳ ವಿರುದ್ಧ ಬಂಡೆದ್ದು, ಅವರ ವಿರುದ್ಧ ಮೇಲುಗೈ ಸಾಧಿಸಿದರು. ಆದರೆ ಇಮ್ಮಡಿ ಪುಲಕೇಶಿಯು ತನ್ನ ಆಳ್ವಿಕೆಯ ಕೊನೆಯ ಭಾಗದಲ್ಲಿ ಪಲ್ಲವರಿಂದ ಸೋಲಿಸಲ್ಪಟ್ಟನು ಹಾಗೂ ಮತ್ತೊಬ್ಬ ರಾಜ ಎರಡನೇ ವಿಕ್ರಮಾಧಿತ್ಯನು ರಾಜ್ಯವನ್ನು ಪುನರುಜ್ಜೀವನಗೊಳಿಸುವವರೆಗೂ ಚಾಳುಕ್ಯರು ಸ್ವಲ್ಪಕಾಲದ ವರೆಗೆ ಕಳಾಹೀನರಾದರು. ಆದರೆ ಕ್ರಿ.ಶ. ೭೪೪ರಲ್ಲಿ ರಾಷ್ಟ್ರಕೂಟರು ಚಾಳುಕ್ಯರನ್ನು ಸಂಪೂರ್ಣವಾಗಿ ಸೋಲಿಸಿ, ಬಾದಾಮಿಯನ್ನು ವಶಪಡಿಸಿಕೊಂಡು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು.

ಎರಡು ಶತಮಾನಗಳಿಗಿಂತ ಹೆಚ್ಚಿನ ಚಾಳುಕ್ಯರ ಆಳ್ವಿಕೆಯು ಮುಂಬಯಿ ಕರ್ನಾಟಕದ ಇತಿಹಾಸದಲ್ಲಿ ಸ್ಮರಣೀಯ ಕಾಲವಾಗಿದೆ. ಅವರು ಉತ್ಕೃಷ್ಟ ವಾಸ್ತು ಶಿಲ್ಪಗಳ ಪೋಷಕರಾಗಿದ್ದು, ವಾಸ್ತು ಶಿಲ್ಪದ ಹೊಸದಾದ ಶೈಲಿಯನ್ನೇ ಬೆಳೆಸಿದರು. ಸುಪ್ರಸಿದ್ಧವಾದ ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲು ಅವರ ಕಾಲಕ್ಕೆ ಸೇರಿದ ವಾಸ್ತುಶಿಲ್ಪ ಕಲೆಯನ್ನು ಬಿತ್ತರಿಸುವ ಪ್ರಮುಖ ಐತಿಹಾಸಿಕ

ನೆಲೆಗಳಾಗಿವೆ. ಚಾಳುಕ್ಯರು ರಾಷ್ಟ್ರಕೂಟ ಮೊದಲದೊರೆ ದಂತಿದುರ್ಗ (ಕ್ರಿ.ಶ. ೭೫೩.-೯೫೭)ನಿಂದ ಪದಚ್ಯುತಿಗೊಳಗಾದರು. ಗುಲಬರ್ಗಾ ಜಿಲ್ಲೆಯ ಮಾನ್ಯಖೇಟ ಅಥವಾ ಈಗಿನ ಮಳಖೇಡ ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ದಂತಿದುರ್ಗನು ರಾಷ್ಟ್ರಕೂಟರ ರಾಜವಂಶದ ಸ್ಥಾಪಕ. ರಾಷ್ಟ್ರಕೂಟರಲ್ಲಿ ಅಮೋಘವರ್ಷ ನೃಪತುಂಗನು(ಕ್ರಿ.ಶ. ೮೧೪-೮೮೦) ಒಬ್ಬ ಶ್ರೇಷ್ಠ ಹಾಗೂ ಪ್ರಸಿದ್ಧ ರಾಜ. ಭಾರತದ ಇತಿಹಾಸದಲ್ಲಿ ಹಾಗೂ ಕರ್ನಾಟಕದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವನನ್ನು ವೈಭವೀಕರಿಸಲಾಗಿದೆ. ಅವನು ಜೈನನಾಗಿದ್ದು ದಿಗಂಬರ ಪಂಥಕ್ಕೆ ಸೇರಿದ್ದನು. ಆದರೆ ಜೈನರು ಅವನು ಹುಟ್ಟಿನಿಂದಲೂ ಜೈನನಲ್ಲವೆಂದೂ, ಜೈನ ಮತವನ್ನು ಅನುಸರಿಸುತ್ತಿದ್ದನೆಂದೂ ಹೇಳುತ್ತಾರೆ.[೧೬]

ಮುಂಬಯಿ- ಕರ್ನಾಟಕದ ಚರಿತ್ರೆಯಲ್ಲಿ ಚಾಳುಕ್ಯ ಮತ್ತು ರಾಷ್ಟ್ರಕೂಟರ ಯುಗವು ಅತ್ಯಂತ ವೈಭವಪೂರ್ಣ ಯುಗಗಳಲ್ಲೊಂದಾಗಿದೆ. ಅದು, ಕೇವಲ ರಾಜ್ಯ ವಿಸ್ತರಣೆಯ ಯುಗವಾಗಿರದೆ, ತೀವ್ರ ಸಾಂಸ್ಕೃತಿಕ ಅಭಿವೃದ್ಧಿಯ ಯುಗವೂ ಆಗಿತ್ತು. ಉತ್ತರ ಮತ್ತು ದಕ್ಷಿಣದ ಸಾಂಸ್ಕೃತಿಕ ಪ್ರವಾಹಗಳು ಆಗ ಸಮನ್ವಯಗೊಂಡವು. ಆದರೆ ಕಲ್ಯಾಣದ ಚಾಳುಕ್ಯರ ಪತನದೊಂದಿಗೆ ೬ ಶತಮಾನಗಳ ವೈಭವ ಪೂರ್ಣ ಯುಗವು ಕೊನೆಗೊಂಡಿತು. ಆಗ ಪ್ರಭುತ್ವಕ್ಕಾಗಿ ಹೋರಾಟ ಪ್ರಾರಂಭವಾಯಿತು. ಚಾಳುಕ್ಯರು ತಮ್ಮ ಎರಡು ವಂಶಗಳನ್ನು ಸ್ಥಾಪಿಸಿದರು. ಅವು ಯಾವವೆಂದರೆ ಉತ್ತರದಲ್ಲಿ ದೇವಗಿರಿಯ ಯಾದವರು ಮತ್ತು ದಕ್ಷಿಣದಲ್ಲಿ ಹೊಯ್ಸಳರು. ತುಂಗಭದ್ರಾ ನದಿಯು ಇವೆರಡರ ನಡುವಿನ ಪ್ರಾಕೃತಿಕ ಗಡಿಯಾಯಿತು. ಹೊಯ್ಸಳರು ದಕ್ಷಿಣ ಕರ್ನಾಟಕವನ್ನು ಆಳಿದರೆ, ದೇವಗಿರಿಯ ಯಾದವರು ಉತ್ತರ ಕರ್ನಾಟಕವನ್ನು ಆಳಿದರು. ಯಾದವರು ಮೊದಲಿಗೆ ರಾಷ್ಟ್ರಕೂಟರ ಸಾಮಂತರಾಗಿದ್ದು ಅನಂತರ , ಕಲ್ಯಾಣದ ಚಾಳುಕ್ಯರಿಗೆ ಸಾಮಂತರಾಗಿದ್ದರೆಂದು ಹೇಳಲಾಗುತ್ತದೆ.

೧೨ ನೇ ಶತಮಾನದ ಬಹುಭಾಗದವರೆಗೆ (ಅಂದರೆ ಕ್ರಿ.ಶ. ೧೧೦೦-೧೧೮೦) ಧಾರವಾಡದ ಈಶಾನ್ಯದ ಭಾಗವು ಅಂದರೆ, ಧಾರವಾಡದ ಈಶಾನ್ಯದಲ್ಲಿರುವ ನರೇಗಲ್‌ನಿಂದ ಪೂರ್ವದ ಸುಮಾರು ೧೫ ಮೈಲುಗಳು ನಿಜಾಮ ಸಂಸ್ಥಾನದ ಯರಂಬುರ್ಗ(ಯಲಬುರ್ಗ)ದ ಸಿಂಧರ ವಶದಲ್ಲಿತ್ತು.[೧೭] ಅವರು ಬಾದಾಮಿ ಚಾಳುಕ್ಯರ ವಂಶಜರೆಂದು ಹೇಳಲಾಗುತ್ತದೆ. ಈ ವಂಶದವರು ಬೀದರಜಿಲ್ಲೆಯ ಕಲ್ಯಾಣದಿಂದ ಆಳಲು ಪ್ರಾರಂಭಿಸಿದ್ದರಿಂದ ಕಲ್ಯಾಣ ಚಾಳುಕ್ಯರೆಂದು ಪ್ರಸಿದ್ಧರಾಗಿದ್ದಾರೆ.

ರಾಷ್ಟ್ರಕೂಟರು ಕ್ರಿ.ಶ.೯೭೩ ರಿಂದ ೧೧೯೦ ರ ವರೆಗೆ ರಾಜ್ಯಭಾರ ಮಾಡಿದ ಕಲ್ಯಾಣ ಚಾಳುಕ್ಯರಿಂದ ಸೋಲಿಸಲ್ಪಟ್ಟರು. ಕಲ್ಯಾಣದ ಚಾಳುಕ್ಯರ ಕೊನೆಯ ಅರಸನಾದ ನಾಲ್ಕನೇಯ

ಸೋಮೇಶ್ವರನು ಕ್ರಿ.ಶ.೧೧೬೩ ರಲ್ಲಿ ಕಲಚೂರ್ಯ ಅಥವಾ ಕಲಚೂರಿ ವಂಶದ ಬಿಜ್ಜಳನಿಂದ ಸೋಲಿಸಲ್ಪಟ್ಟನು. ಕಳಚೂರ್ಯ ವಂಶಜರು ಅನುವಂಶಿಕವಾಗಿ ಕಲ್ಯಾಣದ ಚಾಳುಕ್ಯರ ಸಾಮಂತರಾಜರಾಗಿದ್ದರು. ಬಿಜ್ಜಳನು ಕ್ರಿ.ಶ.೧೧೫೭ ರಲ್ಲಿ ಚಾಳುಕ್ಯ ಸೈನ್ಯದ ದಂಡನಾಯಕನಾಗಿದ್ದು, ಆ ಸ್ಥಾನದ ಬಲದಿಂದ ತನ್ನ ಅರಸನ ವಿರುದ್ದ ದಂಗೆಯೆದ್ದನಲ್ಲದೇ ಅವನನ್ನು ಪದಚ್ಯುತಗೊಳಿಸಿದನು.

೧೪ನೇಯ,೧೫ನೇಯ ಮತ್ತು ೧೬ನೇಯ ಶತಮಾನದ ಮಧ್ಯಭಾಗದವರೆಗಿನ ಕರ್ನಾಟಕದ ಈ ಭಾಗದ ಇತಿಹಾಸವೆಂದರೆ , ಒಬ್ಬರಾದ ಮೇಲೊಬ್ಬರಂತೆ ಬಂದ ಬಹುಮನಿ ಅರಸರು ಹಾಗೂ ಅವರ ಉತ್ತರಾಧಿಕಾರಿಗಳು ಮತ್ತು ವಿಜಯನಗರ ಚಕ್ರಾಧಿಪತ್ಯದ ಅರಸರ ನಡುವೆ ಪ್ರಭುತ್ವಕ್ಕಾಗಿ ನಡೆವ ಹೆಚ್ಚು ಕಡಿಮೆ ಸಮಸಮ ಹೋರಾಟದ ಚರಿತ್ರೆಯಾಗಿತ್ತು. ಆದರೂ , ಹಿಂದೂ- ಮುಸ್ಲಿಂ ಕೋಮು ಸೌಹಾರ್ಧತೆಗೆ ಮಹತ್ವದ ನಿದರ್ಶನದ ಕಾಲವು ಆಗಿತ್ತು. ವಿಜಯನಗರದ ಸೈನ್ಯದಲ್ಲಿ ಅನೇಕ ಮುಸ್ಲಿಂ ಸೈನಿಕರು ಕರ್ತವ್ಯ ನಿರ್ವಹಿಸುತ್ತಿದ್ದರು ಎಂಬುದನ್ನು ಗುರುತಿಸಲಾಗಿದೆ. ಕೃಷ್ಣದೇವರಾಯನ ಆಳ್ವಿಕೆಯು ವಿಜಯನಗರದ ಚರಿತ್ರೆಯಲ್ಲಿ ಅತ್ಯಂತ ವೈಭವಯುತ ಕಾಲ.ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ಪೊರ್ಚಗಲ್‌ದ ಡ್ಯೊರಾಟ್ ಬಾರ್ಬೊಸಾ, ರಶಿಯಾದ ನಿಕೇಪಿನ ಎಂಬ ವಿದೇಶಿ ಪ್ರವಾಸಿಗರು ವಿಜಯನಗರಕ್ಕೆ ಭೇಟಿ ಕೊಟ್ಟು ಆ ಚಕ್ರಾಧಿಪತ್ಯದ ಬಗೆಗಿನ ನಿಖರವಾದ ಹಾಗೂ ಸುಸ್ಪಷ್ಟ ವಿವರಣೆಗಳನ್ನು ನೀಡಿದ್ದಾರೆ. ಸೋದರರಾದ ಹರಿಹರ ಮತ್ತು ಬುಕ್ಕರು ಕ್ರಿ.ಶ. ೧೩೩೬ ರಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ಕೂಡಲೇ, ವಿಜಯದ ಮೂಲಕ ತಮ್ಮ ರಾಜ್ಯವನ್ನು ವಿಸ್ತರಿಸಿದರು. ಕ್ರಿ.ಶ.೧೩೪೦ ರ ವೇಳೆಗೆ ಧಾರವಾಡ ಪ್ರದೇಶವನ್ನು ಒಳಗೊಂಡು ಬಿಜಾಪೂರ ಜಿಲ್ಲೆಯ ಬಾದಾಮಿವರೆಗಿನ ಪ್ರದೇಶವನ್ನು ಆಕ್ರಮಿಸಿಕೊಂಡರು. ವಿಜಯನಗರದ ರಾಜವಂಶಜರ ಬಗೆಗೆ ೫೦ ಕ್ಕಿಂತಲೂ ಹೆಚ್ಚು ಶಾಸನಗಳು ಧಾರವಾಡದಲ್ಲಿಯೇ ಸಿಕ್ಕಿರುವುದರಿಂದ ಈ ಪ್ರದೇಶದ ಮೇಲೆ ಅವರ ಆಡಳಿತವನ್ನು ಪ್ರತಿಪಾದಿಸುತ್ತದೆ.

ಹೊಯ್ಸಳರು ಮತ್ತು ಯಾದವರ ಪತನವು ಡೆಕ್ಕನ್ನಿನಲ್ಲಿ ಮುಸ್ಲಿಂರ ಆಳ್ವಿಕೆಗೆ ದಾರಿ ಮಾಡಿಕೊಟ್ಟಿತು. ಹಸನ್ ಗಂಗು(ಅಲ್ಲಾವುದೀನ್ ಹಸನ್ ಬಹುಮನ್‌ಷಾ) ಕ್ರಿ.ಶ.೧೩೪೭ ರಲ್ಲಿ ಬಹುಮನಿ ರಾಜವಂಶವನ್ನು ಸ್ಥಾಪಿಸಿ, ಗುಲಬರ್ಗಾವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಮುಂದೆ , ತನ್ನ ರಾಜಧಾನಿಯನ್ನು ಬೀದರಿಗೆ ಸ್ಥಳಾಂತರಿಸಿದನು. ಮುಂಬಯಿ-ಕರ್ನಾಟಕದ ಭಾಗವು ಅಂದರೆ, ಇಡೀ ಚಿಕ್ಕೋಡಿ ತಾಲೂಕು ಮತ್ತು ಅಥಣಿ ಈ ಹೊಸ ರಾಜನ ರಾಜ್ಯದಲ್ಲಿ ಸೇರಿಕೊಂಡವು. ಈ ಅವದಿಯ ತರುವಾಯದ ೨೫ ವರ್ಷಗಳವರೆಗೂ ಬೆಳಗಾವಿಯನ್ನು ವಶಪಡಿಸಿಕೊಂಡಿರಲಿಲ್ಲ. ಆದರೆ, ಆಮೇಲೆ ವಿಜಯನಗರದ ಸಾಮಂತನೊಬ್ಬ ಅದನ್ನು ವಶಪಡಿಸಿಕೊಂಡು ಕ್ರಿ.ಶ. ೧೩೪೭ ರಲ್ಲಿ ಬೆಳಗಾವಿ ಜಿಲ್ಲೆಯ ಉತ್ತರ ಭಾಗವು ಬಹುಮನಿ ಅರಸರ ಕೈಗೆ ಸೇರಿತು.[೧೮] ಅದೇ ಪರಿಸ್ಥಿತಿ ಒಂದು ಕಾಲು ಶತಮಾನ ಮುಂದುವರೆಯಿತು.

ಪ್ರಾಯಶಃ ಭಾರತದ ಮತ್ತಾವ ಭಾಗದಲ್ಲಿಯೂ, ಮುಸಲ್ಮಾನರು ಇಷ್ಟೊಂದು ಪ್ರಬಲವಾದ ರಾಜ್ಯ ನಿರ್ಮಾಣದಲ್ಲಿ ಜಯಶಾಲಿಗಳಾಗಲಿಲ್ಲ. ಈ ಮುಸಲ್ಮಾನರು ತಮ್ಮ ಪ್ರಬಲವಾದ ವೈರಿಗಳಿಂದ ನಾಶವಾಗುವುದನ್ನು ತಪ್ಪಿಸಿಕೊಳ್ಳಲು ಸತತವಾಗಿ ಕ್ರಿಯಾಶೀಲರಾಗಿದ್ದುದೇ, ಡೆಕ್ಕನ್ನಿನಲ್ಲಿ ಅವರ ಜಯಸಾಧನೆಗೆ ಕಾರಣವಾಯಿತು. ಈ ಹೇಳಿಕೆಯಲ್ಲಿ ಸಾಕಷ್ಟು ಸತ್ಯವಿದೆ.[೧೯] ಕಾಲಾನಂತರ, ಬಹುಮನಿ ರಾಜ್ಯವು ಐದು ಸಣ್ಣ ಸಣ್ಣ ರಾಜ್ಯಗಳಾಗಿ ಒಡೆಯುವ ಮೂಲಕ ಅಶಕ್ತವಾಯಿತಾದರೂ, ಧರ್ಮದ ಮೂಲಕ ಉಂಟಾದ ಐಕ್ಯತೆಯು ಅದನ್ನು ಪ್ರಬಲ ಮಾಡಿತಲ್ಲದೇ, ಕ್ರಿ.ಶ.೧೫೬೫ ರಲ್ಲಿ ವಿಜಯನಗರದ ಪತನಕ್ಕೆ ಕಾರಣವಾಯಿತು. ೧೬ನೇ ಶತಮಾನದ ಹೊತ್ತಿಗೆ ಬಹುಮನಿ ರಾಜ್ಯವು ಬಿರಾರಿನ 'ಇಮಾಂಷಾಹಿ', ಅಹ್ಮದನಗರದ 'ನಿಜಾಂಷಾಹಿ', ಬಿಜಾಪೂರದ 'ಆದಿಲ್‌ಷಾಹಿ', ಗೋಲ್ಕೊಂಡದ 'ಕುತುಬ್‌ಷಾಹಿ' ಮತ್ತು ಬೀದರಿನ 'ಬರೀದ್ ಷಾಹಿ'ಗಳ ಕೈಯಲ್ಲಿ ಐದು ಭಾಗಗಳಾಗಿ ಹಂಚಿಹೋಯಿತು.

ಕ್ರಿ.ಶ. ೧೪೮೯ ರಲ್ಲಿ ಬಿಜಾಪೂರ ರಾಜ್ಯವು ಸ್ಥಾಪಿತವಾದಾಗ, ಪ್ರಾಯಶಃ ಬೆಳಗಾವಿಯ ಯಾವ ಭಾಗವೂ ವಿಜಯನಗರಕ್ಕೆ ಸೇರಿರಲಿಲ್ಲ. ಈ ಸಮಯದಲ್ಲಿ ಧಾರವಾಡದ ಕೋಟೆಯನ್ನು ವಶಪಡಿಸಿಕೊಂಡು ಅದನ್ನು ಬಿಜಾಪೂರದ ರಾಜ್ಯದ ಆಳ್ವಿಕೆಗೆ ಒಳಪಡಿಸಿಕೊಳ್ಳಲಾಯಿತು. ಧಾರವಾಡವು ಸುಮಾರು ೧೦೦ ವರ್ಷಗಳವರೆಗೆ ಅಂದರೆ, ಕ್ರಿ.ಶ. ೧೬೮೬ ರಲ್ಲಿ ಔರಂಗಜೇಬನು ಬಿಜಾಪೂರವನ್ನು ವಶಪಡಿಸಿಕೊಳ್ಳುವವರೆಗೆ ,ಬಿಜಾಪೂರ ರಾಜ್ಯದ ನಿಯಂತ್ರಣದಲ್ಲೇ ಇತ್ತು. ಬಿಜಾಪೂರದ ಆದಿಲ್ ಷಾಹಿಗಳು ಅತ್ಯುತ್ಕೃಷ್ಟ ವಾಸ್ತುಶಿಲ್ಪ ರಚನೆಗಳಲ್ಲಿ ಕೆಲವನ್ನು ಕನ್ನಡಿಗರಿಗೆ ಬಿಟ್ಟು ಹೋಗಿದ್ದಾರೆ. ಬಿಜಾಪೂರದಲ್ಲಿರುವ ' ಇಬ್ರಾಹಿಂ ರೋಜಾ' ಮತ್ತು 'ಗೋಲಗುಂಬಜ' ಇತ್ಯಾದಿ.[೨೦]

ಬಿಜಾಪೂರದ ರಾಜರ ಪರವಾಗಿ ಬಂಕಾಪೂರದಲ್ಲಿ ಅಧಿಕಾರ ನಡೆಸುತ್ತಿದ್ದ,ಅಬ್ದುಲ್ ಕರೀಮಖಾನನ ಮಗನಾದ ಅಬ್ದುಲ್ ರಹಾಫಖಾನನು ಪ್ರಭು ಸೇವೆಗೆ ಸೇರಿದಾಗ, ಅವನು ಈಗ ಮುಂಬಯಿ- ಕರ್ನಾಟಕವೆಂದು ಕರೆಯಿಸಿಕೊಳ್ಳುತ್ತಿರುವ ಪ್ರದೇಶದ ಬಹಳ ದೊಡ್ಡ ಭಾಗವನ್ನು ಪಡೆದನು.[೨೧] ಮೊಗಲ್ ಆಳ್ವಿಕೆಯು ಸ್ವಭಾವದಲ್ಲಿ ಶುದ್ಧ ಸೈನಿಕವಾದುದರಿಂದ ,ಅದು ಬಹಳ ದಿನಗಳವರೆಗೆ ನಡೆಯಲಿಲ್ಲ. ಕ್ರಿ.ಶ. ೧೭೦೭ ರಲ್ಲಾದ ಔರಂಗಜೇಬನ ಮರಣವು ಮರಾಠಿ ಅಧಿಪತ್ಯವು ಶಿವಾಜಿಯ ಮೊಮ್ಮಕ್ಕಳ ಸಾತಾರಾ 'ಶಾಹು'ವಿನ ಆಳ್ವಿಕೆಯು ಮುಂದುವರೆಯ ಬಹುದೆಂಬುದನ್ನು ಖಚಿತಪಡಿಸಿತು. ಶಿವಾಜಿಯ ಏಳ್ಗೆ ಮತ್ತು ಆಳ್ವಿಕೆಯಿಂದಾಗಿ ಉತ್ತರ ಕರ್ನಾಟಕದಲ್ಲಿ ಮರಾಠಾ ಪ್ರಭಾವ ಉಂಟಾಯಿತು. ಆದರೆ, ಚಿತ್ರದುರ್ಗದ ರಾಜನು ಶಿವಾಜಿಯ ಸೈನ್ಯವನ್ನು ಹಿಮ್ಮೆಟ್ಟಿಸಿ, ಮೈಸೂರು ರಾಜ್ಯವು ಮರಾಠರ ಕೈಸೇರುವುದನ್ನು ತಪ್ಪಿಸಿದನು. ಸುಮಾರು

ಒಂದು ಶತಮಾನದವರೆಗೆ ಮುಸ್ಲಿಂ ಸೈನ್ಯದೊಂದಿಗೆ ಹೋರಾಡಿದ ಪೇಶ್ವೆಗಳು ಕೊನೆಗೆ ಕ್ರಿ.ಶ.೧೮೦೦ ಅಂತ್ಯಭಾಗದಲ್ಲಿ ಹೆಚ್ಚು ಕಡಿಮೆ ಉತ್ತರ ಕರ್ನಾಟಕದ ಎಲ್ಲ ಭಾಗಗಳನ್ನು ತಮ್ಮ ಆಳ್ವಿಕೆಗೆ ತರುವಲ್ಲಿ ಯಶಸ್ವಿಯಾದರು.

ಆಡಳಿತಾತ್ಮಕ ವಿಭಾಗಗಳು :

ಪೇಶ್ವೆಗಳ ಪ್ರದೇಶವಾಗಿದ್ದ 'ದಕ್ಷಿಣ ಮರಾಠಾ ದೇಶ' ಎನ್ನಲಾಗುತ್ತಿದ್ದ ಅಂದರೆ, ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶವನ್ನು ಕ್ರಿ.ಶ.೧೮೧೮ ರಲ್ಲಿ ಬ್ರಿಟಿಷರು ವಶಪಡಿಸಿಕೊಂಡ ಕೂಡಲೆ, ಅದು ಬ್ರಿಟಿಷರ ಪ್ರದೇಶವಾಯಿತು. ಕೆಲವು ವರ್ಷಗಳವರೆಗೆ, ಅದು ಧಾರವಾಡ ಪ್ರಧಾನ ಜಿಲ್ಲಾಧಿಕಾರಿಗಳಿಂದ ಆಳಲ್ಪಟ್ಟು ರಾಜಕೀಯವಾಗಿ ಮೇಲ್ವಿಚಾರಣೆಗೊಳಪಟ್ಟಿತು. ಇದಕ್ಕೆ ಸಲಹೆ ಸೂಚನೆಗಳು ಡೆಕ್ಕನ್ನಿನ ಕಮೀಷನರನಿಂದ ಬರುತ್ತಿದ್ದು, ಅದನ್ನು ಮುಂದೆ ಮದ್ರಾಸ್ ಪ್ರೆಸಿಡೆನ್ಸಿಗೆ ವರ್ಗಾಯಿಸುವ ಉದ್ದೇಶವಿತ್ತು.[೨೨] ಆದರೆ, ಕೊನೆಗೆ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರುಗಳ ನ್ಯಾಯಾಲಯವು ದಕ್ಷಿಣ ಮರಾಠಾ ದೇಶವು ಮುಂಬಯಿ ಪ್ರೆಸಿಡೆನ್ಸಿಯ ಒಂದು ಭಾಗವಾಗಬೇಕೆಂದು ತೀರ್ಮಾನಿಸಿತು.

ಕ್ರಿ.ಶ. ೧೮೩೬ ರಲ್ಲಿ 'ಕಮೀಷನರ್' ಹುದ್ದೆಯನ್ನು ರದ್ದುಗೊಳಿಸಿ, ಧಾರವಾಡದಲ್ಲಿದ್ದ ವಿಭಾಗೀಯ ಕಲೆಕ್ಟೊರೇಟ್‌ನ ವಿಸ್ತೀರ್ಣವನ್ನು ಕಡಿಮೆ ಮಾಡಿದ ಮೇಲೆ, ಬೆಳಗಾವಿಯ ಕಲೆಕ್ಟೊರೇಟ್ ರಾಜಕೀಯ ಪ್ರತಿನಿಧಿಯಾದನು. ಅಂದರೆ ಸವಣೂರು ಮತ್ತು ನರಗುಂದದ ಸಂಸ್ಥಾನಗಳು ಮಾತ್ರ ಧಾರವಾಡದ ಕಲೆಕ್ಟೊರೇಟ್‌ನ ವ್ಯಾಪ್ತಿಯಲ್ಲಿ ಉಳಿದುಕೊಂಡವು. ಆಗಿನ ಸಮಯದಲ್ಲಿ, ಮೂರು ಪ್ರೆಸಿಡೆನ್ಸಿಗಳಿದ್ದವು. ಅವುಗಳೆಂದರೆ , ಮದ್ರಾಸ, ಮುಂಬಯಿ ಮತ್ತು ಬಂಗಾಲ ಪ್ರೆಸಿಡೆನ್ಸಿಗಳು ಬಹುಭಾಷಿಯ ಪ್ರದೇಶಗಳಾಗಿದ್ದವು. ಬಂಗಾಲದ ಪ್ರೆಸಿಡೆನ್ಸಿಗೆ ನಾಲ್ಕು ಬೇರೆ ಬೇರೆ ಪ್ರದೇಶಗಳು ಸೇರಿದ್ದವು. ಅವುಗಳೆಂದರೆ, ಆಂಧ್ರ, ತಮಿಳು, ಮಲಯಾಳ ಮತ್ತು ಕರ್ನಾಟಕ ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಉತ್ತರದಲ್ಲಿ ಗುಜರಾತ, ಮಧ್ಯದಲ್ಲಿ ಮಹಾರಾಷ್ಟ್ರ ಮತ್ತು ದಕ್ಷಿಣದಲ್ಲಿ ಕರ್ನಾಟಕ ಹೀಗೆ ಮೂರು ಬೇರೆ ಬೇರೆ ಭಾಷೆಗಳ ಪ್ರದೇಶಗಳು ಅಡಕವಾಗಿದ್ದವು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ, ಕರ್ನಾಟಕವು ಯಾವುದೋ ಕಾರಣಕ್ಕಾಗಿ, ಐದು ಪ್ರಾಂತಗಳಾಗಿ ಹಂಚಿಹೋಗಿತ್ತು. ಆ ಪ್ರಾಂತಗಳೆಂದರೆ, ಮುಂಬಯಿ, ಮದ್ರಾಸ, ಹೈದರಾಬಾದ, ಮೈಸೂರು ಮತ್ತು ಕೊಡಗು. ಬೆಳಗಾವಿ , ಬಿಜಾಪೂರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮುಂಬಯಿ ಪ್ರೆಸಿಡೆನ್ಸಿಯ ದಕ್ಷಿಣ ಭಾಗವಾಗಿತ್ತು.

ಪೋರ್ಚುಗೀಸರೂ, ಬ್ರಿಟಿಷರೂ, ಫ್ರೆಂಚರೂ ಈ ನೆಲದಲ್ಲಿ ಕಾಣಿಸಿಕೊಂಡ ಮೇಲೆ ಅಥವಾ ಕೊನೆಯ ಪೇಶ್ವೆ ' ಎರಡನೇಯ ಬಾಜಿರಾವ್‌ನ' ಪತನದ ನಂತರ , ಮುಂಬಯಿ ಕರ್ನಾಟಕದ

ಪ್ರದೇಶವು ಬ್ರಿಟಿಷರ ಆಡಳಿತದ ವ್ಯಾಪ್ತಿಯಲ್ಲಿ ಸೇರ್ಪಡೆಯಾದವು. ಅನಂತರ, ಸ್ಥಳೀಯ ಜಮೀನ್ದಾರರು ಮತ್ತು ಪೇಶ್ವೆ ಸರದಾರರ ಅಧಿಕಾರಿಗಳ ನಡುವೆ ಕ್ರಿ.ಶ.೧೮೦೦ ರಿಂದ ೧೮೦೩.ರ ವರೆಗೆ ಅಧಿಕಾರಕ್ಕಾಗಿಯೂ ,ಸುಲಿಗೆ ಮಾಡುವ ಅವಕಾಶಕ್ಕಾಗಿಯೂ , ಹೋರಾಟ ಅವ್ಯಾಹತವಾಗಿ ಮುಂದುವರೆಯಿತು. ಇವರಲ್ಲದೇ, ಅಬ್ದುಲ್ ಖೈರ್‌ಖಾನ್ (೧೭೯೬-೧೮೨೭) ಎಂಬ ಸವಣೂರಿನ ನವಾಬನು ಒಬ್ಬನೇ ಒಬ್ಬ ಗಣನೀಯ ಮುಸ್ಲಿಮನು ಇದ್ದನು. ಇವನು ಟಿಪ್ಪು ಮತ್ತು ಬ್ರಾಹ್ಮಣ ಜಮೀನುದಾರರು ಮತ್ತು ದಂಡನಾಯಕರಿಂದ, ಎಷ್ಟೊಂದು ಕಿರುಕುಳಕ್ಕೊಳಗಾಗಿದ್ದನೆಂದರೆ, ಕ್ರಿ.ಶ. ೧೮೦೦ ರಲ್ಲಿ ತಾನೇ ಕರ್ನಲ್ ವೆಲ್ಲೆಸ್ಲಿಯ ರಕ್ಷಣೆಯಲ್ಲಿದ್ದನು.[೨೩]

ಕರ್ನಲ್ ಮನ್ರೋ ತನ್ನ ೨೮ ನವೆಂಬರ ೧೮೦೦ ರ ಪತ್ರದಲ್ಲಿ ಗವರ್ನರ್ ಜನರಲ್‌ನಿಗೆ ಹೀಗೆ ಬರೆದ ''.... ವರದಾ ಮತ್ತು ಕೃಷ್ಣಾ ನದಿಗಳ ನಡುವಿನ ನಾಡು ನಿಜವಾದ ಮರಾಠಾ ಪ್ರಾಂತವೇನಲ್ಲ; ಮರಾಠರ ಮಿಶ್ರಣ ಗಣನೀಯ ಪ್ರಮಾಣದಲ್ಲಿದ್ದರೂ, ಕನ್ನಡಿಗರದೇ ಮುಖ್ಯ ಪಾಲು. ಅಲ್ಲಿರುವ ಮರಾಠಾ ಜಮೀನ್ದಾರರು ಅಥವಾ ಜಾಗೀರುದಾರರನ್ನು ಅದರ ಮುಖ್ಯ ಸೇವಕರನ್ನು ಪರಕೀಯರೆಂದು ಪರಿಗಣಿಸಲಾಗುತ್ತದೆ. ಸಾಮಾನ್ಯವಾಗಿ, ಅಶ್ವಸೈನ್ಯದ ಉತ್ಕೃಷ್ಟ ವರ್ಗದವರು ಮರಾಠರೇ ಆಗಿದ್ದು, ಅವರು ತಮ್ಮ ದಂಡನಾಯಕರಿಗೆ ನಿಷ್ಠರಾಗಿದ್ದಾರೆ. ಆದರೆ, ಕೋಟೆಗಳಲ್ಲಿಯೂ ಮತ್ತು ಹಳ್ಳಿ ಹಳ್ಳಿಗಳಲ್ಲಿಯೂ ಇರುವ ಪದಾತಿ ಸೈನ್ಯದವರೆಲ್ಲ ಹೆಚ್ಚಾಗಿ ಕನ್ನಡಿಗರೇ. ಅವರು ಹಣದ ಲಾಭಕ್ಕಾಗಿ ಯಾವ ಹುದ್ದೆಯಲ್ಲಿರಲೂ ಸಿದ್ಧರಿದ್ದಾರೆ. ಎಲ್ಲ ವರ್ತಕ ವರ್ಗಗಳೂ ಮರಾಠರ ನಿರ್ಗಮಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ. ಏಕೆಂದರೆ, ಮರಾಠರು ಅವರ ವ್ಯಾಪಾರಕ್ಕೆ ಯಾವುದೋ ಕ್ಷುಲ್ಲಕ ಕಾರಣಕ್ಕಾಗಿ ತಡೆಯೊಡ್ಡುತ್ತಾರೆ ಹಾಗೂ ಕೆಲವು ವೇಳೆ ಅವರ ಇಡೀ ಆಸ್ತಿಪಾಸ್ತಿಗಳನ್ನು ಕಿತ್ತುಕೊಳ್ಳುತ್ತಾರೆ. ಅದೇ ರೀತಿ ವರ್ತಕ ವರ್ಗದವರಿಗಿಂತ , ಹೆಚ್ಚು ಅಧಿಕಾರವುಳ್ಳ ಗ್ರಾಮ ಪಂಚಾಯಿತಿಗಳ ಮುಖ್ಯಸ್ಥರೂ (ಪಟೇಲರು ಇತ್ಯಾದಿ) ಸಹ ಸಾಮಾನ್ಯವಾಗಿ ಮರಾಠರ ಆಳ್ವಿಕೆಯಿಂದ ಬಿಡುಗಡೆ ಪಡೆಯಲು ಆಶಿಸುತ್ತಿದ್ದಾರೆ,''[೨೪] ಮನ್ರೋ ವರ್ಣಿಸುವ ಈ ಲೂಟಿಯ ದೃಶ್ಯವು ವೊದಲು ಬಿಜಾಪೂರದಲ್ಲಿ ಅನಂತರ, ಬೆಳಗಾವಿಯಲ್ಲಿ ಕೊನೆಗೆ ಸೊಲ್ಲಾಪೂರದಲ್ಲಿ ಕಾಣುತ್ತೇವೆ. ಜೂನ್ ೨೫, ೧೮೧೮ ರಂದು ಬ್ರಿಟಿಷ ಸೈನ್ಯವು ಹುಬ್ಬಳ್ಳಿಯನ್ನು ವಶಪಡಿಸಿಕೊಂಡಿತು. ಇದರೊಂದಿಗೆ, ನಂತರ ಅದರ ಪಕ್ಕದಲ್ಲಿದ್ದ ಧಾರವಾಡವನ್ನು ವಶಪಡಿಸಿಕೊಂಡಿದ್ದರಿಂದ, ಮುಂಬಯಿ ಕರ್ನಾಟಕವು ಸೇರಿದಂತೆ, ಇಡೀ ಇಂದಿನ ಕರ್ನಾಟಕದ ಭೂಭಾಗವೆಲ್ಲ ಬ್ರಿಟಿಷರ ಆಳ್ವಿಕೆಯ ವ್ಯಾಪ್ತಿಗೆ ಒಳಪಟ್ಟಿತ್ತು.

ಏಕೀಕರಣ ಪೂರ್ವೋತ್ತರದ ಕರ್ನಾಟಕ :

ಕನ್ನಡದ ರಾಜಮನೆತನಗಳಾದ ಕದಂಬ, ಗಂಗ, ರಾಷ್ಟ್ರಕೂಟ, ಬಾದಾಮಿಚಾಳುಕ್ಯ, ಕಲಚೂರಿ, ಸೇವುಣ, ಹೊಯ್ಸಳ, ವಿಜಯನಗರ, ಬಹುಮನಿ, ಆದಿಲ್‌ಶಾಹಿ, ಹೈದರ್- ಟಿಪ್ಪು

ಹಾಗೂ ಮೈಸೂರಿನ ರಾಜರು ಮೊದಲಾದ ಮನೆತನಗಳು ಆಳ್ವಿಕೆಯಲ್ಲಿ ಸಾಂಸ್ಕೃತಿಕ ಹಿನ್ನೆಲೆ ಹಾಗೂ ಅನನ್ಯತೆಗಳನ್ನು ಒದಗಿಸಿಕೊಟ್ಟಿದ್ದವು. ಸಾಂಸ್ಕೃತಿಕವಾಗಿ ಪ್ರಾಮುಖ್ಯತೆ ಹೊಂದಿದ್ದ ಈ (ಕನ್ನಡ) ಭೂ ಪ್ರದೇಶಗಳು ಕ್ರಿ.ಶ.೧೫೬೫ ರಲ್ಲಿ ವಿಜಯನಗರದ ಅರಸರು ಸೋತನಂತರ, ಈ ಭಾಗವು ಅನೇಕ ಛಿದ್ರಗಳಾಗಿದ್ದರಿಂದ ಭಾಷಿಕವಾಗಿ ಅನೇಕ ಸ್ಥಿತ್ಯಂತರಗಳು ಉಂಟಾದವು. ಬಹುಮನಿ ಹಾಗೂ ಆದಿಲ್ ಷಾಹಿ ಸುಲ್ತಾನರು ಪರ್ಶಿಯಾದ ಭಾಷೆಗೆ ಆದ್ಯತೆ ನೀಡಿದ್ದರು. ಆದರೂ, ಕನ್ನಡವನ್ನೇನೂ ಕಡೆಗಣಿಸಿರಲಿಲ್ಲ. ಆದರೆ, ಷಾಹಿ ಸುಲ್ತಾನರುಗಳು ಮರಾಠಿ ಸೈನಿಕರನ್ನು ಹೆಚ್ಚೆಚ್ಚು ಸೇರಿಸಿಕೊಳ್ಳ ತೊಡಗಿದ್ದರು. ಇದರಿಂದ, ಮರಾಠಿ ಜನ, ಸಂಸ್ಕೃತಿಗಳು ನಮ್ಮಲ್ಲಿ ಪ್ರವೇಶಿಸಲು ಸಾಧ್ಯವಾಯಿತು. ಈ ಮಧ್ಯ ಹೈದರ್ ಮತ್ತು ಟಿಪ್ಪು ಅವರುಗಳು ಕನ್ನಡ ಭೂ ಪ್ರದೇಶಗಳನ್ನು ಒಂದುಗೂಡಿಸಲು ಆರಂಭಿಸಿದ್ದು, ಆಗಿನ 'ಮೈಸೂರು ಏಕೀಕರಣವೇ ಆಗಿತ್ತು.' ೧೭೬೩ರ ವೇಳೆಗಾಗಲೇ, ಕೆಳದಿ ಮೊದಲಾದ ಪ್ರದೇಶಗಳು ಮೈಸೂರನ್ನು ಸೇರಿಕೊಂಡಿದ್ದವು. ಹೈದರ್ ಮತ್ತು ಟಿಪ್ಪು ಅವರ ಕಾಲದ ಆಡಳಿತದಲ್ಲಿ ತಮಿಳು ನಾಡಿನ ಮರಾಠಿ ಭಾಷಿಕರು ಸೇರಿಕೊಳ್ಳದೇ ಇರಲಿಲ್ಲ. ಆದರೂ ಕನ್ನಡಕ್ಕೆ ಮೊದಲನೇ ಆದ್ಯತೆ ದೊರೆತಿತ್ತು.[೨೫] ತದನಂತರ ವ್ಯಾಪಾರ- ವಾಣಿಜ್ಯದ ಆಶ್ರಯ ಹುಡುಕಿಕೊಂಡು ಭಾರತಕ್ಕೆ ಪೋರ್ಚುಗೀಸರು(ಕ್ರಿ.ಶ.೧೪೯೮) ಹಾಗೂ ಡಚ್ಚರು(ಕ್ರಿ.ಶ.೧೫೯೫), ಬ್ರಿಟಿಷರು (ಕ್ರಿ.ಶ.೧೬೦೦) ಹಾಗೂ ಅಂತಿಮವಾಗಿ ಫ್ರೇಂಚರು ಬಂದರು.

'ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ'ಯು ಪೌರಾತ್ಯ ದೇಶಗಳೊಂದಿಗೆ ವ್ಯವಹರಿಸಲು ಅಂದಿನ ಬ್ರಿಟನ್ನಿನ ರಾಣಿ ಎಲಿಜೆಬೆತ್‌ಳು ೩೦-೧೨-೧೬೦೦ ರಂದು ಒಂದು ಸನ್ನದು ಹೊರಡಿಸಿದ್ದರಿಂದ, ಬ್ರಿಟಿಷರು ಕ್ರಿ.ಶ. ೧೬೬೪ ರಲ್ಲಿ ಪಾಂಡಿಚೇರಿಯಲ್ಲಿ ತಮ್ಮ ಕಂಪನಿಯನ್ನು ಸ್ಥಾಪಿಸಿಕೊಂಡರು. ಈ ಅವಧಿಯಲ್ಲಿ ರಾಜನವಾಬ ಸಂಸ್ಥಾನ ಪಾಳೇಗಾರರ ನಡುವೆ ಇದ್ದ ಆಡಳಿತಾಧಿಕಾರದ ಸ್ಪರ್ಧೆಗಳನ್ನು ಅವರು ಅರಿತುಕೊಂಡು 'ಒಡೆದು ಆಳುವ ' (Divide and Rule policy) ನೀತಿಯನ್ನು ಆರಂಭಿಸಿದ್ದರು. ಅವರು ಹುಟ್ಟುಹಾಕಿದ ಬಂಡವಾಳ ಶಾಹಿಯ ಹೊಸ ವ್ಯವಸ್ಥೆಗಳಿಂದ, ಅಂದು ಬಳಕೆಗೆ ಬಂದ ಆಂಗ್ಲಶಿಕ್ಷಣ , ಕೋರ್ಟ್, ಕಾನೂನು, ಕಛೇರಿ, ಅಂಚೆ, ಪೋಲೀಸ್, ರೈಲ್ವೆ ಮೊದಲಾದ ವ್ಯವಸ್ಥಿತ ಸಂರಚನೆಗಳಿಂದ ದೇಶದ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಯಿತು. ಬಹುಶಃ ಇವೆಲ್ಲದರ ಹಿನ್ನೆಲೆಯಲ್ಲಿಯೇ, ಬ್ರಿಟಿಷರ ಬಂಡವಾಳ ಶಾಹಿ ನೀತಿಯನ್ನು ಕುರಿತು ಇ. ಎಂ. ಎಸ್. ನಂಬೂದರಿಪಾದ್ ಅವರು ''ಅದನ್ನು(ಬಂಡವಾಳ ಶಾಹಿ) ನಾಶಮಾಡುವಂತಹ ಸಾಮಾಜಿಕ ಶಕ್ತಿಯು ಭಾರತೀಯ ಸಮಾಜದಲ್ಲಿ ರೂಪುಗೊಂಡಿರಲಿಲ್ಲ ಆದುದರಿಂದಲೇ, ಹೊರಗಿನಿಂದ ಬಂದ ಬಂಡವಾಳ ಶಾಹಿಗಾರರ ಶಕ್ತಿಗೆ ಭಾರತವನ್ನು ದಾಸ್ಯಕ್ಕೆ ಒಳಪಡಿಸಲು ಸಾಧ್ಯವಾಯಿತು''[೨೬] ಎಂದಿದ್ದಾರೆ.

ಬ್ರಿಟಿಷರು ಭಾರತದ ಭೂಭಾಗಗಳನ್ನು ಹಂತ- ಹಂತವಾಗಿ ತಮ್ಮ ತೆಕ್ಕೆಗೆ ತೆಗೆದುಕೊಂಡರು. ಹೀಗೆ ಮಾಡುವಾಗ, ಲೆಕ್ಕವಿಲ್ಲದಷ್ಟು ಪ್ರಾಂತಗಳನ್ನು ಗಡಿ-ಸರಹದ್ದುಗಳನ್ನು ಗುರುತಿಸಬೇಕಾಗಿ ಬಂದಿತು. ಆದರೆ, ಜನಾಂಗೀಯ , ಭಾಷೆ ಅಥವಾ ಇನ್ನಾವುದೇ ಸಾಂಸ್ಕೃತಿಕ ಅಂಶಗಳನ್ನು (ಮಾನ ದಂಡಗಳನ್ನು) ಗಣನೆಗೆ ತೆಗೆದುಕೊಳ್ಳಲಿಲ್ಲ. ಪ್ರಜೆಗಳ ಅನುಕೂಲತೆಗಳ ಬಗ್ಗೆ ಗಮನಹರಿಸದಿದ್ದ, ಅವರ ಧೋರಣೆಗಳಿಗೆ ಯಾವುದೇ ರೀತಿಯ ವೈಚಾರಿಕ ತಳಹದಿಯೂ ಇರಲಿಲ್ಲ ಎಂಬುದು ಸ್ಪಷ್ಟ. ಬದಲಾಗಿ, ಪ್ರಾಂತಗಳ ವಿಂಗಡಣೆಯಲ್ಲಿ ಅವರು ಅನುಸರಿಸಿದ ನಿಲುವು ಬಹುಪಾಲು(ಮಿಲಿಟರಿ) ಲಷ್ಕರಿ ಹಾಗೂ ಆಯಕಟ್ಟಿನ ಭದ್ರತೆಗೆ(Strategic) ಸಂಬಂಧಪಟ್ಟುದುದೇ ಆಗಿತ್ತು. ಅಂದಿನ ಭಾರತದ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಎಸ್.ನಿಜಲಿಂಗಪ್ಪನವರು ಆಡಿದ ಮಾತುಗಳು ಗಮನೀಯವಾದುದ್ದಾಗಿದೆ. ಅವರು ''ಬ್ರಿಟಿಷರು ಪ್ರತ್ಯಕ್ಷವಾಗಿ ಗೆದ್ದುಕೊಂಡ ಭಾಗ ದೇಶದ ಐದರಲ್ಲಿ ಮೂರಂಶದಷ್ಟಿದ್ದಿತು. ಅದಕ್ಕೆ 'ಬ್ರಿಟಿಷ ಭಾರತ'ವೆಂದು ಕರೆಯಲಾಯಿತು. ಉಳಿದ ಎರಡಂಶದಷ್ಟು ಭಾಗವು (೧೯೪೭ ರಲ್ಲಿ) ೫೬೨ ಸಂಸ್ಥಾನಗಳಾಗಿದ್ದಾಗಿ, ಅದರಲ್ಲಿ ಪ್ರತಿ ಸಂಸ್ಥಾನವೂ ಬ್ರಿಟಿಷ ಪ್ರಭುತ್ವ (British crown) ದೊಡನೆ ವಿಶಿಷ್ಟ ಸಂಬಂಧಗಳನ್ನು ಬೆಳೆಸಿಕೊಂಡು ಬಂದು 'ಸಂಸ್ಥಾನಿಕ ಭಾರತ'(Indian India and Princely India) ಎಂದು ಪರಿಗಣಿಸಲ್ಪಟ್ಟಿತು. ಈ ಸಂಸ್ಥಾನಗಳಲ್ಲಿ ಹೆಚ್ಚು ಪಾಲು ಚಿಕ್ಕವಾಗಿದ್ದವು. ಹಲವು ಸಂಸ್ಥಾನಗಳಂತೂ ತಮ್ಮ ರಕ್ಷಣೆಗಾಗಿ ಬ್ರಿಟಿಷ ಪ್ರಭುತ್ವವನ್ನು ಅವಲಂಬಿಸಿದ್ದವು. ಬ್ರಿಟಿಷ ಪ್ರಭುತ್ವದೊಡನೆ ಒಪ್ಪಂದ ಮಾಡಿಕೊಂಡ ಹಲವು ದೊಡ್ಡ ಸಂಸ್ಥಾನಗಳು ಆಂತರಿಕ ಆಡಳಿತದಲ್ಲಿ ತೋರಿಕೆಗಾದರೂ ಸ್ವಾತಂತ್ರ್ಯವುಳ್ಳದ್ದಾಗಿದ್ದವು. ಆದರೆ, ಬಾಹ್ಯ ವ್ಯವಹಾರದಲ್ಲಿ ಸಾರ್ವಭೌಮತ್ವವನ್ನು ಪಡೆದಿರಲಿಲ್ಲ. ಆಂತರಿಕ ವ್ಯವಹಾರಗಳಲ್ಲಿ ಕೂಡಾ ಸಾರ್ವಭೌಮಸತ್ತೆಯು ಕೈಹಾಕಿದುದು ಎಷ್ಟೋ ಸಲ ಕಂಡುಬರುತ್ತದೆ''[೫] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕ್ರಿ.ಶ. ೧೭೯೯ರಲ್ಲಿಯೇ ಬ್ರಿಟಿಷರ ವಿರುದ್ಧ ಟಿಪ್ಪು ಸುಲ್ತಾನ ಹೋರಾಡಿ ಸಾಯುವುದರೊಂದಿಗೆ, ಮೈಸೂರು ಸಾಮ್ರಾಜ್ಯ ಶಾಹಿಯ ಹಿಡಿತಕ್ಕೆ ಸಿಲುಕಿತು. ನಂತರ ಮೈಸೂರು ಹಾಗೂ ಕನ್ನಡದ ಭೂ ಪ್ರದೇಶಗಳು ಮೈಸೂರು ಒಡೆಯರ (ಆಂಗ್ಲರ ಹಿಡಿತದಲ್ಲೇ) ಮರಾಠಾ ಪೇಶ್ವೆಗಳ ಹೈದರಾಬಾದಿನ ನಿಜಾಮರ ಹಾಗೂ ಬ್ರಿಟಿಷರ ಅಧೀನಕ್ಕೆ ಬಂದವು. ಈ ಸನ್ನಿವೇಶದಲ್ಲಿಯೇ, ಕೆನರಾ ಪ್ರದೇಶವು ಮೊಟ್ಟ ಮೊದಲ ಬಾರಿಗೆ (ಕನ್ನಡ ಪ್ರದೇಶಗಳಲ್ಲಿಯೇ) ಬ್ರಿಟಿಷರ ಆಡಳಿತಕ್ಕೆ ಒಳಗಾಗಿತ್ತು.

ಪೇಶ್ವೆ ವಂಶದ ಕೊನೆಯ ಅರಸ ' ಎರಡನೇಯ ಬಾಜಿರಾಯ', ಇವನು ಕ್ರಿ.ಶ. ೧೮೧೮ ರಲ್ಲಿ ಸೋಲನ್ನು ಅನುಭವಿಸಿದ ಮೇಲೆ ಉತ್ತರ ಕರ್ನಾಟಕದ ಅನೇಕ ಭಾಗಗಳು ಆಂಗ್ಲರ

ಅಧೀನವಾಗಿದ್ದವು. ಈ ಭಾಗಗಳನ್ನು ಮುಂಬಯಿ ಇಲಾಖೆಯ ಆಡಳಿತಕ್ಕೆ ಸೇರಿಸಿದ್ದರು. ಇದಕ್ಕೆ ಬ್ರಿಟಿಷರು ರಾಯಲಸೀಮೆಯನ್ನು ವಶಪಡಿಸಿಕೊಂಡು ಮದ್ರಾಸ ಪ್ರಾಂತದ ಆಡಳಿತಕ್ಕೆ ಜೋಡಿಸಿದ್ದರು. ಈ ಸನ್ನಿವೇಶದಲ್ಲಿಯೇ ಬಳ್ಳಾರಿ ಜಿಲ್ಲೆಯು (ರಾಯಲಸೀಮೆಯೊಂದಿಗೆ) ಮದ್ರಾಸಿಗೆ ಒಳಗಾಯಿತು. ಇಂದಿನ ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಚಳವಳಿಗಳನ್ನು ಹತ್ತಿಕ್ಕಲು ಬ್ರಿಟಿಷರು ಕ್ರಿ.ಶ.೧೮೬೭ರಲ್ಲಿ ಈ ಭಾಗಗಳನ್ನು ತುಂಡರಿಸಿ ಒಂದು ಭಾಗವನ್ನು(ಉತ್ತರ ಕನ್ನಡ) ಮುಂಬಯಿಗೂ, ಇನ್ನೊಂದನ್ನು (ದಕ್ಷಿಣಕನ್ನಡ) ಮದ್ರಾಸ ಪ್ರಾಂತದ ಆಳ್ವಿಕೆಗೆ ಜೋಡಿಸಿದ್ದರು.[೨೮] ಅಂತೆಯೇ, ಕೊಡಗಿನ ರಾಜ 'ವೀರರಾಜ'ನನ್ನು ಹತ್ತಿಕ್ಕಿ ಕ್ರಿ.ಶ.೧೮೩೪ರಲ್ಲಿ ಅದನ್ನು ವಶಪಡಿಸಿಕೊಳ್ಳಲಾಯಿತು. ಕೊಡಗಿಗೆ ಒಬ್ಬ ಆಂಗ್ಲ ಅಧಿಕಾರಿಯನ್ನು ನೇಮಿಸಿ, ಅದರ ಮೇಲ್ವಿಚಾರಣೆಯನ್ನು ನೇರವಾಗಿ ತಮ್ಮ ಅಧೀನಕ್ಕೆ ತೆಗೆದುಕೊಂಡರು. ಹೀಗೆ ಗೆದ್ದುಕೊಳ್ಳುತ್ತಿದ್ದ ಸಣ್ಣ ಪುಟ್ಟ ಸಂಸ್ಥಾನಗಳೂ ಸೇರಿದಂತೆ ಅನೇಕ ಭೂ ಪ್ರದೇಶಗಳನ್ನು ತಮ್ಮ ನೇರವಾದ ಹಿಡಿತಕ್ಕೆ ತೆಗೆದುಕೊಳ್ಳುತ್ತಿದ್ದರು. ಹೀಗೆ ಹಿಡಿತಕ್ಕೆ ತೆಗೆದುಕೊಂಡ ಭೂ ಭಾಗಗಳನ್ನು ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ವಿಭಿನ್ನ ಘಟಕ (units) ಗಳಲ್ಲಿ ಸೇರಿಸುತ್ತಿದ್ದರು. ಬ್ರಿಟಿಷ ಆಡಳಿತದಲ್ಲಿ ಕನ್ನಡ ಮಾತನಾಡುತ್ತಿದ್ದ ಜನರು ಎಷ್ಟು ಘಟಕಗಳಲ್ಲಿ ಹಂಚಿಹೋಗಿದ್ದರು ಎಂಬುದನ್ನು ತಿಳಿಯಲು ದಾಖಲೆಗಳಿಲ್ಲ. ಆದರೆ, ಅಂದಿನ ಬರಹ ಹಾಗೂ ದಾಖಲೆಗಳನ್ನು ಪರಿಶೀಲಿಸಿದರೆ, ೧೯ ರಿಂದ ೨೨ ಭಾಗಗಳಲ್ಲಿ ಹಂಚಿ ಹೋಗಿದ್ದರು ಎಂಬುದಂತೂ ಸ್ಪಷ್ಟ. ಆರ್. ಆರ್. ದಿವಾಕರ ಅವರು ತಮ್ಮ ಕೃತಿಯಲ್ಲಿ ೧೯ ಆಡಳಿತ ಘಟಕಗಳಲ್ಲಿ ಕನ್ನಡ ಪ್ರದೇಶಗಳು ಸೇರಿಕೊಂಡಿದ್ದವು ಎಂಬುದನ್ನು ಉಲ್ಲೇಖಿಸಿದ್ದಾರೆ.[೨೯] ಆದರೆ, ಇವರಿಗಿಂತ ಮೊದಲು ೧೯೩೭ರಲ್ಲಿ ಪ್ರಕಟವಾದ 'ಕರ್ನಾಟಕ ದರ್ಶನ' ಕೃತಿಯಲ್ಲಿ ಮಂಗಳವೇಡೆ ಶ್ರೀನಿವಾಸರಾಯರು ಒಟ್ಟು ೨೨ ಮುಖ್ಯ ವಿಭಾಗಗಳನ್ನು ಗುರುತಿಸಿದ್ದಾರೆ.[೩೦] ಅಲ್ಲದೇ ಇಲ್ಲಿ ಮೂರು ಕಂಟೋನ್ಮೆಂಟ್‌ಗಳಲ್ಲಿ ೭ಕೊಲ್ಲಾಪೂರದ ಜಹಗೀರುಗಳನ್ನು ಸೇರಿಸಲಾಗಿತ್ತು. ಇದರಿಂದ, ಉಪವಿಭಾಗಗಳನ್ನು ಸೇರಿಸಿಕೊಂಡು ಒಟ್ಟು ೩೪ ರಾಜ್ಯಾಡಳಿತ ಕ್ರಮಗಳಿಗೆ ಕನ್ನಡ ಪ್ರದೇಶಗಳು ಒಳಗಾಗಿದ್ದವು.

ಮುಂಬಯಿ - ಕರ್ನಾಟಕದ ಶೈಕ್ಷಣಿಕ ಹಿನ್ನೆಲೆ :

ಮುಂಬಯಿ - ಕರ್ನಾಟಕವು ಕ್ರಿ.ಶ.೧೭೭೬ ರಿಂದ ೧೭೭೭ ರ ವರೆಗೆ ಹೈದರ ಅಲಿಯ ಆಳ್ವಿಕೆಗೆ ಒಳಪಟ್ಟಿತ್ತು. ಹೈದರನ ಸಾಹಸ, ಬುದ್ಧಿಮತ್ತೆ, ಚಾಣಾಕ್ಷತನಗಳು ಪ್ರಶಂಸನೀಯವಾಗಿವೆ. ಒಂದೇ ರಾಜ್ಯದಡಿಯಲ್ಲಿ ಇಡೀ ಕರ್ನಾಟಕವನ್ನು ಒಂದು ಗೂಡಿಸಿದ್ದು ಹೈದರನ ವಿಶೇಷವಾದ ಸಾಧನೆಯೆಂದು ಹೇಳಬಹುದು. ಆಮೇಲೆ ಬ್ರಿಟಿಷರ ಸಹಾಯದೊಂದಿಗೆ, ಪುಣೆಯ ಪೇಶ್ವೆಗಳು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಕ್ರಿ.ಶ.೧೮೧೮ ರಲ್ಲಿ ಪೇಶ್ವೆಗಳು ರಾಜಕೀಯ ದೃಶ್ಯದಿಂದ

ಕಣ್ಮರೆಯಾದಾಗ, ಈ ಪ್ರದೇಶವು ಬಿಟಿಷರಿಗೆ ಹಸ್ತಾಂತರವಾಯಿತು. ಪೇಶ್ವೆಗಳೇ ಕೊನೆಯ ಆಳ್ವಿಕೆಯವರಾದ್ದರಿಂದ, ಅವರು ಹೋಗುವ ಮುನ್ನ ಮುಂಬಯಿ- ಕರ್ನಾಟಕ ಪ್ರದೇಶಗಳಲ್ಲಿ ಕೆಲವು ಮರಾಠಾ ಸತ್ರಪರನ್ನು ಬಿಟ್ಟು ಹೋದರು. ಇದರ ಪರಿಣಾಮವಾಗಿ ಬ್ರಿಟಿಷರ ಆಳ್ವಿಕೆಯ ಕಡೆಯಲ್ಲಿಯೂ ಸಹ, ಮರಾಠಿ ಭಾಷೆಯ ಪ್ರಭಾವವು ಮುಂದುವರೆದಿತ್ತು.

ಕ್ರಿ.ಶ.೧೮೧೮-೧೯ ರಲ್ಲಿ ಪೇಶ್ವೆಗಳು ಶರಣಾದ ಮೊದಲು 'ದಕ್ಷಿಣ ಮರಾಠಾ' ದೇಶವೆಂದುತಪ್ಪಾಗಿ ತಿಳಿಯಲ್ಪಟ್ಟಿದ್ದ ಮುಂಬಯಿ- ಕರ್ನಾಟಕವು ಪೇಶ್ವೆಗಳ ಇತರ ಪ್ರದೇಶಗಳೊಂದಿಗೆ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ಅದು ಕೆಲವು ವರ್ಷಗಳವರೆಗೆ ಆಡಳಿತಾತ್ಮಕವಾಗಿಯೂ , ರಾಜಕೀಯವಾಗಿಯೂ ಧಾರವಾಡದ ಮುಖ್ಯ ಕಲೆಕ್ಟೊರೇಟಿನ ಮೇಲ್ವಿಚಾರಣೆಗೊಳಪಟ್ಟಿದ್ದು, ಆಜ್ಞೆಗಳನ್ನು ಮೇಲಿನ ಡೆಕ್ಕನ್ನಿನ ಕಮೀಷನರಿಂದ ಪಡೆಯುತ್ತಿತ್ತು. ಅದನ್ನು ಮುಂದೆ ಮದ್ರಾಸ ಪ್ರೆಸಿಡೆನ್ಸಿಗೆ ವರ್ಗಾಯಿಸಬೇಕೆಂಬ ಉದ್ದೇಶವಿತ್ತು.[೩೧] ಆದರೆ ದಕ್ಷಿಣ ಮರಾಠಾ ದೇಶವು ಮುಂಬಯಿ ಪ್ರೆಸಿಡೆನ್ಸಿಯ ಒಂದು ಭಾಗವಾಗಿರಬೇಕೆಂದು 'ಡೈರೆಕ್ಟರುಗಳ' ನ್ಯಾಯಾಲಯವು ತೀರ್ಮಾನಿಸಿತು. ಇಡೀ ಮುಂಬಯಿ- ಕರ್ನಾಟಕ ಪ್ರದೇಶವು ಆಗ ಬ್ರಿಟಿಷ 'ಕಲೆಕ್ಟೊರೇಟ್'ನ ಭಾಗಗಳಾದ ಬೆಳಗಾವಿ, ಧಾರವಾಡ, ಕಲಾದಗಿಗಳನ್ನು ಹಾಗೂ ಸವಣೂರು, ಮುಧೋಳ, ಸಾಂಗ್ಲಿ, ಮೀರಜ, ಕುರುಂದವಾಡ, ಜಮಖಂಡಿ ಮತ್ತು ರಾಮದುರ್ಗ ಈ ಮೂಲ ಸಂಸ್ಥಾನಗಳನ್ನು ಒಳಗೊಂಡಿತ್ತು.

ರಾಜಕೀಯ ಅಧಿಕಾರವಿದ್ದ'ಕಮೀಷನರ' ಹುದ್ದೆಯನ್ನು ರದ್ದುಪಡಿಸಿದ ಮೇಲೆಯೂ ಈ ಮೂಲ ಸಂಸ್ಥಾನಗಳು ಕೆಲವು ವರ್ಷಗಳವರೆಗೆ ಧಾರವಾಡದ ಮುಖ್ಯ 'ಕಲೆಕ್ಟೊರೇಟ್'ನ ಅಧೀನದಲ್ಲಿಯೇ ಇದ್ದವು. ಆದರೆ ಈ ಕಲೆಕ್ಟೊರೇಟನ್ನು ಕ್ರಿ.ಶ. ೧೮೩೬ ರಲ್ಲಿ ವಿಭಜನೆ ಮಾಡಿದ ಮೇಲೆ, ಬೆಳಗಾವಿ 'ಕಲೆಕ್ಟೊರೇಟ್'ಅದರ ರಾಜಕೀಯ ಪ್ರತಿನಿಧಿಯಾಯಿತು. ಸವಣೂರು ಮತ್ತು ನರಗುಂದ ಸಂಸ್ಥಾನಗಳು ಮಾತ್ರ ಧಾರವಾಡ 'ಕಲೆಕ್ಟೊರೇಟ್'ನಲ್ಲಿ ಉಳಿದವು. ಕ್ರಿ.ಶ.೧೮೬೨ ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು (ಕುಂದಾಪೂರ ಉಪವಿಭಾಗವನ್ನು ಉಳಿದು) ಆಡಳಿತಾತ್ಮಕ ಮತ್ತು ಇನ್ನೂ ಹೆಚ್ಚು ಸೂಕ್ತವಾದ ವಾಣಿಜ್ಯಾತ್ಮಕ ಕಾರಣಗಳಿಂದಾಗಿ[೩೨] ಮುಂಬಯಿ ಪ್ರೆಸಿಡೆನ್ಸಿಗೆ ವರ್ಗಾಯಿಸಲಾಯಿತು.

'' ಸನ್ ೧೮೧೮ರ ಖಡಕೀ ಯುದ್ಧದಲ್ಲಿ ಪೇಶ್ವೆಯರು ಸೋತ ನಂತರ, ಪೇಶ್ವೆಯರ ಹಾಗೂ ಬ್ರಿಟಿಷರ ನಡುವಣ ಒಪ್ಪಂದದ ಮೇರೆಗೆ ಧಾರವಾಡ ಭಾಗವು ಬ್ರಿಟಿಷರ ಕೈಸೇರಿತು.[೩೩] ಉತ್ತರ ಕರ್ನಾಟಕವು ಬ್ರಿಟಿಷರ ವಶವಾಯಿತೆನ್ನೋ ನಿಜ, ಆದರೆ ಇದನ್ನು ಆಗಲೇ 'ಪಟವರ್ಧನ' ಮನೆತನದವರು, 'ಭಾವೆ' ಮನೆತನದವರು, 'ಘೋರ್ಪಡೆ' ಮನೆತನದವರು ಕಾಯಿಪಲ್ಲೆ

ಹಂಚಿಕೊಂಡಹಾಗೆ ಹಂಚಿಕೊಂಡರು. ಅದು ಎಷ್ಟರ ಮಟ್ಟಿಗೆ ಎಂದರೆ, ಕೇವಲ ೧೨ ಮೈಲು ಅಂತರದಲ್ಲಿದ್ದ ಲಕ್ಷ್ಮೇಶ್ವರವು ಮೀರಜ ಸಂಸ್ಥಾನಕ್ಕೆ ಸೇರಿದರೆ, ಶಿರಹಟ್ಟಿ ಸಾಂಗ್ಲಿ ಸಂಸ್ಥಾನಕ್ಕೆ ಒಳಪಟ್ಟಿತ್ತು. ಜಮಖಂಡಿಯು ಪಟವರ್ಧನ ಮನೆತನಕ್ಕೆ ಸೇರಿದರೆ, ಹತ್ತಿರದ ಮುಧೋಳ ಘೋರ್ಪಡೆ ಮನೆತನಕ್ಕೆ ಸೇರಿತು. ಅಷ್ಟೇ ಏಕೆ ಹುಬ್ಬಳ್ಳಿಯ ಗಣೇಶಪೇಟೆಯ ಭಾಗ ಸಾಂಗ್ಲಿ ಸಂಸ್ಥಾನಕ್ಕೆ ಸೇರಿತ್ತೆಂದು ವಿವರಿಸಲಾಗಿದೆ''.[೩೪] ಉತ್ತರ ಕರ್ನಾಟಕದಲ್ಲಿ ಮರಾಠರು ಇನ್ನೂ ಭದ್ರವಾಗಿ ನೆಲೆಯೂರುತ್ತಿರುವಾಗಲೇ, ಇಲ್ಲಿ ಹೈದರಾಬಾದ ನಿಜಾಮನು ಆಗಾಗ ದಂಡೆತ್ತಿ ಬಂದು, ಕನ್ನಡದ ನೆಲವನ್ನು ಜೊತೆಗೆ ಕನ್ನಡತನವನ್ನು ಕಸಿಯುತ್ತಿದ್ದನು. ಇದರಿಂದ ೧೯ನೇ ಶತಮಾನದ ಆದಿಭಾಗದಲ್ಲಿ ಉತ್ತರಕ್ಕೆ ಮರಾಠರ ಆಳ್ವಿಕೆ, ಈಶಾನ್ಯದಲ್ಲಿ ನಿಜಾಮನ ಆಳ್ವಿಕೆ, ದಕ್ಷಿಣದಲ್ಲಿ ಬ್ರಿಟಿಷರ ಪ್ರಭಾವ ಇದ್ದುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇನ್ನೊಂದು ಗಮನಾರ್ಹ ಸಂಗತಿ ಎಂದರೆ, ಮದ್ರಾಸ ಪ್ರಾಂತದಲ್ಲಿ ತಮಿಳು, ತೆಲಗು , ಹೈದರಾಬಾದ ಪ್ರಾಂತದಲ್ಲಿ ಉರ್ದು, ಮುಂಬಯಿ ಪ್ರಾಂತದ ಅಧೀನಕ್ಕೊಳಪಟ್ಟ ಸಂಸ್ಥಾನಗಳಲ್ಲಿ ಮರಾಠಿ ಹೀಗೆ ಹಲವು ಭಾಷೆ ,ಸಂಸ್ಕೃತಿಗಳ ಅಡಿಯಲ್ಲಿ ಸಿಕ್ಕು ಕನ್ನಡ ಭಾಷೆ, ಸಂಸ್ಕೃತಿಗಳು ಕಣ್ಮರೆಯಾಗತೊಡಗಿದವು. ಈ ರೀತಿ ಹಲವರ ರಾಜಕೀಯ ಮಹತ್ವಾಕಾಂಕ್ಷೆ ಮತ್ತು ವಿಪ್ಲವಗಳಿಂದಾಗಿ ಕನ್ನಡಿಗರಿಗೆ ತುಂಬಾ ಗಂಡಾಂತರಕಾರಿಯಾದ ವಾತಾವರಣ ನಿರ್ಮಾಣವಾಯಿತು. ಉತ್ತರ ಕರ್ನಾಟಕದ ಪಾಲಿಗಂತೂ ಇದೊಂದು ಶಾಪವಾಗಿ ಪರಿಣಮಿಸಿತು. ಈ ನೆಲವನ್ನು ಆಳಲು ಬಂದ ಮುಸಲ್ಮಾನ , ಪೇಶ್ವೆ ಮತ್ತು ಆಂಗ್ಲ ಅರಸರುಗಳು ತಮ್ಮ ತಮ್ಮ ಆಡಳಿತದ ಅನುಕೂಲಕ್ಕಾಗಿ ಅವರವರ ಭಾಷೆ , ಸಂಸ್ಕೃತಿಗಳನ್ನು ಹೇರಿ ಕನ್ನಡಿಗರನ್ನು , ಕನ್ನಡ ಭಾಷೆಯನ್ನು ಶಕ್ತಿಹೀನಗೊಳಿಸಿದ್ದು ಚಾರಿತ್ರಿಕ ಸತ್ಯವಾಗಿದೆ. ರಾಜಕೀಯ ಒತ್ತಡದಿಂದಾಗಿ ದೇಶದ ಇನ್ನಾವುದೇ ಭಾಗದ ಜನರು ತಮ್ಮ ತಾಯಿ ನೆಲದಲ್ಲಿಯೇ ಇಷ್ಟೊಂದು ಪರದೇಶಿಗಳಂತೆ ಬದುಕುವ ಸ್ಥಿತಿಯುಂಟಾಗಿರಲಿಲ್ಲ. ಇದಕ್ಕೆಲ್ಲ ಕಾರಣವೆಂದರೆ, ಮುಂಬಯಿಯು ಭಾರತದ ಹೆಬ್ಬಾಗಿಲಾದ್ದರಿಂದ ಬ್ರಿಟಿಷರು ಮೊದಲು ಅಲ್ಲಿಯೇ ತಳವೂರಿದರು. ಸಮೀಪದಲ್ಲಿರುವ ಪುಣೆಯು ಆಡಳಿತದ ಕೇಂದ್ರ ಸ್ಥಳವಾಯಿತು. ಇದರ ಪರಿಣಾಮವಾಗಿ, ಅಲ್ಲಿಂದ ಬಹುದೂರದಲ್ಲಿದ್ದ ಮುಂಬಯಿ- ಕರ್ನಾಟಕದ ಜನ ಎಲ್ಲ ಸೌಲಭ್ಯಗಳಿಂದಲೂ ವಂಚಿತರಾಗಿ, ಸರಕಾರಿ ಯಂತ್ರದ ಅನಾದರಕ್ಕೆ ಒಳಗಾದರು. ಮೊದಲೇ ಮರಾಠಿ ಭಾಷೆ, ಸಂಸ್ಕೃತಿಗಳಿಂದ ಉಸಿರುಕಟ್ಟಿದಂತಾಗಿದ್ದ ಕನ್ನಡದ ಜನ ಇನ್ನಷ್ಟು ವಿವಂಚನೆಗೊಳಗಾಗುವಂತಾಯಿತು. ಬ್ರಿಟಿಷ್ ಸರಕಾರದ ಕೇಂದ್ರ ಸ್ಥಳವಾದ ಪುಣೆ ಸಹಜವಾಗಿಯೇ ವಿದ್ಯಾ ಕೇಂದ್ರವಾಗಿ ಬೆಳೆಯಿತು. ಅಂದ ಮೇಲೆ ಹೆಚ್ಚಿನ ವಿದ್ಯೆಯನ್ನು ಸಂಪಾದಿಸಬೇಕೆನ್ನುವ ಕನ್ನಡಿಗರು ವಾಹನ ಸೌಕರ್ಯಗಳಿಲ್ಲದಿದ್ದ ಆ ಕಾಲದಲ್ಲಿ ಕಾಲ್ನಡಿಗೆಯಿಂದಲೇ ಅಲ್ಲಿಗೆ ಹೋಗಿ ಶಿಕ್ಷಣದ ಪ್ರಯೋಜನ ಪಡೆಯುವುದು ಅನಿವಾರ್ಯವಾಗಿಬಿಟ್ಟಿತು. ಹೀಗೆ, ವಿದ್ಯೆ ಕಲಿಯಲು ಹೋದ ಕನ್ನಡಿಗರೂ ಸಹ ತಾವು

ಕನ್ನಡಿಗರೆಂಬುದನ್ನೇ ಮರೆತು ಮೊದಲಿಗಿಂತಲೂ ಉತ್ತೇಜಿತರಾಗಿ ಮರಾಠಿ ಭಾಷೆ, ಸಂಸ್ಕೃತಿಗಳನ್ನು ಅಳವಡಿಸಿಕೊಂಡು ಅದರಲ್ಲೇ ಕರಗಿ ಹೋಗುತ್ತಿದ್ದರು. ಇಂತಹ ಸ್ಥಿತಿಯ ಚಿತ್ರವೊಂದು ಇಲ್ಲಿದೆ.

''ಶ್ರೀಮಂತರಾಗಿದ್ದರೆ ಮರಾಠಿ ಮುಲಿಗಳನ್ನು ಕಟ್ಟಿಕೊಂಡೇ ಮರಳುತ್ತಿದ್ದರು. ಮಾತೃಭಾಷೆ, ಪಿತೃಭಾಷೆಗಳ ಸ್ಥಾನದಲ್ಲಿ ಭಾರ್ಯಾ(ಹೆಂಡಂದಿರ) ಭಾಷೆ ರಾರಾಜಿಸುತ್ತಿತ್ತು. ಹೀಗಾಗಿ, 'ಅರೆ (ಮರಾಠಿ) ಅರಸಾಗಿ, ಕನ್ನಡ ಕೊಸರಾಯಿತು'. ಇಂತಹ ಅನ್ಯ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹೊಡೆತಕ್ಕೆ ಸಿಕ್ಕುಸ್ಥಿತಿ ತೀರಧಾರುಣವಾಯಿತು. ಅಲ್ಲಿಯ ಕನ್ನಡಿಗರಿಗೆ ತಮ್ಮ ಭಾಷೆ ಕನ್ನಡವೆಂದು ತಿಳಿಯಲು ಹತ್ತಾರು ವರ್ಷಗಳೇ ಬೇಕಾಯಿತು.''[೩೫] ಈ ಅವಸ್ಥೆಯನ್ನು ಕಂಡ ಮತ್ತು ಪೇಶ್ವೆಯ ಅಧಿಕಾರದ ಕೊನೆಯ ಆಳ್ವಿಕೆಯನ್ನು ನಿರ್ನಾಮ ಮಾಡಿದ ಸರ್ ಥಾಮಸ್ ಮನ್ರೋ ೧೮೨೬ರಲ್ಲಿ ಸಲಹೆ ಮಾಡಿದ್ದೇನೆಂದರೆ; ಕನ್ನಡ ಭಾಷಾ ಪ್ರದೇಶಗಳನ್ನೆಲ್ಲಾ ಒಂದೇ ಆಡಳಿತಕ್ಕೆ ತರಬೇಕು ಮತ್ತು ಈ ಪ್ರದೇಶದ ಜನತೆಯ ಆಡಳಿತ, ಶಿಕ್ಷಣ, ಸಾಮಾಜಿಕ ಸಾಮರಸ್ಯಗಳಿಗಾಗಿ ಅವುಗಳನ್ನು ಮುಂಬಯಿ, ಅಧಿಪತ್ಯದಿಂದ ಬೇರ್ಪಡಿಸಿ, ಮದರಾಸು ಅಧಿಪತ್ಯಕ್ಕೆ ಸೇರಿಸಬೇಕೆಂದು. ಒಂದು ವೇಳೆ ಈ ಸಲಹೆಯನ್ನು ಈಸ್ಟ ಇಂಡಿಯಾ ಕಂಪನಿ ಮಾನ್ಯಮಾಡಿದ್ದರೆ, ಕನ್ನಡನಾಡು ೧೫೦ ವರ್ಷಗಳ ಮರಾಠಿ ಹಿಡಿತದಿಂದ ಅಂದೇ ಮುಕ್ತವಾಗಬಹುದಿತ್ತು.

೧೮೬೦ರ ಸುಮಾರಿಗೆ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪ್ರಿನ್ಸಿಪಾಲರೆಂದು ನೇಮಕ ಹೊಂದಿದ 'ರಸೆಲ್ಲ'ರು ೧೮೬೨ ರಲ್ಲಿ ಮಧ್ಯಭಾಗದ ಅನಂತರ ಉತ್ತರ ಭಾಗದ ಎಜ್ಯುಕೇಶನ್ ಇನ್ಸಪೆಕ್ಟರರಾಗಿ ಕೆಲಸಮಾಡಿದರು. ಮುಂದೆ ೧೮೬೫ ರಲ್ಲಿ ದಕ್ಷಿಣ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಅವರು ತಮ್ಮ ರಡು ವರದಿಗಳಲ್ಲಿ ಅಂದಿನ ಕನ್ನಡ ಸ್ಥಿತಿಯ ಮೇಲೆ ಹೀಗೆ ಬೆಳಕು ಚೆಲ್ಲಿದ್ದಾರೆ. ''ಗುಜರಾತಿ ಮತ್ತು ಮರಾಠಿ ಭಾಷೆಗಳು ಅವರವರ ಪ್ರಾಂತಗಳಲ್ಲಿ ಬೋಧಿಸಲ್ಪಡುತ್ತಿವೆ, ಹದಗೊಳ್ಳುತ್ತಿವೆ. ಈ ಪರಿಸ್ಥಿತಿಯಿಂದ ಕನ್ನಡ ಭಾಷೆ ವಂಚಿತವಾಗಿದೆ. ಬೇರೆ ಬೇರೆ ವಿಭಾಗಗಳಲ್ಲಿ ಶಿಕ್ಷಣ ಸಾಧನಗಳು ವಿಫುಲವಾಗಿರುವಾಗ, ಕನ್ನಡ ಪುಸ್ತಕಗಳು ಮತ್ತು ಉಪಾಧ್ಯಾಯರುಗಳು ಅವುಗಳನ್ನು ಇನ್ನೂ ತಯಾರಿಸುವ ಹಂತದಲ್ಲಿದ್ದಾರೆ. ಬಹುಜನ ಉಪಾಧ್ಯಾಯರ ಭಾಷೆ ಕನ್ನಡವಾಗಿದೆ. ಮರಾಠಿ ದೇಶ ಭಾಷಿಕರು ಸಾಮಾನ್ಯವಾಗಿ, ಕನ್ನಡ ಮಾತನಾಡಬಲ್ಲವರೇ ಇದ್ದಾರೆ. ದುರಾದೃಷ್ಟವೆಂದರೆ, ಸ್ಥಳೀಯ ಕನ್ನಡಿಗರಾದ ಕೇವಲ ಕೆಲವರು ಮಾತ್ರ ಅವರು ತಮ್ಮ ಮಾತೃಭಾಷೆಯನ್ನು ಪಾಂಡಿತ್ಯಪೂರ್ಣವಾಗಿ ಕಲಿಸಬಲ್ಲವರಾಗಿದ್ದಾರೆ. ಮಿಕ್ಕವರೆಲ್ಲ ಕನ್ನಡ ಮಾತೃಭಾಷಿಕರಾಗಿದ್ದರೂ, ಉಕ್ತಲೇಖನವನ್ನು ಲಕ್ಷಣವಾಗಿ ಬರೆಯಲು ಕೂಡಾ ಅಶಕ್ತರಾಗಿದ್ದಾರೆ. ಅವರಲ್ಲಿ ಅನೇಕರು ಶಾಲೆಯ ಮಟ್ಟಿಗಾದರೂ, ಕನ್ನಡಕ್ಕಿಂತ ಚೆನ್ನಾಗಿ ಮರಾಠಿಯನ್ನೇ ತಿಳಿದವರು. ಈ ಎರಡು ಭಾಷೆಗಳ ಗೊಂದಲ ಮತ್ತು ಇವೆರಡು ಭಾಷೆಗಳಲ್ಲಿ ಯಾವುದರಲ್ಲೂ ಪ್ರಾವಿಣ್ಯವಿಲ್ಲದಿರುವುದು, ದಕ್ಷಿಣ ಭಾಗದ ಪಂಡಿತರನ್ನು

ಉಳಿದೆರಡು ವಿಭಾಗದವರಿಗಿಂತ ಸಾಕಷ್ಟು ಕಾಲ ಹಿಂದುಳಿಯುವಂತೆ ಮಾಡಿದೆ ಎಂಬ ಭಯ ನನ್ನದು. ಈ ವಿಭಾಗದ 'ಡೆಪ್ಯುಟಿ ಇನ್ಸ್‌ಪೆಕ್ಟರು'ಗಳು ಮತ್ತು ಇಂಗ್ಲಿಷ್ ಉಪಾಧ್ಯಾಯರುಗಳಲ್ಲಿ ಯಾರೂ ಕ್ಯಾನರಿಸ್(ಕನ್ನಡ) ಭಾಷಿಕರಲ್ಲ ಹಾಗೂ ಜಿಲ್ಲೆಗಳ ದೇಶೀಯ ಶಾಲಾ ಉಪಾಧ್ಯಾಯರುಗಳಲ್ಲಿ ಕೂಡಾ ಕೆಲವೇ ಕೆಲವರು ಕನ್ನಡ ಭಾಷಿಕರಾಗಿದ್ದಾರೆ. ಹೆಚ್ಚಾಗಿ ಮರಾಠಿ ಪುಸ್ತಕಗಳು ಮತ್ತು ಉಪಾಧ್ಯಾಯರುಗಳಿಂದಲೇ ತುಂಬಿದ ಈ ಶಾಲೆಗಳ ವಿಷಯವಾಗಿ ಕನ್ನಡದ ಜನರು ಉದಾಸೀನ ಭಾವನೆ ಹೊಂದಿದ್ದರೆ ಆಶ್ಚರ್ಯಪಡಬೇಕಾಗಿಲ್ಲ''.[೩೬] ಇಂತಹ ಇನ್ನೂ ಹಲವು ಹತ್ತು ಅಭಿಪ್ರಾಯಗಳು, ಕನ್ನಡಿಗರು ಪರಿಸ್ಥಿತಿಯ ಬಿಕ್ಕಟ್ಟಿನಿಂದಾಗಿ ಮರಾಠಿ ಭಾಷೆಗೆ ಶರಣುಹೋದ ಸಂಗತಿಯನ್ನು ಬಹಳ ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ.

ಇದಲ್ಲದೇ ಪುಣೆ, ಮುಂಬಯಿಗಳಿಗೆ ಹೋಗಿ ಶಿಕ್ಷಣ ಪಡೆದು ಮರಳಿದ ಕನ್ನಡಿಗರೆಲ್ಲ ತಮ್ಮ ಮಾತೃಭಾಷೆಯನ್ನು ಮರೆತು ಮರಾಠಿಯನ್ನೇ ಪ್ರಜ್ಞಾಪೂರ್ವಕವಾಗಿ ಮಾತನಾಡುವುದನ್ನು ರೂಢಿಸಿಕೊಳ್ಳುತ್ತಿದ್ದರು. ತಾವು ಮದುವೆ ಮಾಡಿಕೊಂಡು ಮನೆತುಂಬಿಸಿಕೊಂಡಿದ್ದ ಮೈಸೂರಿನ ಕಡೆಯ ಹೆಣ್ಣು ಮಕ್ಕಳಿಗೂ ಸಹ ಬಲವಂತವಾಗಿ ಮರಾಠಿ ಭಾಷೆಯನ್ನು ಕಲಿಯುವಂತೆ ಮಾಡಿ ಇಡೀ ಕುಟುಂಬವನ್ನೇ ಆ ಭಾಷೆಯ ಪ್ರಭಾವದಿಂದ ಸಮ್ಮೋಹನಗೊಳಿಸಿ ಬಿಡುತ್ತಿದ್ದರು. ಈ ಮರಾಠಿಮೋಹಕ್ಕೆ ಬಲಿಯಾದ ಅನೇಕರು ಪುಸ್ತಕ, ವರ್ತಮಾನ ಪತ್ರಿಕೆ, ನಾಟಕ, ಸಂಗೀತ ಇವೆಲ್ಲವನ್ನು ಆ ಭಾಷೆಯಲ್ಲಿಯೇ ಅಪೇಕ್ಷಿಸುತ್ತಿದ್ದರು.

ಕನ್ನಡವನ್ನು, ಕನ್ನಡಿಗರನ್ನು ಕೇಳುವವರೇ ದಿಕ್ಕಿಲ್ಲವೆಂಬಂತೆ ಆಗಿತ್ತು. ಅಂದು ಧಾರವಾಡ, ಹುಬ್ಬಳ್ಳಿಗಳಲ್ಲಿ ಆರಂಭವಾದ ಮೊಟ್ಟ ಮೊದಲ ಶಾಲೆಗಳೂ ಕೂಡಾ ಮರಾಠಿಯವು. ''೧೮೨೬ ರ ಸುಮಾರಿಗೆ ಎರಡು ಮರಾಠಿ ಶಾಲೆಗಳು ಆರಂಭಗೊಂಡವು. ಒಂದು ಹುಬ್ಬಳ್ಳಿಯಲ್ಲಿ ಇನ್ನೊಂದು ಧಾರವಾಡದಲ್ಲಿ'' ಎಂಬ ಸಂಗತಿ ಗಮನಾರ್ಹ. ಈ ವಿಧವಾದ ಅವಸ್ಥೆಗೆ ಕಾರಣಗಳು ಅತ್ಯಂತ ಸ್ಪಷ್ಟವಾಗಿವೆ. ಮೊದಲನೆಯದಾಗಿ ರಾಜಸತ್ತೆಯ ಕೊನೆಗಾಲದಲ್ಲಿ ಕನ್ನಡನಾಡು ಪೇಶ್ವೆಯರ ಅಧಿಪತ್ಯದಲ್ಲಿ ನರಳುವಂತಾದುದು, ಎರಡನೇಯದಾಗಿ ಇಲ್ಲಿಯ ಮುಖಂಡರೂ, ಅಧಿಕಾರಸ್ಥರೂ ಮರಾಠಿ ಭಾಷಿಕರಾಗಿದ್ದುದು, ಮೂರನೇಯದಾಗಿ ಕನ್ನಡಿಗರು ಅಭಿಮಾನ ಶೂನ್ಯರಾಗಿದ್ದುದು. ಹೀಗೆ ಮೂರು ಸಂಗತಿಗಳು ಒಟ್ಟು ಗೂಡಿ ಸೃಷ್ಟಿಸಿದ ದುರವಸ್ಥೆ ಅವರ್ಣನೀಯವಾದುದು. ಪರಿಸ್ಥಿತಿ ಎಷ್ಟು ಭೀಕರವಾಯಿತೆಂದರೆ, ಕನ್ನಡಿಗರೇ ಇಲ್ಲಿ ತಮ್ಮ ಆತ್ಮ ಬಲವನ್ನು ಕಳೆದುಕೊಂಡು ಪರಕೀಯ ಪ್ರಜ್ಞೆಯಿಂದ ಚಡಪಡಿಸುವಂತಾಯಿತು.

ಇನ್ನೂ ಸೂಕ್ಷ್ಮವಾಗಿ ನೋಡುವುದಾದರೆ, ಹೈದರಾಬಾದ್- ಕರ್ನಾಟಕ, ಮುಂಬಯಿ ಕರ್ನಾಟಕ ಎಂಬ ಇಬ್ಭಾಗವೇ ಹಲವು ಒಳಘಾತಕಗಳಿಗೆ ಕಾರಣವಾಗಿತ್ತು. ಈ ಭೌಗೋಳಿಕವಾದ

ತುಂಡರಿಕೆ ಎಲ್ಲ ನೆಲಗಳ ಮೇಲೂ ಪರಿಣಾಮ ಬೀರಿತ್ತು. ೧೮೬೬ ರ ಸುಮಾರಿಗೆ ಅಚ್ಚಗನ್ನಡದ ಪ್ರದೇಶವಾದ ಧಾರವಾಡದಲ್ಲಿ ಸಾಮಾನ್ಯವಾಗಿ ಕನ್ನಡ ಶಾಲಾ ನೇಮಕಾತಿಗಳ ಪ್ರಕಟಣೆಗಳು, ಮಾಹಿತಿಗಳು ಮರಾಠಿ ಭಾಷೆಯಲ್ಲಿಯೇ ಇರುತ್ತಿದ್ದವು. ಪಂಡಿತ ಲಕ್ಷ್ಮಣ ಶ್ರೀಪಾದ ನಾನಾಪೂರಕರ ಎಂಬುವವರು ಧಾರವಾಡದಲ್ಲಿ ಆರಂಭಿಸಿದ್ದ (೧೮೫೪) ಗ್ರಂಥಾಲಯವೊಂದರಲ್ಲಿ ೧೮೭೨ರ ಸುಮಾರಿಗೆ ಇದ್ದ ಒಟ್ಟು ನಾಲ್ಕುನೂರಾ ಐವತ್ತೊಂದು ಪುಸ್ತಕಗಳ ಪೈಕಿ ನಾಲ್ಕುನೂರಾ ಹದಿನಾಲ್ಕು ಇಂಗ್ಲಿಷ್ ಭಾಷೆಯವು, ಮೂವತ್ತು ಮರಾಠಿ ಭಾಷೆಯವು, ಕೇವಲ ಏಳು ಪುಸ್ತಕಗಳು ಮಾತ್ರ ಕನ್ನಡ ಭಾಷೆಯವು ಇದ್ದವೆಂದು ತಿಳಿಯುತ್ತದೆ.[೩೭] ಬಿಜಾಪೂರ ಜಿಲ್ಲೆಯಿಂದ (ಅಂದಿನ ಕಲಾದಗಿ ಜಿಲ್ಲೆ) ಹೊರಡುತ್ತಿದ್ದ ಮೊಟ್ಟಮೊದಲಿನ ಪತ್ರಿಕೆ 'ಹಿತೇಚ್ಛು' ಕನ್ನಡದ್ದಲ್ಲ, ಮರಾಠಿ ಭಾಷೆಯದು. ಈ ಅನ್ಯಭಾಷೆಯ ವ್ಯಾಮೋಹ ಎಷ್ಟೊಂದು ದೈತ್ಯಾಕಾರವಾಗಿ ಬೆಳೆದು ತನ್ನ ಕಬಂಧ ಬಾಹುಗಳನ್ನು ಚಾಚಿ ಭೀಕರ ಪರಿಣಾಮ ಬೀರಿತ್ತೆಂಬುದನ್ನು ತಿಳಿಯಬೇಕಾದರೆ, ಡೆಪ್ಯೂಟಿಯವರ ತರುವಾಯದ ಸಾಮಾಜಿಕ ಸ್ಥಿತಿಗತಿಯ ಬಗ್ಗೆಯೂ ಸ್ವಲ್ಪ ದೃಷ್ಟಿಹರಿಸುವುದು ಒಳ್ಳೆಯದು. ಈ ನಿಟ್ಟಿನಲ್ಲಿ ಆಲೂರ ವೆಂಕಟರಾಯರ ಅನಿಸಿಕೆಗಳು ಹೀಗಿವೆ- '' ಕರ್ನಾಟಕದಲ್ಲಿ ಅನೇಕ ವರ್ಷಗಳವರೆಗೆ ಪ್ರಾಥಮಿಕ ಶಾಲೆಗಳಲ್ಲಿ ಮರಾಠಿಯನ್ನು , ಮರಾಠಿ ಅಕ್ಷರಗಳನ್ನು ಕಲಿಸಬೇಕೆಂದು ಕೆಲವು ಸಂಕುಚಿತಬುದ್ಧಿಯ ಮರಾಠಿ ಅಧಿಕಾರಿಗಳು ಯೋಚಿಸಿದರು. ಆಗ ಕರಿಕುದರಿ ನಾರಾಯಣರಾಯರು, ಶ್ರೀ ರೊದ್ದ ಶ್ರೀನಿವಾಸರಾಯರು ಮೊದಲಾದ ಕರ್ನಾಟಕದ ಕಟ್ಟಾಭಿಮಾನಿಗಳು ಸರಕಾರದೊಡನೆ ಜಗಳವಾಡಿ ಆ ವಿಚಾರಗಳನ್ನು ಖಂಡನೆ ಮಾಡಿ ಕರ್ನಾಟಕದ ವರ್ಚಸ್ಸನ್ನು ಉಳಿಸಿಕೊಂಡರು''. ''ಪುಣೆಗೆ ಬಂದ ಬ್ರಾಹ್ಮಣ (ವಿದ್ಯಾರ್ಥಿಗಳಿಗೆ)ರಿಗೆ ಮರಾಠಿ ತಿಳಿಯುತ್ತಿದ್ದರಿಂದ, ಮರಾಠಿಗರೊಡನೆಯೇ ಹೆಚ್ಚಿಗೆ ಸ್ನೇಹಬೆಳೆಸುತ್ತಿದ್ದರಲ್ಲದೇ, ಲಿಂಗಾಯತರು ಮುಂತಾದ ಕನ್ನಡಿಗರೊಡನೆ ಅಲ್ಲ. ಲಿಂಗಾಯತರಿಗೆ ಮರಾಠಿ ಭಾಷಾ ಸಂಪರ್ಕ ಕಡಿಮೆ. ಆಗ ಅವರ ಸಂಖ್ಯೆಯೂ ಅತ್ಯಲ್ಪ. ಮರಾಠಿ ಭಾಷೆಯಲ್ಲಿ ಲಿಂಗ ಪ್ರತ್ಯಯ ಮುಂತಾದ ತೊಡಕುಗಳು ಇರದಿದ್ದರೆ, ನಮ್ಮಲ್ಲಿ ಎಷ್ಟೋಜನರು ಮರಾಠಿಗರಾಗಿ ಹೋಗುತ್ತಿದ್ದರೇನೋ; ಆ ತೊಡಕೆ ನಮ್ಮ ಕನ್ನಡವನ್ನು ರಕ್ಷಿಸಿದ ಕೋಟೆಯಾಗಿತ್ತು.''

''ಫರ್ಗ್ಯೂಸನ್ ಕಾಲೇಜಿನ ದೊಡ್ಡ ಲೈಬ್ರರಿಯಲ್ಲಿ ಒಂದೂ ಕನ್ನಡದ ಪುಸ್ತಕವಿರಲಿಲ್ಲ. ಇದು ಕನ್ನಡದ ಉಜ್ವಲಾಭಿಮಾನಿಯಾಗಿದ್ದ ರೊದ್ದ ಶ್ರೀನಿವಾಸರಾಯರಿಗೆ ಸಹನವಾಗಲಿಲ್ಲ. ಆತನು ಚಳವಳಿಯನ್ನು ಹೂಡಿದನು. ನಾವೆಲ್ಲರೂ ಬಹಳ ಬಡಿದಾಡಿದ ಬಳಿಕ ನಮ್ಮ ಪಾಲಿಗೆ ಐವತ್ತು ರೂಪಾಯಿಗಳು ಮಂಜೂರು ಮಾಡಲ್ಪಟ್ಟವು. ಆದರೆ, ಆ ಐವತ್ತು ರೂಪಾಯಿಗಳಲ್ಲಿ ಯಾವ ಪುಸ್ತಕಗಳನ್ನು ತರಬೇಕೆಂಬುದು ತಿಳಿಯಲಿಲ್ಲ. ಬಿ. ವೆಂಕಟಾಚಾರ್ಯರು ಬಂಗಾಲಿಯಿಂದ ಭಾಷಾಂತರಿಸಿದ ಕನ್ನಡ ಕಾದಂಬರಿಗಳ ಕೆಲವು ಹೆಸರುಗಳ ಪರಿಚಯವೇ ನಮ್ಮ ಜ್ಞಾನದ

ಬಂಡವಾಲು. ಧಾರವಾಡದ ವಿದ್ಯಾವರ್ಧಕ ಸಂಘಕ್ಕೆ ಪತ್ರ ಬರೆದು ಅಲ್ಲಿಂದಲೂ ಮೈಸೂರಿನಿಂದಲೂ ಕೆಲವು ಪುಸ್ತಕಗಳನ್ನು ತರಿಸಿಕೊಂಡೆವು. ಆದರೆ, ಆ ಪುಸ್ತಕಗಳು ಬಂದ ಬಳಿಕ ನಾವು ಆ ಪುಸ್ತಕಗಳನ್ನು ಏಕೆ ತರಿಸಿದೆವೋ ಎಂದೆನಿಸಿತು. ಯಾಕೆಂದರೆ, ಅವುಗಳಲ್ಲಿ ಬಹುತರವಾಗಿ ಯಾವ ಪುಸ್ತಕವೂ ಕಿರುಬೆರಳಿಗಿಂತ ದಪ್ಪವಾಗಿರಲಿಲ್ಲ. ಹೊಲಸು ಕಾಗದ, ತಪ್ಪು ಮುದ್ರಣ''.

''ಕನ್ನಡಿಗರು ಮರಾಠಿ ನಾಟಕಗಳಲ್ಲಿಯೇ ನಾಯಕ, ನಾಯಕಿಯರ ಪಾತ್ರಗಳನ್ನು ವಹಿಸಿ ಹೆಸರು ಪಡೆಯುವುದು ಅಲ್ಲಿನ ಪದ್ಧತಿ. ಒಮ್ಮೆ ಶ್ರೀ ವೆಂಕಟರಂಗೋಕಟ್ಟಿ ಎಂಬ ಪ್ರಸಿದ್ಧ ಕನ್ನಡ ಪ್ರಿನ್ಸಿಪಾಲರ ಮತ್ತು ಲೇಖಕರ ಮಗ ಶ್ರೀನಿವಾಸರಾಯನೆಂಬುವವನು ಮರಾಠಿಯ ಶಾಕುಂತಲ ನಾಟಕದಲ್ಲಿ ಶಕುಂತಲೆಯ ಪಾತ್ರವಹಿಸಿ ಮರಾಠಿಗರಿಂದಲೇ ಪ್ರಶಸ್ತಿಯನ್ನು ಪಡೆದಿದ್ದನು. ನಮ್ಮ ಕಾಲದಲ್ಲಿ ಭಿ. ಗು. ಕುಲಕರ್ಣಿ ಎಂಬ ಕನ್ನಡ ವಿದ್ಯಾರ್ಥಿಯು ಡೆಕ್ಕನ್ ಕಾಲೇಜಿನಲ್ಲಿದ್ದಾಗ 'ಒಥೆಲ್ಲೊ' ಪಾತ್ರವನ್ನು ವಹಿಸಿ ತನಗೆ ಮರಾಠಿ ಚೆನ್ನಾಗಿ ಬಾರದಿದ್ದರೂ, ಕಂಠ ಪಾಠ ಮಾಡಿ ಕಲಿತು ಅತ್ಯುತ್ಕೃಷ್ಟವಾಗಿ ಪಾತ್ರವನ್ನು ಅಭಿನಯಿಸಿ ತೋರಿಸಿದನೆಂಬುದನ್ನು ಹೇಳಿದರೆ, ಆಗಿನ ನಮ್ಮ ಕನ್ನಡಿಗರ ಮರಾಠಿ ಮೋಹದ ಕಲ್ಪನೆಯಾಗಬಹುದು.''[೩೮]

''ಉತ್ತರ ಕರ್ನಾಟಕದ ಮಧ್ಯ ಸ್ಥಳವಾದ ಧಾರವಾಡ ಜಿಲ್ಲೆಯಲ್ಲಿಯೂ, ಮುಖ್ಯ ಪಟ್ಟಣಗಳಲ್ಲಿಯೂ ದೊಡ್ಡ ದೊಡ್ಡ ವಕೀಲರೆಂದರೆ ಮರಾಠಿಗರೆ. ಆ ಕಾಲದಲ್ಲಿ ವಕೀಲರೇ ಸಾರ್ವಜನಿಕ ಚಳವಳಿಗಾರರು. ಆದಕಾರಣ, ಧಾರವಾಡದಲ್ಲಿಯೂ ಕೂಡ ಮರಾಠಿಯಲ್ಲಿಯೇ ಭಾಷಣಗಳು. ಕನ್ನಡದ ದುರ್ದೈವದಿಂದ ಇಲ್ಲಿಯ ಕನ್ನಡಿಗರಿಗೂ ಅರ್ಧಮರ್ಧ ಮರಾಠಿಯು ಬರುತ್ತಿತ್ತು. ನಾವು ಕೆಲವು ಕನ್ನಡಾಭಿಮಾನಿಗಳು ಮುಖ್ಯರಾದ ವಕೀಲರೊಡನೆ ಕನ್ನಡದಲ್ಲಿ ಮಾತನಾಡಿದರೂ ಅವರು ಮಾರಾಠಿಯಲ್ಲಿಯೇ ಮಾತನಾಡುತ್ತಿದ್ದರು. ಬೆಳಗಾವಿ, ಧಾರವಾಡ ಎರಡೂ ಜಿಲ್ಲೆಗಳ ಕೋರ್ಟು ಭಾಷೆಯು ಕನ್ನಡ. ಈ ಮುಖಂಡ ವಕೀಲರು ಕನ್ನಡ ಬರುತ್ತದೆಂದು ಸನದು ತೆಗೆದುಕೊಂಡವರು; ಆಗ ನಮ್ಮೊಡನೆ ಮಾತನಾಡುವಾಗ ಕನ್ನಡದಲ್ಲಿ ಉತ್ತರಕೊಡಿರೆಂದು ಕೇಳಿಕೊಂಡೆವು . ಅವರು ಅದಕ್ಕೆ ಕಿವಿಗೊಡಲಿಲ್ಲ. ದುರಭಿಮಾನಕ್ಕೆ ಬಿದ್ದರು. ಈ ಸ್ಥಿತಿ ನಿಲ್ಲಿಸಲು ನಿಶ್ಚಯಿಸಿದೆವು. ಆಗ ನಾವು ಅವರನ್ನು ಕೇಳಿಕೊಂಡಿದ್ದು ಇಷ್ಟೇ ಏನೆಂದರೆ; ಸಾರ್ವಜನಿಕ ಸಭೆಗಳಲ್ಲಾದರೂ ಕನ್ನಡದಲ್ಲಿ ಮಾತನಾಡಿರಿ, ಈಗಿನ ಜನತೆಗೆ ಮರಾಠಿ ತಿಳಿಯುವುದಿಲ್ಲ; ಮರಾಠಿಗರು ಹಟವನ್ನು ಬಿಡಲಿಲ್ಲ. ಆಗ ನಮಗೂ ಅವರಿಗೂ ವಾಗ್ವಾದ ಶುರುವಾಯಿತು.''[೩೯]

ಕ್ರಿ.ಶ ೧೮೧೭ ರಲ್ಲಿ ಶ್ರೀ ಜೆ. ಎಂ. ದೇಶಪಾಂಡೆ ಎಂಬುವವರು ಬಿಜಾಪೂರದ ಸಾರ್ವಜನಿಕ ಸಭೆಯಲ್ಲಿ ಈ ಭಾಷಿಕವಾದ ಸ್ಥಿತಿಯ ಜೊತೆಗೆ ಅಂದಿನ ಮುಂಬಯಿ ಕರ್ನಾಟಕದ ಶೈಕ್ಷಣಿಕ, ಸಾಂಸ್ಕೃತಿಕ ಬದುಕು ಇನ್ನೂ ಹದಗೆಟ್ಟಿತ್ತೆಂಬುದು ತಿಳಿಯುತ್ತದೆ. ಪ್ರಾಚೀನ ಶೈಕ್ಷಣಿಕ, ಸಾಂಸ್ಕೃತಿಕ

ಪರಿಕಾರವೆನಿಸಬೇಕಾಗಿದ್ದ ವಿದ್ಯಾ ಕೇಂದ್ರಗಳು ವಿಜಯನಗರದ ಪತನಾನಂತರ ಮತೀಯ ಕೇಂದ್ರಗಳಾಗಿ ಬಿಟ್ಟಿದ್ದವು. ಕರ್ನಾಟಕವನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡುವುದಾದರೆ, ಇಲ್ಲಿ ಪಾಶ್ಚಾತ್ಯ ಸಂಪರ್ಕ ಬರುವ ಮೊದಲು ಎಲ್ಲ ಹಳ್ಳಿಗಳಲ್ಲೂ ಪ್ರಾಥಮಿಕ ಶಿಕ್ಷಣವನ್ನು ನೀಡುವ ಸಂಸ್ಥೆಗಳು ಮಠಗಳಾಗಿದ್ದವು. ಧೂಳಾಕ್ಷರ,ಕಡತ, ಹಸ್ತಪ್ರತಿಗಳ ಮುಖಾಂತರ ಮಕ್ಕಳಿಗೆ ಇಲ್ಲಿ ಓದು ಬರಹಗಳ ಪರಿಚಯವನ್ನು ಮಾಡಿಕೊಡಲಾಗುತ್ತಿತ್ತು. ಹಿರಿಯ ವಿದ್ಯಾರ್ಥಿಗಳು ತಮ್ಮ ಕಿರಿಯ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವುದು ಒಂದು ವಿಶೇಷವಾಗಿತ್ತು. ತಂದೆ- ತಾಯಿಯರೆ ಕೆಲವೊಮ್ಮೆ ಮನೆಯಲ್ಲಿ ಮಕ್ಕಳಿಗೆ ತಿದ್ದಿ, ತೀಡಿ ಕಲಿಸಿದ ನಿದರ್ಶನಗಳುಂಟು. ಇಲ್ಲಿ ಕಲಿಸುವ ರೀತಿ ಅತ್ಯಂತ ಪರಿಣಾಮಕಾರಿಯೂ, ಸರಳವೂ ಆದುದಾಗಿತ್ತು. ಇದನ್ನು ಕಂಡು ಮುಂಬಯಿ ಸರಕಾರದ ಹಿರಿಯ ಅಧಿಕಾರಿಗಳಲ್ಲಿ ಒಬ್ಬರಾದ ಜಿ. ಎಲ್. ಪೆಂಡರಗಾಸ್ಟ ಎಂಬುವವರು '' ಇಲ್ಲಿಯ ಶಾಲೆಗಳಲ್ಲಿ ಓದು, ಬರಹ- ಈ ಪ್ರಾಥಮಿಕ ವಿಷಯಗಳನ್ನು ಹೆಚ್ಚಿನ ವೆಚ್ಚವಿಲ್ಲದೆ ಕಲಿಸಲಾಗುತ್ತದೆ. ಸಾಮಾನ್ಯ ರೈತರು, ವ್ಯಾಪಾರಿಗಳು ಲೆಕ್ಕದಲ್ಲಿ ಇಷ್ಟೊಂದು ಚಾಕಚಕ್ಯತೆಯಿಂದ ವ್ಯವಹರಿಸುತ್ತಾರಲ್ಲ, ಅದೇ ಮಟ್ಟದ ನಮ್ಮ ದೇಶದ ಜನರಿಗಿಂತ ಇವರು ಈ ವಿಷಯದಲ್ಲಿ ಮೇಲುಗೈ ಪಡೆದವರೆಂದೇ ಹೇಳಬೇಕು''[೪೦] ಎಂದು(೧೮೨೧) ಉದ್ಗಾರವೆತ್ತಿದ್ದಾರೆ.

ಅಂದಿನ ಇಂತಹ ಪರಿಸರವನ್ನು ಗಮನಿಸಿದಾಗ, ಪರಂಪರಾಗತ ನಮ್ಮ ಶಿಕ್ಷಣ ಪದ್ಧತಿ ಹೇಗಿತ್ತು? ಎಂಬುದನ್ನು ಸ್ಥೂಲವಾಗಿಯಾದರೂ ನೋಡುವುದು ಅವಶ್ಯಕವೆನಿಸುತ್ತದೆ. ಏಕೆಂದರೆ,ಶಿಕ್ಷಣ ಕ್ಷೇತ್ರದಲ್ಲಿ ಇಷ್ಟೊಂದು ಸ್ಥಿತ್ಯಂತರಗಳು ನಡೆದಿರುವಾಗ, ಕನ್ನಡ ಜನ ಸಂಪೂರ್ಣವಾಗಿ ಈ ದಿಸೆಯಲ್ಲಿ ನಿಷ್ಕ್ರಿಯರಾಗಿದ್ದರೆ, ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ತಪೋವನ, ಘಟಿಕಾಸ್ಥಾನ, ಮಠ, ದೇವಾಲಯ, ಗುರುಗೃಹ , ಪಾಠಶಾಲೆ ಇವುಗಳ ಮೂಲಕ ಪ್ರಾಚೀನ ಕರ್ನಾಟಕದ ಜನತೆ ಶಿಕ್ಷಣ ಪಡೆಯುತ್ತಿದ್ದರೆಂಬುದಕ್ಕೆ ಘಟಿಕಾಸ್ಥಾನ ಮೊದಲಾದ ವ್ಯವಸ್ಥೆಯಲ್ಲಿ ಪ್ರೌಢ ಶಿಕ್ಷಣ ನಡೆಯುತ್ತಿತ್ತೇ ಹೊರತು, ಪ್ರಾಥಮಿಕ ಶಿಕ್ಷಣ ಮಠ- ಮಂದಿರಗಳಲ್ಲಿ ಜರುಗುತ್ತಲಿತ್ತು. 'ಮಠಛಾತ್ರಾದಿನಿಲಯಂ ' ಎಂಬ ಅಮರಕೋಶದ ಹೇಳಿಕೆ ವಿದ್ಯಾರ್ಥಿಗಳು ಓದುತ್ತಿದ್ದ ಕೇಂದ್ರವೇ ಮಠವೆಂದು ಸ್ಪಷ್ಟಪಡಿಸುತ್ತದೆ. ಬಹುಶಃ ಮಠದ ಮೂಲ ಪರಿಕಲ್ಪನೆಯೇ ವಿದ್ಯಾದಾನ, ವಿದ್ಯಾಪ್ರಸಾರವಾಗಿದ್ದು ಅಲ್ಲಿ ಕ್ರಮೇಣ ಪುರೋಹಿತಶಾಹಿ ಬಲಿಷ್ಟವಾಗಿ ರಬೇಕೆನ್ನಿಸುತ್ತದೆ. ಅದೇನೆ ಇದ್ದರೂ, ಕನ್ನಡ ಪ್ರಾಥಮಿಕ ಶಿಕ್ಷಣಕ್ಕೆ ಬಂದರೆ ವೀರಶೈವ ಮಠಗಳು ಈ ಕಡೆಗೆ ಹೆಚ್ಚು ಗಮನಕೊಟ್ಟದ್ದು ಕಂಡುಬರುತ್ತದೆ. ಕರ್ನಾಟಕದಲ್ಲಿ ಅದೂ ಧಾರವಾಡ ಹಾಗೂ ಹಾವೇರಿ ಜಿಲ್ಲೆಯ ಕುಂದಗೋಳ, ಸಂಶಿ, ಗುಡಗೇರಿ, ಸವಣೂರು, ಹತ್ತಿಮತ್ತೂರ ಮುಂತಾದ ಊರುಗಳಲ್ಲಿ ಇಂತಹ ವಿದ್ಯಾಲಯಗಳಿದ್ದ ಬಗ್ಗೆ ಮಾಹಿತಿ ಸಿಗುತ್ತದೆ. ಯಥಾಶಕ್ತಿ ಶಿಕ್ಷಣ ನೀಡುವ

ಕಾರ್ಯವನ್ನು ಇವು ಮಾಡುತ್ತಲೇ ಇದ್ದವು. ಅವುಗಳಿಗೆ ಅಯ್ಯನವರ ಶಾಲೆಗಳೆಂದು ಕರೆಯುತ್ತಿದ್ದರು. ಅವು ವಿಶೇಷವಾಗಿ ಮಠಗಳಲ್ಲಿ ನಡೆಯುತ್ತಿದ್ದರಿಂದ, ಅವುಗಳಿಗೆ 'ಸಾಲಿಮಠ' ಗಳೆಂದು ಕರೆಯುತ್ತಿದ್ದರು. ಇಂಥದರಲ್ಲಿ ವಿದ್ಯಾಬೋಧನೆ ಮಾಡುತ್ತಿದ್ದವರನ್ನು ಗುರು, ಅಯ್ಯನವರು, ಎಂದು ಕರೆಯುವ ರೂಢಿ ಇತ್ತು. ಶಾಲೆಗಳನ್ನು ನಡೆಸುತ್ತಿದ್ದವರಿಗೆ 'ಸಾಲಿ' ಎಂದು ಅಡ್ಡ ಹೆಸರು ಬರುತ್ತಿತ್ತು.

ಈ ಮಠಗಳು ನಮ್ಮ ನಾಡಿನ ಶಿಕ್ಷಣ ಸಂಸ್ಕೃತಿಗಳ ಬೆನ್ನೆಲುಬುಗಳಾಗಿದ್ದವು. ಇಲ್ಲಿಯ ಬೋಧಕರು ಅಷ್ಟೊಂದು ವಿದ್ವಾಂಸರಾಗಿರದಿದ್ದರೂ ಅಗತ್ಯಕ್ಕೆ ತಕ್ಕಷ್ಟು ಓದಿಕೊಂಡವರಾಗಿದ್ದರು. ಜನರನ್ನು ತಮ್ಮೆಡೆಗೆ ಸೆಳೆಯಲು ಇದರಿಂದ ಅಯ್ಯನವರಿಗೆ ತುಂಬಾ ಅನುಕೂಲವಾಗಿತ್ತೆಂಬುದೂ ಅಷ್ಟೇ ನಿಜ. ಇಂತಹ ಶಾಲೆಗಳಲ್ಲಿ ಓದು, ಬರಹ, ಗಣಿತ ವಿಷಯಗಳನ್ನು ಕಲಿಸುತ್ತಾ ಹೆಚ್ಚಿನ ಗಮನವನ್ನು ಸುಂದರ ಹಾಗೂ ಸ್ಪಷ್ಟ ಅಕ್ಷರಗಳನ್ನು ಬರೆಯಲು ಕೊಡುತ್ತಿದ್ದರು. ಹೀಗೆ ಶಿಕ್ಷಣ ಪದ್ಧತಿ ಸಾಗಿ ಬರುವಾಗ ಮರಾಠಿ ಪ್ರಭಾವದಿಂದಾಗಿ ಆ ಭಾಷೆಯ ಬೋಧೆ ಇಲ್ಲಿ ಪ್ರಾರಂಬವಾಯಿತು. ಶಿಕ್ಷಕರಿಗೆ 'ಪಂತೋಜಿ ಗಳೆನ್ನುತ್ತಿದ್ದರು. ಮುಂದೆ ಕನ್ನಡ ಬೋಧಕರಿಗೂ 'ಪಂತೋಜಿ'ಗಳೆಂದು ಕರೆಯುವುದು ರೂಢಿಯಾಯಿತು. ಮಠದ ಅಯ್ಯನವರ ಶಾಲೆಗಳಲ್ಲದೇ ಅಕ್ಷರ ಜೀವಿಗಳಾಗಿ ಕೆಲವರು ಸಾರ್ವಜನಿಕ ರೂಪದ ಶಾಲೆಗಳನ್ನು ನಡೆಸುತ್ತಿದ್ದರು. ಇವುಗಳಿಗೆ ಗಾಂವಟಿ ಶಾಲೆಗಳೆನ್ನುತ್ತಿದ್ದರು. ಈ ಶಿಕ್ಷಣ ಕ್ರಮದಲ್ಲಿ ಧೂಳಾಕ್ಷರ, ಬಿಡಿ ಅಕ್ಷರ, ದೊಡ್ಡ ಅಕ್ಷರಗಳನ್ನು ಕಲಿಸುವುದರ ಜೊತೆಗೆ ಧಾರ್ಮಿಕ ಶಿಕ್ಷಣವನ್ನು ನೀಡಲಾಗುತ್ತಿತ್ತು. ಸಾರ್ವಜನಿಕವಾಗಿ ಕನ್ನಡ ಮಾಧ್ಯಮದಲ್ಲಿ ಪುರಾಣ, ಶಿವಕೀರ್ತನ''ಪ್ರವಚನಗಳನ್ನು ಹಮ್ಮಿಕೊಳ್ಳುವುದರ ಮೂಲಕ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ 'ಸಾಲಿಮಠ'ಗಳನ್ನು ನಡೆಸುವ ಮೂಲಕ ಕನ್ನಡ ಭಾಷೆಯನ್ನು ರಕ್ಷಿಸಿಕೊಂಡು ಬಂದ ಶ್ರೇಯಸ್ಸು ಈ ಭಾಗದ ವೀರಶೈವ ಸಮಾಜಕ್ಕೆ ಸಲ್ಲುತ್ತದೆ.

ಅಂತಹ ವಿಷಮ ಪರಿಸ್ಥಿತಿಯಲ್ಲಿ ಕನ್ನಡ ಭಾಷೆಯನ್ನು ಕಾಪಾಡಿಕೊಂಡು ಬಂದ ಸ್ಮರಣೀಯ ಕಾರ್ಯವನ್ನು ವೀರಶೈವ ಸಮಾಜ ಮಾಡಿತೆಂಬುದು ಎದ್ದು ಕಾಣುತ್ತದೆ. ಈ ನಿಷ್ಠೆ 'ಕನ್ನಡ ಭಾಷೆ' ಜೀವ ಹಿಡಿದುಕೊಂಡಿರಲು ಆಶ್ರಯವಾಗಿತ್ತೇ ವಿನ: ಅನ್ಯ ಭಾಷಾ ದಬ್ಬಾಳಿಕೆಯನ್ನು ಮುರಿದು ಮೇಲೇಳುವಷ್ಟು ಸಶಕ್ತವಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಬ್ರಿಟಿಷರು ಸಾಕಷ್ಟು ದೂರಾನ್ವಯ ದೃಷ್ಟಿಯಿಂದ ಶಿಕ್ಷಣ ಪ್ರಸಾರಕ್ಕೆ ಕೈ ಹಾಕಿದರು. ಬ್ರಿಟಿಷರ ಶೈಕ್ಷಣಿಕ ಉದ್ದೇಶವು ಮತಪ್ರಚಾರ ಮತ್ತು ಭಾರತೀಯರನ್ನು ಮತಾಂತರಗೊಳಿಸುವ ಒಳಸಂಚಿನಿಂದ ಕೂಡಿದ್ದಿತು. ಹೀಗಾಗಿ, ಈ ಶಾಲೆಗಳಲ್ಲಿ ಬೋಧಿಸುತ್ತಿದ್ದ ಹೆಚ್ಚಿನ ವಿಷಯಗಳು ಪಾಶ್ಚಾತ್ಯ ಸಂಸ್ಕೃತಿಗೆ ಸಂಬಂಧಪಟ್ಟವುಗಳಾಗಿದ್ದವು. ಬ್ರಿಟಿಷರ ಶಿಕ್ಷಣ ನೀತಿಯ ಹಿಂದೆ, ದೇಶದ ಜನರ ದೊಂಬಿ

ಮನೋಭಾವವನ್ನು ಕಡಿಮೆ ಮಾಡುವ ರಾಜಕೀಯ ಪ್ರೇರಿತ ದೃಷ್ಟಿ ಅಡಕವಾಗಿದ್ದಂತೆ ತೋರುತ್ತದೆ. ಆದರೆ, ಇವೆಲ್ಲಕ್ಕಿಂತ ಗಂಭೀರವಾದ ಸಮಸ್ಯೆಗಳು ಬೇರೆಯೇ ಆಗಿದ್ದವು. ಶಿಕ್ಷಣವು ಹೆಚ್ಚು ವ್ಯಾಪಕವಾಗಿರದೆ ಕೆಲವರಿಗೆ ಮಾತ್ರ ಪ್ರಯೋಜನ ಲಭಿಸುವಂತಾಗಿತ್ತು.

ಕೆಲವು ಅಧಿಕಾರಿಗಳ ಕಾರ್ಯಾಸಕ್ತಿಗಳೂ ಒಂದು ನಿರ್ದಿಷ್ಟ ಸ್ವರೂಪ ಪಡೆಯಲು ಹಾತೊರೆಯುತ್ತಿದ್ದರೂ, ಧಾರವಾಡದಂತಹ ಸಂಪೂರ್ಣ ಕನ್ನಡ ಭಾಷಾ ಪ್ರದೇಶದಲ್ಲಿ ಸರಕಾರವು ೧೮೨೬ ರಲ್ಲಿ ಮೊದಲಿಗೆ ಒಂದು ಮರಾಠಿ ಶಾಲೆಯನ್ನು ಪ್ರಾರಂಭಿಸಿತು. ಕ್ರಿ.ಶ. ೧೮೫೪-೫೫ ರಿಂದ ಇಡೀ ದೇಶದಲ್ಲಿ ಸಮಾನವಾಗಿ ಅನ್ವಯಿಸುವಂತಹ ಏಕರೂಪದ ಶಿಕ್ಷಣ ಯೋಜನೆಯು ಸಿದ್ಧವಾಯಿತು. ಶಿಕ್ಷಣದ ಆಗು ಹೋಗುಗಳನ್ನು ನೋಡಿಕೊಳ್ಳಲು "Department of Public Instruction" ಇಲಾಖೆಯು ಪ್ರತಿಯೊಂದು ಪ್ರಾಂತದಲ್ಲಿಯೂ ಹುಟ್ಟಿಕೊಂಡವು. ಇಲ್ಲಿಂದ ಮುಂದೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚ ಎಂಬ ಶಿಕ್ಷಣದ ಹಂತಗಳು ಸ್ಪಷ್ಟವಾಗಿ ಗೋಚರಿಸಿದವು. ಡೆಕ್ಕನ್ನಿನ ಭಾಗದಿಂದ ಧಾರವಾಡ, ಬೆಳಗಾವಿ ಜಿಲ್ಲೆಗಳನ್ನು ಪ್ರತ್ಯೇಕಿಸಿ ದಕ್ಷಿಣ ಭಾಗವೆಂಬ ವಿಭಾಗವನ್ನು ಸೃಷ್ಟಿಸಲಾಯಿತು. ಹೀಗೆ, ಧಾರವಾಡ, ಬೆಳಗಾವಿ, ಕಾರವಾರ ಮತ್ತು ಬಿಜಾಪೂರ ಜಿಲ್ಲೆಗಳನ್ನೊಳಗೊಂಡ ಮುಂಬಯಿ ಕರ್ನಾಟಕವು ರಚನೆಗೊಂಡಿತು. ಇದು ಕನ್ನಡಿಗರ ಪಾಲಿಗೆ ಒಂದು ಅತ್ಯಂತ ಅನುಕೂಲಕರ ಬೆಳವಣಿಗೆಯಾಯಿತು. ಈ ನೆಲದ ಭಾಷೆ ಮರಾಠಿ ಅಲ್ಲ, ಕನ್ನಡವೆಂದು ಬ್ರಿಟಿಷ್ ಅಧಿಕಾರಿಗಳಿಗೆ ಮನವರಿಕೆಯಾಗಿತ್ತು. ಭಾಷೆಯ ವಿಷಯದಲ್ಲಿ ದಮನಕಾರಿ ಪ್ರವೃತ್ತಿಯನ್ನು ಅನುಸರಿಸಿಕೊಂಡು ಮುಂದುವರೆಯುವುದು ಆಳದಲ್ಲಿ ಅವರಿಗೆ ಸಾಧುವಾದುದೆನಿಸಲಿಲ್ಲ. ಹೀಗಾಗಿ ಕನ್ನಡದ ಪುನರುಜ್ಜೀವನದ ನಿಟ್ಟಿನಲ್ಲಿ ಅವರ ಹಲವು ಆಲೋಚನೆಗಳು ಪ್ರವೃತ್ತವಾದವು.

ಟಿಪ್ಪಣಿಗಳು :

೧. ಕೃಷ್ಣಾರಾವ್ ಎಂ.ವ್ಹಿ. ಮತ್ತು ಕೇಶವ ಭಟ್. ಎಂ. 'ಕರ್ನಾಟಕ ಇತಿಹಾಸ ದರ್ಶನ' ಸಹಕಾರಿ ಪ್ರಕಾಶನ ಬೆಂಗಳೂರು, ೧೯೭೦ ಪುಟ-೬.

೨. ಕರಮರಕರ ಡಿ.ಪಿ. 'ಕಲ್ಚರಲ್ ಹಿಸ್ಟರಿ ಆಫ್ ಕರ್ನಾಟಕ', ಕ.ವಿ.ವಿ ಸಂಘ ಧಾರವಾಡ, ೧೯೪೭ ಪುಟ-೪.

೩. ಕಟ್ಟಿ ವೆಂಕಟರಂಗೊ, 'ಗ್ಯಾಜಟಿಯರ್ ಆಫ್ ಬಾಂಬೆ ಕರ್ನಾಟಕ', ಗೌರ್ನಮೆಂಟ ಸೆಂಟ್ರಲ್ ಪ್ರೆಸ್ ಬಾಂಬೆ, ೧೮೯೩ ಪುಟ-೩೧೫.

೪. 'ಗ್ಯಾಜಟಿಯರ್ ಆಫ್ ಬಾಂಬೆ ಸ್ಟೇಟ್- ಧಾರವಾಡ ಡಿಸ್ಟ್ರಿಕ್ಟ್ (ರಿವೈಸ್ಡ ಎಡಿಶನ್) ವ್ಹಾಲ್ಯೂಮ್-೨೨, ಆಫ್ ದಿ ಓರಿಜಿನಲ್ ಗ್ಯಾಜಟಿಯರ್ ಆಫ್ ದಿ ಬಾಂಬೆ ಪ್ರೆಸಿಡೆನ್ಸಿ, ರಿಲೆಟಿಂಗ್ ಟು ಧಾರವಾಡ', ಗೌರ್ನಮೆಂಟ ಸೆಂಟ್ರಲ್ ಪ್ರೆಸ್ ಬಾಂಬೆ, ೧೯೫೯ ಪುಟ-೫೩.

೫. 'ಗ್ಯಾಜಟಿಯರ್ ಆಫ್ ದಿ ಬಾಂಬೆ ಪ್ರೆಸಿಡೆನ್ಸಿ', ವ್ಹಾಲ್ಯೂಮ್-೧೫, ಪಾರ್ಟ್ ೨ ಕೆನರಾ', ಗೌರ್ನಮೆಂಟ ಸೆಂಟ್ರಲ್ ಪ್ರೆಸ್ ಬಾಂಬೆ, ೧೮೮೩ ಪುಟ-೭೭.

೬. ಗ್ಯಾಜಟಿಯರ್ ಆಫ್ ಮೈಸೂರ ಬಿಜಾಪೂರ ಡಿಸ್ಟ್ರಿಕ್ಟ್', ಗೌರ್ನಮೆಂಟ ಪ್ರೆಸ್ ಬೆಂಗಳೂರು, ೧೯೬೬ ಪುಟ-೪೦.

೭. ಬೇಂದ್ರೆ. ದ.ರಾ. 'ಸಾಹಿತ್ಯ ಸಂಶೋಧನೆ' ಮನೋಹರ ಗ್ರಂಥಮಾಲೆ, ಧಾರವಾಡ, ೧೯೪೦ ಪುಟ -೧೫೬-೧೫೭.

೮. ಮುಗಳಿ ಆರ್. ಎಸ್. 'ದಿ ಹೆರಿಟೆಜ್ ಆಫ್ ಕರ್ನಾಟಕ', ಸತ್ಯ ಶೋಧನ ಪಬ್ಲಿಷಿಂಗ್ ಹೌಸ್, ೧೯೪೬ ಪುಟ-೧೮.

೯. 'ಕರ್ನಾಟಕ ಪ್ರೊವಿನ್ಸಿಯಲ್ ಕಾಂಗ್ರೆಸ್ ಕಮೀಟಿ, ಕರ್ನಾಟಕ ಹ್ಯಾಂಡ್ ಬುಕ್' ಎಡಿಟೋರಿಯಲ್ ಬೋರ್ಡ ಕೆ.ಪಿ.ಸಿ.ಸಿ. ಪಬ್ಲಿಕೇಷನ್ ಬೆಂಗಳೂರು, ಪು-೧೫.

೧೦. ಶ್ರೀಕಂಠ ಶಾಸ್ತ್ರಿ ಎಸ್. 'ಸೋರ್ಸಿಸ್ ಆಫ್ ಕರ್ನಾಟಕ ಹಿಸ್ಟರಿ', ವ್ಹಾಲ್ಯೂಮ್-೧, ಯುನಿವರ್ಸಿಟಿ ಆಫ್ ಮೈಸೂರ, ೧೯೪೦ ಪುಟ-೮.

೧೧. ಟಿಪ್ಪಣಿ ೯ ರಲ್ಲಿದ್ದಂತೆ ಪುಟ-೨೪

೧೨. ಟಿಪ್ಪಣಿ ೮ ರಲ್ಲಿದ್ದಂತೆ ಪುಟ-೪೭

೧೩. 'ಇಂಪೀರಿಯಲ್ ಗ್ಯಾಜಿಟಿಯರ್ ಆಫ್ ಇಂಡಿಯಾ', ವ್ಯಾಲ್ಯೂಮ್-೭, ಆಕ್ಸ್‌ಫರ್ಡ್ ಕ್ಲಾರೆಂಡನ್ ಪ್ರೆಸ್ ೧೯೦೮ ಪುಟ-೧೪೫.

೧೪. ಟಿಪ್ಪಣಿ ೧೦ ರಲ್ಲಿದ್ದಂತೆ ಪುಟ-೪೮

೧೫. ಸ್ಟೋಕ್ಸ್ ಎಚ್.ಜೆ. ' ಆ್ಯನ್ ಹಿಸ್ಟೋರಿಕಲ್ ಅಕೌಂಟ್ ಆಫ್ ದಿ ಬೆಳಗಾಂ ಡಿಸ್ಟ್ರಿಕ್ಟ್ ಇನ್ ದಿ ಬಾಂಬೆ ಪ್ರೆಸಿಡೆನ್ಸಿ', ಎಜುಕೇಷನಲ್ ಸೊಸೈಟಿಸ್ ಪ್ರೆಸ್ ಬಾಂಬೆ, ೧೮೭೦ ಪುಟ-೨.

೧೬. ಅದೇ - ಪುಟ -೬೧

೧೭. ಟಿಪ್ಪಣಿ ೪ ರಲ್ಲಿದ್ದಂತೆ ಪುಟ- ೬೮

೧೮. ಅದೇ - ಪುಟ -೭೨

೧೯. ಟಿಪ್ಪಣಿ ೧೫ ರಲ್ಲಿದ್ದಂತೆ ಪುಟ-೯

೨೦. ಅದೇ - ಪುಟ -೨೩

೨೧. ಟಿಪ್ಪಣಿ ೪ ರಲ್ಲಿದ್ದಂತೆ ಪುಟ- ೮೨

೨೨. ವೆಸ್ಟ್ ಎಡ್ವರ್ಡ್ 'ಎ ಮೆಮೊರಿ ಆಫ್ ದಿ ಸ್ಟೇಟ್ಸ್ ಆಫ್ ದಿ ಸದರ್ನ್ ಮರಾಠಾ ಕಂಟ್ರಿ', ಎಜುಕೇಷನಲ್ ಸೊಸೈಟಿಸ್ ಪ್ರೆಸ್ ಬಾಂಬೆ, ೧೮೬೯ ಪುಟ-೧.

೨೩. ಟಿಪ್ಪಣಿ ೪ ರಲ್ಲಿದ್ದಂತೆ ಪುಟ - ೯೬

೨೪. ಅದೇ ಪುಟ-೯೮.

೨೫. ಕಾಮತ ಸೂರ್ಯನಾಥ 'ಕರ್ನಾಟಕತ್ವದ ಜಾಗೃತಿ' ಬೆಂಗಳೂರು ೧೯೮೧ ಪುಟ : ೨-೫

೨೬. ನಂಬೂದರಿಪ್ಪಾದ್ ಇ. ಎಂ. ಎಸ್. 'ಭಾರತದ ಚರಿತ್ರೆಯ ಸಿಂಹಾವಲೋಕನ' (ಅನು :ಮಾಧವ .ಬಿ) ಮೈಸೂರು, ೧೯೮೮ ಪುಟ- ೧೦೭

೨೭. ನಿಜಲಿಂಗಪ್ಪ ಎಸ್ 'ಕರ್ನಾಟಕ ಏಕೀಕರಣ', (ಅನು : ವಿನೀತ ರಾಮಚಂದ್ರರಾವ್) ಬೆಂಗಳೂರು, ೧೯೯೨ ಪುಟ-೫೫೧.

೨೮. ಮಂಗಳವೇಡು ಶ್ರೀನಿವಾಸರಾವ್ ಮತ್ತು ಸಂಗಮನಾರಾಯಣ 'ಕರ್ನಾಟಕ ಏಕೀಕರಣ' ಹುಬ್ಬಳ್ಳಿ ೧೯೪೬ ಪುಟ - ೪

೨೯. ದಿವಾಕರ ರಂ. ರಾ 'ಕರ್ನಾಟಕ ಏಕೀಕರಣ ಕಥೆ' ಎರಡನೇಯ ಮುದ್ರಣ ಹುಬ್ಬಳ್ಳಿ ೧೯೫೬ ಪುಟ - ೧೯

೩೦. ಮಂಗಳವೇಡು ಶ್ರೀನಿವಾಸರಾವ್ 'ಕರ್ನಾಟಕ ಏಕೀಕರಣ (ಕರ್ನಾಟಕ ದರ್ಶನ ಸಂ: ಬಿಂದು ಮಾಧವ ಬುರ್ಲಿ) ಧಾರವಾಡ ೧೯೩೭ ಪುಟ - ೫೭

೩೧. ಟಿಪ್ಪಣೆ ೪ ರಲ್ಲಿದ್ದಂತೆ ಪುಟ-೧೦೧.

೩೨. ಟಿಪ್ಪಣೆ ೫ರಲ್ಲಿದ್ದಂತೆ ಪುಟ-೧೫೨-೧೫೩..

೩೩.. ಬಾಂಬೆ: ಗ್ಯಾಜಟಿಯರ್ ಆಫ್ ದಿ ಬಾಂಬೆ ಪ್ರೆಸಿಡೆನ್ಸಿ ವ್ಯಾಲ್ಯೂಮ್-೨೨, ಧಾರವಾಡ ೧೮೮೪, ಪು-೭೬೬-೭೬೭.

೩೪. ಧಾರವಾಡಕರ ರಾ.ಯ. 'ಹೊಸ ಗನ್ನಡ ಸಾಹಿತ್ಯದ ಉದಯಕಾಲ' ಕ.ವಿ.ವಿ. ಧಾರವಾಡ, ೧೯೫೬ ಪುಟ-೭.

೩೫. ಅದೇ ಪುಟ-೭.

೩೬. ರಿಪೋರ್ಟ್ ಆಫ್ ದಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಪೆಕ್ಟರ್ ಬಾಂಬೆ, ೧೮೬೫-೬೬ ಅಪೆಂಡಿಕ್ಸ್-ಎ ಪುಟ-೪೮-೪೯-೬೨.

೩೭. ಟಿಪ್ಪಣೆ ೩೪ರಲ್ಲಿದ್ದಂತೆ ಪುಟ-೧೪.

೩೮. ಆಲೂರು ವೆಂಕಟರಾವ್, 'ಕರ್ನಾಟಕತ್ವದ ವಿಕಾಸ' ನವಜೀವನ ಗ್ರಂಥ ಭಂಡಾರ, ಧಾರವಾಡ ೧೯೫೭ ಪುಟ -೩೬-೩೭.

೩೯. ಅದೇ ಪುಟ-೧೬೫.

೪೦. ಸರ್ವೇ ಆಫ್ ಇಂಡಿಜೆನೀಸ್ ಎಜುಕೇಷನ್ ಇನ್ ದಿ ಪ್ರೊವಿನ್ಸ್ ಆಫ್ ಬಾಂಬೆ, ೧೮೨೯-೩೯, ಪುಟ-೨೧.

ಅಧ್ಯಾಯ - ೩

ಮುಂಬಯಿ - ಕರ್ನಾಟಕದ ಗಡಿನಾಡ ಪ್ರದೇಶಗಳಲ್ಲಿಯ ಕನ್ನಡಿಗರ ಶೈಕ್ಷಣಿಕ ಸ್ವರೂಪ

ಒಂದು ಪ್ರದೇಶದ ಸಮಗ್ರ ಅಧ್ಯಯನವನ್ನು ಮಾಡಲು ಸಾಕಷ್ಟು ಸಮಯ ಹಾಗೂ ಶ್ರಮ ಬೇಕಾಗುತ್ತದೆ. ಮೊದಲಿಗೆ ಅಧ್ಯಯನದ ಪ್ರದೇಶಗಳಲ್ಲಿಯ ಕನ್ನಡಿಗರ ಶೈಕ್ಷಣಿಕ ಸ್ವರೂಪವನ್ನು ಸರಿಯಾಗಿ ಗುರುತಿಸಿಕೊಳ್ಳಬೇಕು. ಅಧ್ಯಯನ ಕೇವಲ ಪ್ರಕಟಿತ ವಿಷಯಗಳನ್ನು ಮಾತ್ರ ಮೂಲಾಧಾರಗಳನ್ನು ಹೊಂದಿರುತ್ತದೆಯೊ ಅಥವಾ ಆ ವಿಷಯಗಳ ಜೊತೆಗೆ ಇನ್ನಿತರ ಹೊಸ ಅಂಶಗಳ ಸಂಶೋಧನೆಯೂ ಸೇರಿರುತ್ತದೆಯೊ ಎಂಬುದನ್ನು ಮೊದಲೇ ನಿರ್ಧರಿಸಿಕೊಳ್ಳಬೇಕು.

ಮುಖ್ಯವಾಗಿ ಈ ಮಹಾಪ್ರಬಂಧದ ಮುಂಬಯಿ-ಕರ್ನಾಟಕ ದಗಡಿನಾಡ ಪ್ರದೇಶಗಳಲ್ಲಿಯ ಕನ್ನಡಿಗರ ಶೈಕ್ಷಣಿಕ ಸ್ವರೂಪಕ್ಕೆ ಪ್ರಕಟಿತ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಪ್ರದೇಶದ ಎಲ್ಲ ಭಾಗಗಳಲ್ಲಿಯ ಹಳ್ಳಿಗಳನ್ನು ಕ್ಷೇತ್ರಕಾರ್ಯ ನಡೆಸಿ, ಆಕರಗಳನ್ನು ಸ್ವತಃ ಅಧ್ಯಯನ ಮಾಡಿರುವುದಲ್ಲದೆ, ಆ ಭಾಗದ ಹಳ್ಳಿಗಳ ಬಗೆಗೆ ಈಗಾಗಲೇ ಪ್ರಕಟಿತ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಏಕೀಕರಣ ಚಳವಳಿಯಲ್ಲಿ ಉಳಿದ ಘಟಕಗಳಿಗಿಂತ ಮುಂಬಯಿ-ಕರ್ನಾಟಕ ಘಟಕಕ್ಕೆ ಹೆಚ್ಚಿನ ಮಹತ್ವ ಇದೆ. ಏಕೆಂದರೆ ಇಂಥ ಪ್ರಕ್ರಿಯೆಗಳಿಗೆ ಆರಂಭಿಕ ಒತ್ತಡಗಳು ತೀವ್ರವಾಗಿ ಕಾಣಿಸಿಕೊಂಡದ್ದು ಈ ನೆಲದಿಂದಲೇ. ಬಹುಶಃ ಇದಕ್ಕೆ ಕಾರಣ ಅಂದು ಇಲ್ಲಿ ಏರ್ಪಟ್ಟಿದ್ದ ಸನ್ನಿವೇಶಗಳು. ಈ ಘಟಕವು ಬೆಳಗಾವಿ, ಬಿಜಾಪೂರ, ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿತ್ತು. ಅಲ್ಲದೆ ಸಣ್ಣಪುಟ್ಟ ಸಂಸ್ಥಾನಗಳಾದ ಜಮಖಂಡಿ, ಮುಧೋಳ, ಸಾಂಗ್ಲಿ, ರಾಮದುರ್ಗ ಮೊದಲಾದವು ಸಹ ಸೇರಿಕೊಂಡಿದ್ದವು.

ಕ್ರಿ.ಶ. ೧೮೧೮ ರವರೆಗೂ ಪೇಶ್ವೆಗಳ ಆಳ್ವಿಕೆಗೆ ಒಳಪಟ್ಟಿದ್ದ ಈ ಭಾಗ ಮರಾಠಿಮಯವಾಗಿ ಹೋಗಿತ್ತು. ಅಲ್ಲದೆ ಬಂಗಾಳಿ, ಗುಜರಾತಿ ಭಾಷೆಗಳು ಕನ್ನಡದ ಅನನ್ಯತೆಗೆ ತೀವ್ರ ಆತಂಕಗಳನ್ನು ಒಡ್ಡಿದ್ದವು. ಈ ಪ್ರದೇಶಗಳಿಗೆ ಪುಣೆಯು ಸರಕಾರದ ಕೇಂದ್ರ ಸ್ಥಳ. ಅಲ್ಲದೆ ಪ್ರಮುಖ ಶೈಕ್ಷಣಿಕ ಕೇಂದ್ರವೂ ಹೌದು. ಆದ್ದರಿಂದಲೇ ಅಂದಿನ ಬಹುಪಾಲು ಕನ್ನಡದ ಕವಿ ಸಾಹಿತಿ- ವಿದ್ವಾಂಸರು

ಪುಣೆ ಹಾಗೂ ಮುಂಬಯಿಗಳಲ್ಲಿ ವ್ಯಾಸಂಗ ಮಾಡಬೇಕಾಯಿತು. ಹೀಗೆ ಶಿಕ್ಷಣ ಪಡೆಯುತ್ತಿದ್ದ ಕನ್ನಡಿಗರನ್ನು 'ಕಾನಡೀ ಅಪ್ಪ' ರನ್ನಾಗಿ ನೋಡುವ ವ್ಯಂಗ್ಯ ನೋಟ ಅಲ್ಲಿ ಪ್ರಚಲಿತದಲ್ಲಿ ಇತ್ತು.[೧]

ಮುಂಬಯಿ ಕರ್ನಾಟಕದಲ್ಲಿನ ಶೈಕ್ಷಣಿಕ ಪರಿಸರ ಮೊದಲೇ ಉತ್ತಮ ಸ್ಥಿತಿಯಲ್ಲಿರಲಿಲ್ಲ. ಇದ್ದ ಸೀಮಿತ ವ್ಯವಸ್ಥೆಯಲ್ಲಿ ಮರಾಠಿಗೆ ಮೊದಲ ಸ್ಥಾನ ದೊರೆತಿತ್ತು. ಹೀಗಾಗಿ ಕನ್ನಡಿಗರಿಗೆ ತಮ್ಮ ಭಾಷಿಕ ನೆಲೆಯ ಎಚ್ಚರ ಬಂದದ್ದು ಬಹಳ ತಡವಾಗಿ. ಮುಂಬಯಿ ನಗರದಲ್ಲಿ ಶಿಕ್ಷಣ ಇಲಾಖೆ ಎಂಬುದು ಆರಂಭಗೊಂಡದ್ದೆ ಕ್ರಿ.ಶ. ೧೮೨೩. ರಲ್ಲಿ. ಇನ್ನು ಕನ್ನಡದ ಈ ಜಿಲ್ಲೆಗಳಿಗೆ ಅದು ವಿಸ್ತಾರ ಪಡೆದದ್ದು ಕ್ರಿ.ಶ.೧೮೫೬ ರಲ್ಲಿ.[೨] ಸಾರ್ವಜನಿಕವಾಗಿ ಮರಾಠಿ ಭಾಷೆಗೆ ಇಲ್ಲಿ ಹೆಚ್ಚಿನ ಗೌರವ - ಆದರಗಳು ದೊರೆತಿದ್ದವು. ಶಾಲೆಗಳಲ್ಲೂ ಮರಾಠಿಗೆ ಮಾತ್ರ ಮೊದಲ ಪ್ರಾಶಸ್ತ್ಯ. ಇಂಥ ಸನ್ನಿವೇಶಗಳಲ್ಲಿ ಕನ್ನಡಿಗರು ಮರಾಠಿಯಲ್ಲೇ ವ್ಯವಹರಿಸುವುದು ಅನಿವಾರ್ಯವಾಗಿತ್ತು. ಅಲ್ಲದೆ ಕನ್ನಡದಲ್ಲಿ ಮಾತನಾಡುವುದೇ ಅವಮಾನದ ಸಂಗತಿ ಎಂಬ ಧೋರಣೆಗಳು ಸಹ ಹುಟ್ಟಿಕೊಂಡಿದ್ದವು. ಈ ಹಿನ್ನೆಲೆಯಲ್ಲಿ ಭೀ.ಗು.ಕುಲಕರ್ಣಿ ಅವರು ಆಡಿರುವ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು.

> ''ದೇಶದಲ್ಲಿದ್ದ ಪ್ರತಿಕೂಲ ವಾತಾವರಣ ಕನ್ನಡ ನಾಡನ್ನೂ ಬಿಟ್ಟಿರಲಿಲ್ಲ. ಮಹಾರಾಷ್ಟ್ರಾಧಿಪತ್ಯಕ್ಕೊಳಗೊಂಡಿದ್ದ ಉತ್ತರ ಕರ್ನಾಟಕದ ಭಾಗವೆಲ್ಲ ಮರಾಠಿಯ ದಟ್ಟ ಛಾಯೆಗೆ ಒಳಗಾಗಿತ್ತು. ಬ್ರಿಟಿಷ್ ಆಳರಸರಿಗೆ ಈ ನಾಡಿನ ಭಾಷೆ ಮರಾಠಿಯೇ ಎಂಬ ಭ್ರಮೆ ಹಿಡಿದಿತ್ತು. ಸುಶಿಕ್ಷಿತರಲ್ಲಿ ಮರಾಠಿ ಬರೆಯುವುದು, ಮಾತನಾಡುವುದು, ಗೌರವದ ವಿಷಯ ವೆನ್ನಿಸಿತ್ತು. ಕನ್ನಡ ಭಾಷೆ ಮತ್ತು ಸಂಸ್ಕೃತಿಗಳು ಅಜ್ಞಾತವಾಸಕ್ಕೆ ಸಂದಂತಾಗಿದ್ದವು. ಅದೊಂದು ಪರಭಾಷೆಯ ಮೋಹಪಾಶದಲ್ಲಿ ಸಿಲುಕಿ ಬಿದ್ದ ವಿಸ್ಮೃತಿಯ ಪರಿಸ್ಥಿತಿ.[೩]

ಕ್ರಿ.ಶ. ೧೮೬೧ರ ವೇಳೆಗೆ ಡೆಪ್ಯೂಟಿ ಎಜ್ಯುಕೇಶನ್ ಇನ್ಸ್‌ಪೆಕ್ಟರ್‌ರಾಗಿ ಚೆನ್ನಬಸಪ್ಪ ಅವರು ಬೆಳಗಾವಿಗೆ ಬಂದರು. ಅನಂತರವೇ ಅಲ್ಲಿ ಕನ್ನಡವನ್ನು ಹುಟ್ಟುಹಾಕುವ ಚಟುವಟಿಕೆಗಳು ಆರಂಭಗೊಂಡದ್ದು. ಇವರು ಕಡ್ಡಾಯವಾಗಿ ಕನ್ನಡವನ್ನು ಕಲಿಸಲು ಕ್ರಮ ತೆಗೆದುಕೊಂಡರು. ಅಲ್ಲದೆ ಎಲ್ಲ ಬಗೆಯ ಸಾರ್ವಜನಿಕ ವ್ಯವಹಾರಗಳು ಕನ್ನಡದಲ್ಲೇ ಎಂಬುದರ ಬಗೆಗೂ ಸಹ.[೪]

ಕ್ರಿ.ಶ. ೧೮೬೫ ರ ವೇಳೆಗೆ ಡಬ್ಲ್ಯೂ. ಎ. ರಸೆಲ್ ಎಂಬ ಬ್ರಿಟಿಷ್ ಅಧಿಕಾರಿಯನ್ನು ದಕ್ಷಿಣ ಭಾಗದ ವಿದ್ಯಾಧಿಕಾರಿಯನ್ನಾಗಿ ನೇಮಕ ಮಾಡಲಾಯಿತು. ಇಲ್ಲಿನ ಮರಾಠಿ ಪ್ರಭಾವವನ್ನು ಚೆನ್ನಾಗಿ ಅರಿತಿದ್ದ ಅವರು ಕ್ರಮೇಣ ಸ್ಥಳೀಯ ಭಾಷೆ 'ಕನ್ನಡ' ಎಂಬುದನ್ನು ತಿಳಿದು ಅಚ್ಚರಿಪಟ್ಟರು. ರಸೆಲ್

ಆ ಹೊತ್ತಿನ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ತನ್ನ ವಾರ್ಷಿಕ ವರದಿಯಲ್ಲಿ-

> "The Deputy Inspectors and English Masters in this division are none of them canarese and there are very few kanarese men even among the vernacular school masters in the Districts. The kanarese language has never been taught or cultivated in this division as the Gujarati or Marathi theirs.. the indifference of the kanarese people in general to schools in which the books and teachers are mostly Marathi can hardly bewondered at"[೫]

ಎಂದು ಬರೆದಿದ್ದಾನೆ. ಶಿಕ್ಷಣ ಇಲಾಖೆಯಲ್ಲಿ ಭಾಷಿಕ ಅಸಮಾಧಾನ ಹೆಚ್ಚಿನ ಪ್ರಮಾಣದಲ್ಲಿ ಇದ್ದಿತು. ಕನ್ನಡ ಶಾಲೆಗಳಲ್ಲಿ ಮರಾಠಿ ಹಾಗೂ ಕನ್ನಡ ಶಿಕ್ಷಕರುಗಳಿಗೆ ಸಂಘರ್ಷಗಳು ಆಗುತ್ತಿದ್ದುದರ ಬಗ್ಗೆ ದಾಖಲೆಗಳು ದೊರೆಯುತ್ತವೆ.[೬] ಇಂಥ ಪರಿಸರದಲ್ಲಿ ರಸೆಲ್, ಚೆನ್ನಬಸಪ್ಪ ಅವರುಗಳ ಜವಾಬ್ದಾರಿ ಹಾಗೂ ಚಟುವಟಿಕೆಗಳು ಗಮನಾರ್ಹವಾಗಿವೆ. ಅಲ್ಲದೆ ರೊದ್ದ ಶ್ರೀನಿವಾಸರಾವ್, ವೆಂಕಟರಂಗೋಕಟ್ಟಿ, ಧೊಂಡೋ ನರಸಿಂಹ ಮುಳಬಾಗಿಲ, ರಾ. ಹ. ದೇಶಪಾಂಡೆ , ಹುಯಿಳಗೋಳ ಭುಜಂಗರಾವ್, ತುರಮುರಿ, ಚುರಮುರಿ ಮೊದಲಾದವರುಗಳ ಕೆಲಸಗಳು ಮೇಲಿನ ಮಾತಿಗೆ ಹೊರತಲ್ಲ.

ಮುಂಬಯಿ-ಕರ್ನಾಟಕದಲ್ಲಿ 'ಮಹಾರಾಷ್ಟ್ರೀಗರು' ತಮ್ಮ ಮರಾಠಿ ಭಾಷೆಯನ್ನು ಕನ್ನಡಿಗರ ಮೇಲೆ ಹೇರುವ ಪ್ರಯತ್ನಗಳನ್ನು ಮಾಡುತ್ತಿದ್ದರು. ಇವರದು 'ಮಹಾಂಚೆ ರಾಷ್ಟ್ರ' (ಅಂದರೆ 'ಮಹಾರಾಷ್ಟ್ರ') ಎಂಬ ಧೋರಣೆ.[೭] ಈ ರೀತಿಯ ಧೋರಣೆಗಳಿಂದಲೇ ಅಂದಿನ ಕನ್ನಡ ಪ್ರದೇಶಗಳು 'ಮುಂಬಯಿ ಕರ್ನಾಟಕ,' 'ದಕ್ಷಿಣ ಮಹಾರಾಷ್ಟ್ರ' ಎಂದೆಲ್ಲಾ ಕರೆಸಿಕೊಂಡದ್ದು. ಕ್ರಿ.ಶ. ೧೮೪೪ ರಲ್ಲಿ ಬಾಸೆಲ್ ಮಿಷನ್ನಿನ ಹರ್ಮನ್‌ಮೋಗ್ಲಿಂಗ್ 'ದಕ್ಷಿಣ ಮಹಾರಾಷ್ಟ್ರವೆನ್ನುವ ಪ್ರದೇಶವೆಲ್ಲ ಕನ್ನಡ ನಾಡೇ ಆಗಿದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ಕನ್ನಡದ ವಿಸ್ತೃತರೂಪವನ್ನು ಗುರುತಿಸಿರುತ್ತಾನೆ.[೮] ಇವನ ಅನಂತರ , ಕ್ರಿ.ಶ.೧೮೮೨ರ ವೇಳೆಗೆ ಬಂದ ಆಂಗ್ಲ ವಿದ್ವಾಂಸ ಜೆ.ಪಿ. ಫ್ಲೀಟ್ ಸಹ ಇದೇ ರೀತಿಯ ಅಭಿಪ್ರಾಯವನ್ನು ಅಭಿವ್ಯಕ್ತಿಸಿದ್ದಾನೆ.

ಅವನು -

> "In Official language, three out of four
> Kanarese districts of this presidency,
> Viz the Belgaum, Kaladgi and Dharwad
> collectorates, are together with Kolhapur,
> Miraj and other native states, always called
> the 'Southern Maratha Country'. A more complete
> misnomer however it originated,could not well
> have been devised."[೯] ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಅಂತೆಯೇ ಈ ಭಾಗದ ರೈಲ್ವೆಯನ್ನು'' ಮದ್ರಾಸ್ ಹಾಗೂ ಸದರ್ನ್ ಮರಾಠ ರೈಲ್ವೆ'' ಎಂದು ಕರೆಯುತ್ತಿದ್ದುದು ಉಂಟು.[೧೦] ಬಹುಶಃ ಈ ಎಲ್ಲದರ ಹಿನ್ನೆಲೆಯಲ್ಲಿಯೇ ಧಾರವಾಡ ಜಿಲ್ಲೆಯನ್ನು ಕುರಿತಂತೆ ಆಲೂರು ವೆಂಕಟರಾಯರು

> ''ಪೇಶ್ವೆಯ ಕಾಲದಿಂದಲೂ ಈ ಜಿಲ್ಲೆಯ ಮುಖ್ಯ ಪಟ್ಟಣ
> ಗಳಲ್ಲಿ ಮರಾಠೀ ಬಲ್ಲವರ ಪ್ರಾಬಲ್ಯವಿತ್ತು. ಕನ್ನಡಿಗರಿಗೂ
> ಮರಾಠಿ ಕಲಿಯುವುದು ಶಿಷ್ಟಾಚಾರವಾಗಿತ್ತು. ಕನ್ನಡಿಗರಿಗೆ
> ತಮ್ಮ ಪ್ರತ್ಯೇಕ ಅಸ್ತಿತ್ವದ ಅರಿವೇ ಇರಲಿಲ್ಲ''[೧೧]

ಎಂದು ಅಭಿಪ್ರಾಯ ಪಟ್ಟಿರುವುದು.

ಈ ವಿಭಾಗಕ್ಕೆ ಮುಂಬಯಿ ಮುಖ್ಯ ಆಡಳಿತ ಕೇಂದ್ರ .ಕನ್ನಡಿಗರು ಆಡಳಿತ ವ್ಯವಹಾರಗಳಿಗಾಗಿ ಅಷ್ಟು ದೂರವನ್ನು ಕ್ರಮಿಸುವುದು ಅನಿವಾರ್ಯವಾಗಿ ಹೋಗಿತ್ತು. ಉದಾಹರಣೆಗೆ ಬಿಜಾಪೂರದವರು ಮುಂಬಯಿಗೆ ಹೋಗಬೇಕಿದ್ದಲ್ಲಿ ಅವರು ಕ್ರಮಿಸಬೇಕಾಗಿದ್ದ ಅಂತರ ಮುನ್ನೂರ ಐವತ್ತೊಂದು (೩೫೧) ಮೈಲಿಗಳು. ಅದೇ ರೀತಿ ಹುಬ್ಬಳ್ಳಿಯಿಂದ ನಾಲ್ಕು ನೂರ ಐವತ್ಮೂರು(೪೫೩) ಮೈಲಿಗಳು, ಉತ್ತರ ಕನ್ನಡದಿಂದ ನಾಲ್ಕು ನೂರು(೪೦೦) ಮೈಲಿಗಳು ಕ್ರಮಿಸಬೇಕಾಗುತ್ತಿತ್ತು. ಇವೆಲ್ಲದರ ಜೊತೆಗೆ ಕೋರ್ಟು - ಕಚೇರಿಗಳಲ್ಲಿ ವ್ಯವಹಾರಗಳೆಲ್ಲವೂ ಮರಾಠಿಯಲ್ಲೇ ನಡೆಯುತ್ತಿದ್ದವು. ಇದರಿಂದ ಕನ್ನಡಿಗರಿಗೆ ಆಗುತ್ತಿದ್ದ ತೊಂದರೆಗಳು ಬಹಳ. ಸಾರ್ವಜನಿಕ, ಧಾರ್ಮಿಕ ಅಥವಾ ಇನ್ನಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳೆಲ್ಲವೂ ಮರಾಠಿಯಲ್ಲೇ. ಬಹುಪಾಲು ವಿದ್ಯಾವಂತರು, ವಕೀಲರು ಮರಾಠಿಯಲ್ಲೇ ವ್ಯವಹರಿಸುತ್ತಿದ್ದುದರಿಂದ ಇಲ್ಲಿನ (ಧಾರವಾಡದ) ಚಳವಳಿಗಳು ಸಹ ಮರಾಠೀಮಯವಾಗಿದ್ದವು. ಈ ಸನ್ನಿವೇಶದಲ್ಲಿ ಆಲೂರು ವೆಂಕಟರಾಯರಂಥವರು ಕನ್ನಡ- ಮರಾಠಿ ಸಂಘರ್ಷಗಳನ್ನು ಮರಾಠಿ ಭಾಷಾದ್ವೇಷವನ್ನಾಗಿ

ತೆಗೆದುಕೊಳ್ಳದೆ, ಕನ್ನಡಿಗರ ಹಕ್ಕಿನ ಪ್ರಶ್ನೆಯನ್ನಾಗಿ ಅಳವಡಿಸಿಕೊಂಡರು.[೧೨] ಕನ್ನಡದ ಯುವಕರು ಪುಣೆ, ಮುಂಬಯಿಗಳಲ್ಲಿ ನೌಕರಿ ಪಡೆಯುವ ಸಲುವಾಗಿ ಮರಾಠಿ ಕಲಿಯಲೇಬೇಕಿತ್ತು. ಅಷ್ಟೇ ಅಲ್ಲದೆ ಕನ್ನಡದ ಹೆಣ್ಣು ಮಕ್ಕಳು ಮರಾಠಿ ಪ್ರದೇಶಗಳಿಗೆ ಮದುವೆಯಾಗಿ ಹೋಗಬೇಕಾದ ಸ್ಥಿತಿಗಳು ಅಂದು ಇದ್ದವು. ಇದರಿಂದ ಅವರು ಸಹ ಮರಾಠಿ ಕಲಿಯುವುದು ಅನಿವಾರ್ಯ ಆಗಿತ್ತು.[೧೩]

ಮುಂಬಯಿ- ಕರ್ನಾಟಕ:

ಮುಂಬಯಿ-ಕರ್ನಾಟಕವು ಬೆಳಗಾವಿ , ಬಿಜಾಪೂರ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳನ್ನು ಒಳಗೊಂಡಿತ್ತು. ೧೯೯೭ನೇ ಅಗಸ್ಟ್ ೧೫ರಂದು ಜಿಲ್ಲೆಗಳ ಮರುವಿಂಗಡಣೆಯಾಗಿ ಜಿಲ್ಲಾಸ್ಥಾನ ಪಡೆದ ಬಾಗಲಕೋಟ, ಗದಗ, ಹಾವೇರಿ (೫೪,೫೧೩ ಚ.ಕಿ.ಮೀ) ಜಿಲ್ಲೆಗಳ ಪ್ರದೇಶ ವ್ಯಾಪ್ತಿಯನ್ನು ಒಳಗೊಂಡಿದೆ.

ಏಕೀಕರಣಗೊಂಡಾಗ ರಾಜ್ಯದಲ್ಲಿ ಇದ್ದಂತಹ ಜಿಲ್ಲೆಗಳಲ್ಲಿ ಕೆಲವು ಅತಿದೊಡ್ಡ ಜಿಲ್ಲಾ ಕೇಂದ್ರಗಳಾಗಿದ್ದವು. ಈ ದೃಷ್ಟಿಯಿಂದ ಆಡಳಿತದ ಸ್ಥಿತಿಯು ಕೆಳಮಟ್ಟಕ್ಕೆ ಇಳಿದಿತ್ತು. ಇದಕ್ಕಾಗಿ ಹೊಸ ಜಿಲ್ಲೆಗಳನ್ನು ನಿರ್ಮಿಸಲಾಯಿತು.

ಮುಂಬಯಿ -ಕರ್ನಾಟಕದ ಜಿಲ್ಲೆಗಳು ಮತ್ತು ತಾಲೂಕುಗಳು :

ಜಿಲ್ಲೆಗಳು		ತಾಲೂಕುಗಳು
೧. ಬೆಳಗಾವಿ	೧.	ಬೆಳಗಾವಿ
	೨.	ಬೈಲಹೊಂಗಲ
	೩.	ಖಾನಾಪೂರ
	೪.	ಸವದತ್ತಿ
	೫.	ರಾಮದುರ್ಗ
	೬.	ಗೋಕಾಕ
	೭.	ಚಿಕ್ಕೋಡಿ
	೮.	ಅಥಣಿ
	೯.	ಹುಕ್ಕೇರಿ
	೧೦.	ರಾಯಬಾಗ
೨. ಬಿಜಾಪೂರ	೧೧.	ಬಿಜಾಪೂರ
	೧೨.	ಬಸವನಬಾಗೇವಾಡಿ
	೧೩.	ಇಂಡಿ
	೧೪.	ಮುದ್ದೇಬಿಹಾಳ
	೧೫.	ಸಿಂದಗಿ

೩. ಬಾಗಲಕೋಟ (ಹೊಸ ಜಿಲ್ಲೆ)	೧೬. ಬಾಗಲಕೋಟ
	೧೭. ಬಾದಾಮಿ
	೧೮. ಬೀಳಗಿ
	೧೯. ಹುನಗುಂದ
	೨೦. ಜಮಖಂಡಿ
	೨೧. ಮುಧೋಳ
೪. ಧಾರವಾಡ	೨೨. ಧಾರವಾಡ
	೨೩. ಹುಬ್ಬಳ್ಳಿ
	೨೪. ಕಲಘಟಗಿ
	೨೫. ಕುಂದಗೋಳ
	೨೬. ನವಲಗುಂದ
೫. ಗದಗ (ಹೊಸಜಿಲ್ಲೆ)	೨೭. ಗದಗ
	೨೮. ಮುಂಡರಗಿ
	೨೯. ನರಗುಂದ
	೩೦. ರೋಣ
	೩೧. ಶಿರಹಟ್ಟಿ
೬. ಉತ್ತರಕನ್ನಡ	೩೨. ಕಾರವಾರ
	೩೩. ಅಂಕೋಲ
	೩೪. ಕುಮಟಾ
	೩೫. ಹೊನ್ನಾವರ
	೩೬. ಭಟ್ಕಳ
	೩೭. ಸೂಫಾ
	೩೮. ಶಿರಸಿ
	೩೯. ಯಲ್ಲಾಪೂರ
	೪೦. ಹಳಿಯಾಳ
	೪೧. ಸಿದ್ದಾಪೂರ
	೪೨. ಮುಂಡಗೋಡ

೭. ಹಾವೇರಿ (ಹೊಸಜಿಲ್ಲೆ)

೪೩. ಹಾವೇರಿ

೪೪. ಬ್ಯಾಡಗಿ

೪೫. ಹಾನಗಲ್

೪೬. ಹಿರೇಕೆರೂರು

೪೭. ರಾಣೆಬೆನ್ನೂರು

೪೮. ಸವಣೂರು

೪೯. ಶಿಗ್ಗಾವಿ

ಬೆಳಗಾವಿ ಜಿಲ್ಲೆಯನ್ನು ಬೆಳಗಾವಿ ಮತ್ತು ಚಿಕ್ಕೋಡಿ ಎಂದು ಎರಡು ಶೈಕ್ಷಣಿಕ ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಬೆಳಗಾವಿ ಜಿಲ್ಲೆಯ ಮೂರು ತಾಲೂಕುಗಳಾದ ಬೆಳಗಾವಿ ನಗರ, ಬೆಳಗಾವಿ ಗ್ರಾಮೀಣ ಹಾಗೂ ಖಾನಾಪೂರ ಶೈಕ್ಷಣಿಕ ವಲಯಗಳು ಗಡಿ ಪ್ರದೇಶಕ್ಕೆ ಒಳಪಟ್ಟಿವೆ. ಇದಲ್ಲದೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಐದು ವಲಯಗಳಾದ ಅಥಣಿ, ಚಿಕ್ಕೋಡಿ, ನಿಪ್ಪಾಣಿ, ಹುಕ್ಕೇರಿ, ಹಾಗೂ ಕಾಗವಾಡ ಗಡಿ ಪ್ರದೇಶಕ್ಕೆ ಒಳಪಟ್ಟಿವೆ. ಇದಲ್ಲದೆ ಬಿಜಾಪೂರ ಜಿಲ್ಲೆಯ ಎರಡು ತಾಲೂಕುಗಳ ಮೂರು ಶೈಕ್ಷಣಿಕ ವಲಯಗಳಾದ ಇಂಡಿ, ಚಡಚಣ ಹಾಗೂ ಬಿಜಾಪೂರ ತಾಲೂಕು ಗಡಿ ಪ್ರದೇಶದ ಭಾಗಗಳಾಗಿವೆ. ಇದಲ್ಲದೆ ಉತ್ತರ ಕನ್ನಡ ಜಿಲ್ಲೆಯ ಎರಡು ತಾಲೂಕುಗಳಾದ ಜೋಯಿಡಾ ಹಾಗೂ ಕಾರವಾರ ತಾಲೂಕುಗಳು ಸಹ ಗಡಿ ಪ್ರದೇಶದ ಭಾಗಗಳಾಗಿವೆ.

ಗಡಿ ಪ್ರದೇಶದ ತಾಲೂಕುಗಳಲ್ಲಿ ಕೆಲವೇ ಗ್ರಾಮ/ಪಟ್ಟಣ ಪ್ರದೇಶಗಳು ಗಡಿ ವ್ಯಾಪ್ತಿಯನ್ನು ಹೊಂದಿದ್ದರೂ ಸಹ ಶೈಕ್ಷಣಿಕ ಪ್ರಗತಿಗಾಗಿ ತಾಲೂಕನ್ನು ಒಂದು ಮೂಲ ಘಟಕವನ್ನಾಗಿ ಪರಿಗಣಿಸಲಾಗಿದೆ. ಆಯಾ ತಾಲೂಕಿನ ಸ್ಥಿತಿಗತಿಗೆ ತಕ್ಕಂತೆ ಅವಶ್ಯಕವಿರುವ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ, ಮಾಹಿತಿಯನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಮುಂಬಯಿ-ಕರ್ನಾಟಕದ ಗಡಿನಾಡ ಪ್ರದೇಶಗಳಲ್ಲಿಯ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಯಾವ ರೀತಿಯ ಮನೋವೃತ್ತಿಯನ್ನು ಹೊಂದಿದ್ದಾರೆಂದು ತಿಳಿದುಕೊಳ್ಳಲಾಗಿ ಅವರು ಶಿಕ್ಷಣದ ಬಗ್ಗೆ ಆಸಕ್ತಿ ಹೊಂದಿಲ್ಲ. ಏಕೆಂದರೆ ಈ ಪ್ರದೇಶದಲ್ಲಿ ಕಡಿಮೆ ಮಟ್ಟದ ಶಿಕ್ಷಣ ಪೂರಕವಾಗಿದೆ. ಶೈಕ್ಷಣಿಕ ಯೋಜನಾಕಾರರ ನಂಬಿಕೆಗೆ ವಿರುದ್ಧವಾದ ಅಂಶವನ್ನು ಗುರುತಿಸಲಾಗಿದೆ. ಶಿಕ್ಷಣದ ಬಗ್ಗೆ ಪೋಷಕರು ಹೊಂದಿದ ಉದಾಸೀನತೆಯು ಇದ್ದರೂ, ಶಿಕ್ಷಣದ ಅವಶ್ಯಕತೆ ಇದೆ ಎಂದು ಬಹಳ ಜನರು ಹೇಳಿದ್ದಾರೆ. ಅನಕ್ಷರಸ್ಥರಾಗಿದ್ದರೆ, ದೈನಂದಿನ ಬದುಕಿನಲ್ಲಿ ಹಲವಾರು ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಎಂದು ಬಹುತೇಕರು ಹೇಳಿದ್ದಾರೆ.

ಶಿಕ್ಷಣದ ಪರಿಣಾಮ ಸಮಾಜದ ಕೆಳವರ್ಗದವರ ಮೇಲೆ ಆಗುತ್ತಿದೆ. ನಿಜವಾದ ಲಾಭ ಪಡೆಯುತ್ತಿರುವವರು ಗಡಿನಾಡಿನ ಹೊರಗೆ ಇದ್ದವರಾಗಿದ್ದಾರೆ. ಇವರ ಸಮುದಾಯಗಳ ಕೊಂಡಿಗಳು, ಸಮಾನಾಂತರ ಮತ್ತು ಮೇಲು ಮುಖವಾದ ಸಂಪರ್ಕ ಹೊಂದಬೇಕಾಗಿದೆ. ಇದರಿಂದ, ಇಲ್ಲಿಯ ಕೇಂದ್ರಿತ ಒಳತಿನ ಕಲ್ಪನೆಗಳು ಮತ್ತು ಶೈಕ್ಷಣಿಕ ಮೌಲ್ಯಗಳಿಗೆ ಸಮುದಾಯಗಳು ಪರಸ್ಪರ ಕಲಿತು ವ್ಯವಹರಿಸುವಲ್ಲಿ ದೊಡ್ಡ ತೊಡಕಾಗಿದೆ. ಅಲ್ಲಿಯ ಸತ್ಯದ ರೂಪಗಳು ಪರಿವರ್ತನೆಯಾಗಬೇಕಾದರೆ ನೀವೇನು ಬಯಸುತ್ತೀರಿ ಎಂದು ಕೇಳಲಾಗಿದೆ. ಸತ್ಯದ ಕಲ್ಪನೆಗಳಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ಗಂಭೀರವಾದ ಸಮಸ್ಯೆಗಳು ನೇರವಾಗಿ ಶಿಕ್ಷಣ ಜ್ಞಾನಕ್ಕೆ ಸಂಬಂಧಿಸಿವೆ. ಒಂದು ಕಾಲದಲ್ಲಿ ಮಾನವಿಕ ಜ್ಞಾನ ಉತ್ಪಾದನೆಯು ಏಕಮಾತ್ರ ಸೂತ್ರವಾಗಿತ್ತು. ಕಾಲಕ್ರಮೇಣ, ಅದು ಶಿಕ್ಷಣದ ಉತ್ಪಾದನೆಯ ಸೌಮ್ಯತೆಯನ್ನು ತನ್ನದಾಗಿಸಿಕೊಂಡಿತು. ವಿಜ್ಞಾನದ ಜೊತೆಗೆ ಒಂದು ಶಿಸ್ತುಬದ್ಧ ಶಾಸ್ತ್ರವಾಗಿ ಸಮಾಜಶಾಸ್ತ್ರ ವಿಭಾಗ ರೂಪುಗೊಂಡಿತು. ಸಮಾಜ ವಿಜ್ಞಾನದ ಅಡಿಯಲ್ಲಿ, ಎಲ್ಲರೂ ಜನರ ಹಾಗೂ ಅವರ ವಾತಾವರಣದ ಎಲ್ಲ ಬಗೆಯ ಶಿಕ್ಷಣ ಅರಿತುಕೊಳ್ಳಲು ಪ್ರಾರಂಭವಾಯಿತು. ಜ್ಞಾನ ಉತ್ಪಾದನೆಯ ಏಕಸ್ವಾಮ್ಯತೆ ಕ್ಷೇತ್ರಕ್ಕೆ ಶಿಕ್ಷಣದ ಸ್ಥಾನಮಾನ ಪ್ರಭಾವಿಸುತ್ತದೆ. ಇದು ಜನರ ಭೌತಿಕ ಮತ್ತು ಪ್ರಜ್ಞೆಯ ಬೆಳವಣಿಗೆಗೆ ಅಗತ್ಯವೆನ್ನುವ ಪ್ರಜ್ಞೆಯು ನೆರವಾಗುತ್ತದೆ. ಆದರೆ, ಈ ಗುರಿ ಸಾಧಿತವಾಗಿಲ್ಲ. ಸಾಮಾಜಿಕ ಶಿಕ್ಷಣದ ಸಮಸ್ಯೆಗಳಿಗೆ, ಕಾರಣಗಳನ್ನು ಆಧುನೀಕರಣ ಮತ್ತು ಹೊಸ ಪರಿಸ್ಥಿತಿಗಳಲ್ಲಿ ಗುರುತಿಸಲಾಗಿದೆ. ಯಾವ ಕಾರಣಗಳಿಂದ, ವೈಜ್ಞಾನಿಕ ವಿಧಾನ ತನ್ನ ಶ್ರೇಷ್ಠತೆಯನ್ನು ಸಾಧಿಸಿತ್ತೋ ಆ ಕಾರಣದಿಂದಲೇ, ಶಿಕ್ಷಣದಿಂದ ಕಂಡುಕೊಳ್ಳಲು ಸತ್ಯದ ದರ್ಶನ ಸಾಧ್ಯವಾಗಿದೆ. ಈ ಗಡಿನಾಡಿನ ಸಮುದಾಯಗಳ ದೃಷ್ಟಿಗಳು ರಾಜಕೀಯ ಪ್ರಶ್ನೆಗಳಿಂದ ತೀರ್ಮಾನವಾಗುತ್ತಿವೆ.

ಆಂಧ್ರ ಪ್ರದೇಶ, ತಮಿಳು ನಾಡು, ಕೇರಳ, ಗೋವಾ ರಾಜ್ಯಗಳ ಪ್ರದೇಶಗಳು ಕರ್ನಾಟಕ ರಾಜ್ಯದೊಡನೆ ಕೂಡಿದಾಗ ಗಡಿಗಳು ಕಾಣಿಸಿಕೊಳ್ಳುತ್ತವೆ. ಈ ಗಡಿ ಪ್ರದೇಶಗಳಲ್ಲಿ ಬಳಕೆಯಲ್ಲಿರುವ ಕನ್ನಡವೇ ಗಡಿನಾಡ ಕನ್ನಡವಾಗಿದೆ. ಮುಂಬಯಿ-ಕರ್ನಾಟಕದ ಗಡಿ ಪ್ರದೇಶ ಪಶ್ಚಿಮದಿಂದ ಪೂರ್ವಕ್ಕೆ ಬೆಳಗಾವಿಯಿಂದ ಬೀದರನವರೆಗೆ ಹಬ್ಬಿಕೊಂಡಿದೆ. ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿರುವ ಕೊಲ್ಲಾಪೂರ, ಸಾಂಗ್ಲಿ, ಸೊಲ್ಲಾಪೂರ, ಉಸ್ಮಾನಾಬಾದ್ ಜಿಲ್ಲೆಗಳು ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಗಳಾಗಿವೆ. ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿರುವ ಬೆಳಗಾವಿ, ಬಿಜಾಪೂರ, ಗುಲ್ಬರ್ಗಾ, ಬೀದರ ಜಿಲ್ಲೆಗಳು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿವೆ. ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿರುವ ಪ್ರದೇಶಗಳಲ್ಲಿ ಮರಾಠಿ ಆಡಳಿತ ಭಾಷೆಯಾಗಿರುವಂತೆ, ಕರ್ನಾಟಕದ ಉತ್ತರ ಭಾಗದ ಪ್ರದೇಶಗಳಲ್ಲಿ ಕನ್ನಡ ಆಡಳಿತ ಭಾಷೆಯಾಗಿರುತ್ತದೆ. ಇದರಿಂದ

ಒಂದು ಬಗೆಯ ಕನ್ನಡವೂ, ಇನ್ನೊಂದು ಬಗೆಯ ಮರಾಠಿಯೂ ಕಾಣಿಸಿಕೊಳ್ಳಲು ಕಾರಣವಾಗಿರುತ್ತದೆ. ಇವುಗಳಲ್ಲಿ ಒಂದನ್ನು ಮರಾಠಿ ಪ್ರಭಾವಿತ ಕನ್ನಡ ಎಂದು, ಇನ್ನೊಂದನ್ನು ಕನ್ನಡ ಪ್ರಭಾವಿತ ಮರಾಠಿ ಎಂದು ಕರೆಯಲಾಗುತ್ತದೆ.

ಅನ್ಯ ಭಾಷೆಗಳ ಪ್ರಭಾವ ಒಂದು ಭಾಷಾ ಕ್ಷೇತ್ರದ ಜನರ ಮೇಲೆ ಒಂದೇ ಬಗೆಯಲ್ಲಿ ಉಂಟಾಗುತ್ತಿಲ್ಲ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ, ವಿದ್ಯಾವಂತರಲ್ಲಿ ಮತ್ತು ಅವಿದ್ಯಾವಂತರಲ್ಲಿ ಶೈಕ್ಷಣಿಕ ಪ್ರಭಾವದ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಈ ವ್ಯತ್ಯಾಸವನ್ನು ಸಂದರ್ಭಕ್ಕೆ ತಕ್ಕಂತೆ ಗಮನಿಸಲಾಗಿದೆ. ಮಾತೃಭಾಷೆಯುಳ್ಳವರು, ಅನ್ಯ ಭಾಷೆಗಳ ಪದಪ್ರಯೋಗಗಳ ಆಧಾರದ ಮೇಲೆ ಅನ್ಯ ಭಾಷೆಯ ಪ್ರಭಾವದ ವ್ಯತ್ಯಾಸಗಳನ್ನು ಗುರುತಿಸಿಕೊಳ್ಳುವುದು ಸೂಕ್ತವೆನಿಸಿದೆ. ಮರಾಠಿಯ ಪ್ರಭಾವದಿಂದ ಹೊಸ ಹೊಸ ಧ್ವನಿಗಳು, ಅವುಗಳ ಬದಲಾವಣೆಗಳು, ಅರ್ಥ ಸಂಬಂಧಿ ಬದಲಾವಣೆಗಳು ಕಾಣಿಸುತ್ತಿವೆ. ಗಡಿನಾಡಿನಲ್ಲಿ ಸಾಮಾನ್ಯವಾಗಿ ಎರಡೂ ಭಾಷೆಗಳನ್ನು ಬಲ್ಲವರಾಗಿದ್ದಾರೆ. ಇಲ್ಲಿ ದ್ವಿಭಾಷಿಗಳ ಸಂಖ್ಯೆ ಹೆಚ್ಚಾಗಿದೆ.

ಗಡಿನಾಡಿನ ಭಾಗಗಳಲ್ಲಿಯ ಕನ್ನಡವು ೭ನೇ ಶತಮಾನದಿಂದ ಇಲ್ಲಿಯವರೆಗೆ ಒಂದೇ ಬಗೆಯಲ್ಲಿಲ್ಲ. ಇಲ್ಲಿ ಮರಾಠಿ- ಕನ್ನಡ ಬಳಕೆಯಾಗುತ್ತಿದೆ. ಮರಾಠರು ಮುಂಬಯಿ ಕರ್ನಾಟಕವನ್ನು ಬಹಳ ಕಾಲ ಆಳಿದರೂ ತಮ್ಮ ಭಾಷೆಯ ಪ್ರಭಾವವನ್ನು ಗಡಿ ಭಾಗದಲ್ಲಿ ಬಿಟ್ಟು, ಉಳಿದ ಕಡೆ ಅಷ್ಟಾಗಿ ಬೀರಲು ಸಾಧ್ಯವಾಗಲಿಲ್ಲ. ಗಡಿ ಕನ್ನಡದ ಮೇಲೆ ಉರ್ದು, ಮರಾಠಿ ಭಾಷೆಗಳು ಬೀರಿದಷ್ಟು ಪ್ರಭಾವವನ್ನು ತೆಲುಗು, ತಮಿಳು ಭಾಷೆಗಳು ಅಷ್ಟಾಗಿ ಬೀರಿಲ್ಲ. ಗೋವಾ ರಾಜ್ಯಕ್ಕೆ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಜಿಲ್ಲೆಗಳು ಆವೃತ್ತಗೊಂಡಿವೆ. ಮಹಾರಾಷ್ಟ್ರ ಮತ್ತು ಗೋವಾಗಳ ಗಡಿಯಲ್ಲಿ ಕನ್ನಡ ಭಾಷೆ ಬಳಕೆಯಲ್ಲಿದೆ. ಗೋವಾ ಗಡಿಯಲ್ಲಿ ಮರಾಠಿ ಬಳಕೆಯಲ್ಲಿರುವುದರಿಂದ, ಅಲ್ಲಿನ ಕೊಂಕಣಿ ಭಾಷೆಯಲ್ಲಿ ಮರಾಠಿ ಭಾಷೆಯ ಪ್ರಭಾವವೂ, ಕರ್ನಾಟಕದ ಗಡಿ ಭಾಗದ ಕೊಂಕಣಿಯಲ್ಲಿ ಕನ್ನಡ ಭಾಷೆಯ ಪ್ರಭಾವವೂ ಕಾಣಿಸಿಕೊಳ್ಳುತ್ತಿದೆ. ಇದನ್ನೇ ಕೊಂಕಣಿ ಪ್ರಭಾವಿತ ಕನ್ನಡ ಎನ್ನುವರು. ಇಲ್ಲಿಯ ಕನ್ನಡದಲ್ಲಿ ಕೊಂಕಣಿ ಮತ್ತು ತುಳು ಶಬ್ದಗಳು ಕಾಣಿಸಿಕೊಳ್ಳುತ್ತವೆ. 'ಗೋಮಾಂತಕ' ಎಂದು ಕರೆಯುತ್ತಿದ್ದ ಸ್ಥಳವನ್ನು ಪೋರ್ಚುಗೀಸರು ಗೋವಾ ಎಂದು ಹೆಸರಿಸಿಕೊಂಡರು. ಈ ಗೋಮಾಂತಕಿಯರ ಮಾತೃಭಾಷೆ ಕೊಂಕಣಿ, ಗೋವಾದಲ್ಲಿ ಬಹಳ ಹಿಂದಿನ ಕಾಲದಿಂದಲೂ ಕನ್ನಡವೇ ಬಳಕೆಯಲ್ಲಿತ್ತು. ಆದರೆ, ಪೋರ್ಚುಗೀಸರ ಆಳ್ವಿಕೆಯಲ್ಲಿ ಗೋಮಾಂತಕರು ಕನ್ನಡವನ್ನು ಮರೆತರು, ಕೊಂಕಣಿಯನ್ನು ಬಳಸ ತೊಡಗಿದರು. ಈ ಗಡಿನಾಡಿನಲ್ಲಿ ಕನ್ನಡಿಗರ ಮೇಲೆ ಕೊಂಕಣಿ ಮತ್ತು ತುಳು ಪ್ರಭಾವವೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಬೀದರ, ಬಿಜಾಪೂರ ಜಿಲ್ಲೆಯಲ್ಲಿಯ ಗಡಿನಾಡಿನ ತಾಲೂಕುಗಳಲ್ಲಿಯ ಕನ್ನಡದಲ್ಲಿ ಉರ್ದು

ಭಾಷೆಯ ಪ್ರಭಾವ ದಟ್ಟವಾಗಿದೆ. ಆದ್ದರಿಂದ, ಉರ್ದು ಭಾಷೆಯ ಶಬ್ದಗಳು ಇಲ್ಲಿನ ಕನ್ನಡದಲ್ಲಿ ಬೆರೆತು ಹೋಗಿವೆ. ಕನ್ನಡದ ಕ್ರಿಯಾಧಾತುಗಳನ್ನು ಉರ್ದು ಶಬ್ದಗಳಿಗೆ ಸೇರಿಸಿ ಮಾತನಾಡುವ ವೈಶಿಷ್ಟ್ಯವನ್ನು ಗುರುತಿಸಲಾಗಿದೆ. ಕೆಲವು ಕ್ರಿಯಾ ವಿಶೇಷಣ ಮತ್ತು ವಿಶೇಷಣಗಳಿಂದ ಒಂದುಗೂಡಿದ ಅನೇಕ ಶಬ್ದಗಳಲ್ಲಿ ಉರ್ದು ಕನ್ನಡ ಶಬ್ದಗಳು ಸೇರಿ ರಚನೆಯಾಗಿರುತ್ತವೆ. ಉರ್ದು ಪ್ರಭಾವಿತ ಕನ್ನಡದಲ್ಲಿ ಉರ್ದು ಷಷ್ಠೀ ವಿಭಕ್ತಿ ಪ್ರತ್ಯಯ ನೇರವಾಗಿ ಸೇರಿಸಿಕೊಳ್ಳಲ್ಪಟ್ಟಿದ್ದರೆ, ಚತುರ್ಥೀ ವಿಭಕ್ತಿ ಪ್ರತ್ಯಯವೇ ದ್ವಿತೀಯಾರ್ಥದಲ್ಲಿಯೂ ಬಳಕೆಯಾಗುತ್ತಿದೆ. ಹೀಗೆ ಬೀದರ್, ಗುಲ್ಬರ್ಗಾ, ಬಿಜಾಪೂರ ಜಿಲ್ಲೆಗಳ ಕನ್ನಡದಲ್ಲಿ ಉರ್ದು ಪ್ರಭಾವ ಗಾಢವಾಗಿದ್ದರೂ. ಈ ಗಡಿನಾಡಿನ ಕನ್ನಡದಲ್ಲಿ ಅಚ್ಚ ಕನ್ನಡ ಶಬ್ದಗಳು ದೊರೆಯುತ್ತಿವೆ.[೧೪]

ಮುಂಬಯಿ- ಕರ್ನಾಟಕ ಗಡಿ ಪ್ರದೇಶಗಳಲ್ಲಿ ಸರಕಾರಿ ಕನ್ನಡ ಶಾಲೆಗಳು ಅತ್ಯಂತ ದುಸ್ಥಿತಿಯಲ್ಲಿರುವುದಾಗಿಯೂ ಕೆಲವು ಶಾಲೆಗಳಲ್ಲಿ ಬೋಧಕರೇ ಇರುವುದಿಲ್ಲವೆಂದು ಕೆಲವು ಶಾಲೆಗಳಿಗೆ ಸ್ವತಂತ್ರ ಕಟ್ಟಡವೇ ಇಲ್ಲದಿರುವುದನ್ನು ಈಗಾಗಲೇ ಅನೇಕ ಪತ್ರಿಕೆಗಳ ಮೂಲಕ ತಿಳಿಯಲಾಗಿದೆ. ಗಡಿಭಾಗಗಳಲ್ಲಿ ಮತ್ತು ನೆರೆ ಹೊರೆಯ ರಾಜ್ಯಗಳಲ್ಲಿ ಕನ್ನಡಿಗರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಕನ್ನಡದ ಶಾಲೆಗಳ ಬಗೆಗೆ ರಾಜ್ಯ ಸರಕಾರವು ಮುತುವರ್ಜಿ ವಹಿಸಿ, ಅವುಗಳ ಸರ್ವತೋಮುಖ ಅಭಿವೃದ್ಧಿಯತ್ತ ಗಮನ ಹರಿಸಬೇಕಾಗಿದೆ. ಗಡಿ ಭಾಗಗಳ ಕನ್ನಡ ಜನರಲ್ಲಿ ಕನ್ನಡತನವನ್ನು ಉಳಿಸಲು ಈ ಕೆಲಸ ಅತ್ಯಂತ ಜರೂರಾಗಿ ಆಗಬೇಕಾಗಿದೆ.

ಪ್ರಾಥಮಿಕ ಶಿಕ್ಷಣ ಮಕ್ಕಳ ಮಾತೃಭಾಷೆಯಲ್ಲಿ ನಡೆಯಬೇಕೆಂದು ಉಚ್ಚ ನ್ಯಾಯಾಲಯ ೧೯೮೯ರಲ್ಲಿ ತೀರ್ಪು ನೀಡಿದ್ದರೂ. ಶಿಕ್ಷಣ ತಜ್ಞರು ಅದನ್ನು ಮತ್ತೆ ಮತ್ತೆ ಪ್ರತಿಪಾದಿಸುತ್ತಿದ್ದರೂ ಸರಕಾರಗಳು ಆ ಬಗೆಗೆ ಯಾವುದೇ ಖಚಿತವಾದ ಕ್ರಮ ಕೈಗೊಂಡಿಲ್ಲ. ಕನ್ನಡದಲ್ಲಿ ಶಿಕ್ಷಣವು ಶಿಕ್ಷಣದಲ್ಲಿ ಕನ್ನಡವು ಎಂಬ ಗೊಂದಲಕಾರಿ ಸ್ಥಿತಿಯು ಸೃಷ್ಟಿಯಾಗುತ್ತಿರುವ ಸಂದರ್ಭದಲ್ಲಿ ಹೊಸ ಹೊಸದಾಗಿ ಖಾಸಗಿ ಇಂಗ್ಲೀಷ್ ಶಾಲೆಗಳು ಆರಂಭವಾಗುತ್ತಿವೆ. ಶಿಕ್ಷಣದಲ್ಲಿ ಕನ್ನಡದ ಸ್ಥಾನದ ಬಗೆಗೆ ಗೋಕಾಕ ಚಳವಳಿ ನಡೆದದ್ದರ ನೆನಪು ಇನ್ನೂ ಹಸಿ ಹಸಿಯಾಗಿದೆ. ಉದ್ಯೋಗ ಕ್ಷೇತ್ರದಲ್ಲಿ ಕನ್ನಡಿಗರ ಸ್ಥಾನದ ಬಗೆಗೆ ಮಹಿಷಿ ವರದಿಯನ್ನು ಜಾರಿಗೆ ತರಲು ಹಿಂದೆ ಮುಂದೆ ನೋಡಲಾಗುತ್ತಿದೆ. ಆಳುವ ಜನರಿಗೆ ಕನ್ನಡ ಮತ್ತು ಕನ್ನಡಿಗರ ಬಗೆಗೆ ಇರುವ ತಾತ್ಸಾರ ಮನೋಭಾವಕ್ಕೆ ಇದಕ್ಕಿಂತ ಬೇರೊಂದು ಒಳ್ಳೆಯ ಉದಾಹರಣೆ ಸಿಗಲಾರದು. ಇದೇ ತಾತ್ಸಾರವನ್ನು ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುವುದರಲ್ಲಿಯೂ ಗಮನಿಸಬಹುದು. ಕನ್ನಡವೇ ಸರಕಾರದ ಅಧಿಕೃತ ಭಾಷೆಯೆಂದು ಸಾಮಾನ್ಯವಾಗಿ ಇಂಗ್ಲೀಷ್‌ನಲ್ಲಿ ಅಪರೂಪಕ್ಕೆ ಕನ್ನಡದಲ್ಲಿ ಆಗಾಗ್ಗೆ ಆದೇಶ ನೀಡುವ, ನೆನಪಿನ ಪತ್ರ ರವಾನಿಸುವ ನಮ್ಮ ಆಡಳಿತ ಯಂತ್ರ ತನ್ನ ವ್ಯವಹಾರಗಳನ್ನೇ ಅಧಿಕೃತವಾಗಿ ಕನ್ನಡದಲ್ಲಿ ಮಾಡುವುದಿಲ್ಲ.

೧೮೩೭ ರಲ್ಲಿ ಬೆಳಗಾವಿ ಜಿಲ್ಲಾಧಿಕಾರಿ ಜಾನ್ ಎ. ಡನ್‌ಲಪ್, ಆ ಜಿಲ್ಲೆಯಾದ್ಯಂತ ಕನ್ನಡವನ್ನೇ ಆಡಳಿತ ಹಾಗೂ ವ್ಯವಹಾರದ ಭಾಷೆಯನ್ನಾಗಿ ಜಾರಿಗೊಳಿಸಲು ಆದೇಶ ನೀಡಿದ್ದಾನೆ. ಅದೇ ವರ್ಷ ಮುಂಬಯಿಯ ಗವರ್ನರ್ ಆರ್.ಗ್ರ್ಯಾಂಟ್ ಕನ್ನಡಿಗರ ಪ್ರಯೋಜನಕ್ಕಾಗಿ ಆಡಳಿತ ನಡೆಸಬೇಕಾಗಿರುವುದರಿಂದ ಟಿಪ್ಪಣೆಗಳು ಕನ್ನಡದಲ್ಲೇ ಇರಬೇಕೆಂದು ಸೂಚಿಸಿದ್ದಾನೆ. ಈಗಲೂ ಆದೇಶಗಳು ಹೊರಡುತ್ತವೆ. ಆದರೆ ಕನ್ನಡ ಆಡಳಿತ ಭಾಷೆಯಾಗಿ ಹೆಚ್ಚು ಉಪಯೋಗಿಸಲ್ಪಡುತ್ತಿಲ್ಲ. ಇಂಗ್ಲೀಷ್ ಬಗೆಗಿನ ದುರಭಿಮಾನ ಅಥವಾ ಮೋಹ ಹೋಗುವವರೆಗೆ ಕನ್ನಡದಲ್ಲಿ ಶಿಕ್ಷಣವಾಗಲಿ, ಆಡಳಿತದಲ್ಲಿ ಕನ್ನಡವಾಗಲಿ ಬರುವುದು ಕಷ್ಟವಾಗುತ್ತದೆ. ಭಾರತದ ಯಾವುದೇ ಭಾಷೆಗೆ, ಭಾರತದ ಮತ್ತೊಂದು ಭಾಷೆ ವೈರಿಯಾಗಲಾರದು. ಆದರೆ ಭಾರತದ ಎಲ್ಲಾ ಭಾಷೆಗಳಿಗೆ ಇಂಗ್ಲೀಷ ವೈರಿಯಾಗಿದೆ ಎಂದು ಗತ್ಯಂತರವಿಲ್ಲದೆ ಹೇಳಬೇಕಾಗಿದೆ. ಇಂಗ್ಲೀಷ ಭಾಷೆಯ ಪ್ರಭಾವ ಎಷ್ಟು ಕೆಟ್ಟ ಪರಿಣಾಮವನ್ನು ಉಂಟುಮಾಡಿದೆ ಎಂದರೆ, ಮನೆಯೊಳಗಿನ ಮಾತಿಗೂ ಈಗ ಇಂಗ್ಲೀಷ ಆಗಬೇಕು. ಮನೆಮಾತು ಇಂಗ್ಲೀಷ ಆದಾಗ ಮಾತೃಭಾಷೆಯು ಅದೇಯಾಗಿ ಬಿಡುತ್ತದೆ. ಮಾತೃಭಾಷೆ ಎಂದರೇನು? ಅದು ಯಾವುದು? ಎಂದು ಪ್ರಶ್ನೆ ಕೇಳುವ ಸಮಯ ಬರಬಹುದು. ಭ್ರಮೆಯಿಂದ ಹುಟ್ಟಿರುವ ಇಂಗ್ಲೀಷ ಮೇಲಿನ ವ್ಯಾಮೋಹ ಅಳಿಯದಿದ್ದರೆ ನಮ್ಮ ಅನೇಕ ಭಾರತೀಯ ಭಾಷೆಗಳು ಅವನತಿ ಹೊಂದುತ್ತವೆ.

ಇಂಗ್ಲೀಷರು ನಮ್ಮ ದೇಶದಿಂದ ಹೋದನಂತರವೇ ಇಂಗ್ಲೀಷ ಮೇಲಿನ ವ್ಯಾಮೋಹ ಅತಿಯಾಗುತ್ತಿರುವುದು ಒಂದು ವಿಪರ್ಯಾಸ. ಬುದ್ಧಿ ವಿಕಾಸಕ್ಕೆ ಅಗತ್ಯವಾದ ಯಾವುದೇ ಭಾಷೆಯನ್ನು ಕಲಿಯುವುದು ಜಾಣತನ. ನಮ್ಮ ಭಾಷೆಯನ್ನು ತಿರಸ್ಕರಿಸುವುದು ಮೂರ್ಖತನ ಆಗಲಿಲ್ಲವೇ? ನಾನೇ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರೆ, ಬೆಳಗಾವಿಯ ಬಗೆಗೆ ಮಹಾರಾಷ್ಟ್ರದವರು ಬಾಯಿ ಎತ್ತದಂತೆ ಮಾಡುತ್ತಿದ್ದೆ ಎಂದು ಹೇಳಿದುದನ್ನು ನೆನಪು ಮಾಡಿಕೊಂಡಿರುವ ಪಾಪು, ಬೆಳಗಾವಿ ಮತ್ತು ಅದರ ಸುತ್ತಮುತ್ತ ಕರ್ನಾಟಕ ಮತ್ತು ಮಹಾರಾಷ್ಟ್ರ ಸರಕಾರಗಳು ಸಾಧಿಸಿರುವ ಮತ್ತು ಹಮ್ಮಿಕೊಂಡಿರುವ ಕೆಲವು ಕೆಲಸಗಳ ವಿಶ್ಲೇಷಣೆ ಮಾಡಿದ್ದಾರೆ. ಕರ್ನಾಟಕವು ಬೆಳಗಾವಿ ಮತ್ತು ಅಲ್ಲಿಯ ಗಡಿ ಭಾಗಗಳಲ್ಲಿ ಕನ್ನಡ ವಾತಾವರಣವನ್ನು ಉಳಿಸಲು ಸಹ ಪ್ರಯತ್ನಿಸದಿರುವುದರಿಂದ, ಎಂದಾದರೂ ಬೆಳಗಾವಿ ಕರ್ನಾಟಕದ ಕೈತಪ್ಪಿ ಹೋಗಬಹುದೆಂಬ ಆತಂಕವಂತೂ ಇದೆ ಎಂಬುದು ಅರಿವಿಗೆ ಬಂದಿದೆ.೧೦-೦೮-೧೯೯೫ ರ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಅನ್ಯಾಯವಾಗಿದೆ ಎಂದು ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪಿಸಿದ ಶಾಸಕ ಭೀಮಣ್ಣ ಖಂಡ್ರೆಯವರು ಪ್ರತ್ಯೇಕ ರಾಜ್ಯ ಸ್ಥಾಪನೆ ಅನಿವಾರ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದು ಪ್ರಕಟವಾಗಿದೆ. ಅದನ್ನು ಮತ್ತೊಬ್ಬ ಶಾಸಕ ಡಾ. ಎಮ್. ಆರ್. ತಂಗಾ

ಸಮರ್ಥಿಸಿದ್ದರು. ಇಂತಹ ಹೇಳಿಕೆಗಳು ಅಸಮಾಧಾನದ ಪ್ರತೀಕ ಎಂದು ಸ್ಪಷ್ಟವಾಗುತ್ತದೆ. ಅಭಿವೃದ್ಧಿ ಕಾರ್ಯಗಳನ್ನು ಕುರಿತಂತೆ ಜನರಿಗಿರುವ ಅಸಮಾಧಾವನ್ನು ಗುರುತಿಸಿ, ಅದನ್ನು ಸೂಕ್ಷ್ಮವಾಗಿ ನಿವಾರಿಸಬೇಕಾದದ್ದು ಸರಕಾರಗಳ ಕರ್ತವ್ಯವಾಗಬೇಕಾಗಿದೆ.

ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ತಾಲೂಕಾವಾರು ಜನಸಂಖ್ಯೆ, ಅಕ್ಷರಸ್ಥರು ಮತ್ತು ಸಾಕ್ಷರತೆ : ೨೦೦೧

ಮುಂಬಯಿ-ಕರ್ನಾಟಕದ ಗಡಿನಾಡ ಕನ್ನಡಿಗರ ತಾಲೂಕಾವಾರು ಜನಸಂಖ್ಯೆ ಹಾಗೂ ಸಾಕ್ಷರತೆ ವಿವರಗಳನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ. ಇಲ್ಲಿ ಒಟ್ಟು ೭ ಅಂಕಣಗಳಿವೆ. ಮೊದಲನೆಯ ಅಂಕಣದಲ್ಲಿ ತಾಲೂಕಾವಾರು ಹಾಗೂ ಜಿಲ್ಲಾವಾರು ಜನಸಂಖ್ಯೆಯನ್ನು ಗ್ರಾಮ-ನಗರವಾರು ನೀಡಲಾಗಿದೆ. ಹಾಗೆಯೇ ೨,೩ ಮತ್ತು ೪ ನೆಯ ಅಂಕಣಗಳಲ್ಲಿ ತಾಲೂಕು ಮತ್ತು ಜಿಲ್ಲಾವಾರು ಅಕ್ಷರಸ್ಥರ ಸಂಖ್ಯೆಯನ್ನು ಲಿಂಗವಾರು ನೀಡಲಾಗಿದೆ. ಕೊನೆಯ ೫,೬ ಮತ್ತು ೭ನೇ ಅಂಕಣಗಳಲ್ಲಿ ಸಾಕ್ಷರತೆಯನ್ನು ಶೇಕಡ ಪ್ರಮಾಣದಲ್ಲಿ ಗ್ರಾಮ ನಗರವಾರು ಹಾಗೂ ಲಿಂಗವಾರು ನೀಡಲಾಗಿದೆ.[೧೫]

ಈ ಮಾಹಿತಿಯಿಂದ ಒಟ್ಟಾರೆ ಕೆಳಕಂಡ ಸ್ಥೂಲ ನಿರ್ಣಯಗಳನ್ನು ರೂಪಿಸಬಹುದಾಗಿದೆ.

೧. ಪುರುಷರ ಸಾಕ್ಷರತೆ ಪ್ರಮಾಣವು ಗ್ರಾಮ- ನಗರವಾರು ಮಹಿಳೆಯರ ಸಾಕ್ಷರತಾ ಪ್ರಮಾಣಕ್ಕಿಂತ ಅಧಿಕವಾಗಿದೆ.

೨. ಮಹಿಳೆಯರ ಅತ್ಯಧಿಕ ಸಾಕ್ಷರತೆ ಪ್ರಮಾಣ ಶೇ.೮೨.೨೪ರಷ್ಟಿದ್ದರೆ ಪುರುಷರ ಅತ್ಯಧಿಕ ಸಾಕ್ಷರತಾ ಪ್ರಮಾಣ ಶೇ. ೯೨.೫೪. ಇಲ್ಲಿ ಸಾಕ್ಷರತೆಯಲ್ಲಿ ಲಿಂಗತಾರತಮ್ಯ ಶೇ.೧೦.೦೩ ಅಂಶಗಳಷ್ಟಿದೆ.

೩. ಮಹಿಳೆಯರ ಅತಿಕಡಿಮೆ ಸಾಕ್ಷರತೆ ಶೇ. ೨೬.೯೭ರಷ್ಟಿದ್ದರೆ ಪುರುಷರ ಕನಿಷ್ಟ ಸಾಕ್ಷರತೆ ಪ್ರಮಾಣ ಶೇ.೪೭.೭೧ ರಷ್ಟಿದೆ. ಇಲ್ಲಿ ಸಾಕ್ಷರತೆಯಲ್ಲಿ ಲಿಂಗತಾರತಮ್ಯ ಶೇ. ೨೦.೭೪ ಅಂಶಗಳಷ್ಟಿದೆ.

೪. ಸಾಕ್ಷರತೆಯ ಪ್ರಮಾಣವು ಅತ್ಯಧಿಕ ಮಟ್ಟದಲ್ಲಿದ್ದರೆ ಲಿಂಗತಾರತಮ್ಯವು ಕಡಿಮೆ ಇರುತ್ತದೆ ಮತ್ತು ಅದು ಕೆಳಮಟ್ಟದಲ್ಲಿದ್ದರೆ ಲಿಂಗತಾರತಮ್ಯವು ತೀವ್ರವಾಗಿರುತ್ತದೆ.

೫. ಇಲ್ಲಿನ ಸಾಕ್ಷರತೆಯ ವಿವರಗಳು ಕರ್ನಾಟಕದ ವಿವಿಧ ಪ್ರದೇಶಗಳ ಸಾಕ್ಷರತೆಗೆ ಸಂಬಂಧಿಸಿದ ಸಿದ್ಧಿ - ಸಾಧನೆಗಳನ್ನು ತೋರಿಸುತ್ತವೆ.

೬. ಗ್ರಾಮೀಣ ಮತ್ತು ನಗರ ಹಾಗೂ ಪುರುಷರು ಮತ್ತು ಮಹಿಳೆಯರು ಎಂಬ ವರ್ಗೀಕೃತ ಸಾಕ್ಷರತೆ ವಿವರಗಳು ಇಲ್ಲಿರುವುದರಿಂದ ನಮಗೆ ಸಾಕ್ಷರತೆಯ ಬಿಡಿ ಬಿಡಿಯಾದ ಒಂದು ಚಿತ್ರ ದೊರೆಯುತ್ತದೆ.

ಕೋಷ್ಟಕ

ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ತಾಲೂಕಾವಾರು ಜನಸಂಖ್ಯೆ, ಅಕ್ಷರಸ್ಥರು ಮತ್ತು ಸಾಕ್ಷರತೆ -೨೦೦೧

ಅ.ನಂ	ಜಿಲ್ಲೆ/ತಾಲೂಕು	ಒಟ್ಟು ಗ್ರಾಮೀಣ/ ನಗರ	ಜಿಲ್ಲೆ/ತಾಲೂಕಿನ ಒಟ್ಟು ಜನಸಂಖ್ಯೆ	ಅಕ್ಷರಸ್ಥರು			ಸಾಕ್ಷರತೆ		
				ಒಟ್ಟು	ಪುರುಷರು	ಮಹಿಳೆಯರು	ಒಟ್ಟು	ಪುರುಷರು	ಮಹಿಳೆಯರು
			೧	೨	೩	೪	೫	೬	೭
೧.ಬೆಳಗಾವಿ ಜಿಲ್ಲೆ		ಒಟ್ಟು	೪೨೦೭೨೬೪	೨೩೨೩೨೫೮	೧೩೯೨೯೩೨	೯೩೦೩೨೬	೬೪.೪೨	೭೫.೮೯	೫೨.೫೩
		ಗ್ರಾಮೀಣ	೩೧೯೪೮೪೮	೧೬೦೫೬೯೦	೯೯೦೧೯೨	೬೧೫೪೯೮	೫೯.೦೫	೭೧.೭೧	೪೫.೯೯
		ನಗರ	೧೦೧೨೪೧೬	೭೧೭೫೬೮	೪೦೨೭೪೦	೩೧೪೮೨೮	೮೦.೮೭	೮೮.೬೦	೭೨.೭೫
೧	ಚಿಕ್ಕೋಡಿ	ಒಟ್ಟು	೫೬೧೬೭೧	೩೩೬೨೫೫	೨೦೦೬೯೩	೧೩೫೫೬೨	೬೮.೮೩	೮೦.೫೬	೫೬.೬೩
		ಗ್ರಾಮೀಣ	೪೫೦೫೮೩	೨೫೮೮೦೬	೧೫೭೦೦೩	೧೦೧೮೦೩	೬೬.೨೩	೭೮.೫೭	೫೩.೩೧
		ನಗರ	೧೧೧೦೮೮	೭೭೪೪೯	೪೩೬೯೦	೩೩೭೫೯	೭೯.೨೪	೮೮.೬೧	೬೯.೭೦
೨	ಅಥಣಿ	ಒಟ್ಟು	೪೬೧೩೬೨	೨೪೧೩೬೮	೧೪೫೮೪೯	೯೫೫೧೯	೬೧.೪೦	೭೨.೫೪	೪೯.೭೪
		ಗ್ರಾಮೀಣ	೪೨೦೪೪೭	೨೧೪೧೭೫	೧೩೦೪೨೬	೮೩೭೪೯	೫೯.೮೬	೭೧.೨೧	೪೭.೯೫
		ನಗರ	೪೦೯೧೫	೨೭೧೯೩	೧೫೪೨೩	೧೧೭೭೦	೭೭.೦೮	೮೬.೧೮	೬೭.೭೧
೩	ರಾಯಬಾಗ	ಒಟ್ಟು	೩೪೭೫೩೭	೧೬೨೧೪೪	೯೯೫೯೮	೬೨೫೪೬	೫೫.೬೮	೬೬.೬೨	೪೪.೧೪
		ಗ್ರಾಮೀಣ	೩೧೧೭೬೧	೧೪೦೮೧೬	೮೭೨೪೯	೫೩೫೬೭	೫೪.೦೧	೬೫.೨೬	೪೨.೧೮
		ನಗರ	೩೫೭೭೬	೨೧೩೨೮	೧೨೩೪೯	೮೯೭೯	೬೯.೯೧	೭೮.೧೫	೬೧.೦೬
೪	ಗೋಕಾಕ	ಒಟ್ಟು	೫೨೫೮೬೫	೨೪೭೯೦೧	೧೫೩೮೫೦	೯೪೦೫೧	೫೫.೯೦	೬೮.೭೦	೪೨.೮೪
		ಗ್ರಾಮೀಣ	೪೦೦೭೮೫	೧೭೧೩೫೬	೧೦೯೭೦೦	೬೧೬೫೬	೫೧.೦೩	೬೪.೭೬	೩೭.೦೫
		ನಗರ	೧೨೫೦೮೦	೭೬೫೪೫	೪೪೧೫೦	೩೨೩೯೫	೭೧.೧೧	೮೦.೯೪	೬೦.೯೯
೫	ಹುಕ್ಕೇರಿ	ಒಟ್ಟು	೩೫೭೧೨೭	೧೯೦೪೧೦	೧೧೬೦೫೩	೭೪೩೫೭	೬೨.೦೯	೭೪.೬೯	೪೯.೧೫
		ಗ್ರಾಮೀಣ	೩೦೪೭೧೦	೧೫೫೯೦೭	೯೬೨೧೪	೫೯೬೯೩	೫೯.೭೨	೭೨.೮೫	೪೬.೨೮
		ನಗರ	೫೨೪೧೭	೩೪೫೦೩	೧೯೮೩೯	೧೪೬೬೪	೭೫.೬೩	೮೫.೧೧	೬೫.೭೩
೬	ಬೆಳಗಾವಿ	ಒಟ್ಟು	೮೧೫೧೧೩	೫೫೮೦೩೬	೩೧೬೨೭೪	೨೪೧೭೬೨	೭೮.೩೧	೮೬.೪೬	೬೯.೭೧
		ಗ್ರಾಮೀಣ	೩೦೮೮೭೮	೧೭೦೧೩೬	೧೦೦೯೫೬	೬೯೧೮೦	೬೪.೨೬	೭೫.೯೩	೫೨.೨೪
		ನಗರ	೫೦೬೨೩೫	೩೮೭೯೦೦	೨೧೫೩೧೮	೧೭೨೫೮೨	೮೬.೬೧	೯೨.೫೭	೮೦೨೪
೭	ಖಾನಾಪೂರ	ಒಟ್ಟು	೨೪೩೧೫೪	೧೩೮೦೮೨	೮೧೭೮೪	೫೬೨೯೮	೬೫.೯೯	೭೮.೦೬	೫೩.೮೯
		ಗ್ರಾಮೀಣ	೨೨೦೩೧೫	೧೨೧೨೬೪	೭೨೪೧೯	೪೮೮೪೫	೬೪.೧೨	೭೭.೬೨	೫೧.೬೩
		ನಗರ	೨೨೮೩೯	೧೬೮೧೮	೯೩೬೫	೭೪೫೩	೮೩.೬೦	೯೧.೨೮	೭೫.೬೧
೮	ಬೈಲಹೊಂಗಲ	ಒಟ್ಟು	೩೫೬೪೩೫	೧೯೩೫೨೯	೧೧೬೬೬೩	೭೬೮೬೬	೬೩.೩೭	೭೫.೪೪	೫೦.೯೯
		ಗ್ರಾಮೀಣ	೩೧೩೨೨೦	೧೬೪೨೦೨	೧೦೦೨೬೨	೬೩೯೪೦	೬೧.೩೫	೭೩.೯೭	೪೮.೪೧
		ನಗರ	೪೩೨೧೫	೨೯೩೨೭	೧೬೪೦೧	೧೨೯೨೬	೭೭.೬೮	೮೫.೮೯	೬೯.೨೭
೯	ಸವದತ್ತಿ	ಒಟ್ಟು	೩೧೧೭೪೫	೧೫೦೦೫೨	೯೪೯೨೫	೫೫೧೨೭	೫೬.೬೮	೭೦.೬೫	೪೨.೨೯
		ಗ್ರಾಮೀಣ	೨೭೩೫೩೩	೧೨೬೮೮೩	೮೧೩೨೫	೪೫೫೫೮	೫೪.೭೭	೬೯.೨೧	೩೯.೯೧
		ನಗರ	೩೮೨೧೨	೨೩೧೬೯	೧೩೬೦೦	೯೫೬೯	೭೦.೦೦	೮೦.೭೨	೫೯.೦೬
೧೦	ರಾಮದುರ್ಗ	ಒಟ್ಟು	೨೨೭೨೫೫	೧೦೫೪೮೧	೬೭೨೪೩	೩೮೨೩೮	೫೫.೦೫	೬೯.೪೨	೪೦.೩೬
		ಗ್ರಾಮೀಣ	೧೯೦೬೧೬	೮೨೧೪೫	೫೩೬೩೮	೨೮೫೦೭	೫೧.೩೭	೬೬.೩೧	೩೬.೦೮
		ನಗರ	೩೬೬೩೯	೨೩೩೩೬	೧೩೬೦೫	೯೭೩೧	೭೩.೬೨	೮೫.೨೩	೬೧.೮೫


೨. ಬಾಗಲಕೋಟೆ ಜಿಲ್ಲೆ		ಒಟ್ಟು	೧೬೫೨೨೩೨	೮೦೮೦೬೯	೫೦೨೩೦೮	೩೦೫೭೬೧	೫೭.೮೧	೭೧.೩೧	೪೪.೧೦
		ಗ್ರಾಮೀಣ	೧೧೭೩೦೫೮	೫೧೧೪೦೨	೩೩೦೦೪೦	೧೮೧೩೬೨	೫೨.೦೦	೬೬.೭೧	೩೭.೧೧
		ನಗರ	೪೭೯೧೭೪	೨೯೬೬೬೭	೧೭೨೨೬೮	೧೨೪೩೯೯	೭೧.೬೨	೮೨.೧೫	೬೦.೮೨
೧.	ಜಮಖಂಡಿ	ಒಟ್ಟು	೪೦೮೪೩೬	೧೯೬೧೩೫	೧೧೯೦೭೭	೭೭೦೫೮	೫೬.೬೮	೬೭.೭೨	೪೫.೨೮
		ಗ್ರಾಮೀಣ	೨೫೬೬೬೫	೧೦೭೯೮೮	೬೭೯೮೮	೪೦೦೦೦	೫೦.೨೧	೬೧.೯೮	೩೭.೯೬
		ನಗರ	೧೫೧೭೭೧	೮೮೧೪೭	೫೧೦೮೯	೩೭೦೫೮	೬೭.೩೦	೭೭.೨೪	೫೭.೧೭
೨.	ಬೀಳಗಿ	ಒಟ್ಟು	೧೪೧೮೪೩	೬೧೬೭೭	೩೯೦೦೪	೨೨೬೭೩	೫೧.೮೨	೬೫.೫೫	೩೮.೦೯
		ಗ್ರಾಮೀಣ	೧೨೬೩೭೯	೫೨೭೪೫	೩೩೮೨೮	೧೮೯೧೭	೪೯.೭೫	೬೩.೮೫	೩೫.೬೬
		ನಗರ	೧೫೪೬೪	೮೯೩೨	೫೧೭೬	೩೭೫೬	೬೮.೬೫	೭೯.೩೯	೫೭.೮೬
೩.	ಮುಧೋಳ	ಒಟ್ಟು	೨೪೪೨೩೦	೧೧೧೫೨೬	೬೮೭೮೬	೪೨೭೪೦	೫೪.೧೧	೬೬.೦೬	೪೧.೯೨
		ಗ್ರಾಮೀಣ	೨೦೧೭೮೭	೮೬೬೧೫	೫೪೪೩೪	೩೨೧೮೧	೫೦.೯೫	೬೩.೩೩	೩೮.೨೯
		ನಗರ	೪೨೪೪೩	೨೪೯೧೧	೧೪೩೫೨	೧೦೫೫೯	೬೮.೯೯	೭೮.೯೫	೫೮.೯೦
೪	ಬಾದಾಮಿ	ಒಟ್ಟು	೨೯೧೯೧೯	೧೪೦೦೩೫	೮೮೮೬೨	೫೧೧೭೩	೫೬.೮೮	೭೨.೧೪	೪೧.೬೦
		ಗ್ರಾಮೀಣ	೨೧೪೮೭೧	೯೦೮೭೬	೯೫೯೮೧	೩೦೮೯೫	೫೦.೬೯	೬೭.೦೩	೩೪.೪೧
		ನಗರ	೭೭೦೪೮	೪೯೧೫೯	೨೮೮೮೧	೨೦೨೭೮	೭೩.೪೪	೮೫.೭೧	೬೧.೦೦
೫	ಬಾಗಲಕೋಟ	ಒಟ್ಟು	೨೪೭೮೭೦	೧೩೪೮೩೪	೮೨೬೭೫	೫೨೧೫೯	೬೩.೮೦	೭೭.೫೧	೪೯.೮೩
		ಗ್ರಾಮೀಣ	೧೫೬೨೭೪	೭೧೧೧೭	೪೬೨೮೫	೨೪೮೩೨	೫೪.೨೪	೭೦.೭೭	೩೭.೭೯
		ನಗರ	೯೧೫೯೬	೬೩೭೧೭	೩೬೩೯೦	೨೭೩೨೭	೭೯.೪೨	೮೮.೧೯	೭೦.೧೩
೬	ಹುನಗುಂದ	ಒಟ್ಟು	೨೮೭೦೭೩	೧೪೫೯೪೯	೯೩೩೪೮	೫೨೬೦೧	೬೦.೧೫	೭೬.೬೨	೪೩.೫೩
		ಗ್ರಾಮೀಣ	೨೧೭೦೮೨	೧೦೨೦೬೧	೬೭೫೨೪	೩೪೫೩೭	೫೬.೦೬	೭೪.೦೧	೩೮.೦೩
		ನಗರ	೬೯೯೯೧	೪೩೮೮೮	೨೫೮೨೪	೧೮೦೬೪	೭೨.೪೨	೮೪.೪೩	೬೦.೧೭
೩. ಬಿಜಾಪೂರ ಜಿಲ್ಲೆ		ಒಟ್ಟು	೧೮೦೮೮೬೩	೮೮೨೭೫೪	೫೩೮೧೭೯	೩೪೪೫೭೫	೫೭.೪೬	೬೮.೧೦	೪೬.೧೯
		ಗ್ರಾಮೀಣ	೧೪೧೩೨೯೦	೬೨೬೧೨	೩೯೧೧೪೬	೨೩೫೦೧೬	೫೨.೩೮	೬೩.೫೩	೪೦.೫೪
		ನಗರ	೩೯೫೫೭೩	೨೫೬೫೯೨	೧೪೭೦೩೩	೧೦೯೫೫೯	೭೫.೨೮	೮೪.೨೫	೬೫.೮೭
೧	ಬಿಜಾಪೂರ	ಒಟ್ಟು	೫೬೮೮೮೧	೩೧೦೦೪೬	೧೮೫೪೦೫	೧೨೪೬೪೧	೬೩.೭೦	೭೪.೧೮	೫೨.೬೪
		ಗ್ರಾಮೀಣ	೩೧೫೫೭೪	೧೩೭೧೫೧	೮೭೭೦೧	೪೯೪೫೦	೫೧.೪೯	೬೪.೦೨	೩೮.೨೨
		ನಗರ	೨೫೩೩೦೭	೧೭೨೮೯೫	೯೭೭೦೪	೭೫೧೯೧	೭೮.೪೬	೮೬.೪೯	೭೦.೦೧
೨	ಇಂಡಿ	ಒಟ್ಟು	೩೫೬೭೬೮	೧೬೧೪೬೨	೮೮೨೬೧	೭೩೨೦೧	೫೩.೩೫	೫೫.೦೩	೫೧.೪೬
		ಗ್ರಾಮೀಣ	೩೨೫೨೮೫	೧೪೩೫೯೬	೭೭೬೫೧	೬೫೯೪೫	೫೨.೦೨	೫೨.೯೪	೫೦.೯೯
		ನಗರ	೩೧೪೮೩	೧೭೮೬೬	೧೦೬೧೦	೭೨೫೬	೬೭.೧೨	೭೭.೩೯	೫೬.೨೦
೩	ಸಿಂಧಗಿ	ಒಟ್ಟು	೩೨೬೩೪೬	೧೪೩೯೬೬	೯೩೬೧೧	೫೦೩೫೫	೫೨.೪೮	೬೬.೭೦	೩೭.೫೮
		ಗ್ರಾಮೀಣ	೨೯೮೫೯೭	೧೨೮೩೬೩	೮೪೫೬೫	೪೩೭೯೮	೫೧.೧೬	೬೫.೮೭	೩೫.೭೪
		ನಗರ	೨೭೭೪೯	೧೫೬೦೩	೯೦೪೬	೬೫೫೭	೬೬.೬೩	೭೫.೫೧	೫೭.೩೪
೪	ಬಸವನ ಬಾಗೇವಾಡಿ	ಒಟ್ಟು	೩೦೩೨೧೪	೧೪೧೨೬೬	೯೦೨೬೨	೫೧೦೦೪	೫೪.೮೬	೬೮.೭೧	೪೦.೪೪
		ಗ್ರಾಮೀಣ	೨೭೪೬೩೨	೧೨೬೧೭೧	೮೧೦೫೪	೪೫೧೧೭	೫೪.೦೨	೬೮.೦೩	೩೯.೪೩
		ನಗರ	೧೮೫೮೨	೧೫೦೯೫	೯೨೦೮	೫೮೮೭	೬೩.೦೫	೭೫.೩೭	೫೦.೨೨

೫	ಮುದ್ದೇಬಿಹಾಳ	ಒಟ್ಟು	೨೫೩೬೫೪	೧೨೬೦೧೪	೮೦೬೪೦	೪೫೩೭೪	೫೮.೬೦	೭೪.೫೩	೪೨.೪೬
		ಗ್ರಾಮೀಣ	೧೯೯೨೦೨	೯೦೮೮೧	೬೦೧೭೫	೩೦೭೦೬	೫೩.೯೩	೭೧.೧೮	೩೬.೫೬
		ನಗರ	೫೪೪೫೨	೩೫೧೩೩	೨೦೪೬೫	೧೪೬೬೮	೭೫.೫೧	೮೬.೫೧	೬೪.೧೩
೪.ಗದಗ ಜಿಲ್ಲೆ		ಒಟ್ಟು	೯೭೧೯೫೫	೫೫೬೧೯೧	೩೩೮೭೪೬	೨೧೭೪೪೫	೬೬.೨೭	೭೯.೫೫	೫೨.೫೮
		ಗ್ರಾಮೀಣ	೬೨೯೯೯೪	೩೩೪೨೬೩	೨೧೦೪೭೧	೧೨೩೭೮೪	೬೧.೭೧	೭೬.೬೪	೪೬.೩೬
		ನಗರ	೩೪೧೯೬೧	೨೨೧೯೨೮	೧೨೮೨೭೭	೯೩೬೬೧	೭೪.೫೫	೮೪.೮೩	೬೩.೯೪
೧	ನರಗುಂದ	ಒಟ್ಟು	೯೨೬೪೪	೫೧೦೬೨	೩೧೭೯೮	೧೯೨೬೪	೬೪.೦೪	೭೮.೨೫	೪೯.೨೭
		ಗ್ರಾಮೀಣ	೬೦೦೯೬	೩೨೭೬೮	೨೦೭೦೧	೧೨೦೬೭	೬೩.೪೪	೭೮.೫೦	೪೭.೭೪
		ನಗರ	೩೨೫೪೮	೧೮೨೯೪	೧೧೦೯೭	೭೧೯೭	೬೫.೧೪	೭೭.೭೯	೫೨.೦೯
೨	ರೋಣ	ಒಟ್ಟು	೨೪೭೬೯೧	೧೩೬೩೯೭	೮೫೨೪೪	೫೧೧೫೩	೬೪.೧೬	೭೯.೮೧	೪೮.೩೫
		ಗ್ರಾಮೀಣ	೧೮೧೧೪೧	೯೫೭೯೧	೬೦೯೩೪	೩೪೮೫೭	೬೧.೭೦	೭೮.೨೮	೪೫.೦೪
		ನಗರ	೬೬೫೫೦	೪೦೬೦೬	೨೪೩೧೦	೧೬೨೯೬	೭೦.೮೦	೮೩.೯೪	೫೭.೩೯
೩	ಗದಗ	ಒಟ್ಟು	೩೩೨೧೪೦	೨೦೭೪೮೩	೧೨೨೩೭೮	೮೫೧೦೫	೭೧.೭೨	೮೩.೧೭	೫೯.೮೬
		ಗ್ರಾಮೀಣ	೧೫೯೨೧೪	೮೭೬೪೧	೫೪೭೬೭	೩೨೮೭೪	೬೩.೬೧	೭೮.೦೩	೪೮.೬೪
		ನಗರ	೧೭೨೯೨೬	೧೧೯೮೪೨	೬೭೬೧೧	೫೨೨೩೧	೭೯.೦೯	೮೭.೮೭	೭೦.೦೩
೪	ಶಿರಹಟ್ಟಿ	ಒಟ್ಟು	೧೮೩೧೩೦	೯೯೪೮೯	೬೦೬೫೨	೩೮೮೩೭	೬೨.೮೫	೭೫.೨೬	೪೯.೯೯
		ಗ್ರಾಮೀಣ	೧೩೩೫೧೧	೬೯೨೩೫	೪೩೧೪೭	೨೬೦೮೮	೬೦.೧೨	೭೩.೫೬	೪೬.೧೬
		ನಗರ	೪೯೬೧೯	೩೦೨೫೪	೧೭೫೦೫	೧೨೭೪೯	೭೦.೧೬	೭೯.೮೦	೬೦.೧೯
೫	ಮುಂಡರಗಿ	ಒಟ್ಟು	೧೧೬೩೫೦	೬೧೭೬೦	೩೮೬೭೪	೨೩೦೮೬	೬೨.೧೩	೭೬.೩೭	೪೭.೩೫
		ಗ್ರಾಮೀಣ	೯೬೦೩೨	೪೮೮೨೮	೩೦೯೩೦	೧೭೮೯೮	೫೯.೬೯	೭೪.೪೪	೪೪.೪೭
		ನಗರ	೨೦೩೧೮	೧೨೯೩೨	೭೭೪೪	೫೧೮೮	೭೩.೪೭	೮೫.೨೩	೬೦.೯೩
೫.ಧಾರವಾಡ ಜಿಲ್ಲೆ		ಒಟ್ಟು	೧೬೦೩೭೯೪	೧೦೦೩೬೦೮	೫೮೧೮೨೯	೪೨೧೭೭೯	೭೧.೮೭	೮೧.೦೪	೬೨.೨೦
		ಗ್ರಾಮೀಣ	೭೨೨೦೬೮	೩೭೮೩೮೧	೨೩೩೯೧೩	೧೪೪೪೬೮	೬೦.೯೬	೭೩.೨೮	೪೭.೯೧
		ನಗರ	೮೮೧೭೨೬	೬೨೫೨೨೭	೩೪೬೯೧೬	೨೭೮೩೧೧	೮೦.೬೦	೮೭.೨೭	೭೩.೫೯
೧	ಧಾರವಾಡ	ಒಟ್ಟು	೨೧೮೮೦೩	೧೧೧೨೦೬	೬೭೯೩೨	೪೩೨೭೪	೫೯.೩೧	೭೦.೫೭	೪೭.೪೨
		ಗ್ರಾಮೀಣ	೨೦೨೫೧೭	೧೦೦೨೧೬	೬೧೭೩೬	೩೮೪೮೦	೫೭.೮೦	೬೯.೩೪	೪೫.೬೩
		ನಗರ	೧೬೨೮೬	೧೦೯೯೦	೬೧೯೬	೪೭೯೪	೭೭.೭೮	೮೫.೮೪	೬೯.೩೬
೨	ನವಲಗುಂದ	ಒಟ್ಟು	೧೭೬೬೪೧	೯೭೬೭೯	೬೦೩೦೬	೩೭೩೭೩	೬೪.೧೧	೭೭.೨೪	೫೦.೩೨
		ಗ್ರಾಮೀಣ	೧೨೮೭೩೨	೭೦೩೨೪	೪೩೯೬೮	೨೬೩೫೬	೬೩.೩೧	೭೭.೦೯	೪೮.೭೭
		ನಗರ	೪೭೯೦೯	೨೭೩೫೫	೧೬೩೩೮	೧೧೦೧೭	೬೬.೨೭	೭೭.೬೩	೫೪.೪೪
೩	ಹುಬ್ಬಳ್ಳಿ	ಒಟ್ಟು	೧೨೮೩೧೫	೭೦೯೦೭	೪೩೩೧೫	೨೭೫೯೨	೬೩.೮೮	೭೫.೯೨	೫೧.೧೪
		ಗ್ರಾಮೀಣ	೧೨೮೩೧೫	೭೦೯೦೭	೪೩೩೧೫	೨೭೫೯೨	೬೩.೮೮	೭೫.೯೨	೫೧.೧೪
		ನಗರ							
೪	ಕಲಘಟಗಿ	ಒಟ್ಟು	೧೩೬೯೭೮	೬೭೯೧೬	೪೧೭೧೬	೨೬೨೦೦	೫೮.೨೯	೬೯.೪೫	೪೬.೪೨
		ಗ್ರಾಮೀಣ	೧೨೨೩೦೨	೫೮೭೯೬	೩೬೫೭೪	೨೨೨೨೨	೫೬.೪೯	೬೮.೦೯	೪೪.೧೨
		ನಗರ	೧೪೬೭೬	೯೧೨೦	೫೧೪೨	೩೯೭೮	೭೩.೪೪	೮೧.೦೦	೬೫.೫೪

೫	ಕುಂದಗೋಳ	ಒಟ್ಟು	೧೫೭೦೩೯	೮೮೯೧೯	೫೪೬೫೮	೩೪೨೬೧	೬೫.೪೨	೭೮.೧೩	೫೧.೯೩
		ಗ್ರಾಮೀಣ	೧೪೦೨೦೨	೭೮೧೩೮	೪೮೩೨೦	೨೯೮೧೮	೬೪.೪೯	೭೭.೫೦	೫೦.೭೦
		ನಗರ	೧೬೮೩೭	೧೦೭೮೧	೬೩೩೮	೪೪೪೩	೭೩.೦೫	೮೩.೩೪	೬೨.೧೧
೬. ಉತ್ತರ ಕನ್ನಡ ಜಿಲ್ಲೆ		ಒಟ್ಟು	೧೩೫೩೭೯೯	೯೦೬೬೪೦	೫೪೦೭೯೯	೩೯೯೮೪೧	೭೬.೫೯	೮೪.೪೮	೬೮.೪೮
		ಗ್ರಾಮೀಣ	೯೬೫೩೪೫	೬೧೦೮೨೨	೩೪೭೨೯೮	೨೬೩೫೨೪	೭೨.೬೮	೮೦.೫೬	೬೩.೫೭
		ನಗರ	೩೮೭೯೫೪	೨೯೫೮೧೮	೧೫೯೫೦೧	೧೩೬೩೧೭	೮೬.೧೪	೯೧.೬೧	೮೦.೫೧
೧	ಕಾರವಾರ	ಒಟ್ಟು	೧೪೭೮೪೨	೧೧೧೪೧೩	೬೧೫೯೧	೪೯೮೨೨	೮೪.೦೮	೯೧.೬೨	೭೬.೩೨
		ಗ್ರಾಮೀಣ	೭೨೮೨೨	೫೧೭೩೦	೨೯೧೩೭	೨೨೫೯೩	೭೯.೫೧	೮೯.೨೮	೬೯.೬೮
		ನಗರ	೭೫೦೨೦	೫೯೬೮೩	೩೨೪೫೪	೨೭೨೨೯	೮೮.೪೮	೯೩.೮೨	೮೨.೮೬
೨	ಸೂಫಾ	ಒಟ್ಟು	೪೮೯೦೧	೨೭೪೯೨	೧೬೨೦೦	೧೧೨೯೨	೬೫.೪೭	೭೬.೮೦	೫೪.೦೪
		ಗ್ರಾಮೀಣ	೪೮೯೦೧	೨೭೪೯೨	೧೬೨೦೦	೧೧೨೯೨	೬೫.೪೭	೭೬.೮೦	೫೪.೦೪
		ನಗರ							
೩	ಹಳಿಯಾಳ	ಒಟ್ಟು	೧೦೫೮೧೬	೫೭೧೧೧	೩೪೦೪೬	೨೩೦೬೫	೬೩.೭೬	೭೪.೬೬	೫೨.೪೫
		ಗ್ರಾಮೀಣ	೮೦೩೧೬	೩೯೮೦೧	೨೪೪೮೬	೧೫೩೧೫	೫೯.೧೮	೭೧.೩೪	೪೬.೫೧
		ನಗರ	೨೫೫೦೦	೧೭೩೧೦	೯೫೬೦	೭೭೫೦	೭೭.೫೪	೮೪.೭೭	೭೦.೧೫
೪	ಯಲ್ಲಾಪೂರ	ಒಟ್ಟು	೭೩೫೦೪	೪೭೦೯೩	೨೬೪೨೨	೨೦೬೭೧	೭೩.೮೬	೮೦.೯೧	೬೬.೪೬
		ಗ್ರಾಮೀಣ	೫೫೫೬೬	೩೩೯೨೧	೧೯೨೮೭	೧೪೬೩೪	೭೦.೬೧	೭೮.೦೬	೬೨.೭೨
		ನಗರ	೧೭೯೩೮	೧೩೧೭೨	೭೧೩೫	೬೦೩೭	೮೩.೭೮	೮೯.೭೪	೭೭.೬೯
೫	ಮುಂಡಗೋಡ	ಒಟ್ಟು	೯೦೭೦೭	೫೪೪೬೩	೩೩೫೭೪	೨೦೮೮೯	೭೦.೪೬	೭೯.೮೫	೫೯.೨೫
		ಗ್ರಾಮೀಣ	೭೪೫೩೬	೪೩೫೮೭	೨೭೫೩೨	೧೬೦೫೫	೬೮.೬೩	೭೮.೭೮	೫೬.೨೧
		ನಗರ	೧೬೧೭೧	೧೦೮೭೬	೬೦೪೨	೪೮೩೪	೭೮.೮೮	೮೫.೧೨	೭೨.೨೬
೬	ಶಿರಸಿ	ಒಟ್ಟು	೧೭೫೫೪೬	೧೨೬೩೭೫	೬೮೩೩೯	೫೮೦೩೬	೮೨.೧೦	೮೭.೪೭	೭೬.೫೮
		ಗ್ರಾಮೀಣ	೧೧೦೧೯೪	೭೫೦೧೬	೪೧೧೬೬	೩೩೮೫೦	೭೭.೯೨	೮೪.೨೦	೭೧.೪೩
		ನಗರ	೬೫೩೫೨	೫೧೩೫೯	೨೭೧೭೩	೨೪೧೮೬	೮೯.೧೦	೯೨.೯೩	೮೫.೧೫
೭	ಅಂಕೋಲ	ಒಟ್ಟು	೧೦೧೫೪೦	೬೯೧೬೩	೩೯೦೯೮	೩೦೦೬೫	೭೬.೮೭	೮೫.೭೪	೬೭.೭೬
		ಗ್ರಾಮೀಣ	೭೫೪೦೫	೪೮೬೬೭	೨೮೦೯೨	೨೦೫೭೫	೭೩.೨೩	೮೩.೧೨	೬೩.೦೦
		ನಗರ	೨೬೧೩೫	೨೦೪೯೬	೧೧೦೦೬	೯೪೯೦	೮೭.೧೪	೯೩.೨೩	೮೧.೦೦
೮	ಕುಮಟಾ	ಒಟ್ಟು	೧೪೫೭೭೨	೧೦೩೪೫೯	೫೭೪೯೧	೪೫೯೬೮	೭೯.೬೯	೮೭.೩೭	೭೧.೮೧
		ಗ್ರಾಮೀಣ	೧೧೧೨೭೪	೭೬೭೬೩	೪೩೦೮೮	೩೩೬೭೫	೭೭.೭೬	೮೬.೦೦	೬೯.೨೭
		ನಗರ	೩೪೪೯೮	೨೬೬೯೬	೧೪೪೦೩	೧೨೨೯೩	೮೫.೮೨	೯೧.೭೨	೭೯.೮೧
೯	ಸಿದ್ದಾಪೂರ	ಒಟ್ಟು	೧೦೦೭೭೪	೬೯೨೦೭	೩೮೨೭೧	೩೦೯೩೬	೭೮.೫೯	೮೬.೨೩	೭೦.೮೧
		ಗ್ರಾಮೀಣ	೮೬೭೨೫	೫೮೩೩೩	೩೨೪೧೩	೨೫೯೨೦	೭೭.೧೬	೮೫.೦೮	೬೯.೧೧
		ನಗರ	೧೪೦೪೯	೧೦೮೭೪	೫೮೫೮	೫೦೧೬	೮೭.೨೫	೯೩.೨೧	೮೧.೦೯
೧೦	ಹೊನ್ನಾವರ	ಒಟ್ಟು	೧೬೦೨೯೯	೧೦೬೭೩೧	೫೮೩೫೯	೪೮೩೭೨	೭೫.೮೫	೮೩.೫೧	೬೮.೨೯
		ಗ್ರಾಮೀಣ	೧೪೨೪೬೬	೯೨೭೪೧	೫೦೮೯೫	೪೧೮೪೬	೭೪.೩೩	೮೨.೨೯	೬೬.೫೦
		ನಗರ	೧೭೮೩೩	೧೩೯೯೦	೭೪೬೪	೬೫೨೬	೮೭.೭೪	೯೨.೮೭	೮೨.೫೨


೧೧	ಭಟ್ಕಳ	ಒಟ್ಟು	೧೪೯೩೧೧	೯೪೫೨೭	೫೧೩೮೯	೪೩೧೩೮	೭೩.೪೦	೮೧.೨೩	೬೫.೮೪
		ಗ್ರಾಮೀಣ	೧೦೭೧೪೦	೬೨೭೭೧	೩೫೦೦೨	೨೭೭೬೯	೬೭.೭೦	೭೭.೧೨	೫೮.೬೭
		ನಗರ	೪೨೧೭೧	೩೧೭೫೬	೧೬೩೮೭	೧೫೩೬೯	೮೮.೦೪	೯೧.೬೬	೮೪.೪೮
೭.ಹಾವೇರಿ ಜಿಲ್ಲೆ		ಒಟ್ಟು	೧೪೩೭೮೬೦	೮೪೬೯೬೦	೪೯೯೯೦೬	೩೪೭೦೫೪	೬೮.೦೯	೭೭.೯೪	೫೭.೬೦
		ಗ್ರಾಮೀಣ	೧೧೩೮೯೫೪	೬೫೨೧೬೯	೩೯೧೧೭೫	೨೬೦೯೯೪	೬೬.೧೯	೭೬.೯೩	೫೪.೭೪
		ನಗರ	೨೯೮೯೦೬	೧೯೪೭೯೧	೧೧೮೭೩೧	೮೬೦೬೦	೭೫.೩೦	೮೧.೭೯	೬೮.೪೩
೧	ಶಿಗ್ಗಾಂವ	ಒಟ್ಟು	೧೬೬೫೯೩	೯೩೭೦೮	೫೫೬೯೨	೩೮೦೧೬	೬೫.೭೦	೭೫.೩೮	೫೫.೩೧
		ಗ್ರಾಮೀಣ	೧೨೨೦೧೧	೬೭೨೮೬	೪೦೬೨೮	೨೬೬೫೮	೬೪.೪೪	೭೫.೨೩	೫೨.೮೭
		ನಗರ	೪೪೫೮೨	೨೬೪೨೨	೧೫೦೬೪	೧೧೩೫೮	೬೯.೧೭	೭೫.೭೭	೬೨.೦೧
೨	ಸವಣೂರ	ಒಟ್ಟು	೧೪೩೯೬೮	೭೩೬೨೨	೪೪೫೦೫	೨೯೧೧೭	೫೯.೮೮	೬೯.೮೨	೪೯.೧೭
		ಗ್ರಾಮೀಣ	೧೦೮೪೦೭	೫೬೨೪೨	೩೪೫೧೯	೨೧೭೨೩	೬೦.೫೨	೭೧.೬೬	೪೮.೫೪
		ನಗರ	೩೫೫೬೧	೧೭೩೮೦	೯೯೮೬	೭೩೯೪	೫೭.೮೮	೬೪.೧೫	೫೧.೧೩
೩	ಹಾನಗಲ್	ಒಟ್ಟು	೨೩೦೩೧೦	೧೩೪೨೭೯	೭೮೦೫೧	೫೬೨೨೮	೬೭.೯೨	೭೭.೦೩	೫೮.೩೪
		ಗ್ರಾಮೀಣ	೨೦೫೨೯೯	೧೧೮೩೩೯	೬೯೪೦೧	೪೮೯೩೮	೬೭.೧೬	೭೬.೮೨	೫೭.೦೦
		ನಗರ	೨೫೦೧೧	೧೫೯೪೦	೮೬೫೦	೭೨೯೦	೭೪.೧೦	೭೮.೭೨	೬೯.೨೮
೪	ಹಾವೇರಿ	ಒಟ್ಟು	೨೫೧೯೫೧	೧೪೩೦೨೦	೮೫೭೭೨	೫೭೨೪೮	೬೫.೪೬	೭೫.೯೫	೫೪.೨೪
		ಗ್ರಾಮೀಣ	೧೯೬೦೫೧	೧೦೩೭೨೫	೬೪೦೨೯	೩೯೬೯೬	೬೧.೧೭	೭೨.೮೦	೪೮.೬೪
		ನಗರ	೫೫೯೦೦	೩೯೨೯೫	೨೧೭೪೩	೧೭೫೫೨	೮೦.೩೪	೮೭.೦೩	೭೩.೩೫
೫	ಬ್ಯಾಡಗಿ	ಒಟ್ಟು	೧೨೭೮೭೯	೭೯೪೭೫	೪೬೭೩೭	೩೨೭೩೮	೭೧.೩೮	೮೧.೬೦	೬೦.೫೫
		ಗ್ರಾಮೀಣ	೧೦೨೨೨೧	೬೨೧೬೧	೩೬೯೭೬	೨೫೧೮೫	೬೯.೮೭	೮೦.೫೯	೫೮.೪೬
		ನಗರ	೨೫೬೫೮	೧೭೩೧೪	೯೭೬೧	೭೫೫೩	೭೭.೩೫	೮೫.೬೭	೬೮.೭೩
೬	ಹಿರೇಕೆರೂರ	ಒಟ್ಟು	೨೧೨೪೩೪	೧೩೭೧೪೭	೭೯೭೭೧	೫೭೩೭೬	೭೪.೦೮	೮೩.೬೭	೬೩.೯೦
		ಗ್ರಾಮೀಣ	೧೯೬೫೬೦	೧೨೫೮೭೭	೭೩೬೦೭	೫೨೨೭೦	೭೩.೪೬	೮೩.೩೯	೬೨.೯೨
		ನಗರ	೧೫೮೭೪	೧೧೨೭೦	೬೧೬೪	೫೧೦೬	೮೧.೭೧	೮೭.೧೭	೭೫.೯೭
೭	ರಾಣಿಬೆನ್ನೂರ	ಒಟ್ಟು	೩೦೪೭೨೫	೧೮೫೭೦೯	೧೦೯೩೭೮	೭೬೩೩೧	೬೯.೮೯	೭೯.೮೯	೫೯.೨೬
		ಗ್ರಾಮೀಣ	೨೦೮೪೦೫	೧೧೮೫೩೯	೭೨೦೧೫	೪೬೫೨೪	೬೫.೧೯	೭೬.೭೩	೫೨.೮೮
		ನಗರ	೯೬೩೨೦	೬೭೧೭೦	೩೭೩೬೩	೨೯೮೦೭	೮೦.೦೮	೮೬.೭೮	೭೩.೦೨

ಗದಗ, ಬೆಳಗಾವಿ, ಬಾಗಲಕೋಟ ಹಾಗೂ ಬಿಜಾಪೂರ ಜಿಲ್ಲೆಗಳಲ್ಲಿ (ಗ್ರಾಮೀಣ ಮತ್ತು ನಗರ ಪ್ರದೇಶದ ಸಾಕ್ಷರತೆ)



ಮೂಲ : ಸೆನ್ಸಸ್ ೨೦೦೧ ಮತ್ತು ಅಭಿವೃದ್ಧಿ ಅಧ್ಯಯನ ೨೦೦೩

ಧಾರವಾಡ, ಉ.ಕನ್ನಡ ಹಾಗೂ ಹಾವೇರಿ ಜಿಲ್ಲೆಗಳಲ್ಲಿ (ಗ್ರಾಮೀಣ ಮತ್ತು ನಗರ ಪ್ರದೇಶದ ಸಾಕ್ಷರತೆ)



ಮೂಲ : ಸೆನ್ಸಸ್೨೦೦೧ ಮತ್ತು ಅಭಿವೃದ್ಧಿ ಅಧ್ಯಯನ ೨೦೦೩

ಟಿಪ್ಪಣಿಗಳು :

೧. ಆಲೂರು ವೆಂಕಟರಾವ್ 'ನನ್ನ ಜೀವನ ಸ್ಮೃತಿಗಳು' ಧಾರವಾಡ ೧೯೭೪ ಪುಟ-೬೮

೨. ಧಾರವಾಡಕರ ರಾ.ಯ. 'ಹೊಸಗನ್ನಡ ಸಾಹಿತ್ಯದ ಉದಯಕಾಲ' ಧಾರವಾಡ ೧೯೭೫, ಪುಟ-೭-೮

೩. ಕುಲಕರ್ಣಿ. ಬೀ.ಗು. 'ಕರ್ನಾಟಕ ವಿದ್ಯಾವರ್ಧಕ ಸಂಘ; ಅಷ್ಟದಶಕಗಳ ಬೆಳಕು' ವಾಗ್ಭೂಷಣ (ಸಂ. ದೇಶಪಾಂಡೆ ಕೆ. ಎಸ್.) ೧೯೭೩ ಪುಟ-೧೮೭

೪. ಗೋವಿಂದರಾಜು. ಸಿ. ಆರ್. 'ಕರ್ನಾಟಕ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ' ಬೆಂಗಳೂರು:೨೦೦೦ ಪುಟ-೨೫

೫. 'ಆನ್ಯುವಲ್ ರಿಪೋರ್ಟ ಆಫ್. ಡಿ. ಪಿ. ಐ. ೧೮೬೫-೬೬ ಎಜ್ಯುಕೇಷನ್ ಡಿಪಾರ್ಟಮೆಂಟ ಬಾಂಬೆ ಪುಟ-೪೮

೬. ಅದೇ ಪುಟ -೭೯

೭. ಟಿಪ್ಪಣಿ ನಾಲ್ಕರಲ್ಲಿದ್ದಂತೆ ಪುಟ-೨೫

೮. ಹಾವನೂರು ಶ್ರೀನಿವಾಸ 'ಹೊಸಗನ್ನಡದ ಅರುಣೋದಯ' ಮೈಸೂರು ೧೯೭೪ ಪುಟ-೧೧೦

೯. ಪ್ಲೀಟ್. ಜೆ. ಎಫ್. ಡೈನಾಸ್ಟೀಸ್ ಆಫ್ ದಿ ಕ್ಯಾನರೀಸ್ ಡಿಸ್ಟ್ರಿಕ್ಟ್ಸ್ ಆಫ್ ದಿ ಬಾಂಬೆ ಪ್ರೆಸಿಡೆನ್ಸಿ ಬಾಂಬೆ ೧೮೮೨ ಪುಟ -೨-೩

೧೦. ದೇಶಪಾಂಡೆ ಕೆ. ಎಸ್. 'ಕನ್ನಡದ ಗುಡಿ ಕರ್ನಾಟಕ ವಿದ್ಯಾವರ್ಧಕ ಸಂಘ' ಧಾರವಾಡ ೧೯೯೪ ಪುಟ - ೨

೧೧. ಟಿಪ್ಪಣಿ ಒಂದರಲ್ಲಿದ್ದಂತೆ ಪುಟ- ೬೮

೧೨. ಆಲೂರು ವೆಂಕಟರಾವ್, 'ಕರ್ನಾಟಕತ್ವದ ವಿಕಾಸ,' ನವಜೀವನ ಗ್ರಂಥ ಭಂಡಾರ ಧಾರವಾಡ ೧೯೫೭ ಪುಟ -೧೦೬-೦೭

೧೩. ಕಾಮತ್ ಸೂರ್ಯನಾಥ 'ಕರ್ನಾಟಕತ್ವದ ಜಾಗೃತಿ' ಬೆಂಗಳೂರು ೧೯೮೧ ಪುಟ - ೪-೫

೧೪ ಕೆಂಪೇಗೌಡ. ಕೆ. 'ಕನ್ನಡ ಉಪಭಾಷೆಗಳ ಅಧ್ಯಯನ', ಮೈಸೂರು ೨೦೦೩ ಪುಟ-೪೦೨, ೪೦೬, ೪೧೮, ೪೨೦.

೧೫. 'ಅಭಿವೃದ್ಧಿ ಅಧ್ಯಯನ' ಸಮಾಜ ವಿಜ್ಞಾನ ಪತ್ರಿಕೆ ಸಂಪುಟ.೨ ಸಂಚಿಕೆ ೧ ಜನವರಿ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೩- ಪುಟ ೧೦೨-೧೦೬, ೧೧೨-೧೧೮

ಅಧ್ಯಾಯ - ೪

ಗಡಿನಾಡ ಕನ್ನಡಿಗರ ಶಿಕ್ಷಣ ಪದ್ಧತಿಗಳ ಅನುಷ್ಠಾನದ ವಿವಿಧ ಆಯೋಗ /ಸಮಿತಿಗಳ ಶಿಫಾರಸ್ಸುಗಳ ಪರಿಶೀಲನೆ

ಎಲ್ಲ ಬಗೆಯ ಅಸಮಾನತೆಗಳನ್ನು ವಿರೋಧಿಸುವ ಮತ್ತು ಸಮಾನತೆಗಳನ್ನು ಬೆಂಬಲಿಸುವ ಒಂದು ಪರಂಪರೆ, ಒಂದು ಚರಿತ್ರೆ ಕರ್ನಾಟಕಕ್ಕಿದೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸವಾನತೆಗಳನ್ನು ಕುರಿತಂತೆ ಅಧ್ಯಯನಗಳು ೨೦ನೇ ಶತಮಾನದ ಆದಿಯಲ್ಲೇ ಇಲ್ಲಿ ಪ್ರಾರಂಭವಾದವು. ಪ್ರಾದೇಶಿಕ ಅಸಮತೋಲನ ಕುರಿತಂತೆ ಹೆಚ್ಚು ಅಧ್ಯಯನಗಳನ್ನು ನಡೆಸಿರುವ ರಾಜ್ಯ ಕರ್ನಾಟಕ. ಅದೇ ರೀತಿ ಪ್ರಾದೇಶಿಕ ಅಸಮತೋಲಗಳನ್ನು ನಿವಾರಿಸುವ ಉದ್ದೇಶದಿಂದ ಕಾರ್ಯ ಯೋಜನೆಗಳನ್ನು ರೂಪಿಸಿ ಜಾರಿಗೆ ತರುವ ವಿಷಯದಲ್ಲೂ ಕರ್ನಾಟಕ ಇತರೇ ರಾಜ್ಯಗಳಿಗಿಂತ ಹೆಚ್ಚು ಮುಂದಿದೆ.

ಆದರೆ ೧೯೫೬ರಲ್ಲಿ ವಿಶಾಲ ಕರ್ನಾಟಕ ಉದಯವಾದಾಗ ಕಾಣಿಸಿಕೊಂಡ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮತೋಲನಗಳು ಒಂದಲ್ಲ ಒಂದು ರೀತಿಯಲ್ಲಿ, ಒಂದಲ್ಲ ಒಂದು ಪ್ರಮಾಣದಲ್ಲಿ ಇಂದಿಗೂ ಕಾಣಿಸಿಕೊಳ್ಳುತ್ತಿರುವುದು ನಿಜಕ್ಕೂ ಒಂದು ದುರಂತ. ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಕೇರಳ ಮುಂತಾದ ಪ್ರದೇಶಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡಿಗರೆಲ್ಲರೂ ಹಳೇ ಮೈಸೂರು ರಾಜ್ಯದ ಜೊತೆ ಸೇರಿ ಏಕೀಕರಣಕ್ಕೆ ಹೋರಾಟ ನಡೆಸಿದಾಗ ಕನ್ನಡಿಗರ ಬದುಕು ಶ್ರೀಮಂತಗೊಳ್ಳಬೇಕು. ಎಂಬುದು ಮೂಲ ಉದ್ದೇಶವಾಗಿತ್ತು ಏಕೀಕರಣ ಹೋರಾಟದಲ್ಲಿ ಇಂದಿನಂತೆ ಅಂದೂ ಕೂಡ ಹಿಂದುಳಿದಿದ್ದ ಉತ್ತರ ಕರ್ನಾಟಕದ ಜನರು ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಎಲ್ಲರ ಹೋರಾಟದ ಫಲವಾಗಿ ನವೆಂಬರ ೧,೧೯೫೬ ರಂದು ವಿಶಾಲ ಕರ್ನಾಟಕ ಉದಯವಾಯಿತು. ಈಗಾಗಲೇ ೫೦ ರಾಜ್ಯೋತ್ಸವಗಳನ್ನು ನಾಡು ಅತಿ ವಿಜೃಂಭಣೆಯಿಂದ ಆಚರಿಸಿದೆ. ಆದರೆ ನಾಡವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಏಕೀಕರಣವು ಇನ್ನೂ ಆಗಬೇಕಿದೆ. ಉತ್ತರ ಕರ್ನಾಟಕದ ಜನರು ಏಕೀಕರಣ ಪೂರ್ವದಲ್ಲಿ ತಾವು ಕಂಡ ಅಭಿವೃದ್ಧಿಯ ಕನಸುಗಳು ೫೦ ವರ್ಷಗಳ ನಂತರವೂ ನನಸಾಗಿಲ್ಲವೆಂದು ಮರುಗುತ್ತಿದ್ದಾರೆ. ಸಾಪೇಕ್ಷವಾಗಿ ಇಂದಿಗೂ ಉತ್ತರ ಕರ್ನಾಟಕದ ಪ್ರದೇಶವು ದಕ್ಷಿಣ ಕರ್ನಾಟಕದ ಪ್ರದೇಶಕ್ಕಿಂತ ಹಿಂದುಳಿದಿದೆ.''[೧]

ಪ್ರಸ್ತುತ ಅಧ್ಯಯನದಲ್ಲಿ ಗಡಿನಾಡ ಕನ್ನಡಿಗರ ಶಿಕ್ಷಣ ಪದ್ಧತಿಗಳ ಅನುಷ್ಠಾನದ ವಿವಿಧ ಆಯೋಗ/ಸಮಿತಿಗಳ ಶಿಫಾರಸ್ಸುಗಳ ಪ್ರಮುಖ ಆಯಾಮುಗಳ ಪರಿಶೀಲನೆಯ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ೧೯೫೬ ರಿಂದ ೨೦೦೬ ರವರೆಗೆ ಸುಮಾರು ೧೮ ಆಯೋಗಗಳು, ವರದಿಗಳು ,ಸಮಿತಿಗಳು, ಶಿಫಾರಸ್ಸುಗಳು ಗಡಿನಾಡ ಕನ್ನಡಿಗರ ಶಿಕ್ಷಣ ಪದ್ಧತಿಗಳ ಅನುಷ್ಠಾನಕ್ಕೆ ಗಡಿನಾಡಿನ ಜನರ ಶಿಕ್ಷಣದ ಸುಧಾರಣೆಯ ಬಗೆಗೆ ವರದಿಗಳನ್ನು ಒಪ್ಪಿಸಿವೆ. ಅವುಗಳಲ್ಲಿ ಮುಖ್ಯವಾಗಿ ಗೋಕಾಕ ಸಮಿತಿ ವರದಿ, ಡಾ. ಸರೋಜಿನಿ ಮಹಿಷಿ ವರದಿ, ಎಚ್. ನರಸಿಂಹಯ್ಯ ವರದಿ, ಚಂದರಗಿ ಸಮಿತಿ, ಡಾ.ರಾಜಾರಾಮಣ್ಣ ವರದಿ ಮತ್ತು ಬರಗೂರು ರಾಮಚಂದ್ರಪ್ಪರವರ ವರದಿಗಳು ಮಹತ್ವದವುಗಳಾಗಿದ್ದು, ಅವುಗಳನ್ನು ಒಂದೊಂದಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

೧. ಗೋಕಾಕ ವರದಿ - ೧೯೮೨

ಕನ್ನಡನಾಡು ನುಡಿಯ ಅಭಿವೃದ್ಧಿಗಾಗಿ ರಾಜ್ಯ ಸರಕಾರ ಕೈಗೊಂಡ ಕಾರ್ಯಕ್ರಮಗಳಲ್ಲಿ ಗೋಕಾಕ ವರದಿಯೂ ಒಂದು. ಗೋಕಾಕ ಸಮಿತಿ ವರದಿ ಕರ್ನಾಟಕ ಜನಜೀವನ ಹಾಗೂ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಗಮನಾರ್ಹವಾದ ಮೈಲುಗಲ್ಲಾಗಿದೆ. ಕನ್ನಡಿಗರ ಸಾಂಸ್ಕೃತಿಕ ಜೀವನದಲ್ಲಿ ಕ್ರಾಂತಿಕಾರಕ ವರದಿಯಾಗಿದೆ. ಅವರ ಜೀವನದಲ್ಲಿ ಭಾಷಾವಾರು ಪ್ರಾಂತ ರಚನೆ ಮೊದಲನೇ ಮೈಲುಗಲ್ಲು; ನಾಡಿಗೆ ಕರ್ನಾಟಕ ಎಂಬ ಅನ್ವರ್ಥಕನಾಮ ಪಡೆದುದು (೧೯೭೩) ಎರಡನೇಯ ಮೈಲುಗಲ್ಲು. ಹಾಗೇ ಗೋಕಾಕ ಸಮಿತಿ ವರದಿ ಮೂರನೇ ಮೈಲುಗಲ್ಲಾಗಿದೆ.

ಹಿನ್ನೆಲೆ :

ಕನ್ನಡನಾಡಿನಲ್ಲಿ ಶಾಲಾ ವ್ಯಾಸಂಗಕ್ರಮದಲ್ಲಿ ಭಾಷೆಗಳಿಗೆ ಯಾವ ಸ್ಥಾನವಿರಬೇಕು ಎಂಬ ವಿಚಾರವಾಗಿ ವಾದವಿವಾದ ಎದ್ದಿತು. ಈ ಸಮಸ್ಯೆ ಗಂಭೀರವಾದಂತೆ ಎಚ್ಚತ್ತ ಸರಕಾರ ಆ ಬಗ್ಗೆ ಗಮನ ಹರಿಸಿತು. ಆಗ ಮುಂದೆ ಬಂದ ಪ್ರಶ್ನೆಗಳು ಮೂರು ,

೧. ಶಾಲೆ ಪಠ್ಯಕ್ರಮದಲ್ಲಿ ಸಂಸ್ಕೃತವೂ ಒಂದು ಅಧ್ಯಯನ ವಿಷಯವಾಗಿ ಉಳಿಯಬೇಕೆ?

೨. ಹೌದು ಎಂದಾದರೆ ಕನ್ನಡಕ್ಕೆ ಪರ್ಯಾಯವಾಗದಂತೆ ಅದನ್ನು ಉಳಿಸಿಕೊಳ್ಳುವುದು ಹೇಗೆ?

೩. ತ್ರಿಭಾಷಾಸೂತ್ರಕ್ಕನುಗುಣವಾಗಿ ಕನ್ನಡವನ್ನು ಕಡ್ಡಾಯ ವಿಷಯವನ್ನಾಗಿ ಮಾಡುವುದು ಸೂಕ್ತವೆ ಮತ್ತು ಮಿಕ್ಕೆರಡು ಭಾಷೆಗಳ ಆಯ್ಕೆಯನ್ನು ವಿದ್ಯಾರ್ಥಿಗಳ ಇಚ್ಛೆಗೆ ಬಿಡಬೇಕೆ?

ಗೋಕಾಕ ವರದಿಯ ಸಾರ:

೧. ಹೈಸ್ಕೂಲು ಮಟ್ಟದಲ್ಲಿ ಕನ್ನಡವೇ ಏಕೈಕ ಪ್ರಥಮ ಭಾಷೆಯಾಗಿದ್ದು, ಅದಕ್ಕೆ ೧೫೦ ಅಂಕಗಳಿರಬೇಕು.

೨. ಇಂಗ್ಲೀಷ, ಸಂಸ್ಕೃತ, ಉರ್ದು ಅಥವಾ ಇನ್ನಿತರ ಯಾವುದೇ ಆಧುನಿಕ ಭಾರತೀಯ ಭಾಷೆ ಅಥವಾ ಲ್ಯಾಟಿನ್, ಪರ್ಶಿಯನ್, ಅರಬಿಕ್ ಇತ್ಯಾದಿ ಪ್ರಾಚೀನ ಭಾಷೆಗಳಲ್ಲೊಂದು ದ್ವಿತೀಯ ಭಾಷೆಯಾಗಿರಬೇಕು. ಮತ್ತು ಅದಕ್ಕೆ ೧೦೦ ಅಂಕಗಳಿರಬೇಕು

೩. ದ್ವಿತೀಯ ಭಾಷಾಪಟ್ಟಿಯಲ್ಲಿ ಆಯ್ಕೆಯಾದ ಭಾಷೆ ಬಿಟ್ಟು ಮಿಕ್ಕ ಯಾವುದಾದರೊಂದು ಭಾಷೆ ೫೦ ಅಂಕಗಳನ್ನೊಳಗೊಂಡ ಕಡ್ಡಾಯ ತೃತೀಯ ಭಾಷೆಯಾಗಿರಬೇಕು.

೪. ಭಾಷಾ ಶಾಸ್ತ್ರದಲ್ಲಿ ವಿಶೇಷ ಆಸಕ್ತಿಯುಳ್ಳ ಪ್ರತಿಭಾವಂತ ವಿದ್ಯಾರ್ಥಿಗಳಿಗೋಸ್ಕರ ನಾಲ್ಕನೇ ಭಾಷೆ ಆರಿಸಿಕೊಂಡು ಓದಿ ಹತ್ತನೆಯ ತರಗತಿಯಲ್ಲಿ ಪರೀಕ್ಷೆಗೆ ಕೂಡಲು ಅವಕಾಶ ಕಲ್ಪಿಸಬೇಕು. ಆದರೆ ಈ ನಾಲ್ಕನೇಯ ಭಾಷೆಯಲ್ಲಿ ಪಡೆದ ಅಂಕಗಳನ್ನು ಆ ವಿದ್ಯಾರ್ಥಿಗಳ ಫಲಿತಾಂಶ ನಿರ್ಧರಿಸುವಲ್ಲಿ ಪರಿಗಣಿಸಕೂಡದು.

ಆದರೆ ಈ ವರದಿಯನ್ನು ಪೂರ್ತಿ ಅಂಗೀಕರಿಸದ ಸರ್ಕಾರ ಅದನ್ನು ವಿಕೃತ ಮಾರ್ಪಾಡಿನೊಂದಿಗೆ ೧೯೮೨ರ ಎಪ್ರಿಲ್ ೧೯ರಂದು ಪ್ರಕಟಿಸಿತು. ತತ್‌ಕ್ಷಣದಲ್ಲೇ ಸರ್ಕಾರದ ತೀರ್ಮಾನದ ಪರ ಹಾಗೂ ವಿರೋಧಿ ಚಳವಳಿ ಕರ್ನಾಟಕದಾದ್ಯಂತ ತಲೆ ದೋರಿತು. ಗೋಕಾಕ ವರದಿಯನ್ನು ತಪ್ಪಾಗಿ ಗ್ರಹಿಸಿದ ಕೆಲವು ಭಾಷಾ ಅಲ್ಪಸಂಖ್ಯಾತರು ರಾಜಕೀಯ ವ್ಯಕ್ತಿಗಳ ಮುಷ್ಟಿಯಲ್ಲಿ ಸಿಲುಕಿ ಈ ಪೂರ್ಣವರದಿಯನ್ನೇ ವಿರೋಧಿಸತೊಡಗಿದರು. ಆದರೆ ಕ್ರಮೇಣ ಅದರ ಸತ್ಯಾಸತ್ಯತೆಗಳನ್ನು ಅರಿತಂತೆ ಗೋಕಾಕ ವರ್‍ದಿ ವಿರೋಧಿಗಳು ತಣ್ಣಗಾಗತೊಡಗಿದರು. ದಿನಾಂಕ ೧೯ ಎಪ್ರಿಲ್ ೧೯೮೨ರ ಸರ್ಕಾರದ ತೀರ್ಮಾನದ ವಿರೋಧ ಮಾತ್ರ ಬೃಹತ್ ಚಳವಳಿಯಾಗಿ ಮಾರ್ಪಟ್ಟಿತು. ಮೊದ ಮೊದಲು ಎಲ್ಲೆಡೆ ಕನ್ನಡ ಜನ ಸಪ್ಪಗಾದರೂ. ಗಂಡು ಮೆಟ್ಟಿನ ನಾಡೆಂದು ಹೆಸರಾದ ಧಾರವಾಡ ಪ್ರದೇಶದ ಜನತೆ ಮಾತ್ರ ಸಿಡಿದೆದ್ದಿತು ಅಲ್ಲಿ ಕನ್ನಡ ಕ್ರಿಯಾ ಸಮಿತಿಯ ಕೇಂದ್ರ ಶಕ್ತಿಯಾದ ಶ್ರೀ ಪಾಟೀಲ ಪುಟ್ಟಪ್ಪನವರ ನೇತೃತ್ವದಲ್ಲಿ ಸಾಹಿತಿ, ಕಲಾವಿದರು. ಕನ್ನಡಾಭಿಮಾನಿಗಳು ಪಾಲ್ಗೊಂಡು ಒಕ್ಕೊರಲಿನಿಂದ ಪೂರ್ಣ ವರದಿ ಜಾರಿಗಾಗಿ ಚಳವಳಿ ಮುಂದುವರಿಸಿದರು. ಈ ಮಧ್ಯೆ ಕನ್ನಡದ ಉಳಿವಿಗಾಗಿ ಚಳವಳಿಯಲ್ಲಿ ಧುಮುಕಿದ ಚಲನಚಿತ್ರ ಮೇರು ನಟ ಡಾ. ರಾಜಕುಮಾರ ಚಳವಳಿಗೆ ಹೊಸ ತಿರುವು ನೀಡಿದರು ಇಲ್ಲಿಯವರೆಗೂ ಸತ್ಯಾಗ್ರಹದಲ್ಲಿ ತೊಡಗಿದ್ದಂತಹ ಕೆಲವೇ ವ್ಯಕ್ತಿಗಳಿಗೆ ಸೀಮಿತ ವಿದ್ದಂತೆ ಕಂಡ ಚಳವಳಿ ಈಗ ಜನಾಂದೋಲನವಾಗಿ ಮಾರ್ಪಟ್ಟಿತು. ಕರ್ನಾಟಕದಾದ್ಯಂತ ಮೊಳಗಿದ ಅವರ ಕನ್ನಡ ಜಾಗ್ರತಿ ಜಾಥಾ ಚಳವಳಿಯನ್ನು ವೀಕ್ಷಿಸಿ ಅದರಿಂದಾಗಬಹುದಾದ ತೀವ್ರ ಪರಿಣಾಮವನ್ನು ಗ್ರಹಿಸಿದ ಸರಕಾರ ಜೂನ್ ೨೮ರಂದು ಬಹುಮಟ್ಟಿನ ಸಮಿತಿಯ ತೀರ್ಮಾನವನ್ನು ಪ್ರಕಟಿಸಿತು. ಅದು ಹೀಗಿದೆ'[೨]

ಹಿಂದಿನ ವ್ಯವಸ್ಥೆ	ಗೋಕಾಕ ಶಿಫಾರಸ್ಸು	ಸರಕಾರಿ ಅಂಗೀಕೃತ ಸೂತ್ರ
ಪ್ರಥಮ ಭಾಷೆ ಕನ್ನಡ ಅಥವಾ ಸಂಸ್ಕೃತ ಅಥವಾ ಇಂಗ್ಲೀಷನ್ನೊಳಗೊಂಡಂತೆ ಇತರ ಯಾವುದೇ ಭಾಷೆ (೧೫೦ ಅಂಕ) ದ್ವಿತೀಯ ಭಾಷೆ ಕಡ್ಡಾಯ ಇಂಗ್ಲೀಷ (೧೦೦ ಅಂಕಗಳು)	ಕನ್ನಡ ಕಡ್ಡಾಯ(೧೫೦ ಅಂಕ) ಇಂಗ್ಲೀಷ ಅಥವಾ ಇತರೆಯಾವುದೇ ಆಧುನಿಕ ಭಾರತೀಯ ಭಾಷೆ ಅಥವಾ ಸಂಸ್ಕೃತ, ಪರ್ಶಿಯನ್, ಲ್ಯಾಟಿನ್ ಇತ್ಯಾದಿ	೧. ಪ್ರೌಢ ಶಾಲಾ ಹಂತದಲ್ಲಿ ೧೫೦ ಅಂಕ ಗಳ ಪ್ರಾದೇಶಿಕ ಭಾಷೆ ಕನ್ನಡ ಕಲಿಕೆ ಕಡ್ಡಾಯ ೨. ಪ್ರಸಕ್ತ ಶಿಕ್ಷಣ ವರ್ಷ (೮೨-೮೩) ದಿಂದಲೇ ಪ್ರಾಥಮಿಕ ಒಂದನೇಯ ತರಗತಿ ಯಿಂದ ಕನ್ನಡ ಕಲಿಕೆ ಆರಂಭ ೩. ಕನ್ನಡೇತರ ಮಕ್ಕಳಿಗೆ ಮೂರನೇಯ ತರಗತಿಯಿಂದ ಕನ್ನಡ ಕಡ್ಡಾಯ ಕಲಿಕೆ.

ಅನುಬಂಧ

ಪ್ರಸ್ತುತ ವ್ಯವಸ್ಥೆ	ಗೋಕಾಕ ಶಿಫಾರಸ್ಸು	ಸರಕಾರಿ ಅಂಗೀಕೃತ ಸೂತ್ರ
ತೃತೀಯ ಭಾಷೆ ಹಿಂದಿ ಸಂಸ್ಕೃತ ಇತ್ಯಾದಿ ಯಾವುದಾದರೊಂದು ಭಾಷೆ ಐಚ್ಛಿಕ (೫೦ ಅಂಕ)	ಇಂಗ್ಲೀಷ, ಸಂಸ್ಕೃತ, ಪರ್ಶಿಯನ್, ಲ್ಯಾಟಿನ್ ಅಥವಾ ಇತರ ಯಾವುದೇ ಆಧುನಿಕ ಭಾರತೀಯ ಭಾಷೆ ಕಡ್ಡಾಯ (೫೦ ಅಂಕ)	೧. ಪ್ರಾದೇಶಿಕ ಭಾಷೆಯಾದ ಮೇಲೆ ಉಳಿದೆರಡು ಭಾಷೆಗಳಲ್ಲಿ ಉರ್ದು, ತಮಿಳು, ಮಲಯಾಳಂ, ತೆಲುಗು, ಮರಾಠಿ, ಹಿಂದಿ, ಇಂಗ್ಲೀಷ, ಸಂಸ್ಕೃತ, ಅರೇಬಿಕ್, ಪರ್ಶಿಯನ್‌ಗಳ ಪೈಕಿ ಎರಡನ್ನು ಕಲಿಯಬೇಕು. ಎರಡು ಭಾಷೆಗಳಿಗೆ ತಲಾ ೧೦೦ ಅಂಕಗಳು ೨. ಪ್ರಥಮ ಭಾಷೆಗೆ (ಪ್ರಾದೇಶಿಕ ಭಾಷೆ ಕನ್ನಡ) ಸಂಬಂಧಿಸಿದಂತೆ, ಭಾಷಾ ಅಲ್ಪ ಸಂಖ್ಯಾತರಿಗೆ ಹತ್ತು ವರ್ಷ ಕಾಲ ಹದಿನೈದು ಅಂಕಗಳ ಕೃಪಾಂಕದ ವ್ಯವಸ್ಥೆ ೩. ಹಿಂದಿಯೇತರರು ಹಿಂದಿಯನ್ನು ಕಲಿತು ಪರೀಕ್ಷೆ ಎದುರಿಸಿದರೂ ಆ ವಿದ್ಯಾರ್ಥಿಗಳಿಗೂ ಹದಿನೈದು ಅಂಕಗಳ ವ್ಯವಸ್ಥೆ ೪. ಶಿಪಾರಸ್ಸು ಜಾರಿ ಕ್ರಮದ ಸಮರ್ಪಕತೆ ಶಿಫಾರಸ್ಸು ಉಸ್ತುವಾರಿಕೆಗೆ ಉನ್ನತ ಸಮಿತಿ ರಚನಗೆ ನಿರ್ಧಾರ.

೨. ಡಾ. ಎಚ್. ನರಸಿಂಹಯ್ಯ ಸಮಿತಿ ವರದಿ - ೧೯೯೨

೧೯೯೧ ನೇ ಜನವರಿಯಲ್ಲಿ ಸರಕಾರವು ಡಾ. ಎಚ್.ನರಸಿಂಹಯ್ಯನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತು. ಹಿಂದಿನ ವರದಿಯ ಹಲವು ಅಂಶಗಳನ್ನು ಉಳಿಸಿಕೊಂಡು ಡಾ. ಎಚ್.ನರಸಿಂಹಯ್ಯ ಸಮಿತಿಯು೧೯೯೧ರ ಜನವರಿಯಲ್ಲಿ ಅನಧಿಕೃತ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಸಮಸ್ಯೆ ಕುರಿತು ವರದಿಯನ್ನು ಸರಕಾರಕ್ಕೆ ಸಲ್ಲಿಸಿತು. ಈ ಸಮಿತಿಯು ಜೂನ್ ೧೯೯೧ರ ತನ್ನ ವರದಿಯಲ್ಲಿ ''ಅನುದಾನ ಸಂಹಿತೆಯ ನಿಯಮಗಳನ್ನು ಪೂರೈಸಿದ್ದಲ್ಲಿ ಮಾನ್ಯತೆ ನೀಡಿ ಈ ವರ್ಷದಿಂದಲೇ ಮಾತೃಭಾಷೆ ಮಾಧ್ಯಮದಲ್ಲಿ ಕಲಿಯಲು ಮಾತ್ರ ಪ್ರಥಮ ತರಗತಿಗೆ ಪ್ರವೇಶ ಕೊಡಬೇಕು'' ಎಂಬ ಶಿಫಾರಸ್ಸು ಮಾಡುವುದರ ಮೂಲಕ ಪ್ರಾಥಮಿಕ ಹಂತದಲ್ಲಿ ಮಾತೃಭಾಷಾಯಲ್ಲಿ ಮಾಧ್ಯಮ ಕಡ್ಡಾಯವೆಂಬ ನೀತಿಗೆ ಪುಷ್ಟಿ ನೀಡಿತು. ಕನ್ನಡೇತರರು ತಮ್ಮ ಮಾತೃಭಾಷೆಯಲ್ಲಿ ಓದಲು ಅಗತ್ಯವಿರುವಷ್ಟು ಸಂಖ್ಯೆ ಇಲ್ಲದಿದ್ದಲ್ಲಿ ಪ್ರಾದೇಶಿಕ ಭಾಷೆಯನ್ನು (ಕನ್ನಡ) ಮಾಧ್ಯಮವಾಗಿ ಆಯ್ದು ಹಮ್ಮಿಕೊಳ್ಳಬೇಕೆಂದೂ ಈ ವರದಿ ಹೇಳಿದೆ. ಈಗಾಗಲೇ ಅಂಗೀಕೃತವಾದ ಆಂಗ್ಲ ಮಾದ್ಯಮ ಶಾಲೆಗಳಲ್ಲೂ ೧೯೯೨ನೇ ಸಾಲಿನಿಂದ ಮಾತೃಭಾಷೆ ಮಾಧ್ಯಮ ಬರಬೇಕೆಂದು ಸೂಚಿಸಿದ ಡಾ. ಎಚ್.ನರಸಿಂಹಯ್ಯ ವರದಿಯು ಇನ್ನು ಮುಂದೆ ಪ್ರಾಥಮಿಕ ಹಂತದಲ್ಲಿ ಸಿ.ಬಿ. ಎಸ್.ಇ. ಮತ್ತು ಐ.ಸಿ. ಎಸ್. ಇ. ಶಿಕ್ಷಣ ಶಾಲೆಗಳಿಗೆ ರಾಜ್ಯದಲ್ಲಿ ಅನುಮತಿ ನೀಡಬಾರದೆಂದೂ ಹೇಳಿದೆ.

ಡಾ. ಎಚ್. ನರಸಿಂಹಯ್ಯ ವರದಿಯ ಸಾರ

೧. ಒಂದನೇಯ ತರಗತಿಯಿಂದ ನಾಲ್ಕನೇಯ ತರಗತಿಯವರೆಗೆ ಶೈಕ್ಷಣಿಕವಾಗಿ ಬೋಧನಾ ಮಾಧ್ಯಮ ಅವರವರ ಮಾತೃ ಭಾಷೆಯಲ್ಲೇ ಇರಬೇಕು.

೨. ಸರಕಾರಿ ಉದ್ಯೋಗ ಬಯಸುವವರು ಹತ್ತನೇಯ ತರಗತಿಯಲ್ಲಿ ಕನ್ನಡ ಕಡ್ಡಾಯವಾಗಿ ಕಲಿತಿರಬೇಕು (ಕನಿಷ್ಠ ಎರಡನೇಯ ಅಥವಾ ಮೂರನೇಯ ಭಾಷೆಯಾಗಿ) ಅಥವಾ ಇತರ ಭಾಷೆಗಳಲ್ಲಿ ಹತ್ತನೇ ತರಗತಿ ತೇರ್ಗಡೆಯಾದವರು ಪ್ರತ್ಯೇಕವಾಗಿ ಏಳನೇಯ ತರಗತಿಯ ಕನ್ನಡ ಪತ್ಯದಲ್ಲಿ ತೇರ್ಗಡೆ ಹೊಂದಿರಬೇಕಾಗಿದೆ.

೩. ಪ್ರಾದೇಶಿಕ ಭಾಷೆ ಕನ್ನಡವಾದ ಮೇಲೆ ಉಳಿದೆರಡು ಭಾಷೆಗಳಿಗೆ ನಿಗದಿಗೊಳಿಸಿರುವ ೧೦೦ ಅಂಕಗಳಲ್ಲಿ ಶೇಕಡಾ ೩೦ ಅಂಕ ಗಳಿಸಲೇಬೇಕು.[೩]

೩. ಡಾ. ಸರೋಜಿನಿ ಮಹಿಷಿ ವರದಿ -೧೯೮೪

ಕನ್ನಡ ಪರ ಚಳವಳಿ ಇಂದು ಕೇವಲ ಭಾಷೆಯ ಪ್ರಶ್ನೆಮಾತ್ರವಾಗಿರದೆ ಕನ್ನಡಿಗರ ಅನ್ನದ ಅಸ್ತಿತ್ವದ ಪ್ರಶ್ನೆಯೂ ಆಗಿದೆ . ತಮ್ಮ ಅತಿಯಾದ ಔದಾರ್ಯ ಮತ್ತು ಸಂಕೋಚಗಳಿಂದಾಗಿ

ವಂಚನೆಗೆ ಒಳಗಾಗುತ್ತಿರುವ ಕನ್ನಡಿಗರು ಜಾಗೃತರಾಗಿ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸಲೇಬೇಕಾದ ಅನಿವಾರ್ಯ ಉಂಟಾಗಿದೆ. ಕನ್ನಡಿಗರು ಕನ್ನಡ ನುಡಿ, ನೆಲ, ಜಲಗಳನ್ನು ಸಂರಕ್ಷಿಸಿಕೊಳ್ಳದಿದ್ದರೆ ತಮ್ಮ ನೆಲದಲ್ಲೇ ಪರಕೀಯರಾಗಿ ಬಿಡುವ ಅಪಾಯಗಳಿವೆ ಅದನ್ನು ಅವರು ಕ್ರಮೇಣ ಮನಗಾಣತೊಡಗಿದ್ದಾರೆ.

೧೯೮೨ರಲ್ಲಿ ಅನುಷ್ಠಾನಕ್ಕಾಗಿ ಬಂದ 'ಗೋಕಾಕ ವರದಿ'ಯು ಉದ್ದಗಲಕ್ಕೂ ನಡೆದ ಕನ್ನಡಪರ ಚಳವಳಿ ಕನ್ನಡಿಗರಲ್ಲಿ ಸ್ವಲ್ಪಮಟ್ಟಿಗಾದರೂ ಕನ್ನಡ ಪ್ರಜ್ಞೆಯನ್ನುಂಟುಮಾಡಿತು. ಇದು ಕರ್ನಾಟಕದ ಎಲ್ಲ ರಂಗಗಳಲ್ಲಿ ಕನ್ನಡಕ್ಕೆ ಆದ್ಯತೆ ದೊರಕಿಸಿಕೊಳ್ಳುವುದಾಗಿತ್ತು. ಅದೇ ರೀತಿಯಲ್ಲಿ ರಾಜ್ಯದಲ್ಲಿನ ಕೇಂದ್ರ ಸರಕಾರಿ ಸ್ವಾಮ್ಯದ ಕಾರ್ಖಾನೆ, ಕಛೇರಿ, ಖಾಸಗಿ ಕಾರ್ಖಾನೆ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನೇಮಕಾತಿ ಹಾಗೂ ಇತರ ವಿಷಯಗಳಲ್ಲಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯಗಳನ್ನು ಅಧ್ಯಯನ ಮಾಡಿ, ಅವುಗಳ ನಿವಾರಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸಲು ಗೋಕಾಕ ಸಮಿತಿಯ ಮಾದರಿಯಲ್ಲೇ ಒಂದು ಉನ್ನತಮಟ್ಟದ ಸಮಿತಿಯನ್ನು ರಚಿಸುವುದೂ ಸೇರಿದ್ದವು. ಸರಕಾರ ಕಡೆಗೂ ಚಳವಳಿಗೆ ಮಣಿಯಲೇಬೇಕಾಯಿತು. ಸಂಸತ್ ಸದಸ್ಯರಾಗಿದ್ದ ಮಾರ್ಗರೇಟ್ ಆಳ್ವ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ಮೇಲೆ ಹೇಳಿರುವ ಉದ್ದೇಶಗಳಿಗಾಗಿ ರಚಿಸಿತು. ಮಾರ್ಗರೇಟ್ ಆಳ್ವ ಅವರು ಅಧ್ಯಕ್ಷರಾಗಲು ನಿರಾಕರಿಸಿದ್ದರಿಂದ ಸಂಸತ್ ಸದಸ್ಯರಾಗಿದ್ದ ಸರೋಜಿನಿ ಮಹಿಷಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಎಂ.ಗೋಪಾಲಕೃಷ್ಣ ಅಡಿಗ, ಸಿದ್ದಯ್ಯ ಪುರಾಣಿಕ, ಬಿ. ಎಸ್.ಹನುಮಾನ, ಜಿ.ಕೆ.ಸತ್ಯ, ಜಿ. ನಾರಾಯಣಕುಮಾರ, ಕೆ. ಪ್ರಭಾಕರ ರೆಡ್ಡಿ ಅವರು ಈ ಸಮಿತಿಯ ಸದಸ್ಯರಾದರು. ಸಮಿತಿ ಮೂರು ವರ್ಷಗಳ ಕಾಲ ನಾಡಿನಾದ್ಯಂತ ಸಂಚರಿಸಿ, ವ್ಯಾಪಕವಾದ ಅಧ್ಯಯನ ನಡೆಸಿ, ವಿವಿಧ ಮೂಲಗಳಿಂದ ಅಂಕಿ-ಅಂಶಗಳನ್ನು ಕಲೆಹಾಕಿ ೧೩-೬-೧೯೮೪ರಂದು ವರದಿಯನ್ನು ಸಲ್ಲಿಸಿತು.[೪]

ಡಾ.ಸರೋಜಿನಿ ಮಹಿಷಿ ವರದಿಯ ಸಾರ:

೧. ''ಕನ್ನಡಿಗರು'' ಎಂದರೆ ಕರ್ನಾಟಕದಲ್ಲಿ ಕೊನೆಯ ಪಕ್ಷ ಹದಿನೈದು ವರ್ಷ ನೆಲಸಿ, ಕನ್ನಡವನ್ನು ಮಾತನಾಡಬಲ್ಲ, ಓದಿ ಬರೆಯಬಲ್ಲ ಎಲ್ಲ ವ್ಯಕ್ತಿಗಳು.

೨. ಕೇಂದ್ರ ಸರಕಾರದ ಆದೇಶಕ್ಕನುಗುಣವಾಗಿ ಕೇಂದ್ರ ಕಾರ್ಖಾನೆ ಮತ್ತು ಕಛೇರಿಗಳಲ್ಲಿ ಕನ್ನಡಿಗರಿಗೆ ಸಲ್ಲತಕ್ಕ ಉದ್ಯೋಗದ ಪ್ರಮಾಣಗಳು ಈ ಕೆಳಕಂಡಂತಿರಬೇಕು.(ಅ) ನಾಲ್ಕನೇಯ ವರ್ಗದ(ಗ್ರೂಪ್ 'ಡಿ') ಹುದ್ದೆಗಳಲ್ಲಿ ೧೦೦% (ಆ) ವೇತನ ಶ್ರೇಣಿ ರೂ.೧೨೫೦(ಈಗ ರೂ.೩.೫೦೦) ತನಕ ಇರುವ ಇತರ ಹುದ್ದೆಗಳಲ್ಲಿ ಕನಿಷ್ಠ ೮೦% (ಇ)

ಉಳಿದ ಮೇಲ್ಮಟ್ಟದ, ನೇರ ನೇಮಕಾತಿ ಆಧಾರದ ಮೇಲೆ ಭರ್ತಿ ಮಾಡುವ ಹುದ್ದೆಗಳಲ್ಲಿ ಕನಿಷ್ಠ ೬೫% ಈ ಪ್ರಮಾಣದಲ್ಲಿ ಕನ್ನಡಿಗರು ಎಲ್ಲೆಲ್ಲಿ ಇಲ್ಲವೋ ಅಲ್ಲಿ ಆ ಪ್ರಮಾಣ ತಲುಪುವವರೆಗೆ ಎಲ್ಲ ಖಾಲಿ ಹುದ್ದೆಗಳಿಗೆ ಕನ್ನಡಿಗರೇ ನೇಮಕವಾಗಬೇಕು. ಇದು ಬ್ಯಾಂಕುಗಳಿಗೂ, ರೈಲ್ವೆಗೂ ಅನ್ವಯವಾಗುತ್ತದೆಯೆಂದು ಹೇಳಬೇಕಾಗಿಲ್ಲ.

೨. ರಾಜ್ಯ ಸರಕಾರ ಕಾರ್ಖಾನೆ , ಕಛೇರಿಗಳಲ್ಲಿ ಉನ್ನತ ಮಟ್ಟದ ತಾಂತ್ರಿಕ ಪರಿಣತಿಯ ಹುದ್ದೆಗಳನ್ನು ಹೊರತುಪಡಿಸಿ, ಎಲ್ಲ ಕಡೆಗೂ ಕನ್ನಡಿಗರನ್ನೇ ಆರಿಸಬೇಕು.

೪. ಖಾಸಗಿ ಉದ್ಯಮಗಳಲ್ಲೂ ಇದೇ ರೀತಿ ನಡೆಯುವಂತೆ ನೆಲ, ನೀರು, ವಿದ್ಯುತ್ತುಗಳನ್ನು ಒದಗಿಸಿರುವ ರಾಜ್ಯ ಸರಕಾರವು ಒತ್ತಡವನ್ನು ತರಲು ಅದಕ್ಕೆ ಹಕ್ಕಿದೆ.

೫. ಎಲ್ಲ ಹುದ್ದೆಗಳನ್ನೂ ರಾಜ್ಯದ ಎಲ್ಲ ಉದ್ಯೋಗ ವಿನಿಮಯ ಕೇಂದ್ರಗಳಿಂದ ಹೆಸರುಗಳನ್ನು ಪಡೆದು ಅವುಗಳಿಂದ ಮಾತ್ರ ಆಯ್ಕೆ ಮಾಡಿಕೊಳ್ಳಬೇಕು. ಉದ್ಯೋಗ ವಿನಿಮಯ ಕೇಂದ್ರಗಳಿಗೆ ಪತ್ರ ಬರೆಯುವಾಗ, ಕನ್ನಡ ಭಾಷಾ ಜ್ಞಾನವಿರುವವರ ಹೆಸರನ್ನು ಮಾತ್ರ ಕಳಿಸಬೇಕೆಂದು ತಿಳಿಸಬೇಕು.

೬. ಕೇಂದ್ರೋದ್ಯಮ , ಕಛೇರಿ, ಬ್ಯಾಂಕು, ರೈಲ್ವೆ ಇತ್ಯಾದಿ ಕಡೆ ನೇಮಕಾತಿ ಮಾಡುವ ಮಂಡಲಿಗಳಲ್ಲಿ ರಾಜ್ಯ, ಸರಕಾರದ ಪ್ರತಿನಿಧಿಯೊಬ್ಬರು ಇರಬೇಕು. ಆ ಪ್ರತಿನಿದಿಗಳು ಆಗಾಗ್ಗೆ ಕನ್ನಡಿಗರು ನೇಮಕಗೊಂಡ ಪ್ರಮಾಣವನ್ನು ಸರಕಾರಕ್ಕೆ ತಿಳಿಸಬೇಕು.

೭. ಎಲ್ಲ ಉದ್ಯಮಗಳು ಆಯಾ ವರ್ಷ ನೇಮಕಗೊಂಡ ಕನ್ನಡಿಗರ ಮತ್ತು ಕನ್ನಡೇತರರ ಪಟ್ಟಿಯನ್ನು ರಾಜ್ಯ ಸರಕಾರಕ್ಕೆ ಒದಗಿಸಬೇಕು.

೮. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟಿನ ಮೀಸಲಾತಿಗಳು ಕನ್ನಡಿಗ ದಲಿತರಿಗೇ ದೊರಕಬೇಕು.

೯. ನೀರಾವರಿ ಪ್ರದೇಶದ ಜಮೀನುಗಳನ್ನು ಅನ್ಯಪ್ರಾಂತೀಯರು ಕೊಳ್ಳದಂತೆ ಮಾಡಲು, ಮಹಾರಾಷ್ಟ್ರ ಸರಕಾರ ಕೈಗೊಂಡಿರುವ ಕಾನೂನನ್ನು ಇಲ್ಲಿಯೂ ಮಾಡಬೇಕು.

೧೦. ರಾಜ್ಯದ ಮುಖ್ಯ ನಗರ ನಿವೇಶನಗಳು ಕನ್ನಡಿಗರಿಗೇ ದೊರಕಬೇಕು.

ಡಾ. ಸರೋಜಿನಿ ಮಹಿಷಿ ಸಮಿತಿಯು ಸರಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿರುವ ಶಿಪಾರಸ್ಸುಗಳನ್ನು ಪರಿಶೀಲಿಸಿ ಆ ಶಿಫಾರಸುಗಳ ಬಗ್ಗೆ ಸಚಿವ ಸಂಪುಟದ ಉಪಸಮಿತಿಯ ಅನುಬಂಧದಲ್ಲಿ ನಮೂದಿಸಿರುವ ಶಿಫಾರಸ್ಸುಗಳನ್ನು ಸರಕಾರವು ಕೆಲವೊಂದು ಮಾರ್ಪಾಟಿನೊಂದಿಗೆ ಅಂಗೀಕರಿಸಿದೆ ಮತ್ತು ಅನುಮೋದಿಸಿದೆ. ಕನ್ನಡ ನಾಡು- ನುಡಿಯ ಬಗೆಗೆ ಆಸಕ್ತಿ ತಳೆದಿರುವ ಅಭಿಮಾನ ಹೊಂದಿರುವ ಎಲ್ಲ ಕನ್ನಡಿಗರಿಗೂ ಈ ವರದಿಯು ಬಹಳ ಉಪಯುಕ್ತವಾಗಿದೆ.[೫]

೪. ಚಂದರಗಿ ಸಮಿತಿ ವರದಿ -೧೯೯೯

ಕರ್ನಾಟಕದ ಗಡಿ ಭಾಗವಾದ ಬೆಳಗಾವಿ ನಗರ ಹಾಗೂ ಬೆಳಗಾವಿ ತಾಲೂಕಿನ ಕನ್ನಡ ಸರಕಾರಿ ಕನ್ನಡ ಪ್ರಾಥಮಿಕ ಶಾಲೆಗಳ ದುಸ್ಥಿತಿಯ ಬಗ್ಗೆ ಹಾಗೂ ಗಡಿ ಭಾಗದ ಶಾಲೆಗಳ ಸುಧಾರಣೆಗಾಗಿ ಕನ್ನಡ ಸಂಘಟನಗಳ ಕ್ರಿಯಾ ಸಮಿತಿ ಬೆಳಗಾವಿಯ ಅಧ್ಯಕ್ಷರಾದ ಶ್ರೀ ಅಶೋಕ ಚಂದರಗಿ ಮತ್ತು ಸಮಿತಿಯ ಇತರ ಸದಸ್ಯರಾದ ಸರ್ವಶ್ರೀ ಅರ್ಜುನ ಹಂಪಿಹೊಳಿ, ಬಾಸೂರು ತಿಪ್ಪೇಸ್ವಾಮಿ, ಮಹಾಂತೇಶ ಗದ್ದಿಹಳ್ಳಿ ಶೆಟ್ಟಿ, ಶಶಿಧರ ಘಿವಾರಿ, ಶಂಕರ ಕಳಸಣ್ಣನವರ ,ವಿನಯ ಧವಳಿ, ರಮೇಶ ಸೊಂಟಕ್ಕಿ ,ಶಿವಪ್ಪ ಶಮರಂತ ಮುಂತಾದ೯ ಜನ ಸದಸ್ಯರ ಸಮಿತಿಯನ್ನು ಆಗಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಕನ್ನಡ ಹೋರಾಟಗಾರರಾದ ಪ್ರೊ. ಚಂದ್ರಶೇಖರ ಪಾಟೀಲರ ಸೂಚನೆಯ ಮೇರೆಗೆ ಚಂದರಗಿ ಸಮಿತಿ ವರದಿಯು ೧೯೯೯ರಲ್ಲಿ ಸಿದ್ದವಾಗಿದ್ದು ಈ ವರದಿಯಲ್ಲಿ ಬೆಳಗಾವಿ ಗಡಿಭಾಗದ ಕನ್ನಡ ಶಾಲೆಗಳ ಸ್ಥಿತಿ- ಗತಿ ಬಗ್ಗೆ ಕಾರಣ, ಪರಿಹಾರೋಪಾಯಗಳ ಕುರಿತು ಸವಿವರ ಈ ಕೆಳಗಿನಂತಿರುತ್ತದೆ.

ಗಡಿಭಾಗದ ಕನ್ನಡ ಪ್ರಾಥಮಿಕ ಶಾಲೆಗಳ ಸ್ಥಿತಿ-ಗತಿ

ಬೆಳಗಾವಿ ನಗರ ಹಾಗೂ ಬೆಳಗಾವಿ ಗ್ರಾಮೀಣ ಭಾಗದಲ್ಲಿಯ ಸರಕಾರಿ ಕನ್ನಡ ಪ್ರಾಥಮಿಕ ಶಾಲೆಗಳ ಸ್ಥಿತಿ- ಗತಿಯ ಬಗ್ಗೆ ಅಧ್ಯಯನ ಮಾಡುತ್ತ ಹೋದಂತೆ ಒಂದು ಅಂಶ ಸ್ಪಷ್ಟವಾಗುತ್ತದೆ. ಈ ಶಾಲೆಗಳು ಅವ್ವ- ಅಪ್ಪ ಇಲ್ಲದ ಅನಾಥ ಮಕ್ಕಳಂತೆ ಇವೆ. ದಾರಿಯಲ್ಲಿ ಹೋಗುವ ಬರುವ ಜನರು ಕರುಣೆಯಿಂದ ಅನಾಥ ಮಕ್ಕಳ ಕೈಗೆ ಹತ್ತು ಪೈಸೆ ಇಕ್ಕುವಂತೆ ಈ ಶಾಲೆಗಳಿಗೆ ಕನ್ನಡದ ಕಳಕಳಿ ಇರುವವರು ದೇಣಿಗೆ ರೂಪದಲ್ಲಿ ಅಷ್ಟಿಷ್ಟು ನೆರವು ನೀಡಬೇಕಾದ ಸ್ಥಿತಿ ಇದೆ.

ಬೆಳಗಾವಿ ನಗರ ಹಾಗೂ ಉಪನಗರಗಳಾದ ಖಾಸಬಾಗ, ವಡಗಾವ, ಶಹಾಪೂರ ಮತ್ತಿತರ ಪ್ರದೇಶಗಳಲ್ಲಿನ ಕನ್ನಡ ಶಾಲೆಗಳ ಪೈಕಿ ಬಹುತೇಕ ಶಾಲೆಗಳು ೧೯೬೦ ರ ದಶಕದಲ್ಲಿ ಕಟ್ಟಲ್ಪಟ್ಟಿವೆ. ಈ ಶಾಲೆಗಳನ್ನು ಕಟ್ಟಿದ ನಂತರ ಅವುಗಳ ಸಂರಕ್ಷಣೆಯತ್ತ ಕಿಂಚಿತ್ತು ಗಮನ ಹರಿಸಲಾಗಿಲ್ಲ. ಬೃಹತ್ ಕಟ್ಟಡಗಳಾಗಿರುವ ಈ ಶಾಲೆಗಳಿಗೆ ಪ್ರತಿ ವರ್ಷ ಸುಣ್ಣ- ಬಣ್ಣ ಬಳೆಯುವುದಕ್ಕೂ ಸಾಧ್ಯವಾಗಿಲ್ಲ. ಸುಣ್ಣ- ಬಣ್ಣಕ್ಕೆ ಸಾಕಾಗುವಷ್ಟು ದುಡ್ಡನ್ನು ಸರಕಾರ ಒದಗಿಸಿಲ್ಲ. ಪ್ರಾಥಮಿಕ ಶಾಲೆಗಳು ಸರಕಾರದ ಎಲ್ಲ ಯೋಜನೆಗಳಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿವೆ ಹಾಗೂ ಸರಕಾರದಲ್ಲಿರುವವರ ದೃಷ್ಟಿಯಲ್ಲಿ ಅತ್ಯಂತ ನಿಕೃಷ್ಟವಾಗಿ ಕಾಣಲ್ಪಡುತ್ತಿವೆ ಎಂದರೆ ಅತಿಶಯೋಕ್ತಿಯೆನಿಸಲಾರದು.

ಪ್ರಾಥಮಿಕ ಶಾಲೆಗಳ ಬಗ್ಗೆ ಸರಕಾರದ ಮೂಲ ನೀತಿಯೇ ತಪ್ಪಾಗಿದೆ. ಈ ಶಾಲೆಗಳಿಗೆ '' ಶಾಲಾ ಸುಧಾರಣಾ ಸಮಿತಿ'' ಎಂಬ ಹೆಸರಿನ ''ನಾಮ ಕೆ ವಾಸ್ತೆ'' ಸಮಿತಿಗಳನ್ನು ಶಿಕ್ಷಣಾಧಿಕಾರಿಗಳು

ನೇಮಿಸುತ್ತಾರೆ. ಆಯಾ ಶಾಲೆಗಳ ಸುಧಾರಣೆಗೆ ಈ ಸಮಿತಿಗಳು ಹಣ ಸಂಗ್ರಹಿಸಬೇಕು. ಮನೆ ಮನೆಗೆ ತಿರುಗಿ ದೇಣಿಗೆ ಎತ್ತಬೇಕು. ಕನ್ನಡದ ಬಗ್ಗೆ ಕಳಕಳಿಯಿದ್ದವರ ಕೆಲಸವಿದು .ಶಾಲಾ ಸುಧಾರಣಾ ಸಮಿತಿಗಳ ಪೈಕಿ ಪ್ರತಿಶತ ೨೫ ರಷ್ಟು ಮಾತ್ರ ಸಕ್ರಿಯವಾಗಿದ್ದು ಕಂಡು ಬರುತ್ತದೆ. ಉಳಿದೆಲ್ಲ ಕಡೆಗಳಲ್ಲಿ ಶಾಲಾ ಮುಖ್ಯಾಧ್ಯಾಪಕರೇ ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷರ ಸದಸ್ಯರ ಮನೆಗಳಿಗೆ ತೆರಳಿ ಅವರ ಸಹಿಗಳನ್ನು ರಜಿಸ್ಟರ್‌ಗಳಲ್ಲಿ ಮಾಡಿಸಿಕೊಂಡು ಬರುವ '' ಪದ್ಧತಿ'' ರೂಢಿಯಲ್ಲಿದೆ.

ಜಿಲ್ಲಾ ಕೇಂದ್ರವಾದ ಬೆಳಗಾವಿಯಲ್ಲಿ ಸರಕಾರಿ ಕನ್ನಡ ಶಾಲೆಗಳಿಗೆ ಮಕ್ಕಳನ್ನು ಕಳಿಸುವವರೆಂದರೆ ದುರ್ಬಲ ವರ್ಗದವರು, ಬಡವರು, ಕಾರ್ಮಿಕರು. ಈ ಜನರು ಕನ್ನಡ ಶಾಲೆಗಳ ಸುಧಾರಣೆಗೆ ಹಣಕಾಸು ನೆರವು ನೀಡುವ ಸ್ಥಿತಿಯಲ್ಲಿರುವುದಿಲ್ಲ. ಸುಸ್ಥಿತಿಯಲ್ಲಿರುವವರು ತಮ್ಮ ಮಕ್ಕಳನ್ನು ಇಂಗ್ಲೀಷ ಮಾಧ್ಯಮ ಶಾಲೆಗಳಿಗೆ ಕಳಿಸುವುದರಿಂದ ಕನ್ನಡ ಶಾಲೆಗಳ ನೆರವಿಗೆ ಮುಂದೆ ಬರುವ ಪ್ರಶ್ನೆಯೇ ಇಲ್ಲ ! ಹೀಗಾಗಿ ಕನ್ನಡ ಶಾಲೆಗಳ ಸ್ಥಿತಿ ಸುಧಾರಿಸುವ ಬದಲು ಅಧೋಗತಿಗೆ ಇಳಿಯುತ್ತ ನಡೆದಿದೆ. ಸುಸ್ಥಿತಿಯಲ್ಲಿರುವ ಕನ್ನಡಾಭಿಮಾನಿ ಪಾಲಕರು ತಮ್ಮ ಮಕ್ಕಳನ್ನು ಖಾಸಗಿ ಸಂಸ್ಥೆಗಳ ಕನ್ನಡ ಕಾನ್ವೆಂಟ್ ಶಾಲೆಗಳಿಗೆ ಕಳಿಸುತ್ತಾರೆ.

ಬೆಳಗಾವಿ ನಗರದ ಬಹಳಷ್ಟು ಸರಕಾರಿ ಕನ್ನಡ ಪ್ರಾಥಮಿಕ ಶಾಲೆಗಳು ಬಾಡಿಗೆ ಕಟ್ಟಡದಲ್ಲಿವೆ. ಮೂರ್‍ನಾಲ್ಕು ದಶಕಗಳಿಂದ ಬಾಡಿಗೆ ಕಟ್ಟಡದಲ್ಲಿರುವ ಈ ಶಾಲೆಗಳಿಗೆ ಸರಕಾರ ನೀಡುವ ಬಾಡಿಗೆ ಅತ್ಯಂತ ಕಡಿಮೆ. ಈ ಕಟ್ಟಡಗಳ ದುರಸ್ತಿಗೆ ಕಟ್ಟಡ ಮಾಲೀಕರು ಕೈ ಹಾಕುವುದಿಲ್ಲ. ದುರಸ್ತಿ ಮಾಡಿಸಲು ಶಿಕ್ಷಣಾಧಿಕಾರಿಗಳ ಬಳಿ ಸಾಕಷ್ಟು ಹಣವಿರುವುದಿಲ್ಲ. ಹೀಗಾಗಿ ಬಹುತೇಕ ಕನ್ನಡ ಶಾಲೆಗಳು ''ಸೋರುವ ಶಾಲೆಗಳು'' ಎಂದೇ ಕರೆಯಲ್ಪಡುತ್ತಿವೆ.

ಈ ಶಾಲೆಗಳ ದುರಸ್ತಿಗೆ ಸರಕಾರ ಪ್ರತಿವರ್ಷ ಒದಗಿಸುವ ಹಣ ಎಷ್ಟುಗೊತ್ತೆ? ಕೇವಲ ಎರಡು ಸಾವಿರ ರೂ. ಮಾತ್ರ ಈ ಹಣ ಕೇವಲ ಸುಣ್ಣ ಬಣ್ಣಕ್ಕೂ ಆಗುವುದಿಲ್ಲ.

ಬೆಳಗಾವಿ ನಗರದ ಕೆಲವು ಶಾಲೆಗಳ ಸ್ಥಿತಿ-ಗತಿ :

ಮಾಳೀ ಬೀದಿ ಶಾಲೆ :

ಬೆಳಗಾವಿ ನಗರದ ಹೃದಯ ಭಾಗದಲ್ಲಿರುವ ರವಿವಾರ ಪೇಟೆಗೆ ಹೊಂದಿಕೊಂಡಿರುವ ಮಾಳೀ ಬೀದಿಯಲ್ಲಿರುವ ೧೧ ನೇ ಸಂಖ್ಯೆಯ ಗಂಡು ಮಕ್ಕಳ ಶಾಲೆ ನಾಲ್ಕು ದಶಕಗಳಿಂದ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಸದ್ಯ ಕಟ್ಟಡದ ಮೊದಲ ಅಂತಸ್ತಿನ ಮೂರು ಕೋಣೆಗಳಲ್ಲಿ ಒಂದರಿಂದ ನಾಲ್ಕನೇ ವರ್ಗದವರೆಗೆ ಹಾಗೂ ಒಂದು ಅಂಗನವಾಡಿ ಸೇರಿ ೧೨೦ ಮಕ್ಕಳು ಕಲಿಯುತ್ತಿವೆ. ಈ ಮಕ್ಕಳು ಕುಣಿಯುತ್ತ ಅಟ್ಟದ ಮೇಲೆ ಓಡಾಡುವುದನ್ನು ನೋಡಿದವರಿಗೆ ಎದೆ ಧಸ್ ಎನ್ನುತ್ತದೆ.ಅಟ್ಟ ಯಾವಾಗ ಮುರಿದು ಬೀಳುತ್ತದೋ ಹೇಳಲು ಸಾಧ್ಯವಿಲ್ಲ . ಅದರ ಅರಿವೇ ಇಲ್ಲದ ಮಕ್ಕಳು ಓಡಾಡುತ್ತಿರುತ್ತವೆ.

ಈ ಶಾಲೆಯಿರುವ ಕಟ್ಟಡದ ನೆಲ ಅಂತಸ್ತಿನ ಮೂರು ಕೋಣೆಗಳನ್ನು ಕ್ರಿಮಿನಾಶಕ ಸಂಗ್ರಹಿಸುವ ಉಗ್ರಾಣಗಳನ್ನಾಗಿ ಉಪಯೋಗಿಸಲಾಗುತ್ತಿದೆ. ಶಾಲೆಯ ಮುಂದೆ ಹಾದು ಹೋಗುವವರಿಗೆ ಕ್ರಿಮಿನಾಶಕದ ವಾಸನೆ ಹೊಡೆಯುತ್ತದೆ. ಅಂಥದರಲ್ಲಿ ಅಂಗನವಾಡಿಯ ಮೂರು ವರ್ಷ ವಯಸ್ಸಿನ ಮಗುವಿನಿಂದ ನಾಲ್ಕನೇ ವರ್ಗದ ಹತ್ತು ವರ್ಷ ವಯಸ್ಸಿನ ಮಗುವಿನವರೆಗೆ ಎಲ್ಲರೂ ಸತತವಾಗಿ ಕ್ರಿಮಿನಾಶಕ ವಾಸನೆ ಸೇವಿಸುತ್ತಲೇ ಶಾಲೆ ಕಲಿಯುತ್ತಿದ್ದಾರೆ.

ಈ ಮಕ್ಕಳು ಕೂಡುವ ನೆಲ ಹಾಸುಗೆಯ ಕಲ್ಲುಗಳು ಒಡೆದುಹೋಗಿವೆ. ಕೆಲ ಕಡೆ ತಾತ್ಕಾಲಿಕವಾಗಿ ಕಟ್ಟಿಗೆಯ ಹಲಗೆಗಳನ್ನು ಜೋಡಿಸಲಾಗಿದೆ. ಓಡಾಡುವಾಗ ಈ ಹಲಗೆಗಳು ಬಿಚ್ಚಿದರೆ, ಕಿತ್ತು ಹೋದರೆ ಮಕ್ಕಳು ನೇರವಾಗಿ ಕೆಳಗಿನ ಕ್ರಿಮಿನಾಶಕದ ಉಗ್ರಾಣಗಳಲ್ಲಿ ಬೀಳುತ್ತಾರೆ. ಈ ಹರಕು- ಮುರುಕು ಶಾಲೆಗೆ ಒಂದು ಟ್ರಕ್ಕು ಢಿಕ್ಕಿ ಹೊಡೆದು ಒಂದು ಮೂಲೆಯೇ ಕಿತ್ತು ಹೋಗಿದೆ. ಎಡವಿದ ಕಾಲಿಗೆ ಪೆಟ್ಟು ಎಂಬಂತಾಗಿದೆ ಇದರ ಸ್ಥಿತಿ. ಮೊದಲ ಅಂತಸ್ತಿಗೆ ಹೊಂದಿಕೊಂಡಂತೆ ವಿದ್ಯುತ್ ತಂತಿಯೂ ಹಾದು ಹೋಗಿದೆ.

ಮಾಳೀ ಬೀದಿಯ ಈ ಕನ್ನಡ ಶಾಲೆಯಿಂದ ಕೆಲವೇ ಅಡಿಗಳಷ್ಟು ದೂರದಲ್ಲಿ ಸುಂದರವಾದ ಮರಾಠಿ ಶಾಲೆಯಿದೆ. ಏಳು ಕೋಣೆಗಳುಳ್ಳ ಈ ಆರ್.ಸಿ.ಸಿ. ಕಟ್ಟಡದಲ್ಲಿ ಮರಾಠಿಗರ ಮಕ್ಕಳು ಕಲಿಯುತ್ತಾರೆ. ಶಾಲೆ ಕಟ್ಟಿದ ಜಾಗೆ ಮಾಳೀಬೀದಿಯ ಪಂಚರಿಗೆ ಸೇರಿದ್ದು. ಕನ್ನಡ, ಮರಾಠಿ ಹಾಗೂ ಉರ್ದು ಪ್ರಾಥಮಿಕ ಶಾಲೆಗಳ ನಿರ್ಮಾಣಕ್ಕಾಗಿ ಪಂಚರು ಈ ಜಾಗೆಯನ್ನು ಮಹಾನಗರ ಸಭೆಗೆ ಕೊಟ್ಟಿದ್ದಾರೆ. ಆದರೆ ಬೆಳಗಾವಿಯ ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಹಣ ಬಿಡುಗಡೆ ಮಾಡಿಸಿದ್ದಾರೆಂಬ ಒಂದೇ ಕಾರಣದಿಂದ ಕಟ್ಟಿದ ಏಳೂ ಕೋಣೆಗಳನ್ನು ಮರಾಠಿಗರೇ ಆಕ್ರಮಿಸಿಕೊಂಡು ಬಿಟ್ಟಿದ್ದಾರೆ. ೧೯೯೬ರಲ್ಲಿ ಬೆಳಗಾವಿ ಮಹಾನಗರ ಸಭೆ ಕೈಕೊಂಡ ನಿರ್ಣಯದ ಪ್ರಕಾರವೇ ಈ ಜಾಗೆಯಲ್ಲಿ ಕನ್ನಡ, ಉರ್ದು ಹಾಗೂ ಮರಾಠಿ ಶಾಲೆಗಳನ್ನು ಕಟ್ಟಬೇಕು. ಆದರೆ ನಮ್ಮ ಅಧಿಕಾರ ವರ್ಗದವರ ಅನಾಸ್ಥೆಯಿಂದ ಆ ಶಾಲೆ ಕೇವಲ ಮರಾಠಿಗರ ವಶವಾಗಿ ಬಿಟ್ಟಿದೆ. ನಮ್ಮ ಕನ್ನಡ ಮಕ್ಕಳು ಜೀವದ ಭಯದಲ್ಲಿಯೇ ಮುರುಕು ಶಾಲೆಯಲ್ಲಿ ಕಲಿಯುತ್ತಿದ್ದಾರೆ.

ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ನಿಧಿಯಿಂದ ಕಟ್ಟಲ್ಪಟ್ಟ ನೂತನ ಶಾಲೆಯ ಮೇಲೆಯೇ ಕೋಣೆಗಳನ್ನು ಕಟ್ಟಿಸಿ ಕನ್ನಡ ಮಕ್ಕಳಿಗೆ ಅಲ್ಲಿ ಅವಕಾಶ ಮಾಡಿಕೊಡಬೇಕು. ಇಲ್ಲವಾದರೆ ಸದ್ಯದ ಶಾಲೆಯಲ್ಲಿ ಯಾವುದೇ ಸಮಯದಲ್ಲಾದರೂ ಅನಾಹುತಗಳು ಸಂಭವಿಸಬಹುದಾಗಿದೆ.

ಫುಲಬಾಗ ಬೀದಿ ಶಾಲೆ :

ಫುಲಬಾಗ ಬೀದಿಯ ಕನ್ನಡ ಹೆಣ್ಣು ಮಕ್ಕಳ ಶಾಲೆ ಸಂಖ್ಯೆ ಏಳು. ಈ ಕಟ್ಟಡಕ್ಕೆ ಬೃಹತ್ ಆವರಣ ಗೋಡೆಯಿದೆ ಕಬ್ಬಿಣದ ದ್ವಾರಗಳಿವೆ. ಕೀಲಿ ಹಾಕುವ ವ್ಯವಸ್ಥೆಯಿದೆ. ೧೯೬೦ರ ಜನೇವರಿ ೬ ರಂದು ಉದ್ಘಾಟನೆಗೊಂಡ ಈ ಶಾಲೆ ಎರಡು ಅಂತಸ್ತಿನದಾಗಿದ್ದು ೧೫ ಕೋಣೆಗಳಿವೆ. ಆರ್.ಸಿ.ಸಿ. ಕಟ್ಟಡವಾಗಿರುವ ಇದರ ಎಲ್ಲ ಕೋಣೆಗಳು ಸೋರುತ್ತಿವೆ. ಸ್ಲ್ಯಾಬ್ ಬಿರುಕು ಬಿಟ್ಟಿವೆ. ಕಟ್ಟಡದ ಮೇಲ್ಭಾಗದಲ್ಲಿ ಪ್ಲಾಸ್ಟರ್ ಹಾಕಿಸುವ ಅವಶ್ಯಕತೆಯಿದೆ. ಮೇಲ್ಭಾಗದಲ್ಲಿ ನೀರು ನಿಲ್ಲದಂತೆ ಮಾಡಬೇಕಲ್ಲದೇ ನೀರು ಹೊರ ಹೋಗುವಂತೆ ಕ್ರಮ ಕೈಕೊಳ್ಳಬೇಕಾಗಿದೆ.

ಇದು ಹೆಣ್ಣು ಮಕ್ಕಳ ಶಾಲೆಯಾಗಿರುವುದರಿಂದ ಮೂತ್ರಾಲಯಗಳ ವ್ಯವಸ್ಥೆಯಾಗಬೇಕು ಈಗಿರುವ ಮೂತ್ರಾಲಯಗಳು ದುಸ್ಥಿತಿಯಲ್ಲಿವೆ. ಇವುಗಳ ದುರಸ್ತಿಯಾಗಬೇಕು. ಶಾಲೆಯ ಕಿಡಕಿಗಳ ಜಾಳಿಗೆ ಹರಿದು ಹೋಗಿವೆ. ಸನಿಹದರಲ್ಲಿ ಈ ಶಾಲೆ ಸುಣ್ಣ ಬಣ್ಣ ಕಂಡಿಲ್ಲ.

ಶೆಟ್ಟಿ ಬೀದಿ ಶಾಲೆ :

ಬೆಳಗಾವಿಯ ಕೇಂದ್ರಿಯ ಬಸ್ ನಿಲ್ದಾಣದ ಸಮೀಪವೇ ಇರುವ ಶೆಟ್ಟಿ ಬೀದಿಯ ಕನ್ನಡ ಶಾಲೆಗೆ ಆವರಣ ಗೋಡೆ ಕಟ್ಟುವ ಅವಶ್ಯಕತೆ ಇದೆ. ದುರಸ್ತಿಯಾಗುವ ಅವಶ್ಯಕತೆಯೂ ಇದೆ. ಇಲ್ಲಿ ಕಲಿಯುವ ಹೆಣ್ಣು ಮಕ್ಕಳಿಗಾಗಿ ಮೂತ್ರಾಲಯದ ಅವಶ್ಯಕತೆ ಹೆಚ್ಚಾಗಿದೆ. ಗಂಡು ಮಕ್ಕಳಂತೆ ಹೆಣ್ಣು ಮಕ್ಕಳು ತಮ್ಮ ನಿಸರ್ಗ ಕರೆಯನ್ನು ತೀರಿಸಿಕೊಳ್ಳುವುದು ಸಾಧ್ಯವಿಲ್ಲ.

ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆಯು ಈ ಶಾಲೆಯಲ್ಲಿ ಇಲ್ಲ. ಶಾಲೆಯ ಮುಂದೆ ಹಾಯ್ದು ಹೋಗಿರುವ ನೀರಿನ ಕೊಳವೆಯಿಂದ ನಳದ ವ್ಯವಸ್ಥೆ ಮಾಡಬಹುದಾಗಿದೆ.

ಖಾಸಬಾಗ ಶಾಲೆಗಳು :

ಖಾಸಬಾಗದ ಕನ್ನಡ ಗಂಡು ಮಕ್ಕಳ ಶಾಲೆ ಸಂಖ್ಯೆ ೩. ಇದು ೧೧೨ ವರ್ಷಗಳಷ್ಟು ಹಳೆಯದಾದ ಶಾಲೆಯಾಗಿದ್ದು ೧೯೬೦ರಲ್ಲಿ ಈ ಬೃಹತ್ ಕಟ್ಟಡ ನಿರ್ಮಿಸಲಾಗಿದೆ. ಇದರ ಮೇಲ್ಛಾವಣಿಯು ಬಿರುಕು ಬಿಟ್ಟಿದ್ದು, ಶಾಲಾ ಕೋಣೆಗಳಲ್ಲಿ ಸಿಮೆಂಟ್ ಉದುರಿ ಬೀಳತೊಡಗಿದೆ. ಮೇಲ್ಛಾವಣಿಯ ಹೊರಪದರು ಬಿಚ್ಚತೊಡಗಿದ್ದರಿಂದ ಒಳಗೆ ಹಾಕಿರುವ ಕಬ್ಬಿಣದ ಸರಳುಗಳು ಹೊರಗೆ ಕಾಣಿಸಿಕೊಂಡಿವೆ.

ಈ ಶಾಲೆಯೂ ಸಹ ಸಣ್ಣ ಸುಣ್ಣ ಬಣ್ಣ ಕಂಡಿಲ್ಲ. ಶಾಲೆಯನ್ನು ಮಕ್ಕಳಿಲ್ಲದಾಗ ಪ್ರವೇಶಿಸಿದರೆ ಯಾವುದೋ ಹಳೆಯ ಐತಿಹಾಸಿಕ ಸ್ಮಾರಕ ಪ್ರವೇಶಿಸಿದ ಭಾವನೆ ಉಂಟಾಗುತ್ತದೆ.

ಕಿಡಕಿ ಬಾಗಿಲುಗಳು ಮುರಿದು ಹೋಗಿದ್ದು ದುರಸ್ತಿಯಾಗಬೇಕಾಗಿದೆ. ಈ ಶಾಲೆಯ ಆವರಣದಲ್ಲಿಯೇ ಬೃಹತ್ ಆಟದ ಮೈದಾನವಿದೆ. ಒಂದು ಕಾಲಕ್ಕೆ ಬೆಳಗಾವಿ ನಗರದ ಶಾಲೆಗಳ ಮಕ್ಕಳನ್ನು ಆಟವಾಡಲು ಖಾಸಬಾಗದ ಈ ಶಾಲೆಯ ಆಟದ ಮೈದಾನಕ್ಕೆ ಕರೆದೊಯ್ಯಲಾಗುತ್ತಿತ್ತಂತೆ.

೧೯೯೨ರಲ್ಲಿ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿಯ ಸತತ ಪ್ರಯತ್ನ ಹಾಗೂ ಒತ್ತಾಯದಿಂದಾಗಿ ಮಹಾನಗರ ಸಭೆಯು ಈ ಶಾಲೆಗೆ ಬೃಹತ್ ಆವರಣ ಗೋಡೆ ನಿರ್ಮಿಸಿತಲ್ಲದೇ ಕಬ್ಬಿಣದ ಶಟರ್‌ಗಳನ್ನು ಕೂಡಿಸಿತು.

ಖಾಸಬಾಗದ ಈ ಶಾಲೆಯ ಮೇಲ್ಛಾವಣಿಯ ದುರಸ್ತಿ ಕಾರ್ಯ ಬೇಗ ಆಗದಿದ್ದರೆ ಮಕ್ಕಳ ಮೇಲೆ ಮೇಲ್ಛಾವಣಿ ಮುಂದೊಂದು ದಿನ ಕುಸಿಯುವ ಭಯ ಇದ್ದೇ ಇದೆ.

ಆವರಣದ ಗೋಡೆಯಿದ್ದರೂ ದುಷ್ಕರ್ಮಿಗಳು ಗೋಡೆ ಜಿಗಿದು ಒಳ ಪ್ರವೇಶಿಸಿ ಜೂಜಾಟದಂತಹ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗುವುದು ಇಲ್ಲಿ ಸಾಮಾನ್ಯ. ಇದನ್ನು ತಡೆಗಟ್ಟಲು ಪೊಲೀಸರು ಹಾಗೂ ಸುತ್ತಲಿನ ನಾಗರಿಕರು ಕ್ರಮ ಕೈಕೊಳ್ಳುವ ಅವಶ್ಯಕತೆಯಿದೆ.

ಈ ಶಾಲೆಯಿಂದ ಸಮೀಪವಿರುವ ಇದೇ ಶಾಲೆಗೆ ಸೇರಿದ ಹೆಣ್ಣು ಮಕ್ಕಳ ಶಾಲೆಯ ಹೆಂಚುಗಳು ಒಡೆದಿವೆ. ಈ ಶಾಲೆಯ ಕೋಣೆಗಳ ವೈಶಿಷ್ಟವೆಂದರೆ ಹಗಲಿನಲ್ಲಿಯೇ ರಾತ್ರಿ ಕಾಣುವದು! ಶಾಲಾ ಕೋಣೆಗಳನ್ನು ಪ್ರವೇಶಿಸಿದಾಗ ಕತ್ತಲಾವರಿಸಿರುತ್ತದೆ. ಗಾಳಿ, ಬೆಳಕಿಲ್ಲದ ಈ ಶಾಲೆಯಲ್ಲಿ ಮಕ್ಕಳು ಓದಬೇಕು.

ಈ ಶಾಲೆಯ ಹಿಂಭಾಗದಲ್ಲಿ ಎರಡು ಕೋಣೆಗಳನ್ನು ಭೂಸೇನಾ ನಿಗಮ ಕಟ್ಟಿಸಿದ್ದು ಅದಕ್ಕೆ ಪತ್ರೆಗಳಿಲ್ಲ.

ವಡಗಾವಿ ಶಾಲೆ :

ವಡಗಾವಿಯ ಜಿಲ್ಲಾ ಆರೋಗ್ಯ ಕಾರ್ಯಾಲಯದ ಎದುರಿಗೆ ಇರುವ ಕನ್ನಡ ಗಂಡು ಮಕ್ಕಳ ಶಾಲೆ ಸಂಖ್ಯೆ ೧೪ ಕ್ಕೆ '' ಜೈಲು ಶಾಲೆ '' ಎಂದೇ ಕರೆಯಲಾಗುತ್ತದೆ. ಸಂಸ್ಥಾನಿಕರ ಆಳ್ವಿಕೆಯ ಕಾಲಕ್ಕೆ ಇಲ್ಲಿ ಕಾರಾಗೃಹವಿತ್ತಂತೆ.

ಈಗ ಈ ಶಾಲೆ ಸುಂದರ ತೋಟ ಹೊಂದಿದ್ದು ಸುಸಜ್ಜಿತ ಕೋಣೆಗಳನ್ನು ಹೊಂದಿದೆ. ಆದರೆ ಈ ಶಾಲೆಯ ಹಿಂದೆ ಒಂದು ಉಗ್ರಾಣವಿದ್ದು ಅದನ್ನು ಶಾಲೆಯನ್ನಾಗಿ ಉಪಯೋಗಿಸಲಾಗುತ್ತಿದೆ. ಅದರಲ್ಲಿ ಕುಳಿತು ಕಲಿಯುವ ಮಕ್ಕಳಿಗೆ '' ಆಕಾಶ ವೀಕ್ಷಣೆಯ'' ಸೌಲಭ್ಯವಿದೆ. ಮೇಲಿನ ಸಿಮೆಂಟ ಪತ್ರೆಗಳು ಒಡೆದು ಹೋಗಿದ್ದು ಅವುಗಳನ್ನು ಹಾಕಿಸಲಾಗಿಲ್ಲ.

ಮರಾಠಿ ಶಾಲೆಯೊಳಗೆ ಕನ್ನಡ ಶಾಲೆ :

ಶಹಾಪೂರ ಹೊಸೂರಿನ ಕನ್ನಡ ಗಂಡು ಮಕ್ಕಳ ಶಾಲೆ ಸಂಖ್ಯೆ ಮೂರನ್ನು ಮರಾಠಿ ಗಂಡು ಮಕ್ಕಳ ಶಾಲೆ ಸಂಖ್ಯೆ ೧೪ರಲ್ಲಿ ಸೇರಿಸಲಾಗಿದೆ. ಈ ಕನ್ನಡ ಶಾಲೆಗೆ ಬಾಡಿಗೆ ಅಥವಾ ಸ್ವಂತ ಕಟ್ಟಡವಿಲ್ಲ. ಎರಡು ಕೋಣೆಗಳನ್ನು ಮರಾಠಿ ಶಾಲೆಯಲ್ಲಿ ಒದಗಿಸಲಾಗಿದ್ದು, ಒಂದರಿಂದ ಐದನೇ ವರ್ಗದವರೆಗಿನ ೫೪ ವಿದ್ಯಾರ್ಥಿಗಳು ಇಲ್ಲಿ ಕಲಿಯುತ್ತಿವೆ.

ಸಮೀಪವೇ ಇರುವ ಸಾರ್ವಜನಿಕ ಗ್ರಂಥಾಲಯದ ಬಳಿಯಿರುವ ಮಹಾನಗರ ಸಭೆಗೆ ಸೇರಿದ ನಾಲ್ಕು ಗುಂಠೆ ಜಾಗೆಯಿದೆ. ಅಲ್ಲಿ ಕಟ್ಟಡವನ್ನು ಕಟ್ಟಬಹುದಾಗಿದೆ.

ಭೋವಿಗಲ್ಲಿ ಶಾಲೆ :

ಭೋವಿಗಲ್ಲಿಯ ಕನ್ನಡ ಗಂಡು ಮಕ್ಕಳ ಶಾಲೆ ಸಂಖ್ಯೆ ೧೦ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು ಅತ್ಯಂತ ಇಕ್ಕಟ್ಟಾದ ಜಾಗೆಯಲ್ಲಿದೆ. ಅದೊಂದು ಶಾಲೆಯೆ? ಎಂದು ಕೇಳುವಂತಾಗಿದೆ. ಇದನ್ನು ಇಲ್ಲಿಂದ ಸಮೀಪದ ಯಾವುದಾದರೂ ಶಾಲೆಗೆ ವರ್ಗಾಯಿಸಿದರೆ ಒಳ್ಳೆಯದು.

ಮಾರ್ಕೆಟ್ ಶಾಲೆ :

ಬೆಳಗಾವಿಯ ಮಧ್ಯ ಭಾಗದಲ್ಲಿರುವ ಮಾರ್ಕೆಟ್ ಶಾಲೆ ಎಂದೇ ಹೆಸರಾಗಿರುವ ಕನ್ನಡ ಗಂಡು ಹಾಗೂ ಹೆಣ್ಣು ಮಕ್ಕಳ ಶಾಲೆ ಸಂಖ್ಯೆ ಒಂದು.

ಅಕ್ಷರಶಃ ಸಂತೆಯ ನಡುವೆ ಇದೆ. ಸದಾ ಗದ್ದಲ. ಸಪ್ಪಳದ ನಡುವೆ ವಿದ್ಯಾಭ್ಯಾಸ ಮಾಡುತ್ತಿರುವ ಈ ಮಕ್ಕಳಿಗೆ ಶಾಲಾ ಕಟ್ಟಡವೇನೊ ದೊಡ್ಡದಾಗಿದೆ. ಅಲ್ಲಿರುವ ಮೂತ್ರಾಲಯದ ವಾಸನೆ ಸದಾ ಮೂಗಿಗೆ ಹೊಡೆಯುತ್ತಿರುತ್ತದೆ.

ಈ ಮಾರ್ಕೆಟ್ ಶಾಲೆಯು ಕಟ್ಟಡದ ಮೊದಲ ಅಂತಸ್ತಿನಲ್ಲಿದ್ದು ನೆಲ ಅಂತಸ್ತಿನಲ್ಲಿ ಕಾಯಿಪಲ್ಯೆ ಮಾರುಕಟ್ಟೆಯಿದೆ.

ಬಾಡಿಗೆ ಕಟ್ಟಡಗಳು :

ಶಾಸ್ತ್ರೀನಗರ, ಚೆನ್ನಮ್ಮ ನಗರ, ಅಜಮ್‌ನಗರ, ಶಾಹೂನಗರ, ಭಾಗ್ಯನಗರ, ಚಿದಂಬರನಗರ, ಜೇಡಗಲ್ಲಿ ಶಹಾಪೂರ, ಹಿಂದವಾಡಿ ಗೋಮಟೇಶನಗರ, ಗಾಂಧೀನಗರ ಕನ್ನಡ ಶಾಲೆಗಳಿಗೂ ಸ್ವಂತ ಕಟ್ಟಡಗಳಿಲ್ಲ. ಇವೆಲ್ಲ ಬಾಡಿಗೆ ಕಟ್ಟಡಗಳಲ್ಲೇ ನಡೆಯುತ್ತಿವೆ. ಇವುಗಳಿಗೆ ಸ್ವಂತ ಕಟ್ಟಡ ಒದಗಿಸುವ ಯಾವುದೇ ಪ್ರಯತ್ನಗಳು ನಡೆದಿಲ್ಲ.

ವಡ್ಡರ ಛಾವಣಿ, ಗಾಂಧೀನಗರ, ಹೊಸ ಗಾಂಧೀನಗರ, ಶಾಹೂನಗರಗಳಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸುವ ಅವಶ್ಯಕತೆಯಿದೆ. ಈ ಪ್ರದೇಶಗಳಲ್ಲಿ ಕನ್ನಡಿಗರ ಸಂಖ್ಯೆ ಸಾಕಷ್ಟಿದೆ.

ಗ್ರಾಮೀಣ ಪ್ರದೇಶದ ಶಾಲೆಗಳು :

ಬೆಳಗಾವಿ ಗ್ರಾಮೀಣ ಪ್ರದೇಶಗಳಲ್ಲಿ ಮರಾಠಿಗಳ ಪ್ರಾಬಲ್ಯವಿರುವ ಗ್ರಾಮಗಳಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸುವುದೇ ಒಂದು ಸಮಸ್ಯೆಯಾಗಿತ್ತು. ಈ ಶಾಲೆಗಳಲ್ಲಿ ಸೇವೆ ಸಲ್ಲಿಸುವ ಶಿಕ್ಷಕರು ಕಲಿಯುವ ಮಕ್ಕಳು ಮರಾಠಿಗರಿಂದ ಎದುರಿಸುವ ಕಿರುಕುಳ, ಮಾನಸಿಕ ಹಿಂಸೆ ಹೇಳತೀರದು. ಇಂಥ ಪರಿಸ್ಥಿತಿಯಲ್ಲೂ ಕನ್ನಡಾಭಿಮಾನಿ ಶಿಕ್ಷಕರು ಕನ್ನಡ ಶಾಲೆಗಳನ್ನು ನಡೆಸಿಕೊಂಡು ಬಂದಿದ್ದಾರೆ.

ಬೆಳಗಾವಿಗೆ ನಾಲ್ಕೇ ಕಿ.ಮೀ ದೂರದಲ್ಲಿರುವ ಕಂಗ್ರಾಳಿ ಖುರ್ದ ಗ್ರಾಮದಲ್ಲಿನ ಕನ್ನಡ ಶಾಲೆಯ ಮಕ್ಕಳು ೧೯೮೬ ರಿಂದ ಗಾಳಿ, ಮಳೆ, ಬಿಸಿಲೆನ್ನದೇ ಮರಾಠಿ ಶಾಲೆಯ ಆವರಣದಲ್ಲಿ ಕುಳಿತು ಕಲಿತ ಪ್ರಸಂಗ ಎಂಥ ಕಟುಗರ ಹೃದಯವನ್ನೂ ಕಲಕುವಂಥದ್ದು. ೧೨ ವರ್ಷಗಳ ಕಾಲ ಕನ್ನಡ ಸಂಘಟನೆಗಳು, ಕನ್ನಡ ಪತ್ರಿಕೆಗಳು ನಡೆಸಿದ ಹೋರಾಟದ ಫಲವಾಗಿ ಕಂಗ್ರಾಳಿಯಲ್ಲಿ ೧೯೯೯ರ ಜನೇವರಿ ೫ರಂದು ನಾಲ್ಕು ಕೋಣೆಗಳ ಹೊಸ ಕನ್ನಡ ಶಾಲೆಯ ಉದ್ಘಾಟನೆ ನೆರವೇರಿ ಅಂದು ಕನ್ನಡಿಗರ ಮಕ್ಕಳು ಶಾಲೆ ಪ್ರವೇಶಿಸುವಂತಾಯಿತು.

ಗಡಿ ಭಾಗದಿಂದ ಆಯ್ಕೆಯಾಗುವ ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು ಕನ್ನಡ ಶಾಲೆಗಳನ್ನು ಆರಂಭಿಸದಂತೆ, ಹೊಸ ಕಟ್ಟಡಗಳನ್ನು ಕಟ್ಟಿಸದಂತೆ, ಅಧಿಕಾರಿ ವರ್ಗದವರ ಮೇಲೆ ಸತತವಾಗಿ ಪ್ರಭಾವ ಬೀರುತ್ತಲೇ ಬಂದಿದ್ದಾರೆ. ಇದರಿಂದಾಗಿಯೇ ಕನ್ನಡ ಶಾಲೆಗಳು ಧುಸ್ಥಿತಿಯಲ್ಲಿವೆ. ಕಂಗ್ರಾಳಿ ಖುರ್ದ ಕನ್ನಡ ಶಾಲೆಯ ಪ್ರಕರಣವಂತೂ ರಾಜ್ಯದ ಮುಖ್ಯಮಂತ್ರಿಯವರೆಗೂ ತಲುಪಿತು. ಕೊನೆಗೆ ಕನ್ನಡ ಸಂಘಟನೆಗಳು ೧೯೯೭ರ ನವ್ಹೆಂಬರ್ ಒಂದರ ಕನ್ನಡ ರಾಜ್ಯೋತ್ಸವವನ್ನು ಬಹಿಷ್ಕರಿಸುವ ಬೆದರಿಕೆ ಹಾಕಿದಾಗಲೇ ಕಂಗ್ರಾಳಿ ಕನ್ನಡ ಮಕ್ಕಳಿಗೆ ತಾತ್ಕಾಲಿಕವಾಗಿ ಗ್ರಾಮ ಪಂಚಾಯತ ಕಟ್ಟಡವನ್ನು ಒದಗಿಸಲಾಯಿತು. ನಂತರ ಹೊಸ ಕಟ್ಟಡವನ್ನು ಒಂದು ವರ್ಷ ಅವಧಿಯಲ್ಲಿ ಕಟ್ಟಿಸಿಕೊಡಲಾಯಿತು.

೨೮ ಗ್ರಾಮಗಳಲ್ಲಿ ಕನ್ನಡ ಶಾಲೆಗಳಿಲ್ಲ !

ಬೆಳಗಾವಿ ತಾಲೂಕಿನ ೨೮ ಗ್ರಾಮಗಳಲ್ಲಿ ಇನ್ನೂ ಕನ್ನಡ ಶಾಲೆಗಳಿಲ್ಲ. ಇಲ್ಲಿಯ ಕನ್ನಡಿಗರು ತಮ್ಮ ಮಕ್ಕಳನ್ನು ಅನಿವಾರ್ಯವಾಗಿ ಮರಾಠಿ ಶಾಲೆಗಳಿಗೆ ಕಳಿಸುತ್ತಾರೆ. ಅಥವಾ ನೆರೆಯ ಗ್ರಾಮದ ಕನ್ನಡ ಶಾಲೆಗೆ ಕಳಿಸುತ್ತಾರೆ. ಇನ್ನೂ ಹತ್ತು ಗ್ರಾಮಗಳಲ್ಲಿ ೧೯೯೬-೯೭ನೇ ವರ್ಷದವರೆಗೂ ಕನ್ನಡ ಶಾಲೆಗಳು ಇರಲಿಲ್ಲ . ಕನ್ನಡ ಸಂಘಟನೆಗಳ ಹಾಗೂ ಕನ್ನಡಾಭಿಮಾನಿ ಅಧಿಕಾರಿಗಳ ಪ್ರಯತ್ನದಿಂದಾಗಿ ಈ ಹತ್ತು ಗ್ರಾಮಗಳಲ್ಲಿ ೧೯೯೭-೯೮ನೇ ವರ್ಷದಿಂದ ಕನ್ನಡ ಶಾಲೆಗಳು ಆರಂಭಗೊಂಡಿವೆ.

ಬೆಳಗಾವಿ ತಾಲೂಕಿನ ನಿಲಜಗಿ, ಬೆಕ್ಕಿನಕೇರಿ, ಗೌಂಡವಾಡ, ಅಂಬೇವಾಡಿ, ಕಲ್ಲೇಹೋಳ, ಹುಂಗರಗಿ, ಸಾವಗಾವಿ, ಕಿಣಯೆ, ತರಮರಿ , ಸೊನೋಲಿ, ರಕ್ಕಸಕೊಪ್ಪ, ಬೆಳವಟ್ಟಿ, ಬೆನಕನಹಳ್ಳಿ ಹಾಗೂ ಕರ್ಲೆ ಗ್ರಾಮಗಳಲ್ಲಿ ೧೯೯೯-೨೦೦೦ನೆ ಶೈಕ್ಷಣಿಕ ವರ್ಷದಿಂದಲೇ ಕನ್ನಡ ಶಾಲೆಗಳನ್ನು ಆರಂಭಿಸಬೇಕೆಂದು ಕಳೆದ ಆರೇಳು ತಿಂಗಳಿಂದ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿಯು ರಾಜ್ಯ ಸರಕಾರವನ್ನು ಒತ್ತಾಯಿಸುತ್ತಲೇ ಬಂದಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಚಂದ್ರಶೇಖರ ಪಾಟೀಲರು ಶಿಕ್ಷಣ ಇಲಾಖೆಗೆ ಪತ್ರ ಬರೆದಿದ್ದಾರೆ. ಅಲ್ಲದೇ ಇತ್ತೀಚೆಗೆ ಶಿಕ್ಷಣ ಸಚಿವ ಶ್ರೀ ಎಚ್.ಜಿ. ಗೋವಿಂದೇಗೌಡರು ಬೆಳಗಾವಿಗೆ ಬಂದಾಗ ಅವರಿಗೆ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿಯು ಮನವಿ ಸಲ್ಲಿಸಿತು. ಸಚಿವರು ಇದೇ ವರ್ಷದಿಂದ ಮೇಲಿನ ೧೪ ಗ್ರಾಮಗಳಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸುವಂತೆ ಬೆಳಗಾವಿಯ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಆದೇಶ ನೀಡಿದ್ದಾರೆ.

ಮೇಲಿನ ೧೪ ಗ್ರಾಮಗಳ ಹೊರತಾಗಿ ಇನ್ನೂ ಇತರ ೧೪ ಗ್ರಾಮಗಳಲ್ಲಿ ಕನ್ನಡ ಶಾಲೆಗಳಿಲ್ಲ. ಈ ಗ್ರಾಮುಗಳೆಂದರೆ ಕೊನೇವಾಡಿ, ಅತವಾಡ, ಬಸುರ್ತೆ, ಇನಾಮ ಬಡಸ, ಎಳೇಬೈಲು, ಬೋಕನೂರ, ಬಾಕನೂರ, ಕವಳೇವಾಡಿ, ಜಾಫರವಾಡಿ, ಜಾಡಶಹಾಪೂರ, ಬಹಾದ್ದೂರವಾಡಿ, ಸುಳಗೆ (ವೈ), ಬಾಚಿ ಹಾಗೂ ಖನಗಾವಿ (ಖುರ್ದ) ಈ ಗ್ರಾಮುಗಳಲ್ಲಿ ಮುಂದಿನ ಅಂದರೆ ೨೦೦೦-೨೦೦೧ನೇ ಶೈಕ್ಷಣಿಕ ವರ್ಷದಿಂದಾದರೂ ಕನ್ನಡ ಶಾಲೆಗಳನ್ನು ಆರಂಭಿಸಬೇಕು.

ಬೆಳಗಾವಿಗೆ ಸಮೀಪದ ಮಚ್ಛೆ ಗ್ರಾಮದ ಬಳಿ ಟಿಪ್ಪು ಸುಲ್ತಾನ ನಗರ ಎಂಬ ಹೆಸರಿನ ಒಂದು ಬಡಾವಣೆಯಿದ್ದು ಅಲ್ಲಿ ಸುಮಾರು ೨೫೦ ಮುಸ್ಲಿಮ್ ಕುಟುಂಬಗಳಿದ್ದು ಅವರು ಕನ್ನಡ ಶಾಲೆ ಕೇಳುತ್ತಿದ್ದು ಆ ಬಗೆಗೂ ಸಹ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿಯು ಜಿಲ್ಲಾಧಿಕಾರಿಗಳ ಗಮನ ಸೆಳೆದಿದೆ.

ಮುಚ್ಚಂಡಿ ಶಾಲೆ :

ಬೆಳಗಾವಿ- ಗೋಕಾಕ ರಸ್ತೆಯ ಮೇಲಿರುವ ಮುಚ್ಚಂಡಿ ಗ್ರಾಮದಲ್ಲಿ ಕನ್ನಡ ಶಾಲಾ ಕಟ್ಟಡ ಅರ್ಧಕ್ಕೆ ನಿಂತಿದೆ. ಅದಕ್ಕೆ ಅಧಿಕಾರಿಗಳು, ಮರಾಠಿಗನಾದ ಕಂಟ್ರಾಟುದಾರ ಮತ್ತು ಪಂಚಾಯತಿ ನಡುವಿನ ವಿವಾದವೇ ಕಾರಣವಾಗಿದೆ. ಕನ್ನಡ ಶಾಲೆಯ ಕಟ್ಟಡ ನಿರ್ಮಾಣ ಆರಂಭವಾದ ನಂತರ ಆರಂಭವಾದ ಮರಾಠಿ ಶಾಲೆಯ ಕಟ್ಟಡ ನಿರ್ಮಾಣ ಕಾರ್ಯ ಸಂಪೂರ್ಣಗೊಂಡಿದೆ. ಕನ್ನಡ ಶಾಲೆಯ ಕಟ್ಟಡ ಪೂರ್ಣಗೊಳ್ಳದೇ ಉಳಿದಿದೆ.

ಕಂಗ್ರಾಳಿ ಶಾಲೆಗೆ ತಪ್ಪದ ವಿಘ್ನ :

೧೨ ವರ್ಷಗಳ ಕಾಲ ಕನ್ನಡ ಸಂಘಟನೆಗಳ ಸತತ ಹೋರಾಟದ ನಂತರ ನಾಲ್ಕು ಕೋಣೆಗಳ ಕಟ್ಟಡವನ್ನು ಪಡೆದ ಕಂಗ್ರಾಳಿ ಖುರ್ದ ಗ್ರಾಮದ ಕನ್ನಡಿಗರ ಮಕ್ಕಳಿಗೆ ಇನ್ನೂ ವಿಘ್ನ ತಪ್ಪಿದಂತೆ ಕಾಣುತ್ತಿಲ್ಲ. ಕಳೆದ ಜನೇವರಿ ಐದರಂದು ಈ ಶಾಲೆಯು ಉದ್ಘಾಟನೆಗೊಂಡು ಮಕ್ಕಳು ಪ್ರವೇಶಿಸಿದ ನಂತರವೂ ಆ ಗ್ರಾಮದ ಮರಾಠಿಗನೊಬ್ಬ ರಾಜ್ಯ ಶ್ರೇಷ್ಠ ನ್ಯಾಯಾಲಯದಿಂದ ಜನೇವರಿ೧೪ ರಂದು ತಡೆಯಾಜ್ಞೆ ತಂದಿದ್ದಾನೆ. ನ್ಯಾಯಾಲಯದ ಆದೇಶದಲ್ಲಿ ''ವಿವಾದಿತ ಜಾಗೆಯು ಅರ್ಜಿದಾರನ ಕಬ್ಜಾದಲ್ಲಿದ್ದರೆ ಅವನನ್ನು ಅಲ್ಲಿಂದ ಕದಲಿಸಬಾರದು'' ಎಂದು ತಿಳಿಸಲಾಗಿದೆ.

ಆ ಜಾಗೆಯಲ್ಲಿ ಶಾಲೆ ನಿರ್ಮಾಣಗೊಂಡು ಸರಕಾರದ ಕಬ್ಜಾದಲ್ಲಿ ಬಂದಿದೆ. ನ್ಯಾಯಾಲಯದ ಆದೇಶವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾಗದ ಅಧಿಕಾರಿಗಳು, ಕಂಗ್ರಾಳಿ ಶಾಲೆಯ ಬದಿಗೆ ನಿರ್ಮಿಸಬೇಕಾಗಿದ್ದ ಇನ್ನೂ ಮೂರು ಕೋಣೆಗಳ ಕಾರ್ಯವನ್ನು ಕಳೆದ ಜನೇವರಿಯಿಂದ ನಾಲ್ಕು ತಿಂಗಳ ಕಾಲ ಸ್ಥಗಿತಗೊಳಿಸಿದರು. ನ್ಯಾಯಾಲಯದ ಆದೇಶವನ್ನು ಅರ್ಥೈಸಿಕೊಟ್ಟ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿಯು ಇದೇ ಮೇ ತಿಂಗಳಲ್ಲಿ ಆ ಮೂರು ಕೋಣೆಗಳ ಕಟ್ಟಡ ನಿರ್ಮಾಣವನ್ನು ಪುನ: ಆರಂಭಿಸುವ ಭರವಸೆಯನ್ನು ಅಧಿಕಾರಿಗಳಿಂದ ಪಡೆಯಿತು.

ಹೀಗೆ ಕೆಲ ಅಧಿಕಾರಿಗಳೂ ಸಹ ಸಹಜವಾಗಿ ಆಗುವ ಕನ್ನಡ ಶಾಲೆಗಳ ಕೆಲಸಗಳಿಗೆ ಯಾವುದೋ ಶಕ್ತಿಗಳ ಒತ್ತಡಕ್ಕೆ ಒಳಗಾಗಿ ಕನ್ನಡಕ್ಕೆ ಸಂಬಂಧಿಸಿದ ಕೆಲಸಗಳನ್ನು ಮುನ್ನುಗ್ಗಿ ಮಾಡಲು ಹಿಂದೇಟು ಹಾಕುವುದು ಆಗಾಗ ಬೆಳಕಿಗೆ ಬರುತ್ತಲೇ ಇರುತ್ತದೆ.

ಕನ್ನಡ ಶಾಲೆಗಳ ದುಃಸ್ಥಿತಿಗೆ ಕಾರಣಗಳೇನು ?

ಗಡಿಭಾಗದ ವಿಶೇಷವಾಗಿ ಬೆಳಗಾವಿ ನಗರ ಹಾಗೂ ತಾಲೂಕಿನಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳು ದುಃಸ್ಥಿತಿಯಲ್ಲಿರಲು ಕಾರಣಗಳನ್ನು ಕಂಡುಕೊಳ್ಳಲು ನಮ್ಮ ಈ ಸಮಿತಿಯು ಪ್ರಯತ್ನಿಸಿದೆ.

೧. ಮೊದಲನೆಯದಾಗಿ ಈ ಶಾಲೆಗಳ ಬಗ್ಗೆ ಕಾಳಜಿ ವಹಿಸಬೇಕಾದ ಸಂಸ್ಥೆಗಳಲ್ಲಿ ಕನ್ನಡಿಗರ ಪ್ರಾಬಲ್ಯವಿರದೇ ಇರುವುದು. ಮಹಾನಗರ ಸಭೆಯಲ್ಲಿ ಮರಾಠಿಗರ ಪ್ರಾಬಲ್ಯ ಮೊದಲಿನಿಂದಲೂ ಇದೆ. ಮಹಾನಗರ ಸಭೆಗೆ ಆಯ್ಕೆಯಾದ ನಗರ ಸೇವಕರು ಶಾಲೆಗಳ ಬಗ್ಗೆ ಅಧಿಕಾರಿಗಳ ಗಮನ ಸೆಳೆಯಬೇಕು. ಅದು ಅವರ ಕರ್ತವ್ಯ ಆದರೆ ಬೆಳಗಾವಿಯಲ್ಲಿ ಆ ಕೆಲಸ ಆಗುತ್ತಿಲ್ಲ. ವಿಚಿತ್ರವೆಂದರೆ ಶಾಲಾ ಸುಧಾರಣಾ ಸಮಿತಿಗಳ ಅಧ್ಯಕ್ಷ ಸ್ಥಾನದಲ್ಲಿ ಬಹುತೇಕ ಕಡೆಗಳಲ್ಲಿ ಮಹಾನಗರ ಸಭೆ ಸದಸ್ಯರುಗಳೇ ಇದ್ದಾರೆ. ಆದರೆ ಪ್ರತಿಶತ ೯೦ರಷ್ಟು ಸದಸ್ಯರು ಶಾಲೆಗಳತ್ತ ಇಣುಕಿಯೂ ನೋಡುವುದಿಲ್ಲವೆಂಬ ಅಂಶ ಸ್ಪಷ್ಟವಾಗಿ ಕಂಡು ಬರುತ್ತದೆ.

ಪ್ರಾಥಮಿಕ ಶಾಲೆಗಳು ನಮಗೆ ಸಂಬಂಧವೇ ಇಲ್ಲವೆಂದು ಮಹಾನಗರ ಸಭೆ ಅಧಿಕಾರಿಗಳು ವಾದಿಸುತ್ತಾರೆ. ನಾವು ಜಾಗಕೊಡುತ್ತೇವೆ. ಕಟ್ಟಿಕೊಂಡು ಸಂರಕ್ಷಣೆ ಮಾಡಿಕೊಳ್ಳುವುದು ಶಿಕ್ಷಣ ಇಲಾಖೆಗೆ ಬಿಟ್ಟಿದ್ದು ಎನ್ನುತ್ತಾರೆ ಅಧಿಕಾರಿಗಳು. ಈ ಹಿಂದೆ ಸ್ಕೂಲ್ ಬೋರ್ಡ್ ಅಸ್ತಿತ್ವದಲ್ಲಿದ್ದಾಗ ಮಹಾನಗರ ಸಭೆಯೇ ಶಾಲೆ ಕಟ್ಟಡಗಳನ್ನು ಕಟ್ಟಿಸಿದೆ. ಜಿಲ್ಲಾ ಪಂಚಾಯತ ವ್ಯವಸ್ಥೆ ಜಾರಿಗೆ ಬಂದ ನಂತರ ಶಾಲೆಗಳ ಜವಾಬ್ದಾರಿಯನ್ನು ಮಹಾನಗರ ಸಭೆ ವ್ಯಾಪ್ತಿಯಿಂದ ಕೈ ಬಿಡಲಾಗಿದೆ.

೨. ಬೆಳಗಾವಿ ಜಿಲ್ಲಾ ಪಂಚಾಯತನಲ್ಲಿ ಕನ್ನಡಿಗರದೇ ಪ್ರಾಬಲ್ಯವಿದ್ದರೂ ಬೆಳಗಾವಿ ತಾಲೂಕಾ ಪಂಚಾಯತನಲ್ಲಿ ಮರಾಠಿಗರ ಪ್ರಾಬಲ್ಯವಿದೆ. ಶಾಲೆಗಳ ಕಟ್ಟಡ ನಿರ್ಮಾಣ , ದುರಸ್ತಿಗೆ ಸಂಬಂಧಿಸಿದಂತೆ ವಲಯ ಶಿಕ್ಷಣಾಧಿಕಾರಿಗಳು ತಾಲೂಕಾ ಪಂಚಾಯತಗೆ ಬರೆಯುತ್ತಾರೆ. ತಾಲೂಕಾ ಪಂಚಾಯತ ಅಧಿಕಾರಿಗಳು ಅಲ್ಲಿಯ ಚುನಾಯಿತ ಪ್ರತಿನಿಧಿಗಳ ಪ್ರಭಾವದಡಿ ಕೆಲಸ ಮಾಡುವುದರಿಂದ ಕನ್ನಡ ಶಾಲೆಗಳು ಸಹಜವಾಗಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿವೆ. ಬೆಳಗಾವಿ ತಾಲೂಕಾ ಪಂಚಾಯತ ಕಾರ್ಯಾಲಯದಲ್ಲಂತೂ ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರೊಬ್ಬರಿಗೆ ಶಾಶ್ವತವಾಗಿ ಕಾರ್ಯಾಲಯ ಮತ್ತು ಸಿಬ್ಬಂದಿಯನ್ನು ಒದಗಿಸಲಾಗಿದೆ. ಶಾಸಕರು ಅಲ್ಲಿಯೇ ದಿನನಿತ್ಯ ಬಿಡಾರ ಹೂಡಿ ಅಧಿಕಾರಿಗಳಿಗೆ ಆದೇಶ ಕೊಡುತ್ತಿರುತ್ತಾರೆ. ಹೀಗಾಗಿ ತಾಲೂಕಾ ಪಂಚಾಯತನಲ್ಲಿಯ ಅಧಿಕಾರಿಗಳು ಕನ್ನಡ ವಿಷಯ ಬಂದರೆ ಮೆಲು ಧ್ವನಿಯಲ್ಲಿ ಮಾತನಾಡುತ್ತಾರೆ. ಕೆಲ ಕನ್ನಡಾಭಿಮಾನಿ , ದಿಟ್ಟ ಅಧಿಕಾರಿಗಳು ಮರಾಠಿ ಶಾಸಕರ ಒತ್ತಡದ ನಡುವೆಯೂ ಕನ್ನಡದ ಕೆಲಸ ಮಾಡುತ್ತಿರುವ ಉದಾಹರಣೆಗಳಿವೆ.

೩. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಪ್ರಾಥಮಿಕ ಶಾಲೆಗಳ ಕಟ್ಟಡ ಕಟ್ಟಲು ಹಣವಿರುತ್ತದೆ. ಮಂಡಳಿಯಲ್ಲಿ ಬೆಳಗಾವಿ ಹಾಗೂ ಉಚಗಾಂವ ವಿಧಾನಸಭಾ ಮತಕ್ಷೇತ್ರಗಳ ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರಿದ್ದಾರೆ. ಅವರು ಮರಾಠಿ ಪ್ರಾಥಮಿಕ ಶಾಲೆಗಳನ್ನು ಕಟ್ಟಲು ಬಹಳಷ್ಟು ಶ್ರಮಪಡುತ್ತಾರೆ. ಪ್ರಾಥಮಿಕ ಶಾಲೆಗಳ ಬಗೆಗೆ ಅವರಿಗಿರುವ ಕಾಳಜಿಯನ್ನು ಮೆಚ್ಚಲೇಬೇಕು. ಬೆಳಗಾವಿ ನಗರ ಮತ್ತು ಗ್ರಾಮೀಣ ಭಾಗದ ಕನ್ನಡ ಶಾಲೆಗಳ ಕಟ್ಟಡಗಳಿಗಾಗಿ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಹಣ ಬಿಡುಗಡೆ ಮಾಡಿಸುವವರು ಯಾರು?

ಮಹಾರಾಷ್ಟ್ರ ಏಕೀಕರಣ ಸಮಿತಿಯ ಬೆಳಗಾವಿ ನಗರ ಶಾಸಕರು, ಮಾಳೀಬೀದಿಯ ಶಾಲೆಗೆ ೨ ಲಕ್ಷ ರೂ. ಬಿಡುಗಡೆ ಮಾಡಿಸಿದರೆಂಬ ಕಾರಣಕ್ಕಾಗಿ ಮಾಳೀ ಬೀದಿಯಲ್ಲಿ ನೂತನವಾಗಿ ಕಟ್ಟಲಾದ ಕನ್ನಡ, ಮರಾಠಿ, ಉರ್ದು ಮಕ್ಕಳ ಶಾಲೆಯಲ್ಲಿ ಕನ್ನಡ ಮತ್ತು ಉರ್ದು ಮಕ್ಕಳಿಗಾಗಿ ಪ್ರವೇಶ ನಿರಾಕರಿಸಲಾಯಿತು. ಮೂಲತ: ಈ ಶಾಲೆಯನ್ನು ಮೂರೂ ಭಾಷಿಕ ಮಕ್ಕಳಿಗಾಗಿ ಕಟ್ಟಬೇಕೆಂದು ಮಹಾನಗರ ಸಭೆಯು ೧೯೯೬ರಲ್ಲಿ ನಿರ್ಣಯ ಅಂಗೀಕರಿಸಿದೆ. ಅಲ್ಲದೇ ಮಾಳೀಬೀದಿಯ

ಜಾಗೆಯನ್ನು ಕೊಟ್ಟು ಅಲ್ಲಿಯ ಕನ್ನಡಿಗರು ಮೂರೂ ಭಾಷಿಕ- ಮಕ್ಕಳ ಶಾಲೆಗೆಂದೇ ಜಾಗೆ ಕೊಟ್ಟಿದ್ದಾರೆ. ಈಗ ನೂತನ ಕಟ್ಟಡದಲ್ಲಿ ಮರಾಠಿಗರ ಮಕ್ಕಳು ಕಲಿಯುತ್ತಾರೆ. ಕನ್ನಡಿಗರ ಮಕ್ಕಳು ಮುರುಕಲಾದ, ದನದ ಕೊಟ್ಟಿಗೆಯಂತಿರುವ ಶಾಲೆಯಲ್ಲಿಯೇ ವಿದ್ಯಾಭ್ಯಾಸ ಮುಂದುವರೆಸಿದ್ದಾರೆ.

ಮರಾಠಿಗರ ಆಕ್ರಮಣಕಾರಕ ಸ್ವಭಾವವು ಶಾಲೆಗಳ ಸಂಬಂಧದಲ್ಲೂ ನಡೆದಿದೆ. ಅವರಿಗೆ ಕನ್ನಡಿಗರಾದ ಅಧಿಕಾರಿಗಳು ಸೊಪ್ಪು ಹಾಕುತ್ತಿರುವುದೇ ಕನ್ನಡ ಶಾಲೆಗಳ ದುಸ್ಥಿತಿಗೆ ಮತ್ತೊಂದು ಕಾರಣ.

೪. ಎರಡು ದಶಕಗಳ ಹಿಂದೆ ಕರ್ನಾಟಕ, ಕನ್ನಡ ಅಧಿಕಾರಿಗಳೆಂದರೆ ಮೂಗು ಮುರಿಯುತ್ತಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು, ಮತ್ತಿತರ ಚುನಾಯಿತ ಪ್ರತಿನಿಧಿಗಳು ಇತ್ತೀಚಿನ ವರ್ಷಗಳಲ್ಲಿ ಹೊಸ ''ಡಾವುಪೇಚು'' ಕಲಿತ್ತಿದ್ದಾರೆ. ಹಿರಿಯ ಅಧಿಕಾರಿಗಳನ್ನು ತಮ್ಮ ಸಮಾರಂಭಗಳಿಗೆ ಕರೆದೊಯ್ದು ಅವರ ತಲೆಗೆ ತಮ್ಮ ಭಗವಾಪೇಟಾ ಸುತ್ತಿ ಮೆರೆಸುತ್ತಾರೆ. ಇಂಥ ಸಮಾರಂಭಗಳಿಗೆ ಮರಾಠಿ ಪತ್ರಿಕೆಗಳಲ್ಲಿ ಪ್ರಚಾರ ಕೊಡಲಾಗುತ್ತದೆ. ಇದನ್ನು ಕಂಡ ಅಧೀನ ಅಧಿಕಾರಿಗಳು ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರ ಆದೇಶಗಳನ್ನು ಚಾಚೂ ತಪ್ಪದೇ ಪಾಲಿಸ ತೊಡಗುತ್ತಾರೆ. ಇಂಥ ''ಪಾಲನೆ ''ಯೂ ಕನ್ನಡದ ಹಿತಾಸಕ್ತಿಗಳಿಗೆ ಮಾರಕವಾಗಿ ಪರಿಣಮಿಸಿದೆ. ಬೆಳಗಾವಿ ಜಿಲ್ಲೆಯ ಬರುವ ಬಹುತೇಕ ಹಿರಿಯ ಅಧಿಕಾರಿಗಳಿಗೆ ಇಲ್ಲಿಯ ಪರಿಸ್ಥಿತಿಯ ಕಲ್ಪನೆ ಇರುವುದಿಲ್ಲ. ಕಲ್ಪನೆ ಬರುವ ಹೊತ್ತಿಗೆ ಅವರು ವರ್ಗವಾಗಿ ಹೋಗಿ ಬಿಡುತ್ತಾರೆ.

೫. ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು ಮರಾಠಿ ಶಾಲೆಗಳ ಕಟ್ಟಡ ಹಾಗೂ ದುರಸ್ತಿಗಾಗಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯನ್ನು ಅವಲಂಬಿಸಿದಂತೆ ಕನ್ನಡಿಗರು ಅವಲಂಬಿಸುವ ಪರಿಸ್ಥಿತಿ ಇಲ್ಲ ಜಿಲ್ಲಾ ಪಂಚಾಯತನಲ್ಲಿರುವ ನಿಧಿಯನ್ನೇ ಕನ್ನಡಿಗರು ಅವಲಂಬಿಸಬೇಕಾಗಿದೆ. ಜಿಲ್ಲಾ ಪಂಚಾಯತನಲ್ಲೂ ಬೆಳಗಾವಿ ಗ್ರಾಮೀಣ ಭಾಗದ ಮರಾಠಿ ಸದಸ್ಯರು ಇರುವುದರಿಂದ ಅಲ್ಲಿಯೂ ಕನ್ನಡ ಶಾಲೆಗಳಿಗೆ ಕೊಕ್ಕೆ ಬೀಳುತ್ತದೆ. ಇದ್ದ ಬಿದ್ದ ಹಣವನ್ನು ಜಿಲ್ಲೆಯ ಇತರ ತಾಲೂಕುಗಳ ಪ್ರತಿನಿಧಿಗಳು ತಮ್ಮ ಭಾಗದ ಅಭಿವೃದ್ಧಿಗಾಗಿ ಮಂಜೂರು ಮಾಡಿಸಿಕೊಳ್ಳುವುದು ಸಹಜವಾಗಿದೆ.

ಕಳೆದ ೧೯೯೭-೯೮ನೇ ವರ್ಷದಲ್ಲಿ ಜಿಲ್ಲಾ ಪಂಚಾಯತ ೪೬ ಕನ್ನಡ ಶಾಲಾ ಕಟ್ಟಡಗಳಿಗೆ (ಇಡೀ ಜಿಲ್ಲೆಯಲ್ಲಿ) ಮಂಜೂರಿ ನೀಡಿದರೆ ೨೬ ಮರಾಠಿ ಶಾಲಾ ಕಟ್ಟಡಗಳಿಗೆ ಮಂಜೂರಿ ನೀಡಿದೆ. ಅಂದರೆ ಬಹುತೇಕ ಅರ್ಧದಷ್ಟು ಹಣವನ್ನು ಮರಾಠಿ ಶಾಲೆಗಳಿಗೆ ನೀಡಲಾಗಿದೆಯೆಂದರೆ ಮರಾಠಿಗರ ಪ್ರಭಾವ ಹೇಗೆ ಕೆಲಸ ಮಾಡುತ್ತದೆಯೆಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ಜಿಲ್ಲಾ ಪಂಚಾಯತನಲ್ಲೂ ಗಡಿ ಭಾಗದ ಕನ್ನಡ ಶಾಲೆಗಳನ್ನು ಕೇಳುವವರಿಲ್ಲ.

೬.   ಪ್ರಾಥಮಿಕ ಶಾಲೆಗಳ ದುರಸ್ತಿ ಸುಣ್ಣ- ಬಣ್ಣಕ್ಕೆ ವಾರ್ಷಿಕ ಎರಡು ಸಾವಿರ ರೂ. ಮಾತ್ರ ಒದಗಿಸಲಾಗುತ್ತದೆ. ಈ ಎರಡು ಸಾವಿರ ರೂ. ಯಾತಕ್ಕೂ ಸಾಲುವುದಿಲ್ಲ. ಈ ಎರಡು ಸಾವಿರ ರೂ. ಗಳು ಸಾಲದಿದ್ದರೆ ಶಾಲಾ ಸುಧಾರಣಾ ಸಮಿತಿಗಳ ಸದಸ್ಯರು ದಾನಿಗಳನ್ನು ಶೋಧಿಸಿ ಅವರಿಂದ ದೇಣಿಗೆ ಪಡೆದುಕೊಂಡೇ ಶಾಲೆಗಳ ಸುಧಾರಣೆಗೆ ಮುಂದಾಗಬೇಕಾದ ಸ್ಥಿತಿಯಿದೆ. ದೇಣಿಗೆ ಸಂಗ್ರಹವಾದರೆ ಶಾಲೆಗಳ ಸುಧಾರಣೆ, ಇಲ್ಲವಾದರೆ ಇಲ್ಲ.[೬]

ಅಶೋಕ ಚಂದರಗಿ ವರದಿಯಲ್ಲಿ ಮೂಡಿಬಂದ ಕರ್ನಾಟಕ ಗಡಿಭಾಗದ ಬೆಳಗಾವಿ ನಗರ ಹಾಗೂ ಬೆಳಗಾವಿ ತಾಲೂಕಿನ ಸರಕಾರಿ ಕನ್ನಡ ಪ್ರಾಥಮಿಕ ಶಾಲೆಗಳ ಸ್ಥಿತಿಗತಿಗಳ ಬಗ್ಗೆ ತುಂಬಾ ಸೊಗಸಾಗಿ ವರದಿಯನ್ನು ಸಿದ್ಧ ಪಡಿಸಿದ್ದಾರೆ, ಗಡಿನಾಡಿನ ಶಿಕ್ಷಣದ ಮೂಲ ಸಮಸ್ಯೆಗಳ ಪರಿಹಾರಗಳನ್ನು ಸೂಚಿಸಿದ್ದಾರೆ. ಈ ವರದಿಯಲ್ಲಿರುವ ಸಮಸ್ಯೆಗಳನ್ನು ನೋಡಿದರೆ ೫೦ ಕನ್ನಡ ರಾಜ್ಯೋತ್ಸವಗಳನ್ನು ಕಂಡು ಸುವರ್ಣಕರ್ನಾಟಕ ಮಹೋತ್ಸವವನ್ನು ಆಚರಿಸುತ್ತಿರುವ ನಾವು ಇನ್ನೂ ಕೂಡ ಕನ್ನಡ ಭಾಷೆ, ಕನ್ನಡ ಸಂಸ್ಕೃತಿ, ಕನ್ನಡ ಶಿಕ್ಷಣ ಸುಧಾರಣೆಗಳ ಕಡೆಗೆ ಹೆಚ್ಚಿನ ಗಮನ ನೀಡಿಲ್ಲವೆಂಬ ಅಂಶ ಈ ವರದಿಯಿಂದ ಸ್ಪಷ್ಟವಾಗುತ್ತದೆ.

೫. ಡಾ. ರಾಜಾರಾಮಣ್ಣ ವರದಿ -೨೦೦೦-೦೧

ನಮ್ಮ ಕರ್ನಾಟಕ ಸರಕಾರವು ಪ್ರಾಥಮಿಕ ಶಿಕ್ಷಣದ ಸುಧಾರಣೆಯ ಬಗೆಗೆ ಅಧ್ಯಯನ ನಡೆಸಲು ಖ್ಯಾತ ಶಿಕ್ಷಣ ತಜ್ಞರಾದ ಡಾ. ರಾಜಾರಾಮಣ್ಣ ಅವರ ಅಧ್ಯಕ್ಷತೆ ಹಾಗೂ ಪ್ರೊ. ಆರ್. ಗೋವಿಂದ, ಪ್ರೊ.ರಾಧಿಕಾ ಹರ್ಡಬರ್ಗರ, ಪ್ರೊ. ಎಮ್. ಐ. ಸವದತ್ತಿ, ಪ್ರೊ. ವಿ. ಎಸ್. ಸೀತಾರಾಮು, ಶ್ರೀ ಕೆ.ಪಿ. ಸುರೇಂದ್ರನಾಥ, ಡಾ. ಟಿ.ಕೆ.ಜಯಲಕ್ಷ್ಮಿ, ಶ್ರೀನಂಜುಂಡಯ್ಯ ಮತ್ತು ಶ್ರೀ ಆರ್. ಎನ್. ಶಾಸ್ತ್ರಿಮುಂತಾದ ೯ ಜನ ಸದಸ್ಯರ ಸಮಿತಿಯನ್ನು ರಚಿಸಿದ್ದು, ಅದು ತನ್ನ ಮಧ್ಯಂತರ ವರದಿಯನ್ನು ನೀಡಿದೆ.

ಸಂವಿಧಾನದ ೪೫ನೇ ವಿಧಿಯ ಪ್ರಕಾರ ಹಾಗೂ ೧೯೯೪ರ ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ ಹಾಗೂ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ರಾಷ್ಟ್ರದ ಎಲ್ಲಾ ಮಕ್ಕಳಿಗೆ ೧೪ ವರ್ಷ ವಯಸ್ಸಿನವರಾಗುವ ತನಕ ಉಚಿತ ಹಾಗೂ ಕಡ್ಡಾಯ ಶಿಕ್ಷಣವು ದೊರೆಯಬೇಕು. ಅದು ಅವರ ಹಕ್ಕು. ಇದು ಕ್ರಿ.ಶ ೨೦೦೦ ದೊಳಗಾಗಿ ಪೂರೈಸಬೇಕಾದ ಕಾರ್ಯವಾಗಿತ್ತು. ಆದರೆ ದೇಶವು ಸ್ವಾತಂತ್ರ್ಯ ಪಡೆದು ೫೦ ವರ್ಷಗಳಾದರೂ ಅದನ್ನು ಸಾಧಿಸಲಾಗಿಲ್ಲ.

ಡಾ. ರಾಜಾರಾಮಣ್ಣ ಸಮಿತಿಯು ನೀಡಿದ ಶಿಫಾರಸ್ಸುಗಳು ಹಾಗೂ ಅವುಗಳ ವಿಮರ್ಶೆ:

೧.೧೪ ವರ್ಷಗಳ ತನಕ ಉಚಿತ ಪ್ರಾಥಮಿಕ ಶಿಕ್ಷಣ ಒದಗಿಸುವುದು :

ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ೧-೫ ಮತ್ತು ೬-೮ ರವರೆಗೆ ವರ್ಗಗಳಿರಬೇಕು. ಅದಕ್ಕಾಗಿ ಹೆಚ್ಚುವರಿ ಶಿಕ್ಷಕರು ಮತ್ತು ಕಟ್ಟಡಗಳ ವ್ಯವಸ್ಥೆ ಆಗಬೇಕು. ಇದಕ್ಕೆ ಕೊಟ್ಟಿರುವ ಕಾರಣ ಪ್ರೌಢ ಶಾಲೆಯಲ್ಲಿರುವ ೮ನೇ ತರಗತಿ ಓದಬೇಕಾದ ಮಕ್ಕಳು ಸಂವಿಧಾನದ ಆಶಯವಾದ ೧೪ ವರ್ಷಗಳವರೆಗಿನ ಉಚಿತ ಶಿಕ್ಷಣದಲ್ಲಿ ೧ ವರ್ಷದ ಉಚಿತ ಶಿಕ್ಷಣ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ ಎಂಬುದು.

೮ನೇ ತರಗತಿಯನ್ನು ಈಗಿರುವ ಹೈಸ್ಕೂಲವಿಭಾಗದಲ್ಲಿ ಇಟ್ಟು ಉಚಿತ ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲ ಸೌಲಭ್ಯಗಳನ್ನು ಕೊಡಲು ಸರಕಾರಕ್ಕಿರುವ ಸಮಸ್ಯೆಗಳೇನು?

ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ ೮ನೇ ತರಗತಿಯನ್ನು ಪ್ರಾಥಮಿಕ ಶಿಕ್ಷಣದ ವ್ಯಾಪ್ತಿಗೆ ತರಲು ಸಂವಿಧಾನದಲ್ಲಾಗಲಿ, ಸುಪ್ರೀಂ ಕೋರ್ಟ ನಿರ್ಣಯದಲ್ಲಾಗಲೀ, ಹೇಳಿರುವುದಿಲ್ಲ. ಹೀಗಿರುವಾಗ ಡಾ. ರಾಜಾರಾಮಣ್ಣ ಸಮಿತಿಯು, ಪ್ರೌಢ ಶಾಲೆಯ ೮ನೇ ತರಗತಿಯನ್ನು ಪ್ರಾಥಮಿಕ ಶಿಕ್ಷಣ ವ್ಯವಸ್ಥೆಗೆ ಸೇರಿಸಲು ಏಕೆ ಶಿಫಾರಸ್ಸು ಮಾಡಿದೆ?

ಶಿಕ್ಷಣದ ಗುಣಮಟ್ಟದ ಬಗೆಗೆ ವಿಚಾರ ಮಾಡದೆ, ಅದಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ಕ್ರಮಗಳನ್ನು ಕೈಕೊಳ್ಳದೆ, ಕೇವಲ ವರ್ಗಗಳನ್ನು ಕಿತ್ತು ಜೋಡಿಸುವುದರಿಂದ ಸಮಸ್ಯೆಗಳ ಸರಮಾಲೆಯೇ ಉಂಟಾಗುತ್ತದೆ. ಈಗಾಗಲೇ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ೭ನೇ ತರಗತಿಯಲ್ಲಿ ಪಾಸಾದವರ ಟಿ.ಸಿ. ಗಳನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಬೇಕೆಂದೂ, ಯಾರಿಗೂ ಕೊಡಕೂಡದೆಂದೂ, ಈಗಾಗಲೇ ಸುತ್ತೋಲೆ ಹೊರಬಿದ್ದಿದೆ. (ಆದೇಶ ಸಂಖ್ಯೆ: ಸಿ-೩(೭) ಎಂಟನೇ ತರಗತಿ ೨೦೦೧-೦೨, ದಿ. ೨೮-೨-೦೨) ಅದರಿಂದ ಖಾಸಗಿ ಪ್ರೌಢ ಶಾಲೆಗಳು ಎದುರಿಸಬೇಕಾಗಿ ಬರುವ ಸಮಸ್ಯೆಗಳ ಬಗೆಗೆ ಸರಕಾರ ವಿಚಾರವನ್ನೇ ಮಾಡಿದಂತಿಲ್ಲ.

೧. ಪೂರ್ವ ಯೋಜನೆ,ತಯಾರಿ ಇಲ್ಲದ, ಈ ರೀತಿ ೮ನೇ ತರಗತಿಯನ್ನು ಬೇರ್ಪಡಿಸಿದಾಗ ಪ್ರಾಥಮಿಕ ಮತ್ತು ಮಾಧ್ಯಮಿಕ ಎರಡೂ ಶಾಲೆಗಳ ಸ್ಥಿತಿ ತ್ರಿಶಂಕು ಸ್ಥಿತಿಯಾಗುತ್ತದೆ.

೨. ಈಗಾಗಲೇ ಇರುವ ಪ್ರಾಥಮಿಕ ಶಿಕ್ಷಕರಿಗೆ ೫ ರಿಂದ ೭ನೇ ತರಗತಿ ಇಂಗ್ಲೀಷ, ಗಣಿತ ಮತ್ತು ವಿಜ್ಞಾನ ಕಲಿಸುವುದು ಕಷ್ಟವಾಗುತ್ತಿರುವಾಗ, ೮ನೇ ತರಗತಿಯನ್ನೂ ಸೇರಿಸಿದರೆ, ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಗಿ, ಶಿಕ್ಷಣದ ಗುಣಮಟ್ಟ ಇನ್ನೂ ಹಾಳಾಗುತ್ತದೆ.

೩. ೮ನೇ ತರಗತಿಗೆ ಹೈಸ್ಕೂಲಿಗೆ ಹೋಗುವ ಸಂತೋಷದಲ್ಲಿರುವ ಮಕ್ಕಳು, ಮತ್ತೆ ಪ್ರಾಥಮಿಕ ಶಾಲೆಯಲ್ಲಿಯೇ ೧ ವರ್ಷ ಓದುವುದೆಂದರೆ, ಅವರ ಮೇಲೆ ಮಾನಸಿಕವಾಗಿ ದುಷ್ಪರಿಣಾಮ ಉಂಟಾಗುತ್ತದೆ.

೪. ಮೊದಲೇ ಮೂಲಭೂತ ಸೌಲಭ್ಯಗಳ ಕೊರತೆಯಿಂದ ನರಳುತ್ತಿರುವ ನಮ್ಮ ಪ್ರಾಥಮಿಕ ಶಾಲೆಗಳು, ಈ ಹೆಚ್ಚುವರಿ ವರ್ಗಗಳನ್ನು ಆ ಮಕ್ಕಳಿಗೆ ಅಗತ್ಯವಿರುವ ಪ್ರಯೋಗಾಲಯ, ಗ್ರಂಥಾಲಯ, ಬೆಂಚುಗಳು, ಬಿ. ಎಡ್. ತರಬೇತಿ ಹೊಂದಿದ ಅಧ್ಯಾಪಕರು ಮುಂತಾದ ಅಗತ್ಯಗಳ ಭಾರವನ್ನು ಹೊರಬಲ್ಲವೆ?

೫. ಹೈಸ್ಕೂಲ ವೇತನ ಶ್ರೇಣಿ ಬಿಟ್ಟು ಪ್ರಾಥಮಿಕ ವೇತನ ಶ್ರೇಣಿಗೆ ಅಧ್ಯಾಪಕರು ಬರಬಹುದೆ? ಅದು ಸೂಕ್ತವೇ?

೬. ಕೆಲವು ಹೈಸ್ಕೂಲಗಳಲ್ಲಿ ೮ನೇ ತರಗತಿಯಲ್ಲಿ ೫,೬ ಅಂದರೆ ಎ.ಬಿ. ಸಿ. ಡಿ. ಇ. ಎಫ್ ಎಂದು ಭಾಗಗಳಿರುತ್ತವೆ. ಈಗಾಗಲೇ ಕೊರತೆ ಇರುವ ಪ್ರಾಥಮಿಕ ಶಾಲೆಗಳಲ್ಲಿ ಈ ಎಲ್ಲ ಮಕ್ಕಳನ್ನೂ ಪ್ರಾಯೋಗಿಕವಾಗಿ ಹೊಂದಿಸಲು ಸಾಧ್ಯವೇ?

೭. ಈಗ ಅನೇಕ ಕಡೆ ಬೇರೆ ಬೇರೆ ಊರುಗಳಿಂದ , ತಮಗೆ ಬೇಕಾದ ಹೈಸ್ಕೂಲಿಗೆ ಮಕ್ಕಳು ಬರುತ್ತಾರೆ. ಆದರೆ ಈ ರೀತಿ ಬದಲಾವಣೆ ಮಾಡುವುದರಿಂದ ಇಲಾಖೆಯು ಸೂಚಿಸಿದ ಶಾಲೆಗೆ ಸಂಬಂಧಪಟ್ಟ ವಿದ್ಯಾರ್ಥಿ ಪಾಲಕರು ತಮ್ಮ ಮಕ್ಕಳನ್ನು ಕಳಿಸಲು ಸಿದ್ಧರಾಗುವರೇ? ಮಕ್ಕಳು ತಾವು ಇಷ್ಟಪಟ್ಟ ಶಾಲೆಗೆ ಹೋಗಿ ಓದುವುದನ್ನು ಕಸಿದುಕೊಂಡಂತಾಗಲಿಲ್ಲವೇ?

೮. ಇದರಿಂದ ಸರಕಾರದ ಮೇಲೂ ಆರ್ಥಿಕ ಹೊರೆ ಹೆಚ್ಚಾಗುತ್ತದೆ. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಿನ ಕೊಠಡಿಗಳನ್ನು, ಪ್ರಯೋಗಾಲಯಗಳನ್ನು ಕಟ್ಟಿಸಬೇಕಾಗುತ್ತದೆ. ಈಗ ರಾಜ್ಯದಲ್ಲಿರುವ ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೨೨೩೪೨, ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೪೮೭೧೮. ಅಂದರೆ ರಾಜ್ಯದಲ್ಲಿ ಹೊಸದಾಗಿ ಕನಿಷ್ಠ ೪೮೭೧೮ ಕೊಠಡಿಗಳನ್ನು ಕಟ್ಟಿಸಬೇಕಾಗುತ್ತದೆ. ಪ್ರತಿ ಕೊಠಡಿಗೆ ೫೦,೦೦೦ ರೂ.ಗಳಂತೆ ಒಟ್ಟು ೨೪ ರಿಂದ ೨೫ ದಶಕೋಟಿ ಖರ್ಚು ಮಾಡಬೇಕಾಗುತ್ತದೆ.

೯. ಕನಿಷ್ಠ ೧ಲಕ್ಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಸಧ್ಯ ಇರುವ ೨೬೩೭೬ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೮ನೇ ತರಗತಿ ಪ್ರಾರಂಭಿಸುವುದರಿಂದ ಪ್ರತಿ ಶಾಲೆಗೆ ೫ ಜನ ಶಿಕ್ಷಕರಂತೆ (ವಿಜ್ಞಾನ-೨, ಕಲಾ-೧, ಭಾಷಾ ಶಿಕ್ಷಕರು-೨) ಒಟ್ಟು ೧೩೧೯೭೦ ಪದವೀಧರ ಸಹ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ.

೧೦. ೮ನೇ ತರಗತಿಯನ್ನು ಬೇರ್ಪಡಿಸುವುದರಿಂದ ೧ ಸಹ ಶಿಕ್ಷಕರನ್ನು ಮಾತ್ರ ಕಡಿಮೆ ಮಾಡಲು ಸಾಧ್ಯವಿದೆ. ಸಧ್ಯ ಇರುವ ೫೧೯೬ ಪ್ರೌಢ ಶಾಲೆಗಳಲ್ಲಿ ಒಟ್ಟು ೫೧೯೬ ಸಹಶಿಕ್ಷಕರು ಹೆಚ್ಚುವರಿ ಆಗಲಿದ್ದು, ಅವರನ್ನು ಬೇರೆಡೆಗೆ ವರ್ಗಾಯಿಸುವ ಸಮಸ್ಯೆ ಉಂಟಾಗುತ್ತದೆ.

೧೧. ೯ ಮತ್ತು ೧೦ ಎರಡೇ ವರ್ಗಗಳಿಗೆ ಬೋಧಿಸುವ ಶಿಕ್ಷಕರಿಗೆ ಪೂರ್ಣಾವಧಿ ಕಾರ್ಯಭಾರ ಇಲ್ಲದಿದ್ದರೂ ೧ + ೬ ಶಿಕ್ಷಕರನ್ನು ಅನಿವಾರ್ಯವಾಗಿ ಉಳಿಸಿಕೊಳ್ಳಬೇಕಾಗುತ್ತದೆ. ಅಂದರೆ ರಾಜ್ಯದಲ್ಲಿ ಒಟ್ಟು ೬೦೭೭೪ ಶಿಕ್ಷಕರು ಪೂರ್ಣಾವಧಿ ಕೆಲಸವಿಲ್ಲದೆ ಕಾರ್ಯ ಮಾಡುವ ಪರಿಸ್ಥಿತಿ ಉಂಟಾಗುತ್ತದೆ.

೧೨. ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೮ ನೇ ತರಗತಿ ಪ್ರಾರಂಭಿಸಿದರೆ ಕನಿಷ್ಠ ೩ ಶಿಕ್ಷಕರನ್ನು ನೇಮಿಸಿಕೊಂಡರೂ ವರ್ಷಕ್ಕೆ ೫೬೬೮ ಕೋಟಿ ರೂ.ಗಳನ್ನು ಹೆಚ್ಚುವರಿ ವೇತನಕ್ಕಾಗಿ ನೀಡಬೇಕಾಗುತ್ತದೆ.

೧೩. ೮ ನೇ ತರಗತಿಯನ್ನು ಪ್ರಾಥಮಿಕ ಶಾಲೆಗೆ ಸೇರಿಸಿ, ೧೧ ಮತ್ತು ೧೨ ಅಂದರೆ ಪಿ.ಯು.ಸಿ ೧ ಮತ್ತು ೨ ನೇ ವರ್ಗಗಳನ್ನು ಹೈಸ್ಕೂಲಿಗೆ ಸೇರಿಸುವ ವಿಚಾರ ಮಾಡಿದ್ದಾರೆ. ಹಾಗಾದರೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಜ್ಯೂನಿಯರ್ ಕಾಲೇಜುಗಳಿಗೆ ಪ್ರತ್ಯೇಕ ಪ್ರಿನ್ಸಿಪಾಲರು ಇವರೆಲ್ಲರ ಕೆಲಸವೇನು? ಆದನ್ನೆಲ್ಲಾ ರದ್ದುಪಡಿಸುವರೆ? ಇದರಿಂದ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಂತೆ ಪದವಿಪೂರ್ವ ಶಿಕ್ಷಣ ವಿಭಾಗವೂ ಅತಂತ್ರ ಸ್ಥಿತಿ ತಲುಪುತ್ತದೆ.

೮ ನೇ ತರಗತಿಯನ್ನು ಹಿರಿಯ ಪ್ರಾಥಮಿಕ ಶಾಲೆಗೆ ಸೇರಿಸುವ ಬಗೆಗೆ ದಿನಾಂಕ ೨೮-೧-೦೨ರಂದು ಆಯುಕ್ತರು ಹೊರಡಿಸಿದ ಸುತ್ತೋಲೆಯಲ್ಲಿ ೩ ವಿಧಾನಗಳನ್ನು ಸೂಚಿಸಲಾಗಿದೆ.

೧. ೬ ಮತ್ತು ೭ ನೇ ತರಗತಿಯಲ್ಲಿ ಕನಿಷ್ಠ ತಲಾ ೩೦ ಮಕ್ಕಳಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ೮ ನೇ ತರಗತಿವರೆಗೂ ವಿಸ್ತರಿಸುವುದು.

೨. ೩ ಕಿ.ಮೀ. ಅಂತರದಲ್ಲಿ ಪ್ರೌಢ ಶಾಲೆಗಳು ಇಲ್ಲದಿರುವ ಸ್ಥಳಗಳಲ್ಲಿ, ಸ್ಥಳೀಯ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೮ ನೇ ತರಗತಿಯವರೆಗೆ ವಿಸ್ತರಿಸುವುದು.

೩. ೩ ವಿಭಾಗಗಳು ಮಾತ್ರ ಇರುವ ಎಲ್ಲ ಪ್ರೌಢ ಶಾಲೆಗಳಿಗೆ ಸಮೀಪದ ಹಿರಿಯ ಪ್ರಾಥಮಿಕ ಶಾಲೆಯ ೬ ಮತ್ತು ೭ ನೇ ತರಗತಿಗಳನ್ನು ಬೇರ್ಪಡಿಸಿ ಸೇರಿಸುವುದು.

೩ ನೇ ಪ್ರಸ್ತಾಪವು ತಕ್ಕಮಟ್ಟಿಗೆ ಉತ್ತಮವಾಗಿದ್ದರೂ, ಈಗಾಗಲೇ ೬ ಮತ್ತು ೭ ನೇ ತರಗತಿಗೆ

ಕಲಿಸುತ್ತಿರುವ ಶಿಕ್ಷಕರನ್ನು ಏನು ಮಾಡುವುದು? ಅವರನ್ನು ಹೈಸ್ಕೂಲಿಗೆ ಸೇರಿಸಿದರೆ ಅವರ ವೇತನ ಶ್ರೇಣಿ ಏನು?

ಈ ಎಲ್ಲ ಸಮಸ್ಯೆಗಳನ್ನು ಸೃಷ್ಟಿಸಿ, ಪರಿಹರಿಸಲು ಆಗದೆ ಒದ್ದಾಡುವುದಕ್ಕಿಂತ ೮ ನೇ ವರ್ಗವನ್ನು ಇದ್ದಲ್ಲೇ ಅಂದರೆ ಹೈಸ್ಕೂಲಿನಲ್ಲೇ ಇಟ್ಟು, ಆ ವರ್ಗದ ಶಿಕ್ಷಣವನ್ನು ಉಚಿತವಾಗಿ ಕೊಡುವುದು ಒಳ್ಳೆಯದಲ್ಲವೇ? ೫ ನೇ ವರ್ಗದಿಂದ ವಿಷಯವಾರು ಕಲಿಸಲು ಬಿ. ಎ., ಬಿ. ಎಸ್.ಸಿ., ಬಿ.ಈಡಿ ಆದವರನ್ನು ನೇಮಿಸಿದರೆ ಗುಣಮಟ್ಟದ ಸುಧಾರಣೆ ಆಗಬಹುದಲ್ಲವೇ?

(ದಕ್ಷಿಣ ಏಷ್ಯಾದಲ್ಲಿ ೫ ವರ್ಷಗಳ ಪ್ರಾಥಮಿಕ ಶಿಕ್ಷಣವಿದ್ದರೆ, ಹೆಚ್ಚಿನ ದೇಶಗಳಲ್ಲಿ ೬ ವರ್ಷ, ಕರ್ನಾಟಕದಲ್ಲಿ ೭ ವರ್ಷಗಳ ಪ್ರಾಥಮಿಕ ಶಿಕ್ಷಣವಿದೆ. ಆದ್ದರಿಂದ ಈಗಿರುವ ಪದ್ಧತಿಯ ಬದಲಾವಣೆಯ ಅವಶ್ಯಕತೆ ಇದೆ ಎಂದು ಅನಿಸುವುದಿಲ್ಲ.)

೨. ಶಾಲೆಗಳ ಪ್ರಾರಂಭ :

ಅ) ೧-೪ ತರಗತಿಗಳಿಗೆ ೧೫ ಮಕ್ಕಳಿರುವ ಪ್ರದೇಶದಲ್ಲಿ ಒಂದು ಶಾಲೆ ಪ್ರಾರಂಭ ಮಾಡಬೇಕು ಅಂದಿದ್ದಾರೆ. ಹಾಗೆ ಮಾಡಿದರೆ ಅದು ಏಕೋಪಾಧ್ಯಾಯ ಶಾಲೆ ಆಗುತ್ತದೆ. ಇದೇ ವರದಿಯ ಎದುರು ಇರುವ ಸವಾಲುಗಳು ಎಂಬಲ್ಲಿ, ಎಲ್ಲಾ ಜಿಲ್ಲೆಗಳೊಳಗೆ ಏಕೋಪಾಧ್ಯಾಯ ಶಾಲೆಗಳಿರದಂತೆ ಶಿಕ್ಷಕರ ಪುನಃ ವಿತರಣಾ ಕಾರ್ಯ ನಡೆಯಬೇಕು ಅಂದಿದ್ದಾರೆ. ಆದರೆ ಮೇಲೆ ಹೇಳಿದ ಪ್ರಕಾರ ಮಾಡಿದರೆ ಏಕೋಪಾಧ್ಯಾಯ ಶಾಲೆಗೆ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೇ?

ಬ) ಶಾಲೆಯ ವ್ಯಾಪ್ತಿಯಿಂದ ಹೊರಗಿರುವ ಮಕ್ಕಳಿಗಾಗಿ ಸರ್ಕಾರೇತರ ಸಂಸ್ಥೆಗಳ ಪರ್ಯಾಯ ಅಥವಾ ಅನೌಪಚಾರಿಕ ಶಾಲೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಬೇಕೆಂದಿದೆ.

ಆದರೆ ಸರ್ಕಾರೇತರ ಸಂಸ್ಥೆಗಳಿಗೆ ಉಚಿತ ಶಿಕ್ಷಣ ಕೊಡುವುದು ಸುಲಭವಲ್ಲ. ಫೀ, ಡೊನೇಷನ್, ಬಿಲ್ಡಿಂಗ್ ಫಂಡ್ ರೂಪದಲ್ಲಿ ಹಣ ಪಡೆಯುವುದು ಅನಿವಾರ್ಯವಾಗುವುದರಿಂದ ಅದು ಉಚಿತ ಶಿಕ್ಷಣ ಆಗುವುದೇ?

ಕ) ಸಾರಿಗೆಗಾಗಿ ಎತ್ತಿನ ಬಂಡಿಗಳನ್ನು ನಿಗದಿಗೊಳಿಸಬೇಕೆಂದು ಹೇಳಿದೆ. ಆದರೆ ಕೊಡಗು, ಉತ್ತರ ಕನ್ನಡ ಮುಂತಾದ ಅರಣ್ಯ ಪ್ರದೇಶಗಳ ಜಿಲ್ಲೆಗಳಲ್ಲಿ ಎತ್ತಿನ ಬಂಡಿ ಉಪಯೋಗ ಸಾಧ್ಯವೇ? ಪಂಚಾಯತಗಳಲ್ಲಿ ಈ ಉದ್ದೇಶಕ್ಕಾಗಿ ಬಿಡುಗಡೆಯಾದ ಅನುದಾನವು ಸರಿಯಾಗಿ ಬಳಕೆಯಾಗುವುದು ನಿಶ್ಚಿತ ಇದೆಯೇ?

೩. ಶಾಲಾ ಕಟ್ಟಡಗಳು ಹಾಗೂ ಇತರ ಸೌಲಭ್ಯಗಳು:

ಪ್ರತಿ ಶಾಲೆಗೆ ಕನಿಷ್ಠ ಸೌಲಭ್ಯಗಳಾದ ಶಾಲಾ ಕೊಠಡಿಗಳು, ಕಪ್ಪು ಹಲಗೆಗಳು, ಪೀಠೋಪಕರಣಗಳು, ಬೋಧನಾ ಸಾಮಗ್ರಿಗಳು ಮತ್ತು ಅರ್ಹತೆ ಹೊಂದಿದ ಶಿಕ್ಷಕರು ಇರಲೇಬೇಕೆಂದು ವರದಿಯಲ್ಲಿ ಮಾಡಿರುವ ಸೂಚನೆ ಎಲ್ಲರೂ ಒಪ್ಪಬೇಕಾದ್ದೇ. ಆದರೆ ಇದೇ ವರದಿಯಲ್ಲಿ ಪ್ರಸ್ತಾಪಿಸಲ್ಪಟ್ಟಂತೆ ರಾಜ್ಯದಲ್ಲಿ ಅಪೂರ್ಣವಾಗಿರುವ ೧೧೦೦ ಶಾಲಾ ಕೊಠಡಿಗಳಿವೆ. ಒಂದು ಸಾಮಾನ್ಯ ಅಂದಾಜಿನಂತೆ ಈಗಿರುವ ಶಾಲಾ ಕೊಠಡಿಗಳಲ್ಲೂ ಶೇ. ೨೫ ರಷ್ಟು ಜೀರ್ಣಾವಸ್ಥೆಯಲ್ಲಿದ್ದು, ಅವುಗಳ ಬದಲಿಗೆ ಬೇರೆ ಕೊಠಡಿಗಳು ಬೇಕಾಗಿವೆ. ಅಂದರೆ ರಾಜ್ಯದಲ್ಲಿ ಈಗ ಒಟ್ಟು ೨೦ ಸಾವಿರಕ್ಕಿಂತ ಹೆಚ್ಚು ಶಾಲಾ ಕೊಠಡಿಗಳು ಬೇಕು.

ಇದಲ್ಲದೆ ಒಂದು ಅಂದಾಜಿನಂತೆ ನೂರಕ್ಕೆ ೮೦ ರಷ್ಟು ಹೆಣ್ಣು ಮಕ್ಕಳಿಗೆ ಶಾಲೆಯಲ್ಲಿ ಶೌಚಾಲಯಗಳಿಲ್ಲ. ೬ ನೇ ತರಗತಿಯ ನಂತರ ಹೆಣ್ಣು ಮಕ್ಕಳು ಶಾಲೆ ಬಿಡುತ್ತಿರುವುದಕ್ಕೆ ಇದೂ ಒಂದು ಪ್ರಮುಖ ಕಾರಣ. ಈ ಎಲ್ಲಾ ಕೊರತೆಗಳ ಮಧ್ಯ ೮ ನೇ ತರಗತಿಯನ್ನೂ ತಂದು ಜೋಡಿಸಿದರೆ ಸಮಸ್ಯೆ ಎಷ್ಟು ಗಂಭೀರವಾಗಬಹುದು. ಅಲ್ಲದೆ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಸರ್ಕಾರೇತರ ಸಂಸ್ಥೆಗಳಿಂದ ಹಾಗೂ ಸಾರ್ವಜನಿಕರಿಂದ ಸಂಪನ್ಮೂಲವನ್ನು ಕ್ರೋಢೀಕರಿಸಬೇಕು ಅಂದಿದ್ದಾರೆ.

ಉಚಿತ ಪ್ರಾಥಮಿಕ ಶಿಕ್ಷಣವು ಸರ್ಕಾರದ ಜವಾಬ್ದಾರಿ ಆದುದರಿಂದ ಈ ಮೇಲಿನವರು ಸಂಪನ್ಮೂಲ ಒದಗಿಸುವರೇ? ಜಿಲ್ಲೆಗೆ ಒಂದೆರಡು ಶಾಲೆ ದತ್ತಕ ತೆಗೆದುಕೊಂಡರೆ ಉಳಿದವುಗಳ ಸ್ಥಿತಿ ಏನು?

೪. ಶಿಕ್ಷಕರು ವಿದ್ಯಾರ್ಥಿಗಳ ಅನುಪಾತ :

೧ ನೇ ತರಗತಿಗೆ, ೧ ಶಿಕ್ಷಕರು, ಕೊಠಡಿ ಇರಬೇಕು. ೧-೪ ತರಗತಿಗಳಲ್ಲಿ ೨೦ ಮತ್ತು ಅದಕ್ಕಿಂತ ಹೆಚ್ಚು ದಾಖಲಾತಿ ಇದ್ದರೆ ಕನಿಷ್ಠ ೨ ಶಿಕ್ಷಕರು ಇರತಕ್ಕದ್ದು ಎಂದು ತಿಳಿಸಲಾಗಿದೆ.

ಅ) ೧-೪ ತರಗತಿಗಳಿಗೆ ಹಾಜರಾಗುವ ೧೫ ಮಕ್ಕಳಿರುವ ಪ್ರದೇಶದಲ್ಲಿ ೧ ಶಾಲೆ ತೆಗೆದರೆ , ಅಲ್ಲಿ ೪ ಜನ ಶಿಕ್ಷಕರು, ೪ ಕೊಠಡಿಗಳನ್ನು ಒದಗಿಸಲು ಸಾಧ್ಯವಿದೆಯೇ?

ಬ) ಶಿಕ್ಷಕ ವಿದ್ಯಾರ್ಥಿ ಪ್ರಮಾಣ ೧:೧೯ ಇರಬೇಕು. ಅದಕ್ಕಿಂತ ಹೆಚ್ಚಾದರೆ ೨ ವಿಭಾಗ ಮಾಡಬೇಕು. ೨ ಶಿಕ್ಷಕರಿರಬೇಕು. ಈ ಸಲಹೆ ಬಹಳ ಒಳ್ಳೆಯದು. ಆದರೆ ಇದನ್ನು ಪ್ರಾಯೋಗಿಕವಾಗಿ ಮಾಡಲು ಸಾಧ್ಯವಿದೆಯೇ?

ಕ) ವಿವಿಧ ತರಗತಿಗಳಿಗೆ ಬೋಧನೆ ಮಾಡುವ ಶಾಲೆಗಳಲ್ಲಿ ವಿದ್ಯಾರ್ಥಿ ಶಿಕ್ಷಕರ ಪ್ರಮಾಣ ೧:೩೦ ಇರಬೇಕು.

೧ : ೧೫ ೧:೧೯ ೧:೩೦

೧ ರಿಂದ ೪ ನೇ ತರಗತಿಗಳಿಗೆ ಗರಿಷ್ಠ ೩೦ ? ೪೦ ?

೫ ರಿಂದ ೭ ನೇ ತರಗತಿಗಳಿಗೆ ಗರಿಷ್ಠ ೪೦ ? ೫೦ ?

ಇಲ್ಲಿ ಯಾವುದು ನಿಶ್ಚಿತ ಪ್ರಮಾಣ ? ಈ ವಿಷಯವಾಗಿ ಜಿಲ್ಲೆ, ಜಿಲ್ಲೆಗಳಲ್ಲಿ ಇರುವ ಅಸಮಾನತೆಯನ್ನು ಹೋಗಲಾಡಿಸುವುದು ಸಾಧ್ಯವೇ?

ಡ) ಶಾಲೆ ಮತ್ತು ತರಗತಿಗಳು ನಿಯಮಿತವಾಗಿ ನಡೆಯಲು ಅನುಕೂಲವಾಗುವಂತೆ, ಹೆರಿಗೆ ರಜೆ ತೆಗೆದುಕೊಳ್ಳುವ ಶಿಕ್ಷಕಿಯರಿಗಾಗಿ ಮಾತ್ರ ರಜಾ ಮೀಸಲಾತಿ, ಕೇಡರಿನ ಶಿಕ್ಷಕರನ್ನು ನೇಮಿಸಬೇಕು. (ಆದರೆ ಈಗಿರುವ ನಿವೃತ್ತರ) ಬದಲಾಗಿ, ತರಬೇತಿ ಹೊಂದಿದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯ ಕೊಡುವುದು ಒಳಿತಲ್ಲವೇ?

೫. ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಇರುವ ನಿರ್ಬಂಧವನ್ನು ತೆಗೆಯುವುದು:

ನಿವೃತ್ತಿ ಹೊಂದಿದ ಶಿಕ್ಷಕರ ಸ್ಥಾನದಲ್ಲಿ ಹೊಸ ಶಿಕ್ಷಕರ ಮರುನೇಮಕ ಮಾಡುವಲ್ಲಿ ಮಿತವ್ಯಯ ಆದೇಶದ ನಿರ್ಬಂಧ ಇರಕೂಡದು. ಇದ್ದರೆ ಶಾಲೆಗಳನ್ನು ನಡೆಸಲು ತೊಡಕಾಗುವುದು. ಇದು ಅತ್ಯಂತ ಮಹತ್ವದ ಹಾಗೂ ಸಮರ್ಪಕ ಶಿಫಾರಸ್ಸು.

ಇದು ಸರಕಾರಕ್ಕೆ ಭಾರವೇನಲ್ಲ. ನಿವೃತ್ತಿ ಹೊಂದುವವರು ಹೆಚ್ಚಿನ ವೇತನ ಶ್ರೇಣಿಯಲ್ಲಿದ್ದು, ಹೊಸದಾಗಿ ನೇಮಕ ಆಗುವವರು ಕನಿಷ್ಠ ವೇತನ ಶ್ರೇಣಿಯಲ್ಲಿರುತ್ತಾರೆ.

೬) ಬ್ಲಾಕವಾರು ಶಿಕ್ಷಕರ ವೃಂದ :

ತೆರವಾದ ಹುದ್ದೆಗಳಲ್ಲಿ, ಜಿಲ್ಲಾವೃಂದಕ್ಕೆ ಬದಲಾಗಿ ತಾಲೂಕು ವೃಂದದ ಹಂತದಲ್ಲಿ ನೇಮಕಾತಿ ಮಾಡಿದರೆ ಹೆಚ್ಚು ಸ್ಥಳೀಯರು ನೇಮಕವಾಗುವುದರ ಜೊತೆಗೆ, ವರ್ಗಾವಣೆ ಸಮಸ್ಯೆಯನ್ನು ಕಡಿಮೆ ಮಾಡಬಹುದು. ಇದೊಂದು ಉತ್ತಮ ಸಲಹೆ.

೭) ಶಿಕ್ಷಕರ ನೇಮಕಾತಿಗೆ ವಿದ್ಯಾರ್ಹತೆ :

ಅ) ಉತ್ತಮ ಹಾಗೂ ಸೂಕ್ತ ಶಿಕ್ಷಕರು ಶಿಕ್ಷಣ ವ್ಯವಸ್ಥೆಯನ್ನು ಪ್ರವೇಶಿಸಲು ಸಹಕಾರಿಯಾಗುವಂತೆ ನೇಮಕಾತಿಯಲ್ಲಿ ಯೋಗ್ಯ ಪ್ರಾಧಾನ್ಯವುಳ್ಳ ಪರೀಕ್ಷೆಯನ್ನು ಆರಂಭಿಸಬೇಕು.

ಬ) ಪ್ರವೇಶ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಎಸ್. ಎಸ್. ಎಲ್.ಸಿ. , ಪಿ.ಯು.ಸಿ ಮತ್ತು ಟಿ.ಸಿ ಎಚ್ , ಪರೀಕ್ಷೆಗಳಲ್ಲಿ ಪಡೆದ ಅಂಕಗಳಿಗೆ ಸೂಕ್ತ ಮಾನ್ಯತೆ ನೀಡಬೇಕು.

ಕ) ೧ ವರ್ಷದ ಇಂಟರ್ನಶಿಪ್ ಇರಬೇಕು.

ಡ) ಪಿ.ಯು.ಸಿ. ಯಲ್ಲಿ ಇಂಗ್ಲೀಷ ಮತ್ತು ವಿಜ್ಞಾನ ಓದಿದವರಿಗೆ ನೇಮಕಾತಿಯಲ್ಲಿ ಪ್ರಾಮುಖ್ಯತೆ ಕೊಡುವಂತೆ ವೃಂದ ಮತ್ತು ನೇಮಕಾತಿಯ ನಿಯಮಗಳಿಗೆ ತಿದ್ದುಪಡಿ ಮಾಡುವುದು ಅವಶ್ಯ.

ಆದರೆ ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ವಿಜ್ಞಾನ ಮತ್ತು ಕಲೆ ಇಬ್ಬರಿಗೂ ಬೇರೆ ಬೇರೆ ಇರಬೇಕು. ಆದರೂ ವಿಜ್ಞಾನ ಮತ್ತು ಇಂಗ್ಲೀಷಿನಲ್ಲಿ ಹೆಚ್ಚು ಅಂಕ ಪಡೆದವರು ಸಿಗುವುದು ಕಷ್ಟ.

ಸದ್ಯದ ೫, ೬ ಮತ್ತು ೭ ನೇ ವರ್ಗದ ವಿಷಯಗಳನ್ನು ಕಲಿಸಲು ಪದವೀಧರ ಶಿಕ್ಷಕರ ಅಗತ್ಯ ಇದೆ. ಆದ್ದರಿಂದ ಬಿ. ಎ. , ಬಿ.ಎಸ್‌ಸಿ. ಜೊತೆಯಲ್ಲಿ ಕನಿಷ್ಠ (ಡಿ.ಈಡಿ, ಟಿ.ಸಿ . ಎಚ್) ತರಬೇತಿ ಪಡೆದಿರುವ ಶಿಕ್ಷಕರ ಅಗತ್ಯ ಈಗ ಇದೆ. ಅಂಥವರು ಸಧ್ಯಕ್ಕಿಲ್ಲ. ಅಂಥವರು ಸಿಗಲು ೩-೪ ವರ್ಷಗಳಾದರೂ ಬೇಕು. ಈ ಬಗೆಗೆ ಯಾವ ಚಿಂತನೆಯೂ ನಡೆದಿಲ್ಲ.

೮) ಶಿಕ್ಷಕರಿಗೆ ಕ್ರಮಬದ್ಧ ಪುನಶ್ಚೇತನ ತರಬೇತಿ :

ಕ್ರಮಬದ್ಧ ಪುನಶ್ಚೇತನ ತರಬೇತಿಯೂ ಶಿಕ್ಷಕರ ಸಾಮರ್ಥ್ಯ ಬಲವರ್ಧನೆಗೆ ಅತ್ಯಗತ್ಯ. ಆದರೆ ಇದು ಶಿಕ್ಷಕರಲ್ಲಿ ಪ್ರೇರಣೆ ಉಂಟು ಮಾಡುವಂತಿರಬೇಕು. ಇಲ್ಲಿ ಇಲಾಖಾ ಸಿಬ್ಬಂದಿಯೊಳಗೆ ಹೆಚ್ಚಿನ ವಿದ್ಯಾರ್ಹತೆ ಹೊಂದಿದವರನ್ನು ಡಯಟ್‌ಗಳಿಗೆ ನೇಮಕಾತಿ ಮಾಡುವುದು ಮತ್ತು ಅವರು ಅಲ್ಲಿಯೇ ಉಳಿಯುವಂತೆ ಪ್ರೋತ್ಸಾಹಕಗಳನ್ನು ನೀಡಿ ಸ್ಥಿರತೆ ಉಳಿಸಬೇಕು.

ಇದೊಂದು ಉತ್ತಮ ಸಲಹೆ. ಆದರೆ ಇಲ್ಲಿ ಯೋಗ್ಯತೆಗೂ ಪ್ರಾಮುಖ್ಯತೆ ಇರಬೇಕು. ಹಣ, ವಸೂಲಿ, ಪ್ರಭಾವಕ್ಕಲ್ಲ. ಈಗಾಗಲೇ ಶಾಲಾ ಸಂಕೀರ್ಣಗಳಿದ್ದು ಅವು ಧನಾತ್ಮಕವಾಗಿ ಕೆಲಸ ಮಾಡುವಂತೆ ಮಾಡಬೇಕು.

೯) ಮಧ್ಯಾಹ್ನ ಉಪಹಾರ ಯೋಜನೆ :

ಈಗಿನಂತೆ ಆಹಾರ ಪದಾರ್ಥಗಳನ್ನು ನೀಡುವ ಬದಲಾಗಿ, ಸಿದ್ಧಪಡಿಸಿದ ಉಪಹಾರವನ್ನು ಸ್ಥಳೀಯ ಮಂಡಳಿಗಳ ಮೂಲಕ ಒದಗಿಸುವುದು ಅಗತ್ಯ.

ಮಧ್ಯಾಹ್ನ ಸಿದ್ಧಪಡಿಸಿದ ಆಹಾರವನ್ನು ಒದಗಿಸುವ ಯೋಜನೆಯು ಈ ಮೊದಲು ಜಾರಿಯಲ್ಲಿತ್ತು. ಆದರೆ ಅದರ ದುರುಪಯೋಗ ಆಗಿದ್ದರಿಂದ ಅದು ರದ್ದಾಗಿ, ಈಗಿರುವ ಕಾಳು ಕೊಡುವ ಯೋಜನೆ ಜಾರಿಯಲ್ಲಿ ಬಂದಿದೆ. ಇದರಿಂದ ಶಿಕ್ಷಕರಿಗೆ ಬೋಧನೆ ಬಿಟ್ಟು, ಊಟ ಸರಬರಾಜು ಮಾಡುವ, ಅಧಿಕಾರಿಗಳಿಗೆ ಹೆಚ್ಚಿನ ಕಾರ್ಯಭಾರ ಇಲ್ಲ ದಿನಾಲೂ ಆಹಾರ ಸಿದ್ಧಪಡಿಸಲು ಹಚ್ಚುವುದು, ಉಸ್ತುವಾರಿ, ವಿತರಿಸುವುದು, ಅಲ್ಲದೇ ಆರ್ಥಿಕ ಭಾರ ಮುಂತಾದವುಗಳು ಇಲ್ಲ. ಇಲ್ಲಿ ಪಾಲಕರಿಗೂ ಜವಾಬ್ದಾರಿ ಇರುತ್ತವೆ.

೧೦. ಶಾಲಾಪೂರ್ವ ಶಿಕ್ಷಣ :

. ಅಂಗನವಾಡಿ ಹಾಗೂ ಪ್ರಾಥಮಿಕ ಶಾಲೆಗಳ ವೇಳೆ ಒಂದೇ ಇರಬೇಕು. ಇದರಿಂದ ಮಕ್ಕಳ ದಾಖಲಾತಿ, ಹಾಜರಾತಿ ಮತ್ತು ಉಳಿಯುವಿಕೆ ಹೆಚ್ಚಾಗುವುದು. ಹಿರಿಯ ಮಕ್ಕಳಿಗೆ ಕಿರಿಯ ಮಕ್ಕಳ ಜವಾಬ್ದಾರಿ ತಪ್ಪುವುದು. ಇದೊಂದು ಸ್ವಾಗತಾರ್ಹ ಕ್ರಮವೇನೂ ಸರಿ.

ಅ) ಆದರೆ ಅಂಗನವಾಡಿ ಮಕ್ಕಳು ಅಷ್ಟು ಸಮಯ ಶಾಲೆಯಲ್ಲಿ ಇರಲು ಸಾಧ್ಯವೇ?

ಬ) ಹಿರಿಯ ಮಕ್ಕಳು ಚಿಕ್ಕ ಮಕ್ಕಳ ಜವಾಬ್ದಾರಿಯಿಂದ ಮುಕ್ತರಾಗಿ ಶಾಲೆಗೆ ಬರಲು ಸಾಧ್ಯವಾಗುವಂತೆ ಸರಕಾರವು ಪರ್ಯಾಯ ವ್ಯವಸ್ಥೆ ಮಾಡಲು ಸಾಧ್ಯವೇ?

ಕ) ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆಯ ಸಮಯವು ಒಂದೇ ಮಾಡುವುದಾದರೆ, ಪ್ರತಿಯೊಂದು ಪ್ರಾಥಮಿಕ ಶಾಲೆಗೆ ಕಡ್ಡಾಯವಾಗಿ ಒಂದೊಂದು ಅಂಗನವಾಡಿ ಕೇಂದ್ರ ಇರಬೇಕಾಗುತ್ತದೆ. ಜೊತೆಗೆ ಉತ್ತಮ ತರಬೇತಿ ಪಡೆದ ,ಅರ್ಹ ಶಿಕ್ಷಕಿಯರನ್ನು ಆಕರ್ಷಕ ವೇತನದೊಂದಿಗೆ ನೇಮಿಸಿಕೊಳ್ಳಬೇಕು. ಇದರಿಂದ ಕಿರಿಯ ಪ್ರಾಥಮಿಕ / ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಸುಧಾರಣೆ ಆಗಬಹುದು, ಆದರಿಂದ ಸಾಧ್ಯವೇ?

೧೧. ನಿರ್ವಹಣೆ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ:

ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಣೆಯಾಗಿ, ಸಾಧನೆಯಲ್ಲಿ ಪ್ರಗತಿಯಾಗುವಂತಹ ನಿರ್ವಹಣೆಯ ವ್ಯವಸ್ಥೆ ಆಗಬೇಕು. ತಾಲೂಕು ಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಕಾರ್ಯಗಳನ್ನು ನೋಡಿಕೊಳ್ಳಲು ಪ್ರತ್ಯೇಕ ಅಧಿಕಾರಿ ಇರಬೇಕು.

ಇಲ್ಲಿ ಪಾಲಕರ ಪಾತ್ರ ಬಹಳ ಮುಖ್ಯ. ಪಾಲಕರಲ್ಲಿ ತಮ್ಮ ಶಿಕ್ಷಣದ ಬಗೆಗೆ ನಿಜವಾದ ಕಾಳಜಿ, ಎಚ್ಚರ ಇರುವಂತೆ ನೋಡಿ ಕೊಳ್ಳುವುದು ಅವಶ್ಯ ಎಂದಿದೆ, ಇದೇನೋ ಸರಿ.

ಆದರೆ ಸಮುದಾಯದ ಪಾಲ್ಗೊಳ್ಳುವಿಕೆಯಲ್ಲಿ ತಾಲೂಕು ಪಂಚಾಯತ, ಗ್ರಾಮ ಪಂಚಾಯತಗಳ ಬಗೆಗೆ ವಿಚಾರ ಮಾಡಿದಾಗ, ಅವುಗಳಿಂದ ಸಮಸ್ಯೆಗಳು, ಒಳಜಗಳ, ರಾಜಕೀಯ ಹೆಚ್ಚಾಗಿದ್ದು, ಎಷ್ಟೋ ಕಡೆ ಪರಸ್ಪರ ವಿರೋಧಿ ಗುಂಪುಗಳ ಸೃಷ್ಟಿಯಾಗಿದೆ.

ಎಸ್.ಡಿ. ಎಂ.ಸಿ . ಅಧ್ಯಕ್ಷರ ಮತ್ತು ಸದಸ್ಯರ ಬಗೆಗೆ ದೂರುಗಳೇ ಹೆಚ್ಚಾಗಿವೆ. ಕುಡಿದು ಬಂದು ಈ ಸದಸ್ಯರು ತರಗತಿ ಕೋಣೆಗೆ ನುಗ್ಗಿ ಇನಸ್ಪೆಕ್ಷನ್ ಮಾಡುವುದು (ಸರಿಯಾದ ವೇಳೆಗೆ ಬಂದು ಸಹಿ ಮಾಡಿ, ಬಾರಿಗೋ, ಕ್ಲಬ್ಬಿಗೋ, ವೈಯಕ್ತಿಕ ಕೆಲಸಗಳಿಗೆ ಹೋಗುವ ಶಿಕ್ಷಕರೂ ಇದ್ದಾರೆ. ಅವರಿಗೆ ಅನಾರೋಗ್ಯಕರ ಬೆಂಬಲವೂ ಇದೆ). ಶಾಲೆಯ ಪ್ರತಿಯೊಂದು ವ್ಯವಹಾರದಲ್ಲಿ ಕೈ

ಹಾಕುವುದು, ಅಧ್ಯಕ್ಷನು ನಿರಕ್ಷರಿಯಾಗಿದ್ದಾಗ, ಅವರ ಸಂಬಂಧಿಕರು ಹೋಗಿ ಸಭೆ ನಡೆಸುವುದು, ಹೀಗೆ ಒಂದು ರೀತಿಯ ಭಯದ ವಾತಾವರಣವೇ ಹಲವೆಡೆ ನಿರ್ಮಾಣವಾದಂತಾಗಿದೆ. ಇವುಗಳಿಗೆ ಅಧಿಕಾರ ಕೊಡುವ ಉದ್ದೇಶವೇನೊ ಒಳ್ಳೆಯದಿತ್ತು. ಆದರೆ ಪರಿಣಾಮ, ಸಮಸ್ಯೆಗಳೇ ಹೆಚ್ಚಾಗಿವೆ.

೧೨. ಮಾಹಿತಿ ವ್ಯವಸ್ಥೆಗಳು :

ದಾಖಲಾತಿ ದರಗಳು ಶಾಲೆ ಬಿಟ್ಟವರ ವಿವರಗಳ ಕರಾರುವಕ್ಕಾದ ಅಂಕಿ- ಅಂಶಗಳನ್ನು ಪಡೆಯುವ ಮಾಹಿತಿ ವ್ಯವಸ್ಥೆ ಇರಬೇಕು. ಆಗಿಂದಾಗ ಮಕ್ಕಳ ಸಾಧನೆಯ ಮಟ್ಟವನ್ನು ಮಾದರಿ ಸಮೀಕ್ಷೆಯ ಆಧಾರದ ಮೇಲೆ ನಡೆಸಿ, ಮುಂದಿನ ಕ್ರಮಗಳನ್ನು ಕೈಕೊಳ್ಳಬೇಕು. ಇದೊಂದು ಉತ್ತಮ ಸಲಹೆ.

ಈಗಿನ ಪರೀಕ್ಷಾ ಪದ್ಧತಿಯು ವಿದ್ಯಾರ್ಥಿಗಳ ಕರಕುಶಲ ಶಕ್ತಿ, ವ್ಯಕ್ತಿತ್ವ ಶಕ್ತಿ, ಹಾಡು , ಆಟೋಟ, ನಾಯಕತ್ವ ಗುಣ, ಸಾಹಸ, ಲಲಿತ ಕಲೆ, ಸೃಜನಶೀಲತೆ ಮುಂತಾದವುಗಳಿಗಾಗಿ ಪ್ರಾಶಸ್ತ್ಯವಿಲ್ಲ . ಈ ವಿಷಯಗಳಿಗೆ ಕೊಡುವ ಪ್ರಮಾಣ-ಪತ್ರಗಳಿಗೆ ಉನ್ನತ ವ್ಯಾಸಂಗದ ಹಂತದಲ್ಲಾಗಲಿ , ಉದ್ಯೋಗ ಸಂದರ್ಶನ ಸಮಯದಲ್ಲಾಗಲಿ ಯಾವ ಬೆಲೆಯೂ ಇಲ್ಲ. ಇದರ ಬಗೆಗೆ ಸಮಿತಿಯು ಏನೂ ಹೇಳಿಲ್ಲ.

ಕ್ರಿಯಾ ಪ್ರಸ್ತಾವನೆ :

ಪ್ರಾಥಮಿಕ ಶಿಕ್ಷಣದ ಸೌಲಭ್ಯವನ್ನು ೪ ಕ್ರಿಯಾ ಹಂತಗಳಾಗಿ ವಿಭಾಗಿಸಬಹುದು ಎಂದು ಹೇಳಲಾಗಿದೆ.

೧. ಅವಕಾಶ.

೨೦೦ ಕ್ಕಿಂತ ಹೆಚ್ಚು ಜನವಸತಿ ಇರುವ ಪ್ರದೇಶದಲ್ಲಿ ೧ ಕಿ.ಮೀ ವ್ಯಾಪ್ತಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳನ್ನು, ೨ಕಿ.ಮೀ ವ್ಯಾಪ್ತಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿದೆ. ೨೦೦ ಕ್ಕಿಂತ ಕಡಿಮೆ ಜನಸಂಖ್ಯೆ ಇದ್ದಲ್ಲಿ ೧೮ ಕಿ.ಮೀ ನಡಿಗೆ ದೂರದಲ್ಲಿ೧ ಶಾಲೆಯಿದೆ. ೧೯೯೨-೯೩ ರಲ್ಲಿ ೪೦೫೪೦ ಇದ್ದ ಶಾಲೆಗಳ ಸಂಖ್ಯೆಯು,೧೯೯೯-೨೦೦೦ ದಲ್ಲಿ ೪೮.೭೧೬ ಆಗಿದೆ. ಅಂದರೆ ಒಂದು ದಶಕದಲ್ಲಿ ೮೦೦೦ ಕ್ಕೂ ಮೇಲ್ಪಟ್ಟು ಶಾಲೆಗಳನ್ನು ತೆರೆಯಲಾಗಿದೆ.

೨) ದಾಖಲಾತಿ:

ಅ) ಮಕ್ಕಳ ದಾಖಲಾತಿಯು೧೯೯೨-೯೩ ರಲ್ಲಿ ೭೪.೯ ಲಕ್ಷ ಇದ್ದುದು, ೧೯೯೯-೨೦೦೦ ದಲ್ಲಿ ೮೬.೭೨ ಲಕ್ಷ ದಾಟಿದೆ. ಅಂದರೆ ೧ ದಶಕದಲ್ಲಿ ೧೨ ಲಕ್ಷ ಮೇಲ್ಪಟ್ಟು ದಾಖಲಾತಿ ಆಗಿದೆ.

ಬ) ಅಧ್ಯಾಪಕರ ನೇಮಕಾತಿ ಮತ್ತು ಲಭ್ಯತೆ : ಇಲ್ಲಿಯೂ ದಶಕದಲ್ಲಿ ೧ ಲಕ್ಷ ಶಿಕ್ಷಕರ ಸಂಖ್ಯೆ ಹೆಚ್ಚಾಗಿದೆ.

ಕ) ಶಿಕ್ಷಕ ವಿದ್ಯಾರ್ಥಿಗಳ ಅನುಪಾತವು ೧:೫೦ ರಿಂದ ೧:೪೦ ಆಗಿದೆ.

ಡ) ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ೬% ರಿಂದ ೧.೩% ಆಗಿದ್ದು, ಗಣನೀಯ ಪ್ರಮಾಣದ ಇಳಿಕೆಯಾಗಿದೆ.

೩) ಬಳಕೆ/ ಉಳಿಸಿಕೊಳ್ಳುವಿಕೆ:

ದಾಖಲಾದ ಮಕ್ಕಳನ್ನು ಉಳಿಸಿಕೊಳ್ಳಲು ಉಚಿತ ಸಮವಸ್ತ್ರ, ಪಠ್ಯಪುಸ್ತಕ, ಶಾಲಾ ಚೀಲ, ಆಹಾರ ವಿತರಣೆ ಮುಂತಾದ ಪ್ರೋತ್ಸಾಹಕರ ಯೋಜನೆಗಳು ಜಾರಿಯಲ್ಲಿದ್ದು, ೧೯೯೯-೨೦೦೦ ದಲ್ಲಿ ಸುಮಾರು ೧೩.೦ ಲಕ್ಷ ಮಕ್ಕಳು ಇದರ ಪ್ರಯೋಜನ ಪಡೆದಿದ್ದಾರೆ.

೧೯೯೨-೯೩ ರಲ್ಲಿ ಕಿ.ಪ್ರಾ.ಶಾ ಬಿಡುವ ಮಕ್ಕಳ ಪ್ರಮಾಣವು ಸುಮಾರು ೪ ಲಕ್ಷ ಇದ್ದು, ೧೯೯೯-೨೦೦೦ ದಲ್ಲಿ ೧೪ ಲಕ್ಷಕ್ಕಿಳಿದಿದೆ. ಹಿ.ಪ್ರಾ. ಶಾಲೆ ಬಿಡುವ ಮಕ್ಕಳ ಸಂಖ್ಯೆ ೪೮ ಲಕ್ಷದಿಂದ ೩೫ ಲಕ್ಷಕ್ಕಿಳಿದಿದೆ. ಅಂದರೆ ಹಿರಿಯ ಪ್ರಾಥಮಿಕ ಹಂತಕ್ಕಿಂತ ಕಿರಿಯ ಪ್ರಾಥಮಿಕ ಹಂತದಲ್ಲಿ ಗಣನೀಯ ಪ್ರಗತಿ ಆಗಿದೆ.

೪. ಸಾಧನೆ :

ಡಿ.ಪಿ. ಇ. ಪಿ. ಯಡಿ ಮಾಡಿದ ಅಧ್ಯಯನಗಳ ಪ್ರಕಾರ ಕರ್ನಾಟಕದ ಪ್ರಾಥಮಿಕ ಶಾಲೆಗಳಲ್ಲಿ ಕಲಿಕೆಯ ಸಾಧನೆಯ ಮಟ್ಟವು ತೀರಾ ಅತೃಪ್ತಿಕರವಾಗಿದೆ.

೨ನೇ ತರಗತಿಯ ಮಕ್ಕಳು ೫೦%, ೪ನೇ ತರಗತಿಯ ಮಕ್ಕಳು ೩೫%, ಪ್ರತಿಕ್ರಿಯೆ ತೋರಿದ್ದಾರೆ. ಅಂದರೆ ಇದು ಕಲಿಕೆ ಮತ್ತು ಬೋಧನೆಯ ಗುಣಮಟ್ಟ ತಿಳಿಸುತ್ತದೆ.

ಕರ್ನಾಟಕ ಸರಕಾರವು ಪ್ರಾಥಮಿಕ ಶಿಕ್ಷಣದ ಸುಧಾರಣೆ ಮತ್ತು ಗುಣಮಟ್ಟ ಎತ್ತರಿಸುವುದಕ್ಕಾಗಿ ಸಾವಿರಗಟ್ಟಲೆ ಶಾಲೆಗಳನ್ನು ತೆರೆದು, ಲಕ್ಷಾಂತರ ಶಿಕ್ಷಕರನ್ನು ನೇಮಕ ಮಾಡಿದೆ, ಉಚಿತ ಸೌಲಭ್ಯಗಳನ್ನು ಕೊಟ್ಟಿದ್ದರಿಂದ ದಾಖಲಾತಿ ಉಳಿಕೆ ಹೆಚ್ಚಾಗಿದೆ. ಇದಲ್ಲದೆ, ಡಿ.ಪಿ. ಇ.ಪಿ. ಶಿಕ್ಷಣ ಕಾರ್ಯಕ್ರಮ, ಅಂಗನವಾಡಿಗಳ ಸ್ಥಾಪನೆ, ಕಲಾ ಜಾಥಾ, ಚಿಣ್ಣರ ಮೇಳ, ಸೇತು ಬಂಧ, ಮೊಬೈಲ ಶಾಲೆಗಳು, ನಲಿ ಕಲಿ, ಡಯಟ್, ಬಿ. ಆರ್. ಸಿ. ಮತ್ತು ಸಿ ಆರ್.ಸಿ. ಗಳಿಂದ ಶಿಕ್ಷಕರಿಗೆ ನಿರಂತರ ತರಬೇತಿ, ಸಂಪನ್ಮೂಲ ಸಹಾಯ ನೀಡುವುದು ನಡೆದಿದೆ. ಉಚಿತ ಸೌಲಭ್ಯಗಳ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇವುಗಳಿಗಾಗಿ ಕೋಟ್ಯಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆದರೂ ಸಾಧನೆಯಲ್ಲಿ ನಿರೀಕ್ಷಿತ ಪರಿಣಾಮ ಕಂಡು ಬಂದಿಲ್ಲ ಇದಕ್ಕೆ ಕಾರಣಗಳು

೧. ಉಚಿತವಾಗಿ ಸಿಗುವ ಸೌಲಭ್ಯಗಳಿಗಾಗಿ ಶಾಲೆಗೆ ಬರುವ, ಮತ್ತು ಉಳಿಯುವ ಮಕ್ಕಳ ಸಂಖ್ಯೆಯೇ ಹೆಚ್ಚು.

೨. ಪಾಲಕರಲ್ಲಿಯೂ ಶಿಕ್ಷಣದ ಬಗೆಗೆ ಸರಿಯಾದ ತಿಳುವಳಿಕೆ, ಅರಿವು, ಆಸಕ್ತಿ ಕಾಳಜಿ ಇಲ್ಲದಿರುವುದು.

೩. ೧೩. ವರ್ಷಗಳವರೆಗೆ ಮಕ್ಕಳ ಖರ್ಚಿನ ಭಾರವನ್ನು ಸರಕಾರವು ವಹಿಸಿಕೊಳ್ಳುವುದು. ನಂತರ ದುಡಿಯುವ ಕೈಗಳು ಸಿದ್ಧವಾಗುವುದರಿಂದ ಕುಟುಂಬದ ಗಾತ್ರ ಮತ್ತು ಏಳ್ಗೆಯ ಬಗೆಗೆ ಪಾಲಕರು ಕಾಳಜಿ ಮಾಡುತ್ತಿಲ್ಲ.

ಆದ್ದರಿಂದ ಇನ್ನು ಮುಂದೆ ಈ ಸೌಲ್ಯಭಗಳನ್ನು ೧ ಅಥವಾ೨ ಮಕ್ಕಳಿರುವ ಚಿಕ್ಕ ಕುಟುಂಬಗಳಿಗೆ ಸೀಮಿತಗೊಳಿಸುವುದು ಸೂಕ್ತ. ಆಗ ಮಕ್ಕಳ ಸಂಖ್ಯೆ ಕಡಿಮೆಯಾಗಿ ಪಾಲಕರಿಗೆ ಮಕ್ಕಳ ಬಗೆಗೆ ಕಾಳಜಿ, ಜವಾಬ್ದಾರಿ ಹೆಚ್ಚುತ್ತದೆ. ವರ್ಗದಲ್ಲಿ ಮಕ್ಕಳ ಸಂಖ್ಯೆ ಮಿತವಾಗಿದ್ದರೆ ಶಿಕ್ಷಕರು ಹೆಚ್ಚು ಜವಾಬ್ದಾರಿಯಿಂದ, ಕಾಳಜಿಯಿಂದ ಕೆಲಸ ಮಾಡುತ್ತಾರೆ.

ಇತ್ತೀಚಿನ ಸುತ್ತೋಲೆ :

ಆದರೆ ಇತ್ತೀಚೆಗೆ ಒಂದು ವಿಚಿತ್ರ ಸುತ್ತೋಲೆಯು ಶಿಕ್ಷಣ ಇಲಾಖೆಯಿಂದ ಹೊರಬಿದ್ದಿದೆ. ಅದರ ಪ್ರಕಾರ ೨೫ ವಿದ್ಯಾರ್ಥಿಗಳಿಗಿಂತ ಕಡಿಮೆ ಸಂಖ್ಯೆ ಇರುವ ಖಾಸಗಿ ಶಾಲೆಯಲ್ಲಿ ೧ ವರ್ಷದಲ್ಲಿ ದಾಖಲಾತಿ ಹೆಚ್ಚಾಗದಿದ್ದರೆ ಆ ಶಾಲೆಯನ್ನು ಮುಚ್ಚಿ ಆ ಶಾಲೆಯ ಪಕ್ಕದಲ್ಲಿ ಸರಕಾರಿ ಶಾಲೆ ತೆಗೆಯುತ್ತಾರಂತೆ. ಇದರ ಅರ್ಥಏನು? ಸರಕಾರಿ ಶಾಲೆಯಾದರೆ ಸಂಖ್ಯೆ ನಿಯಮ ಇಲ್ಲ. ಖಾಸಗಿ ಶಾಲೆಗೆ ಇದೆ. ಅಂದರೆ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಅಂದಂತಾಯಿತು.

ಅಂತಿಮ ವರದಿ :

ಡಾ. ರಾಜಾರಾಮಣ್ಣ ಕಾರ್ಯ ತಂಡದ ಮಧ್ಯಂತರ ವರದಿಯು ೨೦೦೦ನೇ ಇಸ್ವಿಯ ಜನೇವರಿ ತಿಂಗಳಲ್ಲಿ ಅಂತಿಮ ವರದಿಯು ೨೦೦೧ ರ ಜೂನ ತಿಂಗಳಲ್ಲಿ ಪ್ರಕಟವಾಗಿವೆ. ಮಧ್ಯಂತರ ವರದಿಯು ಕನ್ನಡದಲ್ಲಿ ಇದ್ದುದರಿಂದ ಶಿಕ್ಷಕರು, ಪಾಲಕರ ಪ್ರತಿಕ್ರಿಯೆ ಚೆನ್ನಾಗಿತ್ತು. ಅಂತಿಮ ವರದಿಯು ಇಂಗ್ಲೀಷಿನಲ್ಲಿ ಇದ್ದಿದ್ದರಿಂದ ಪ್ರತಿಕ್ರಿಯೆ ಉಲ್ಲೇಖನೀಯವಾಗಿರಲಿಲ್ಲ.

ಅಂತಿಮ ವರದಿಯಲ್ಲಿ ಶೈಕ್ಷಣಿಕ ಸಾಮರ್ಥ್ಯ ವರ್ಧನೆಗೆ ಹೆಚ್ಚಿನ ಒತ್ತು ಕೊಟ್ಟಿದ್ದು ಸ್ವಾಗತಾರ್ಹ. ಪ್ರಾಥಮಿಕ ಶಾಲೆಗಳಲ್ಲಿ ಕಂಪ್ಯೂಟರ ಬಳಕೆಗೆ ಬಹಳ ಒತ್ತು ಕೊಟ್ಟಿದ್ದು ತಪ್ಪು. ಅದನ್ನು ಹೈಸ್ಕೂಲಿನಲ್ಲಿ ಪ್ರಾರಂಭಿಸಬಹುದು.

ಡಯಟ್, ಬಿ. ಆರ್.ಸಿ. ಸಿ. ಆರ್.ಸಿ. ಗಳ ಹೆಚ್ಚಿನ ಹೊಣೆಗಾರಿಕೆ ಬಗಗೆ ತಿಳಿಸಲಾಗಿದೆ. ಡಿ. ಎಸ್. ಇ. ಆರ್.ಟಿ. ಯು ಸ್ವಾಯತ್ತ ಸಂಸ್ಥೆಯಾಗಬೇಕೆಂದು ಸೂಚಿಸಿದೆ ಇವೆಲ್ಲಾ ಉತ್ತಮ ಸಲಹೆಗಳು.

ಬಿ.ಎಡ್. ತರಬೇತಿಯಲ್ಲಿ ಪ್ರಾಥಮಿಕ ಶಿಕ್ಷಣದ ವಿಷಯಗಳನ್ನು ಐಚ್ಛಿಕವಾಗಿ ತೆಗೆದುಕೊಂಡವರನ್ನೇ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರನ್ನಾಗಿ ನೇಮಕ ಮಾಡಬೇಕೆಂದೂ ಹೇಳಿದೆ.

ಡಾ. ರಾಜಾರಾಮಣ್ಣ ವರದಿಯಲ್ಲಿ ಸಮಗ್ರ ಪ್ರಾಥಮಿಕ ಶಿಕ್ಷಣಕ್ಕೆ ಹಾಗೂ ಶೈಕ್ಷಣಿಕ ಸಾಮರ್ಥ್ಯವರ್ಧನೆಗೆ ಹೆಚ್ಚಿನ ಒತ್ತು ಕೊಟ್ಟಿರುವುದು ಮಹತ್ವವಾದುದಾಗಿದೆ.ವರದಿಯು ಸಮಗ್ರ ಕರ್ನಾಟಕದ ಶಿಕ್ಷಣ ಬಲವರ್ಧನೆಗೆ ಸಂಬಂಧಿಸಿದೆ. ಆದರೆ ಈ ವರದಿಯಲ್ಲಿ ಯಾವುದೇ ಗಡಿನಾಡಿನ ಶೈಕ್ಷಣಿಕ ಸ್ಥಿತಿಗತಿಗಳನ್ನು ಪ್ರತ್ಯೇಕವಾಗಿ ಎಲ್ಲೂ ಪ್ರಸ್ತಾಪಿಸಿರುವುದಿಲ್ಲ.

೬. ಬರಗೂರು ರಾಮಚಂದ್ರಪ್ಪ ವರದಿ -೨೦೦೧

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನಡೆಸಿದ ಚರ್ಚೆಗಳ ನೆಲೆಯಲ್ಲಿ ರೂಪುಗೊಂಡ ಈ ವರದಿಯನ್ನು ೨೦೦೧ ರಲ್ಲಿ ಸರಕಾರಕ್ಕೆ ಸಲ್ಲಿಸಲಾಗಿದೆ ಶಿಕ್ಷಣದಲ್ಲಿ ಕನ್ನಡ ಭಾಷೆ ಮತ್ತು ಮಾಧ್ಯಮದ ಬಗ್ಗೆ ಕಾಳಜಿ ವಹಿಸಿ ಕನ್ನಡಪರ ಬದ್ಧತೆ ತೋರಿರುವ ಎಲ್ಲಾ ವರದಿಗಳು ಮತ್ತು ಆ ವರದಿಗಳ ಮುಖ್ಯ ಆಶಯಗಳನ್ನು ಬಿಟ್ಟು ಕೊಡದೆ ಸಮಕಾಲೀನ ಸಂದರ್ಭದ ಒತ್ತಾಸೆಯಲ್ಲಿ ಈ ವರದಿ ಹುಟ್ಟಿದೆ ಎಂದು ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆ ಕರೆದು ಹಿಂದಿನ ವರದಿಗಳನ್ನು ಸವಿಸ್ತಾರವಾಗಿ ಪರಿಶೀಲಿಸಿ ಪ್ರಾಧಿಕಾರದ ಸನ್ಮಾನ್ಯ ಸದಸ್ಯರು ಕೊಟ್ಟ ಸಲಹೆ- ಸೂಚನೆಗಳನ್ನು ಈ ವರದಿಯಲ್ಲಿ ತೆಗೆದುಕೊಳ್ಳಲಾಗಿದೆ. ಪ್ರಾಧಿಕಾರವು ರಚಿಸಿಕೊಂಡಿರುವ ಕನ್ನಡ ಶಾಲೆಗಳಿಗೆ ಸಂಬಂಧಿಸಿದ ಸಲಹಾ ಸಮಿತಿಯಲ್ಲೂ ಈ ಬಗ್ಗೆ ಚರ್ಚಿಸಲಾಗಿದೆ, ಅನೇಕ ವಿದ್ವಾಂಸರೊಂದಿಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ಸರಕಾರಕ್ಕೆ ಸಲ್ಲಿಸಿರುವ ಈ ವರದಿಯ ವಿಶೇಷವೇನೆಂದರೆ - ಭಾಷಾ ಸಂಬಂಧಿಯಾದ ನ್ಯಾಯಾಲಯದ ತೀರ್ಪುಗಳು ಮತ್ತು ಸರಕಾರದ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು ಒಟ್ಟು ಶಿಕ್ಷಣ ಕ್ರಮದಲ್ಲಿ ಕನ್ನಡವನ್ನು ಭಾಷಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅಳವಡಿಸಿ ಕೊಳ್ಳುವ ಕಾರ್ಯ ಸಾಧ್ಯ ಕ್ರಮಗಳನ್ನು ಅಗತ್ಯ ಚರ್ಚೆಯೊಂದಿಗೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯದ ಅಧಿಕೃತ ಭಾಷೆಯಾದ ಕನ್ನಡವು ಈ ರಾಜ್ಯದ ಬಹುಸಂಖ್ಯಾತರ ಮಾತೃಭಾಷೆ . ಇಲ್ಲಿ ಮಾತೃಭಾಷೆಯ ಪ್ರಸ್ತಾಪ ಬಂದಾಗ ಪ್ರಧಾನವಾಗಿ ಕನ್ನಡ ಭಾಷೆಯನ್ನೇ ಗಮನಿಸಲಾಗಿದೆ. ಆದರೂ ಈ ರಾಜ್ಯದಲ್ಲಿರುವ ಭಾಷಾ ಅಲ್ಪಸಂಖ್ಯಾತರು ತಮ್ಮ ತಮ್ಮ ಮಾತೃಭಾಷೆಯ ಶಾಲೆಗಳನ್ನು ತೆರೆಯಲು, ಓದಲು ಹಕ್ಕುಳ್ಳವರಾಗಿದ್ದಾರೆ. ಜೊತೆಗೆ ಅವರು ರಾಜ್ಯದ ಅಧಿಕೃತ ಭಾಷೆಯನ್ನು ಪಠ್ಯಕ್ರಮದ ಒಂದು ಭಾಗವಾಗಿ ಕಲಿಯಬೇಕಾದ್ದು ಅನಿವಾರ್ಯ. ಇಲ್ಲದಿದ್ದರೆ ಅವರು ರಾಜ್ಯದ ಆಡಳಿತಾತ್ಮಕ ಹಾಗೂ ಸಾಮಾಜಿಕ ಪ್ರಕ್ರಿಯೆಯಲ್ಲಿ ಪಾಲುದಾರರಾಗಲು ಸಾಧ್ಯವಾಗುವುದಿಲ್ಲ.

ನಮ್ಮ ರಾಜ್ಯದಲ್ಲಿ ಭಾಷೆ ಮತ್ತು ಮಾಧ್ಯಮವನ್ನು ಕುರಿತಂತೆ ಕೆಲವು ವರದಿಗಳ ಬಂದಿವೆ. ಡಾ. ಗೋಕಾಕ ಸಮಿತಿಯ ವರದಿಯು ಪ್ರೌಢಶಾಲಾ ಶಿಕ್ಷಣದಲ್ಲಿ ಕನ್ನಡವನ್ನು ಏಕೈಕ ಪ್ರಥಮಬಾಷೆಯಾಗಿ ಕಡ್ಡಾಯಗೊಳಿಸುವ ಆಶಯವನ್ನು ಪ್ರಕಟಿಸಿತು. ೧೯೮೨ರಲ್ಲಿ ಸಲ್ಲಿಸಿದ ಈ ವರದಿಯು ಶಿಕ್ಷಣ ಮಾಧ್ಯಮದ ಅಂಶವನ್ನೂ ಚರ್ಚಿಸಿತು. ಸಂಸ್ಕೃತವನ್ನು ಪ್ರೌಢಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಬೋಧನೆ ಮಾಡಲು ಅವಕಾಶ ಕಲ್ಪಿಸಿದ ಅಂದಿನ ಸರಕಾರದ ನಿಲುವಿನಿಂದಾಗಿ ಮೂಡಿದ ವಿರೋಧವನ್ನು ಗಮನಿಸಿ ಡಾ. ವಿ.ಕೃ. ಗೋಕಾಕ್ ಅವರ ನೇತೃತ್ವದ ಸಮಿತಿಯನ್ನು ರಚಿಸಲಾಯಿತೆಂಬ ಅಂಶವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಅನಂತರ, ೧೯೯೧ನೇ ಜನೇವರಿಯಲ್ಲಿ ಸರಕಾರವು ಡಾ. ಎಚ್.ನರಸಿಂಹಯ್ಯನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ 'ಅನಧೀಕೃತ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳ ಸಮಸ್ಯೆ ಕುರಿತು' ವರದಿ ಸಲ್ಲಿಸಲು ಕೋರಿತು. ಈ ಸಮಿತಿಯು ಜೂನ್ ೧೯೯೧ ರಲ್ಲಿ ತನ್ನ ವರದಿಯನ್ನು ಸಲ್ಲಿಸಿ, ಅನಧೀಕೃತ ಆಂಗ್ಲ ಮಾಧ್ಯಮಶಾಲೆಗಳ ಸಮಸ್ಯೆಗೆ ಪರಿಹಾರ ಸೂಚಿಸುತ್ತ ''ಅನುದಾನ ಸಂಹಿತೆಯ ನಿಯಮಗಳನ್ನು ಪೂರೈಸಿದ್ದಲ್ಲಿ ಮಾನ್ಯತೆ ನೀಡಿ ಈ ವರ್ಷದಿಂದಲೇ ಮಾತೃಭಾಷೆ ಮಾಧ್ಯಮದಲ್ಲಿ ಕಲಿಯಲು ಮಾತ್ರ ಪ್ರಥಮ ತರಗತಿಗೆ ಪ್ರವೇಶ ಕೊಡಬೇಕು''- ಎಂದು ಶಿಫಾರಸ್ಸು ಮಾಡುವುದರ ಮೂಲಕ ಪ್ರಾಥಮಿಕ ಹಂತದಲ್ಲಿ ಮಾತೃಭಾಷಾ ಮಾಧ್ಯಮ ಕಡ್ಡಾಯವೆಂಬ ನೀತಿಗೆ ಪುಷ್ಟಿ ನೀಡಿತು. ಕನ್ನಡೇತರರು ತಮ್ಮ ಮಾತೃಭಾಷೆಯಲ್ಲಿ ಓದಲು ಅಗತ್ಯವಿರುವಷ್ಟು ಸಂಖ್ಯೆ ಇಲ್ಲದಿದ್ದಲ್ಲಿ - ಪ್ರಾದೇಶಿಕ ಭಾಷೆಯನ್ನೇ (ಕನ್ನಡ) ಮಾಧ್ಯಮವಾಗಿ ಆಯ್ದುಕೊಳ್ಳಬೇಕೆಂದೂ ಈ ವರದಿ ಹೇಳಿದೆ.

ಈಗಾಗಲೇ ಅಂಗೀಕೃತವಾದ ಆಂಗ್ಲಮಾಧ್ಯಮ ಶಾಲೆಗಳಲ್ಲೂ ೧೯೯೨ನೇ ಸಾಲಿನಿಂದ ಮಾತೃಭಾಷೆ ಮಾಧ್ಯಮ ಬರಬೇಕೆಂದು ಸೂಚಿಸಿದ ಡಾ. ಎಚ್ಚೆನ್ ವರದಿಯು ಇನ್ನು ಮುಂದೆ ಪ್ರಾಥಮಿಕ ಹಂತದಲ್ಲಿ ಸಿ.ಬಿ. ಎಸ್.ಇ ಮತ್ತು ಐ.ಸಿ. ಎಸ್. ಇ ಶಿಕ್ಷಣ ಶಾಲೆಗಳಿಗೆ ರಾಜ್ಯದಲ್ಲಿ

ಅನುಮತಿ ನೀಡಬಾರದೆಂದೂ ಹೇಳಿದೆ. ೧೯೯೮ನೇ ಅಗಸ್ಟ್ ೧೧ ರಂದು ನಡೆದ ಶಿಕ್ಷಣತಜ್ಞರ ಸಮಾಲೋಚನಾ ಸಭೆಯಲ್ಲಿ ಅಂದಿನ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣ ಸಚಿವರಾದ ಶ್ರೀ ಹೆಚ್.ಜಿ. ಗೋವಿಂದೇಗೌಡ ಅವರು ಕೊಟ್ಟ ಸಲಹೆಯನ್ನು ಅನುಸರಿಸಿ ಅಂದಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ತಜ್ಞರ ಸಲಹಾ ಸಮಿತಿಯನ್ನು ರಚಿಸಿ, ಅದರ ಶಿಫಾರಸ್ಸುಗಳ ಮಧ್ಯಂತರ ವರದಿಯನ್ನು ೧೧ ಮಾರ್ಚ್ ೧೯೯೯ ರಂದು ಮಾನ್ಯ ಶ್ರೀ ಗೋವಿಂದೇಗೌಡ ಅವರಿಗೆ ಸಲ್ಲಿಸಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಂದಿನ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲರವರ ನೇತೃತ್ವದ ಈ ತಜ್ಞರ ಸಲಹಾ ಸಮಿತಿಯು ೧ರಿಂದ ೭ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವೆಂದು ಸರಕಾರವು ಘೋಷಿಸಿ ಮಾತೃಭಾಷಾ ಮಾಧ್ಯಮವೇ ಇರಬೇಕೆಂದು ಶಿಫಾರಸ್ಸು ಮಾಡಿತು. ಕನ್ನಡ (ಮಾತೃಭಾಷಾ) ಮಾಧ್ಯಮಶಾಲೆಗಳಲ್ಲಿ ಪ್ರಾಥಮಿಕ ಮೂರನೇ ತರಗತಿಯಿಂದ ಆಂಗ್ಲಭಾಷೆ (ಅಥವಾ ಇತರ ಭಾರತೀಯ ಭಾಷೆಗಳಲ್ಲಿ ಒಂದನ್ನು) ಕಲಿಯಲು ಅವಕಾಶ ನೀಡಬೇಕೆಂದೂ ಮೂರು ಮತ್ತು ನಾಲ್ಕನೇ ತರಗತಿಗಳಿಗೆ ಆಂಗ್ಲ ಭಾಷೆಯ ಕಲಿಕೆ ಕಡ್ಡಾಯ ಆದರೆ ಪರೀಕ್ಷೆ ಕಡ್ಡಾಯವಲ್ಲವೆಂದೂ ತಿಳಿಸಿತು. ಮೂರನೇ ಭಾಷೆಯೊಂದನ್ನು ಕಲಿಯುವ ಅವಕಾಶವನ್ನೂ ಈ ವರದಿಯು ಒಳಗೊಂಡಿತ್ತು. ಮೂರನೇ ಭಾಷೆಯ ಕಲಿಕೆ ಮತ್ತು ಪರೀಕ್ಷೆ ಎರಡೂ ಐಚ್ಛಿಕವಾಗಿರಬೇಕೆಂದು ಈ ವರದಿ ಶಿಫಾರಸ್ಸು ಮಾಡಿತು. 'ಪೂರ್ವಪ್ರಾಥಮಿಕ ಶಿಕ್ಷಣ ಸರಕಾರದ ನಿಯಂತ್ರಣದಲ್ಲಿ ಇಲ್ಲ' ಎಂದು ಭಾವಿಸಿದ ಈ ವರದಿ 'ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆಯಲ್ಲಿ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಪ್ರಾಥಮಿಕ ಶಿಕ್ಷಣವು ಪೂರ್ವ ಪ್ರಾಥಮಿಕ ಹಂತವನ್ನು ಒಳಗೊಳ್ಳುತ್ತದೆ ಎಂದು ಸ್ಪಷ್ಟೀಕರಿಸಿರುವುದನ್ನು ಬಳಸಿಕೊಳ್ಳಬೇಕು' ಎಂದು ಸೂಚಿಸಿತು.

ಈ ಎಲ್ಲ ವರದಿಗಳು ಕನ್ನಡ ಭಾಷೆ ಮತ್ತು ಕನ್ನಡ ಮಾಧ್ಯಮದ ಆಶಯಕ್ಕೆ ಬದ್ಧವಾದ ಆಲೋಚನೆಗಳನ್ನು ಹೊಂದಿದೆ. ಈ ಎಲ್ಲ ವರದಿಗಳ ಆಶಯ ಮತ್ತು ಆಲೋಚನೆಗಳನ್ನು ಸಕಾರಾತ್ಮಕವಾಗಿ ಗ್ರಹಿಸುತ್ತ ಹಾಗೂ ಗೌರವಿಸುತ್ತ, ಒಟ್ಟು ಶಿಕ್ಷಣಪದ್ಧತಿಯ ಸಂದರ್ಭದಲ್ಲಿ ಕನ್ನಡ ಮಾಧ್ಯಮದ ಪ್ರಸ್ತುತತೆಯನ್ನು ಖಚಿತಪಡಿಸಲು ಇಲ್ಲಿ ವಿನಮ್ರವಾಗಿ ಪ್ರಯತ್ನಿಸಲಾಗಿದೆ.

ಗಡಿನಾಡಿನ ಸಮಸ್ಯೆಗಳನ್ನು ಅಧ್ಯಯನ ಮಾಡಲು ಸರಕಾರವು ನೇಮಿಸಿದ ಶ್ರೀ ವಾಟಾಳ್ ನಾಗರಾಜ್ ಅವರ ಅಧ್ಯಕ್ಷತೆಯ ಗಡಿನಾಡು ಅಧ್ಯಯನ ಆಯೋಗದ ಮಧ್ಯಂತರ ವರದಿಯನ್ನು ಇಲ್ಲಿ ನೆನೆಯುತ್ತ ಅದರ ಕೆಲವು ಉಪಯುಕ್ತ ಅಂಶಗಳ ಕಡೆ ಸರಕಾರವು ಗಮನ ಕೊಡಬೇಕೆಂದು ಪ್ರಾಧಿಕಾರವು ಬಯಸುತ್ತದೆ.

ಕನ್ನಡ ಮತ್ತು ನ್ಯಾಯಾಂಗ :

೧೯೮೨ರಲ್ಲಿ ಸಲ್ಲಿಸಲಾದ 'ಗೋಕಾಕ್ ವರದಿ' ಯನ್ನು ಆಧರಿಸಿ ಸರಕಾರವು ೨೦-೭-೧೯೮೨ ರಂದು ಆದೇಶವೊಂದನ್ನು ಹೊರಡಿಸಿತು. ೨೦-೭-೧೯೮೨ರ ಇಡಿ ೧೧೩. ಎಸ್. ಒ. ಎಚ್.೭೯ ಕ್ರಮಾಂಕದ ಈ ಸರಕಾರಿ ಆದೇಶದಲ್ಲಿ- ಪ್ರೌಢಶಾಲಾ ಹಂತದಲ್ಲಿ ಕನ್ನಡವೇ ಏಕೈಕ ಪ್ರಥಮಭಾಷೆಯಾಗತಕ್ಕದ್ದೆಂದೂ ಹಾಗೂ ಈ ಆದೇಶದಲ್ಲಿ ತಿಳಿಸಿರುವಂತೆ ಕನ್ನಡವೂ ಸೇರಿದಂತೆ ೧೦ ಭಾಷೆಗಳ ಪೈಕಿ ಇತರೆ ಎರಡು ಭಾಷೆಗಳನ್ನು ವಿದ್ಯಾರ್ಥಿಗಳು ಕಲಿಕೆಗಾಗಿ ಆಯ್ಕೆ ಮಾಡಿಕೊಳ್ಳಬಹುದೆಂದೂ ಕನ್ನಡೇತರ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಥಮ ವರ್ಷದಿಂದಲೇ ಕನ್ನಡ ಬೋಧನೆ ಕಡ್ಡಾಯವಾಗತಕ್ಕದ್ದೆಂದೂ- ತಿಳಿಸಲಾಗಿತ್ತು. ರಾಜ್ಯ ಉಚ್ಚನ್ಯಾಯಾಲಯದಲ್ಲಿ ಈ ಆದೇಶವನ್ನು ಕೆಲವರು ಪ್ರಶ್ನಿಸಿದರು. ಉಚ್ಚನ್ಯಾಯಾಲಯವು ಸಂವಿಧಾನದ ಅನುಚ್ಛೇದ ೧೪, ೨೯(೧) ಮತ್ತು ೩೦(೧) ರ ವಿಧಿಗಳನ್ನು ೨೦-೭-೧೯೮೨ರ ಸರಕಾರಿ ಆದೇಶವು ಉಲ್ಲಂಘಿಸುತ್ತದೆಯೆಂದು ಹೇಳಿ ಅದನ್ನು ಅನೂರ್ಜಿತಗೊಳಿಸಿತು. ಆದರೂ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಯ ಜೊತೆಗೆ ಇನ್ನೊಂದು ಭಾಷೆಯನ್ನು ಬೋಧಿಸಲು ಒಪ್ಪಿಗೆ ನೀಡಿದ ನ್ಯಾಯಾಲಯವು ಪ್ರೌಢಶಿಕ್ಷಣದ ಹಂತದಲ್ಲಿ ಮೂರು ಭಾಷೆಯಗಳಲ್ಲಿ ಒಂದಾಗಿ ಕನ್ನಡವನ್ನು ಕಡ್ಡಾಯಗೊಳಿಸಲು ಸರಕಾರಕ್ಕೆ ಅಧಿಕಾರ ನೀಡಿತು. ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯಗೊಳಿಸುವ ಈ ನೀತಿಯನ್ನು ಕನ್ನಡ ಮಾತೃಭಾಷೆಯಾದ ಎಲ್ಲರಿಗೂ ಮತ್ತು ರಾಜ್ಯದ ಶಾಶ್ವತ ನಿವಾಸಿಗಳಾದ ಮತ್ತು ಶಾಶ್ವತ ನಿವಾಸಿಗಳಾಗುವ ಭಾಷಾ ಅಲ್ಪಸಂಖ್ಯಾತರಿಗೆ ಅನ್ವಯಿಸಲು ಸರಕಾರಕ್ಕೆ ಸ್ವಾತಂತ್ರ್ಯ ನೀಡಲಾಯಿತು.

ರಾಜ್ಯ ಸರಕಾರವು ೨೦-೭-೧೯೮೨ರ ತನ್ನ ಆದೇಶವನ್ನು ಅನೂರ್ಜಿತಗೊಳಿಸಿದ ಉಚ್ಚನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಚನ್ಯಾಯಾಲಯಕ್ಕೆ ಮನವಿ ಸಲ್ಲಿಸಿತು. ಅದೇ ಕಾಲಕ್ಕೆ ಸರಕಾರವು೧೯-೬-೧೯೮೯ ರಂದು ಇಡಿ. ೮೭ ಪ್ರಾಶಿಭಾ ೮೮ ಕ್ರಮಾಂಕದ ಅದೇಶವೊಂದನ್ನು ಹೊರಡಿಸಿತು. ಈ ಆದೇಶದ ಪ್ರಕಾರ-

ಅ) ೧ರಿಂದ ೪ನೇ ತರಗತಿಯವರೆಗೆ ಮಾತೃಭಾಷೆಯು ಬೋಧನಾ ಮಾಧ್ಯಮವಾಗಿರಬೇಕು.

ಆ) ಕನ್ನಡೇತರ ಶಾಲೆಗಳಲ್ಲಿ ಮೂರನೇ ತರತಿಯಿಂದ ಕನ್ನಡವನ್ನು ಐಚ್ಛಿಕ ವಿಷಯವಾಗಿ ಬೋಧಿಸಬೇಕು.

ಇ) ಪ್ರೌಢ ಶಾಲಾಹಂತದಲ್ಲಿ ಒಂದು ಭಾಷೆಯಾಗಿ ಕನ್ನಡ ಕಲಿಕೆ ಕಡ್ಡಾಯವಾಗಬೇಕು.

ಸರಕಾರವು ೧೯೮೭-೮೮ ರ ಶೈಕ್ಷಣಿಕ ವರ್ಷದ ನಂತರ ಆಂಗ್ಲಮಾಧ್ಯಮ ಶಾಲೆಗಳಿಗೆ

ಅನುಮತಿ ನೀಡಬಾರದೆಂದು ತೀರ್ಮಾನಿಸಿತು. ಈ ತಿರ್ಮಾನವನ್ನೂ ಒಳಗೊಂಡಂತೆ ಸರಕಾರದ ೧೯-೬-೧೯೮೯ ರ ಆದೇಶವನ್ನು ಪ್ರಶ್ನಿಸಿ ಕೆಲವು ಸಂಸ್ಥೆಗಳು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಹಾಕಿದವು. ಸರ್ವೋಚ್ಚ ನ್ಯಾಯಾಲಯವು ೮ನೇ ಡಿಸೆಂಬರ್ ೧೯೯೩ ರಲ್ಲಿ ಕೊಟ್ಟ ತನ್ನ ತೀರ್ಪಿನಲ್ಲಿ ಕರ್ನಾಟಕ ಸರಕಾರದ ೧೯ನೇ ಜೂನ್ ೧೯೮೯ರ ಆದೇಶದ ಸಿಂಧುತ್ವವನ್ನು ಎತ್ತಿ ಹಿಡಿಯಿತು. ಜೊತೆಗೆ 'ಭಾಷಾನೀತಿಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ರಾಜ್ಯಕ್ಕೆ ತಿಳಿದಿದೆ; ಈ ವಿಚಾರದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡಬಾರದು' ಎಂದೂ ಅಭಿಪ್ರಾಯಪಟ್ಟಿತು.

ಸರ್ವೋಚ್ಚನ್ಯಾಯಾಲಯದ ತೀರ್ಪಿನ ನಂತರ ಸರಕಾರವು ೨೯-೪-೧೯೯೪ ರ ಇ.ಡಿ.೨೮ ಪಿಜಿಸಿ ೯೪ ಕ್ರಮಾಂಕದ ಹೊಸ ಆದೇಶವನ್ನು ಹೊರಡಿಸಿತು. ಈ ಆದೇಶದ ಪ್ರಕಾರ-

ಅ) ೧ರಿಂದ ೪ನೇ ತರಗತಿಯವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರುತ್ತದೆ. ಕನ್ನಡೇತರ ವಿದ್ಯಾರ್ಥಿಗಳಿಗೆ ಮೂರನೇ ತರಗತಿಯಿಂದ ಕನ್ನಡವನ್ನು ಐಚ್ಛಿಕವಾಗಿ ಕಲಿಸಬಹುದು. ಆದರೆ ಪರೀಕ್ಷೆ ಇರುವುದಿಲ್ಲ.

ಆ) ೫ನೇ ತರಗತಿಯಿಂದ ಮೂರನೇ ಭಾಷೆಯನ್ನು ಜಾರಿಗೆ ತರಲಾಗುವುದು. ಒಂದು ಮತ್ತು ಎರಡನೇ ಭಾಷೆಯನ್ನು ಬಿಟ್ಟು ಬೇರೆ ಭಾಷೆಯನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಬಹುದು. ಆದರೆ ಉತ್ತೀರ್ಣರಾಗುವುದು ಕಡ್ಡಾಯವಲ್ಲ.

ಇ) ಪ್ರೌಢಶಾಲಾ ಹಂತದಲ್ಲಿ ಮೂರು ಭಾಷೆಗಳನ್ನು ಕಲಿಸಲಾಗುವುದು. ಕನ್ನಡದಲ್ಲಿ ಉತ್ತೀರ್ಣರಾಗುವುದು ಕಡ್ಡಾಯ.

ಈ) ೫ನೇ ತರಗತಿಯಿಂದ ವಿದ್ಯಾರ್ಥಿಗಳು ಮಾತೃಭಾಷೆಗೆ ಹೊರತಾದ ಭಾಷಾ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಬಹುದು. ಇಲ್ಲಿ ಮಾತೃಭಾಷಾ ಮಾಧ್ಯಮ ಕಡ್ಡಾಯವಲ್ಲ.

ಉ) ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್(ಸಿ.ಬಿ. ಎಸ್. ಇ) ಅಥವಾ ಇಂಡಿಯನ್ ಕೌನ್ಸಿಲ್ ಆಫ್ ಸೆಕೆಂಡರಿ ಎಜುಕೇಷನ್(ಐ.ಸಿ. ಎಸ್. ಇ) ಶಾಲೆಗಳನ್ನು ತೆರಯಲು ಸರಕಾರವು ನಿರಾಕ್ಷೇಪಣಾ (ಎನ್. ಒ.ಸಿ.) ಪತ್ರಕೊಡಲು ನಿರ್ಬಂಧನೆಗಳನ್ನು ಹಾಕಿದ್ದು-ಅಂತರರಾಜ್ಯ ವರ್ಗಾವಣೆ, ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿದ ಬ್ಯಾಂಕು ಮತ್ತು ವಾಣಿಜ್ಯಾದಿ ಸಂಸ್ಥೆಗಳು, ಕೇಂದ್ರ ಸರಕಾರದ ಸೇವೆ ಮತ್ತು ಕೇಂದ್ರೋದ್ಯಮಕ್ಕೆ ಸೇರಿದ ಪೋಷಕರ ಮಕ್ಕಳಿದ್ದಲ್ಲಿ ಮಾತ್ರ ನಿರಾಕ್ಷೇಪಣಾ ಪತ್ರ ಕೊಡುವುದಾಗಿ ಹೇಳಲಾಗಿದೆ.

ಸರಕಾರದ ಈ ಆದೇಶವನ್ನು ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಜೊತೆಗೆ ೧೯೮೯ ಕ್ಕೆ ಮುಂಚೆ ಪ್ರಾರಂಭವಾದ ಆಂಗ್ಲಮಾಧ್ಯಮ ಪ್ರಾಥಮಿಕ ಶಾಲೆಗಳಿಗೆ ಕಡ್ಡಾಯ ಕನ್ನಡ ಮಾಧ್ಯಮದ ನೀತಿಯನ್ನು ಅನ್ವಯಿಸಲು ಸಾಧ್ಯವಾಗದಂತೆ , ತಡೆಯಾಜ್ಞೆಯನ್ನೂ ತರಲಾಗಿತ್ತು. ಹೀಗಾಗಿ ೧೯೮೯ ರ ನಂತರ ಪ್ರಾರಂಭವಾದ ೧ ರಿಂದ ೪ನೇ ತರಗತಿಯ (ಕಿರಿಯ) ಪ್ರಾಥಮಿಕ ಶಾಲೆಗಳು ಕನ್ನಡ ಮಾಧ್ಯಮವನ್ನೇ ಅಳವಡಿಸಿಕೊಳ್ಳಬೇಕಾದದ್ದು ಸರಕಾರದ ನೀತಿಯಾಗಿದ್ದರೆ, ಅದಕ್ಕೆ ಹಿಂದೆಯೇ ಪ್ರಾರಂಭವಾದ ಶಾಲೆಗಳಲ್ಲಿ ಆಂಗ್ಲಮಾಧ್ಯಮ ಉಳಿದುಕೊಂಡು ಬಂದಿದೆ.

ಕನ್ನಡ ಮಾಧ್ಯಮಪರವಾದ ಸರಕಾರಿ ಆದೇಶದ ವಿರುದ್ಧ ಸಹ್ಯಾದ್ರಿಸಂಸ್ಥೆಯು ಮೇಲ್ಮನವಿ ಸಲ್ಲಿಸಿ, ಅನಂತರ ಇದು ಸಹ್ಯಾದ್ರಿ ಪ್ರಕರಣವೆಂದೇ ಹೆಸರು ಗಳಿಸಿತು. ಅಂತಿಮವಾಗಿ ೧೯೯೯ ರಲ್ಲಿ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಈ ಪ್ರಕರಣವು ನಿರರ್ಥಕ ಎಂದು ಭಾವಿಸಿ ವಜಾ ಮಾಡಿತು. ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ಅನ್ವಯ- ರಾಜ್ಯ ಉಚ್ಚ ನ್ಯಾಯಾಲಯವನ್ನು ಕೂಡಲೇ ಸಂಪರ್ಕಿಸಿ- ಆಂಗ್ಲ ಮಾಧ್ಯಮ ಶಾಲೆಗಳಿಗೆ ಸಂಬಂಧಿಸಿದಂತೆ ನೀಡಿರುವ ಯಥಾಸ್ಥಿತಿ ಆದೇಶವನ್ನು ತ್ವರಿತವಾಗಿ ತೆರವುಗೊಳಿಸಲು ಮತ್ತು ದಿನಾಂಕ ೨೯-೪-೧೯೯೪ ರ ಆದೇಶದ ಅನುಸಾರ, ಆಂಗ್ಲಮಾಧ್ಯಮ ಶಾಲೆಗಳು ಮಾತೃಭಾಷಾ ಮಾಧ್ಯಮ ಬೋಧನೆಗೆ ಪರಿವರ್ತಿಸಿಕೊಳ್ಳಲು ಆದೇಶ ನೀಡುವಂತೆ ಕೋರಲು- ಸರಕಾರವು ಕೂಡಲೇ ಕ್ರಮಕೈಗೊಳ್ಳಬೇಕಾಗಿದೆ.[೮]

ಶಿಕ್ಷಣದಲ್ಲಿ ಕನ್ನಡ ಭಾಷೆ ಮತ್ತು ಮಾಧ್ಯಮದ ಸ್ಥಿತಿಗತಿಗಳ ಬಗ್ಗೆ ಅರಿತುಕೊಂಡು ನೀತಿ ನಿರೂಪಣಾ ಶಿಫಾರಸ್ಸುಗಳನ್ನು ಸಲ್ಲಿಸಲಾಗಿದೆ :

೧. ಪ್ರಾಥಮಿಕ ಪೂರ್ವ ಶಿಕ್ಷಣದ ಏಕರೂಪತೆ ಮತ್ತು ಕನ್ನಡ

೨. ಪ್ರಾಥಮಿಕ ಶಿಕ್ಷಣ ಮತ್ತು ಕನ್ನಡ ಮಾಧ್ಯಮ

೩. ಕನ್ನಡ ಮಾಧ್ಯಮ : ವೃತ್ತಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಆದ್ಯತೆ

ಅ) ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಎಲ್ಲ ರೀತಿಯ ವೃತ್ತಿಶಿಕ್ಷಣದಲ್ಲಿ (ಬಿ. ಇ; ಎಂ.ಬಿ. ಬಿ. ಎಸ್; ಬಿ. ಇಡಿ; ಟಿ.ಸಿ. ಎಚ್; ಐ.ಟಿ.ಐ; ಪಾಲಿಟೆಕ್ನಿಕ್ ಮುಂತಾದ ಎಲ್ಲಾ ಕೋರ್ಸುಗಳು) ಮತ್ತು ಉನ್ನತ ಶಿಕ್ಷಣದಲ್ಲಿ ಆದ್ಯತೆಯ ಮೇಲೆ ಪ್ರವೇಶ ಕೊಡಬೇಕು.

ಆ) ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಆದ್ಯತೆಯ ಮೇಲೆ ಉದ್ಯೋಗ ನೀಡಲು ತೀರ್ಮಾನಿಸಿ ನಿರ್ದಿಷ್ಟ ಪ್ರಮಾಣವನ್ನು ನಿಗದಿ ಮಾಡಬೇಕು.

ಇ) ಅ ಮತ್ತು ಆ ನಲ್ಲಿರುವ ಶಿಫಾರಸ್ಸುಗಳು ಗಡಿನಾಡು ಮತ್ತು ಹೊರನಾಡಿನ ಅಭ್ಯರ್ಥಿಗಳಿಗೂ ಅನ್ವಯಿಸುತ್ತವೆ. ಇಲ್ಲಿ ಪ್ರದೇಶದ ನಿರ್ಬಂಧವಿಲ್ಲದೆ ಕನ್ನಡ ಮಾಧ್ಯಮದಲ್ಲಿ ೧ರಿಂದ ೧೦ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವುದಷ್ಟೇ ಮಾನದಂಡವಾಗಬೇಕು.

೪. ಕನ್ನಡೇತರರ ಶಾಲೆಗಳಲ್ಲಿ ಕನ್ನಡದ ಕಡ್ಡಾಯ ಕಲಿಕೆ

೫. ಮೂರನೇ ತರಗತಿಯಿಂದ ಇಂಗ್ಲೀಷ್ ಕಲಿಕೆ

೬. ತ್ರಿಭಾಷಾ ಕಲಿಕೆ ಮತ್ತು ಪರೀಕ್ಷೆ: ಕಡ್ಡಾಯದ ಪ್ರಶ್ನೆ

೭. ಕನ್ನಡ ಭಾಷೆ ಮತ್ತು ಐಚ್ಛಿಕ ವಿಷಯ: ವಿಶೇಷಾನುಮತಿ ಕನ್ನಡ ಮಾಧ್ಯಮ ಶಿಕ್ಷಣ : ವಿಶೇಷಾನುದಾನ

೮. ವೃತ್ತಿ ಶಿಕ್ಷಣದಲ್ಲಿ ಕನ್ನಡ ಕಲಿಕೆ

೯. ವಿಶ್ವವಿದ್ಯಾಲಯಗಳಲ್ಲಿ '' ಕ್ರಿಯಾತ್ಮಕ ಕನ್ನಡ''

೧೦. ಕನ್ನಡ ಸಂಸ್ಕೃತಿ ಪಠ್ಯ ಮತ್ತು ಪಠ್ಯ ವಿಷಯ ಪುನರ್ ವಿಂಗಡನೆ

೧೧. ಕಂಪ್ಯೂಟರ್ ಶಿಕ್ಷಣದಲ್ಲಿ ಕನ್ನಡ

೧೨. ಪ್ರಥಮ ಭಾಷೆಯ ಪ್ರಶ್ನೆ

೧೩. ಕನ್ನಡ ಕಲಿಯುವ - ಕಲಿಸುವ ಹಕ್ಕು: ಕನ್ನಡದ ಹಕ್ಕು

೧೪. ಶಿಕ್ಷಣದಲ್ಲಿ ಏಕರೂಪತೆ

೧೫. ಗಡಿನಾಡು- ಹೊರನಾಡುಗಳಲ್ಲಿ ಕನ್ನಡ- ಕನ್ನಡಿಗ

ಗಡಿನಾಡು- ಹೊರನಾಡುಗಳಲ್ಲಿ ಕನ್ನಡ- ಕನ್ನಡಿಗ :

ಕರ್ನಾಟಕದ ಗಡಿಭಾಗದ ಒಳ ಸಮೀಪ ಮತ್ತು ಹೊರ ಸಮೀಪದ ಪ್ರದೇಶಗಳು ಮತ್ತು ಹೊರನಾಡನ್ನು ವಿಶೇಷವಾಗಿ ಪರಿಗಣಿಸಿ, ಅಲ್ಲಿ ಕನ್ನಡದಲ್ಲಿ ವ್ಯಾಸಂಗ ಮಾಡುವವರಿಗೆ ಅಗತ್ಯ ಪ್ರೋತ್ಸಾಹ ಕೊಡಬೇಕು. ಅವರು ಕನ್ನಡವನ್ನು ಉಳಿಸಿಕೊಳ್ಳುತ್ತಿರುವಾಗ ಅವರನ್ನು ಉಳಿಸುವುದು ಸರಕಾರದ ಒಂದು ಹೊಣೆಯಾಗಬೇಕು.

ಗಡಿನಾಡಿನ ಸಮಸ್ಯೆಗಳು ವಿಶಿಷ್ಟ ಸ್ವರೂಪವನ್ನು ಪಡೆದಿವೆ. ಗಡಿನಾಡೆಂದರೆ ಕನಿಷ್ಠ ಎರಡು ಭಾಷೆಗಳ, ಎರಡು ಸಂಸ್ಕೃತಿಗಳ ಮತ್ತು ಎರಡು ಸರಕಾರಗಳ ಸಮಸ್ಯೆ . ಕರ್ನಾಟಕದ ಒಳಗಿನ ಗಡಿಭಾಗದಲ್ಲಿ ಹೊರ ರಾಜ್ಯದ ಭಾಷೆ- ಸಂಸ್ಕೃತಿಗಳ ಪ್ರಭಾವವಿರುವಂತೆ, ಹೊರಗಿನ ಗಡಿಭಾಗದಲ್ಲಿ

ಕರ್ನಾಟಕದ ಪ್ರಭಾವವೂ ಇರುತ್ತದೆ. ಪ್ರಮಾಣದಲ್ಲಿ ವ್ಯತ್ಯಾಸವಿರಬಹುದಾದರೂ 'ಪ್ರಭಾವ' ಎನ್ನುವುದು ಒಂದು ವಸ್ತುಸ್ಥಿತಿ. ಸಂಪೂರ್ಣ ಹೊರನಾಡಿನಲ್ಲಿರುವವರು ಬೇರೆ ರಾಜ್ಯದ ಭಾಗವಾಗಿದ್ದೂ ಕನ್ನಡವನ್ನು ಕಾಪಾಡಿಕೊಳ್ಳುವುದು ಒಂದು ವಿಶೇಷವೇ ಸರಿ. ತಮ್ಮೊಳಗೆ ತಾವು ಕಳೆದು ಹೋಗದಂತೆ ನೋಡಿಕೊಳ್ಳುವ ಒತ್ತಾಸೆಯಾಗಿ ಕನ್ನಡವನ್ನು ಉಳಿಸಿಕೊಳ್ಳುವ ಗಡಿನಾಡು ಹಾಗೂ ಹೊರನಾಡಿನ ಕನ್ನಡಿಗರ ಪ್ರೀತಿ ಪೂರ್ವಕ ಪ್ರಯತ್ನಕ್ಕೆ ಕರ್ನಾಟಕವೂ ಪ್ರತಿ ಸ್ಪಂದಿಸಬೇಕಾದದ್ದು ಒಂದು ನೈತಿಕ ಜವಾಬ್ದಾರಿಯೂ ಹೌದು: ಪ್ರಜಾಸತ್ತಾತ್ಮಕ ಮೌಲ್ಯವೂ ಹೌದು. ಈ ಹಿನ್ನೆಲೆಯಲ್ಲಿ ಮುಂದೆ ಕಂಡ ಶಿಫಾರಸ್ಸುಗಳನ್ನು ಮಾಡಲಾಗಿದೆ.

೧. ಗಡಿನಾಡು ಮತ್ತು ಹೊರನಾಡಿನ ಕನ್ನಡಿಗರ ಸಮಸ್ಯೆಗಳ ಚರ್ಚೆಗೆ ಗಡಿ ಭಾಗದ ರಾಜ್ಯಗಳ ಎಲ್ಲ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು, ಸಂಸ್ಕೃತಿ ಸಚಿವರು, ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳು, ಇತರೆ ವರಿಷ್ಠಾಧಿಕಾರಿಗಳು, ಭಾಷಾಭಿವೃದ್ಧಿಗೆ ಸಂಬಂಧಿಸಿದ ಅಧಿಕೃತ ವರಿಷ್ಠರು- ವರ್ಷಕ್ಕೆ ಎರಡು ಸಾರಿಯಾದರೂ ಸೇರಿ ಚರ್ಚಿಸುವ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಕರ್ನಾಟಕ ಸರಕಾರವೇ ನೇತೃತ್ವವಹಿಸಿ ಮುಂದಾಗಬೇಕು.

೨. ಗಡಿನಾಡು ಮತ್ತು ಹೊರನಾಡಿನವರು ೧ರಿಂದ ೧೦ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೆ, ಅಂಥವರಿಗೆ ಕರ್ನಾಟಕದೊಳಗಿನ ಅಭ್ಯರ್ಥಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಮುಕ್ತವಾಗಿ ನೀಡಬೇಕು. ಇಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದೊಂದೇ ಮಾನದಂಡವಾಗಬೇಕು.

೩. ಕರ್ನಾಟಕದ ಗಡಿಭಾಗದ ಹೊರ ಸಮೀಪದ ಅಸಂಖ್ಯಾತ ವಿದ್ಯಾರ್ಥಿಗಳು ಗಡಿ ಭಾಗದ ಒಳ ಸಮೀಪದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದು ಅಂಥವರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸಲು ಪಾಸ್ ಸೌಲಭ್ಯ ಒದಗಿಸಬೇಕು.

೪. ಗಡಿ ಭಾಗದ ಒಳ ಸಮೀಪದ ಸರಕಾರಿ ಕನ್ನಡ ಶಾಲೆಗಳು ತೀರಾ ದುಃಸ್ಥಿತಿಯಲ್ಲಿದ್ದು ಅವುಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಆರ್ಥಿಕ ಸೌಲಭ್ಯ ನೀಡಬೇಕು. ಗಡಿ ಭಾಗದಲ್ಲಿ ಇನ್ನೂ ಅನೇಕ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳ ಅಗತ್ಯವಿದ್ದು ಸರಕಾರವು ಸಮೀಕ್ಷೆ ನಡೆಸಿ ಅಗತ್ಯವಿದ್ದ ಕಡೆ ಕನ್ನಡ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ತಕ್ಷಣ ಕ್ರಮಕೈಗೊಳ್ಳಬೇಕು.

೫. ಗಡಿ ಭಾಗದ ಒಳ ಸಮೀಪದ ಪ್ರದೇಶಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಮುಂದೆ ಬರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಿಶೇಷ ಆದ್ಯತೆಯ ಮೇಲೆ ಅನುಮತಿ ಕೊಡಬೇಕು.

೬. ಗಡಿ ಭಾಗದ ಹೊರ ಸಮೀಪದಲ್ಲಿರುವ ಹಾಗೂ ತಾಂತ್ರಿಕವಾಗಿ ಹೊರ ರಾಜ್ಯಕ್ಕೆ ಸೇರಿರುವ ಕನ್ನಡ ಶಾಲೆಗಳಿಗೆ ಪ್ರೋತ್ಸಾಹಕವಾಗಿ ಗ್ರಂಥ ಭಂಡಾರ, ಪ್ರಯೋಗಾಲಯ , ಪೀಠೋಪಕರಣ ಇಂಥ ಸೌಲಭ್ಯಗಳಿಗಾಗಿ ನಿಗದಿತ ಪ್ರಮಾಣದ ಸಹಾಯ ಧನ ಕೊಡಲು ಸರಕಾರವು ಕ್ರಮಕೈಗೊಳ್ಳಬೇಕು.

೭. ಹೊರ ರಾಜ್ಯಗಳ ಒಳಗೆ ಹಾಗೂ ಗಡಿಭಾಗದಲ್ಲಿರುವ ಕನ್ನಡ ಶಾಲೆಗಳಿಗೆ ಪಠ್ಯಪುಸ್ತಕಗಳ ವಿತರಣೆ ಸರಿಯಾಗಿ ಆಗುತ್ತಿಲ್ಲ. ಶಿಕ್ಷಕರ ನೇಮಕವೂ ವಿಳಂಬವಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ರಾಜ್ಯ ಸರಕಾರಗಳ ಮೇಲೆ ನಮ್ಮ ಸರಕಾರವು ಕಾಲ ಕಾಲಕ್ಕೆ ಒತ್ತಡ ತರಬೇಕು.

೮. ಕರ್ನಾಟಕದ ಟಿ.ಸಿ. ಎಚ್. ನಂತೆಯೇ ಮಹಾರಾಷ್ಟ್ರದಲ್ಲಿ ಡಿ. ಇ.ಡಿ. ಎಂಬ ಕೋರ್ಸ್ ಇದೆ. ಕರ್ನಾಟಕದಲ್ಲಿ ಟಿ.ಸಿ. ಎಚ್. ಮಾಡಿದ ಮರಾಠಿಗರಿಗೆ ಮಹಾರಾಷ್ಟ್ರ ಸರಕಾರವು ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶ ಕೊಡುತ್ತಿದ್ದು, ಮಹಾರಾಷ್ಟ್ರದಲ್ಲಿ ಕನ್ನಡದಲ್ಲಿ ಡಿ. ಇ.ಡಿ ಮಾಡಿದ ಕನ್ನಡಿಗರಿಗೆ ಕರ್ನಾಟಕದಲ್ಲಿ ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲವೆಂದು ಹೇಳಲಾಗಿದೆ. ಕನ್ನಡದಲ್ಲಿ ಮಾಡಿದ ಡಿ. ಇ.ಡಿ. ಕೋರ್ಸ್ ಟಿ.ಸಿ. ಎಚ್.ಗೆ ಸಮಾನವೆಂದು ಪರಿಗಣಿಸಿ ಶಿಕ್ಷಕ ಹುದ್ದೆಗೆ ಅರ್ಜಿಹಾಕಲು ಅವಕಾಶ ಕೊಡಬೇಕು.

೯. ಗಡಿನಾಡು ಮತ್ತು ಹೊರನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಕೆಲಸಗಳಿಗೆ ಉತ್ತೇಜಕವಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶೇಷ ಆದ್ಯತೆಯ ಮೇಲೆ ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.

ಈಗ ಪ್ರಸ್ತಾಪಿಸಿರುವ ಅಂಶಗಳು ಪ್ರಧಾನವಾಗಿ ಕನ್ನಡಕ್ಕೆ ಮತ್ತು ಒಟ್ಟಾರೆಯಾಗಿ ಶಿಕ್ಷಣದ ಸ್ವರೂಪಕ್ಕೆ ಸಂಬಂಧಿಸಿರುವ ಅಂಶ ಸ್ಪಷ್ಟವಾಗಿದೆ ಎಂದು ಭಾವಿಸುತ್ತ ಭಾಷಾ ನೀತಿಯ ಅನುಷ್ಠಾನವನ್ನು ಕುರಿತು ದೇಶದ ಸರ್ವೋಚ್ಚ ನ್ಯಾಯಾಲಯವು ದಿ.೮-೧೨-೧೯೯೩ರಂದು ನೀಡಿದ ತೀರ್ಪಿನಲ್ಲಿ ಹೇಳಿದ ಬಹುಮುಖ್ಯ ವಿಚಾರವೊಂದರ ಆಶಯದ ಕಡೆಗೆ ಮತ್ತೊಮ್ಮೆ ಗಮನ ಸೆಳೆಯಬಹುದಾಗಿದೆ. ಕರ್ನಾಟಕ ಸರಕಾರದ ೧೯-೬-೧೯೮೯ರ ಆದೇಶದ ಸಿಂಧುತ್ವವನ್ನು ಎತ್ತಿ ಹಿಡಿದ ದೇಶದ ಸರ್ವೋಚ್ಚ ನ್ಯಾಯಾಲಯವು ''ಭಾಷಾ ನೀತಿಯನ್ನು ಪರಿಣಾಮಕಾರಿಯಾಗಿ ಹೇಗೆ ಜಾರಿಗೊಳಿಸಬೇಕೆಂಬುದು ರಾಜ್ಯಕ್ಕೆ ತಿಳಿದಿದೆ. ಈ ವಿಚಾರದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡಬಾರದು'' ಎಂದು ಅಭಿಪ್ರಾಯ ಪಟ್ಟಿದೆ.

ಸರಕಾರವು ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಹಾಗೂ ಜನ ಸಂಸ್ಕೃತಿಯ ಶೈಕ್ಷಣಿಕ ಸ್ಥಿತಿಗತಿಗಳ ಆಶಯಗಳನ್ನು ಅರ್ಥ ಮಾಡಿಕೊಂಡು, ಅರ್ಥಪೂರ್ಣ ಕ್ರಮಗಳ ಮೂಲಕ, ಕನ್ನಡ ಮತ್ತು ಶಿಕ್ಷಣದ ಮೌಲ್ಯಗಳನ್ನು ಗಟ್ಟಿಗೊಳಿಸುತ್ತದೆ ಎಂದು ನಂಬಲಾಗಿದೆ.

ಶೈಕ್ಷಣಿಕ ಸ್ಥಿತಿಯ ಸಮಸ್ಯೆಗಳ ಪರಿಹಾರಕ್ಕೆ ಕೈಕೊಳ್ಳಬೇಕಾದ ಕ್ರಮಗಳು :

೧. ಗಡಿಭಾಗದ ಕನ್ನಡ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳ ಹಿತರಕ್ಷಣೆಗಾಗಿ ಗಡಿ ಕನ್ನಡ ಶಾಲಾ ಸುಧಾರಣೆ ಸಮಿತಿಯನ್ನು ರಚಿಸಿ ಅದಕ್ಕೆ ಕಾನೂನು ಬದ್ಧ ಅಧಿಕಾರಗಳನ್ನು ಕೊಡಬೇಕು. ಗಡಿ ಕನ್ನಡ ಭಾಷೆಯ ಸುಧಾರಣೆ ಸಮಿತಿಯಲ್ಲಿ ಕನ್ನಡ ಸಂಘಟನೆಗಳಿಗೆ ಪ್ರಾತಿನಿಧ್ಯ ಒದಗಿಸಬೇಕು. ಅಲ್ಲದೇ ಜಿಲ್ಲಾ ಪಂಚಾಯತಿಯ, ತಾಲೂಕೂ ಪಂಚಾಯತಿಯ, ಮಹಾನಗರ ಸಭೆಯ, ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು, ವಲಯ ಶಿಕ್ಷಣ ಅಧಿಕಾರಿಗಳು ಸಮಿತಿಯ ಸದಸ್ಯರಾಗಿರಬೇಕು. ಅಧಿಕಾರೇತರರೇ ಸಮಿತಿಗೆ ಅಧ್ಯಕ್ಷರಾಗಿರಬೇಕು.

೨. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗೆ ಗಡಿ ಭಾಗದ ಶಿಕ್ಷಣ ಸುಧಾರಣಾ ಸಮಿತಿಯ ಅಧ್ಯಕ್ಷರನ್ನು ಆಮಂತ್ರಿತ ಸದಸ್ಯರನ್ನಾಗಿ ನೇಮಿಸಬೇಕು. ಈ ಮಂಡಳಿಯಲ್ಲಿ ಪ್ರಾತಿನಿಧ್ಯ ಸಿಗುವಂತಾದರೆ, ಕನ್ನಡ ಶಿಕ್ಷಣದ ಕಟ್ಟಡಗಳಿಗೆ ಹಣ ಮಂಜೂರು ಪಡೆಯುವಲ್ಲಿ ಯಾವುದೇ ತೊಂದರೆಯಾಗದು.

೩. ಸರಕಾರದ ಎಲ್ಲ ಇಲಾಖೆಗಳ ಕಾರ್ಯಾಲಯಗಳ ದುರಸ್ಥಿ, ಸುಣ್ಣ-ಬಣ್ಣ ಬಳೆಯುವ ಕೆಲಸವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿರುವಂತೆ ಶಿಕ್ಷಣದ ಕಟ್ಟಡಗಳ ದುರಸ್ಥಿ, ಸುಣ್ಣ- ಬಣ್ಣಗಳ ವ್ಯವಸ್ಥೆಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಬೇಕು. ಅಂದರೆ, ಪ್ರತಿ ವರ್ಷ ಲೋಕೋಪಯೋಗಿ ಇಲಾಖೆಯವರು ಶಾಲೆಗಳ ರಜೆಯ ಕಾಲದಲ್ಲಿ ದುರಸ್ಥಿ ಕೆಲಸ ಹಾಗೂ ಸುಣ್ಣ-ಬಣ್ಣ ಬಳೆಯುವ ಕೆಲಸವನ್ನು ಕೈಕೊಳ್ಳಬಹುದಾಗಿದೆ. ಪ್ರತಿ ಶಾಲೆಗೆ ಶೌಚಾಲಯ, ಮೂತ್ರಾಲಯಗಳ ವ್ಯವಸ್ಥೆ, ನಳದ ನೀರಿನ ವ್ಯವಸ್ಥೆ ಮಾಡಿ ಅದರ ಜವಾಬ್ದಾರಿಯನ್ನು ಮಹಾನಗರ ಸಭೆಗೆ, ಪಂಚಾಯಿತಿಗೆ ವಹಿಸಬೇಕು.

೪. ಗಡಿ ಕನ್ನಡ ಶಾಲಾ ಸುಧಾರಣೆ ಸಮಿತಿಯ ಅಧ್ಯಕ್ಷರನ್ನು ಜಿಲ್ಲಾ ಪಂಚಾಯಿತಿಯ ಶಿಕ್ಷಣ ಸ್ಥಾಯಿ ಸಮಿತಿಯ ಸಭೆಗೆ, ತಾಲೂಕು ಪಂಚಾಯಿತಿ ಸಭೆಗೆ ಆಮಂತ್ರಿತ ಸದಸ್ಯರನ್ನಾಗಿ ಆಹ್ವಾನಿಸಬೇಕು.

೫. ಗಡಿ ಕನ್ನಡ ಸುಧಾರಣೆ ಸಮಿತಿಯ ಕೈಕೊಂಡ ನಿರ್ಣಯಗಳು ಜಿಲ್ಲಾ ಹಾಗೂ ತಾಲೂಕಾ ಪಂಚಾಯತ ಅಧಿಕಾರಿಗಳಿಗೆ ಬಂಧನಕಾರಿಯಾಗಿರಬೇಕು.

ಈ ಮೇಲಿನ ಕ್ರಮಗಳನ್ನು ಕೈಗೊಂಡರೆ ಮಾತ್ರ ಗಡಿ ಭಾಗದ ಕನ್ನಡ ಶಾಲೆಗಳ ಸ್ಥಿತಿ ಸುಧಾರಿಸುತ್ತದೆ. ಯಾವ ಪ್ರದೇಶದಲ್ಲಿ ಕನ್ನಡಿಗರ ಚುನಾಯಿತ ಪ್ರತಿನಿದಿಗಳಿಲ್ಲವೋ ಅಲ್ಲಿ ರಾಜ್ಯ ಸರಕಾರ ಕನ್ನಡ ಶಾಲೆಗಳ ಸ್ಥಿತಿ ಕಾಪಾಡಲು ವಿಶೇಷ ಕ್ರಮಗಳನ್ನು ಕೈಗೊಳ್ಳುವದು ಅನಿವಾರ್ಯವಾಗುತ್ತದೆ.

ಹೀಗೆ ಗಡಿನಾಡ ಕನ್ನಡಿಗರ ಶಿಕ್ಷಣ ಪದ್ಧತಿಗಳ ಅನುಷ್ಠಾನದ ವಿವಿಧ ಆಯೋಗಗಳು, ಸಮಿತಿ-ಶಿಫಾರಸ್ಸುಗಳು ರಾಷ್ಟ್ರ ಮಟ್ಟದಲ್ಲಿ ಹಾಗೂ ಕಾಲಕಾಲಕ್ಕೆ ಜಾರಿಯಲ್ಲಿ ಬಂದಿವೆ. ಆದರೆ ನಮ್ಮ ಗಡಿನಾಡಿಗೆ ಸಂಬಂಧಪಟ್ಟಂತೆ ಕೆಲವೇ ಕೆಲವೊಂದು ಸಮಿತಿ ಅಥವಾ ವರದಿಗಳು ಮಾತ್ರ ಗಡಿ ಪ್ರದೇಶಗಳ ಬಗ್ಗೆ, ಗಡಿ ಭಾಗದ ಜನರ ಶೈಕ್ಷಣಿಕ ಪದ್ಧತಿಗಳ ಕುರಿತು ಉಲ್ಲೇಖಿಸುತ್ತವೆ. ಅವುಗಳಲ್ಲಿ ೧೯೮೯ರ ಅಶೋಕ ಚಂದರಗಿ ವರದಿಯು ವಿಶೇಷವಾಗಿ ಕರ್ನಾಟಕ- ಮುಂಬಯಿ- ಕರ್ನಾಟಕ ಗಡಿ ಭಾಗವಾದ ಬೆಳಗಾವಿ ನಗರ ಹಾಗೂ ಬೆಳಗಾವಿ ತಾಲೂಕಿನ ಸರಕಾರಿ ಪ್ರಾಥಮಿಕ ಶಾಲೆಗಳ ಸುಧಾರಣೆಗಾಗಿ ಅಲ್ಲಿಯ ಕನ್ನಡ ಶಾಲೆಗಳ ಸ್ಥಿತಿ-ಗತಿಗಳ ಕುರಿತು ಕಾರಣಗಳು ಮತ್ತು ಪರಿಹಾರೋಪಾಯಗಳ ಬಗ್ಗೆ ಸಮಗ್ರವಾದ ವಿವರವನ್ನು ನೀಡುತ್ತದೆ. ೨೦೦೧ರ ಬರಗೂರ ರಾಮಚಂದ್ರಪ್ಪ ನವರು ಸಲ್ಲಿಸಿದ ಶಿಕ್ಷಣ ಮತ್ತು ಮಾಧ್ಯಮ ನೀತಿ ನಿರೂಪಣಾ ವರದಿಯು ಸಹ ಗಡಿಬಾಗದ ಶೈಕ್ಷಣಿಕ ಸುಧಾರಣೆ, ಸಮಸ್ಯೆಗಳು, ಆ ಸಮಸ್ಯೆಗಳ ಪರಿಹಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಮತ್ತು ಗಡಿಭಾಗದಲ್ಲಿ ೧ರಿಂದ ೧೦ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ, ಎಲ್ಲ ರೀತಿಯ ವೃತ್ತಿ ಶಿಕ್ಷಣದಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ಆದ್ಯತೆಯ ಮೇಲೆ ಪ್ರವೇಶ ಕೊಡಬೇಕು ಎಂದು ಹಾಗೂ ಗಡಿನಾಡ ಮತ್ತು ಹೊರನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಕೆಲಸಗಳಿಗೆ ಉತ್ತೇಜಕವಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶೇಷವಾಗಿ ಆದ್ಯತೆಯ ಮೇಲೆ ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು ಎಂದು ಸಲಹೆ ನೀಡಿದ್ದಾರೆ. ತಮ್ಮ ನೀತಿ ನಿರೂಪಣಾ ಮೂರನೇಯ ಶಿಫಾರಸ್ಸಿನಲ್ಲಿ ವಿವರಣೆ ನೀಡಿದ್ದಾರೆ. ಡಾ. ಡಿ. ಎಂ. ನಂಜುಂಡಪ್ಪನವರು ಸಲ್ಲಿಸಿದ ಪ್ರಾದೇಶಿಕ ಅಸಮತೋಲನ ನಿವಾರಣಾ ಆಯೋಗವು ಸಹ ಕನ್ನಡಿಗರ - ಕರ್ನಾಟಕದ ಸಮಗ್ರ ಅಭಿವೃದ್ದಿಗೆ ಹೆಚ್ಚು ಮಹತ್ವ ನೀಡಿದೆ.

ಟಿಪ್ಪಣಿಗಳು :

೧. 'ಅಭಿವೃದ್ಧಿ ಅಧ್ಯಯನ' ಸಮಾಜ ವಿಜ್ಞಾನ ಪತ್ರಿಕೆ. ಸಂಪುಟ ೨ ಸಂಚಿಕೆ ೨ ಜನವರಿ- ಜೂನ್ ಕನ್ನಡ ವಿಶ್ವವಿದ್ಯಾಲಯ. ಹಂಪಿ -೨೦೦೩ ಪುಟ -೩೧-೩೨

೨. 'ಕನ್ನಡ -ಕನ್ನಡಿಗ- ಕರ್ನಾಟಕ 'ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ೧೯೯೬ ಪುಟ -೭೪-೮೫

೩. ಫಾಲಾಕ್ಷ 'ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ' ಶಶಿಪ್ರಕಾಶನ ತಿಪಟೂರು ೨೦೦೬ ಪುಟ-೧೫೭

೪. ರಾಜಕುಮಾರ ಕೆ. 'ಮಹಿಷಿವರದಿ ಮತ್ತು ಸರಕಾರಿಆಜ್ಞೆ' ಸಿರಿಗನ್ನಡ ಪ್ರಕಾಶನ ಬೆಂಗಳೂರು ೧೯೯೧ಪುಟ ೧-೩

೫. ಟಿಪ್ಪಣಿ ೨ರಲ್ಲಿದ್ದಂತೆ ಪುಟ -೮೬-೮೭

೬. ಚಂದರಗಿ ಅಶೋಕ 'ಚಂದರಗಿ ಸಮಿತಿ ವರದಿ' ಬೆಳಗಾವಿ ೧೯೯೯ -ಪುಟ -೧-೧೩

೭. ಕೊಂಗವಾಡ ಎನ್.ಬಿ. 'ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು' ಗದಗ ೧೯೯೫ ಪುಟ- ೩೨೪-೩೨೯

೮. 'ಶಿಕ್ಷಣ ಮತ್ತು ಮಾಧ್ಯಮ' ನೀತಿ ನಿರೂಪಣಾ ವರದಿ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು, ೨೦೦೧ ಪುಟ-೨.

೯. ಅದೇ ಪುಟ -೪೨ - ೪೪.

ಅಧ್ಯಾಯ -೫

ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ ಮತ್ತು ಅರ್ಥವಿವರಣೆ.

ಪ್ರಸ್ತುತ ಅಧ್ಯಾಯದಲ್ಲಿ ಶಾಲೆಗಳಲ್ಲಿ ಇರುವ ಭೌತಿಕ, ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ಪರಿಸ್ಥಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇವುಗಳನ್ನು ಗುರುತಿಸುವಾಗ ವಿವಿಧ ಶೈಕ್ಷಣಿಕ ಅಭಿವೃದ್ಧಿ ಕಾರ್ಯಗಳ ಮತ್ತು ಸರಕಾರಗಳ ಗುರಿಗಳನ್ನು ಮಾನದಂಡವಾಗಿ ಬಳಸಿಕೊಳ್ಳಲಾಗಿದೆ. ಈ ಅಧ್ಯಾಯವನ್ನು ಎರಡು ಭಾಗಗಳಾಗಿ ವಿಂಗಡಿಸಿದೆ. ಭಾಗ-೧ರಲ್ಲಿ ವಿವಿಧ ಶೈಕ್ಷಣಿಕ ಕಾರ್ಯಗಳ ಗುರಿ ಹಾಗೂ ಭೌತಿಕ ಸೌಲಭ್ಯಗಳ ವಿಶ್ಲೇಷಣೆ ಮಾಡುವ ಜೊತೆಗೆ ಭೌತಿಕ ಸೌಲಭ್ಯಗಳ ಸ್ಥಿತಿ- ಗತಿಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಭಾಗ-೨ ರಲ್ಲಿ ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ವಿಶ್ಲೇಷಣೆಯ ಜೊತೆಗೆ ಅವುಗಳ ಬಳಕೆಯನ್ನು ಗುರುತಿಸಲಾಗಿದೆ. ಇದರ ಜೊತೆಗೆ ಶಿಕ್ಷಕ ಸಂಪನ್ಮೂಲ, ಮಕ್ಕಳು ಶಿಕ್ಷಕರ ಪರಿಮಾಣ, ಪರಿಣಾಮಕಾರಿ ಬೋಧನಾ ಸಮಯ, ಶಿಕ್ಷಕರ ಚಟುವಟಿಕೆಗಳ ಸ್ವರೂಪ, ಸಾಮಾಜಿಕ ಹಾಗೂ ಲಿಂಗಾಧಾರಿತ ಪಕ್ಷಪಾತಗಳು ತರಗತಿಯ ಒಳಗೆ ಹೇಗೆ ನಡೆಯುತ್ತಿದೆ ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಶಾಲಾ ವ್ಯವಸ್ಥೆಯ ಸೌಲಭ್ಯಗಳನ್ನು ತುಂಬುವ ಉದ್ದೇಶದಿಂದ ಮಹತ್ವದ ಹೆಜ್ಜೆಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ವಿವಿಧ ಕಾರ್ಯಕ್ರಮಗಳ ಮೂಲಕ ಕೈಗೊಂಡಿವೆ. ಅವೆಂದರೆ: ಸಂಪೂರ್ಣ ಸಾಕ್ಷರತಾ ಆಂದೋಲನ; ಕಪ್ಪುಹಲಗೆ ಕಾರ್ಯಕ್ರಮ; ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ(ಡಿ.ಪಿ. ಇ.ಪಿ.); ಉಚಿತ ಕಾರ್ಯಕ್ರಮ(ಉಚಿತ ಪುಸ್ತಕ, ಸಮವಸ್ತ್ರ, ಆಹಾರ ಧಾನ್ಯ ಮತ್ತು ಬಿಸಿಯೂಟ) ಗಳು; ಸರ್ವಶಿಕ್ಷಾ ಅಭಿಯಾನ ಇತ್ಯಾದಿ. ಈ ಎಲ್ಲಾ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ಅವಶ್ಯಕತೆಗೆ ತಕ್ಕಂತೆ ನಿಯಮಿಸಿದ್ದ ಸ್ವರೂಪವನ್ನು ಹೊಂದಿವೆ. ಆದರೆ ಇವುಗಳ ಮೂಲ ಉದ್ದೇಶ ಮಾತ್ರ, ಶಾಲೆಗಳಿಗೆ ಬೇಕಾಗುವ ಮೂಲ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಶೈಕ್ಷಣಿಕ ಅಭಿವೃದ್ಧಿಯನ್ನು ಕಂಡುಕೊಳ್ಳುವುದು.

ಪ್ರಾಥಮಿಕ ಶಾಲೆಗಳ ಮೂಲ ಸೌಲಭ್ಯಗಳು ಕಳೆದ ಹತ್ತು ವರ್ಷಗಳಲ್ಲಿ ಬಹಳ ಮಟ್ಟಿಗೆ ಪ್ರಗತಿಯನ್ನು ಕಂಡಿದೆ. ಉದಾಹರಣೆಗೆ ೫ನೇಯ ಅಖಿಲ ಭಾರತ ಶೈಕ್ಷಣಿಕ ಸಮೀಕ್ಷೆಯಿಂದ

(೧೯೮೬) ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿಯೊಂದು ತರಗತಿಗಳು ಉಪಯೋಗಿಸಲು ಯೋಗ್ಯವಾದ ಕನಿಷ್ಟ ಒಂದು ಕಪ್ಪು ಹಲಗೆ ಇರುವುದು ತಿಳಿಯುತ್ತದೆ. ೧೯೮೬ರಲ್ಲಿ ರಾಷ್ಟ್ರದ ಶೇಕಡ ೨೭.00ರಷ್ಟು ಶಾಲೆಗಳು ಏಕ ಶಿಕ್ಷಕ ಶಾಲೆಗಳಾಗಿದ್ದವು. ಆದರೆ ೧೯೯೬ರಲ್ಲಿ ಇವುಗಳ ಪ್ರಮಾಣ ಶೇಕಡ ೧೨.00ಕ್ಕೆ ಇಳಿದಿದೆ. ಇದೊಂದು ಆಶಾದಾಯಕ ಬೆಳವಣಿಗೆ.

ಆದರೂ ಶಾಲಾ ಪರಿಸರದ ಮೂಲ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮಹತ್ವದ ಪ್ರಗತಿ ಮಾತ್ರ ಇಲ್ಲವಾಗಿದೆ. ಇಲ್ಲಿನ ಕೊರತೆಯು ಕೊರತೆಯಾಗಿಯೇ ಉಳಿದಿದೆ. ಇದನ್ನು ರಾಜ್ಯ ಸರಕಾರಗಳು ತನ್ನ ಶಿಕ್ಷಣ ಮಾದರಿಯಲ್ಲಿ ಸಾರ್ವತ್ರಿಕ ಶಿಕ್ಷಣಕ್ಕೆ ಯೋಜಿಸಿದ ಕಾರ್ಯಕ್ರಮಗಳಲ್ಲಿ ವಿಶ್ಲೇಷಿಸಿ ಪರಿಗಣಿಸಬೇಕು. ಹೀಗೆ ಮಾಡುವಾಗ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳ ಗುರಿಗಳನ್ನು ಮೊದಲಿಗೆ ಗುರುತಿಸಬೇಕು. ಉದಾಹರಣೆಗೆ ಕಪ್ಪು ಹಲಗೆ ಕಾರ್ಯಕ್ರಮದ ಗುರಿ. ರಾಷ್ಟ್ರದ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಟ ಎರಡು ಪಕ್ಕಾ ಕೊಠಡಿಗಳನ್ನು ಒದಗಿಸಬೇಕು. ಒಂದು ಶಾಲೆ ಕನಿಷ್ಟ ಇಬ್ಬರು ಶಿಕ್ಷಕರನ್ನು ಹೊಂದಿರಬೇಕು. ಬೋಧನೆ ಮತ್ತು ಕಲಿಕೆಗೆ ಬೇಕಾಗುವ ಮಾಹಿತಿ ಮತ್ತು ಮಾದರಿ ಸಲಕರಣೆಗಳನ್ನು ಹೊಂದಿರಬೇಕು. ಅವೆಂದರೆ ಬರೆಯಲು ಯೋಗ್ಯವಾದ ಕಪ್ಪು ಹಲಗೆ, ನಕ್ಷೆ, ಚಿತ್ರಗಳು, ಪುಟ್ಟಗ್ರಂಥಾಲಯ , ಎಲ್ಲಾ ಹವಾಗುಣಗಳಿಗೂ ಅನುಕೂಲವಾಗುವ ಎರಡು ವಿಶಾಲವಾದ ಕೊಠಡಿಗಳು , ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯದ ಸೌಲಭ್ಯ, ಇಬ್ಬರು ಶಿಕ್ಷಕರಲ್ಲಿ ಕನಿಷ್ಟ ಒಬ್ಬರು ಮಹಿಳಾ ಶಿಕ್ಷಕರು , ಆಟಿಕೆಗಳು, ಆಟದ ಮೈದಾನ ಇತ್ಯಾದಿ (ಶಿಕ್ಷಣ ಇಲಾಖೆಯ ವಾರ್ಷಿಕ ವರದಿ, ೧೯೯೭-೯೮).

ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮ ಶಾಲೆಯಲ್ಲಿ ಇರುವ ಭೌತಿಕ ಮತ್ತು ಬೌದ್ಧಿಕ ಮೂಲಸೌಲಭ್ಯ ಕೊರತೆಯನ್ನು ತುಂಬುವ ಮೂಲಕ ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ರೂಪಿತವಾಗಿದೆ. ಈ ಕಾರ್ಯಕ್ರಮದ ಮೂಲ ಉದ್ದೇಶ ೨೦೧೦ ರೊಳಗೆ ರಾಷ್ಟ್ರದ ೦೬-೧೪ವಯೋಮಾನದ ಎಲ್ಲ ಮಕ್ಕಳಿಗೂ ಜೀವನಕ್ಕೆ ಉಪಯುಕ್ತವಾಗುವ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದಾಗಿದೆ. ಅಲ್ಲದೆ ಶಿಕ್ಷಣ- ಸಾಕ್ಷರತಾ ಕ್ಷೇತ್ರದಲ್ಲಿ ಇರುವ ಸಾಮಾಜಿಕ, ಲಿಂಗಾಧಾರಿತ ಮತ್ತು ಪ್ರಾದೇಶಿಕ ತಾರತಮ್ಯಗಳನ್ನು ಹೋಗಲಾಡಿಸುವುದು. ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮವು ಸ್ಥಳೀಯ ಸಮುದಾಯವನ್ನು ಶೈಕ್ಷಣಿಕ ಅಭಿವೃದ್ಧಿಗೆ ಸಕ್ರಿಯವಾಗಿ ತೊಡಗಿಸಬೇಕು ಎಂಬ ಉದ್ದೇಶವನ್ನು ಕೂಡ ಹೊಂದಿದೆ. ಈ ಕಾರ್ಯಕ್ರಮವು ಮಕ್ಕಳು ಮತ್ತು ಶಿಕ್ಷಕರಿಗೆ ಬೇಕಾಗುವ ಬೌದ್ಧಿಕ ಸೌಲಭ್ಯಗಳನ್ನು ನೀಡುವ ಜೊತೆಗೆ ಶಾಲೆಗೆ ಬೇಕಾಗುವ ಭೌತಿಕ ಸೌಲಭ್ಯಗಳಾದ ಶಾಲಾ ಕಟ್ಟಡ ಅಥವಾ ಹೆಚ್ಚುವರಿ ಕೊಠಡಿಗಳು, ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ, ಶಾಲಾ ಕಂಪೌಂಡ್ ,ವಿದ್ಯುಚ್ಛಕ್ತಿ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಪೂರೈಸುವ ಆಶಯವನ್ನು ಹೊಂದಿದೆ(ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮ,೨೦೦೧).

ಶಾಲೆಗಳಲ್ಲಿ ಮೂಲ ಸೌಲಭ್ಯಗಳ ಕೊರತೆ ಯಾವಾಗ ಹೆಚ್ಚು ಪ್ರಕಾರವಾಗಿ ಕಾಣುತ್ತದೆ ಎಂದರೆ ,ಪ್ರಸ್ತುತ ಇರುವ ಸೌಲಭ್ಯಗಳ ಜೊತೆಗೆ ಅವಶ್ಯಕವಾಗಿ ಇರಬೇಕಾದ ಸೌಲಭ್ಯಗಳನ್ನು ಹೋಲಿಸಿ ನೋಡಿದಾಗ. ಇದರ ಜೊತೆಗೆ ರಾಷ್ಟ್ರ ಹಾಗೂ ರಾಜ್ಯಮಟ್ಟದ ಅಂಕಿ- ಅಂಶಗಳನ್ನು ಇಡಿಯಾಗಿ ನೋಡದೆ ಬಿಡಿ ಬಿಡಿಯಾಗಿ ನೋಡಿದಾಗ ಸ್ಥಳೀಯ ಅಥವಾ ಗ್ರಾಮ ಮಟ್ಟದಲ್ಲಿ ಇರಬಹುದಾದ ಮೂಲಸೌಲಭ್ಯದ ಕೊರತೆಯನ್ನು ಗುರುತಿಸಬಹುದು. ಶಾಲೆಗಳ ಮಟ್ಟಿಗೆ ಇದನ್ನು ಗುರುತಿಸುವುದು ಸ್ವಲ್ಪಮಟ್ಟಿಗೆ ಸರಳ. ಶಾಲಾ ಕೊಠಡಿ, ಮಕ್ಕಳು ಕುಳಿತು ಕೊಳ್ಳುವ ಸ್ಥಳ, ಬೋಧನೆ ಮತ್ತು ಕಲಿಕಾ ಸಾಮಗ್ರಿಗಳ ಬಳಕೆ ಮತ್ತು ಸಂಘಟನೆ, ಕುಡಿಯುವ ನೀರು, ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ,ವಿದ್ಯುತ್ ಸೌಲಭ್ಯ, ಆಟದ ಮೈದಾನ ಇನ್ನೂ ಮುಂತಾದ ಸೌಲಭ್ಯಗಳನ್ನು ಗುರುತಿಸಿ ವಿಶ್ಲೇಷಿಸಿದಾಗ, ಅನೇಕ ಕಾರ್ಯಕ್ರಮಗಳ ಗುರಿ ಎಷ್ಟರ ಮಟ್ಟಿಗೆ ಸಾಧಿತವಾಗಿದೆ ಎಂಬುದನ್ನು ನಾವು ಕಂಡುಕೊಳ್ಳಬಹುದು. ಉದಾಹರಣೆಗೆ ಕಪ್ಪು ಹಲಗೆ ಕಾರ್ಯಕ್ರಮದ ಪ್ರಮುಖ ಗುರಿ ದೊಡ್ಡದಾದ ಮತ್ತು ಎಲ್ಲ ರೀತಿಯ ಹವಾಗುಣಗಳಿಗೂ ಪ್ರತಿರೋಧ ಹೊಂದಿದ್ದ ಎರಡು ಕೊಠಡಿಗಳನ್ನು ಪ್ರತಿ ಶಾಲೆಗೆ ನೀಡಬೇಕು ಎಂಬ ಮಹತ್ವಾಕಾಂಕ್ಷೆಯು ಅನೇಕ ಶಾಲೆಗಳಲ್ಲಿ ಇನ್ನೂ ದೊರಕಬೇಕಾಗಿರುವ ಅಂಶವಾಗಿಯೇ ಉಳಿದಿದೆ. ಕರ್ನಾಟಕ ರಾಜ್ಯದಲ್ಲಿ ಇರುವ ಒಟ್ಟು ೪೩ ಸಾವಿರ ಸರಕಾರಿ ಪ್ರಾಥಮಿಕ ಶಾಲೆಗಳ ಪೈಕಿ, ಎರಡು ಸಾವಿರ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ. ಮೂರು ಸಾವಿರ ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇದೆ. ಶೇಕಡ ೮೦,೦೦ ರಷ್ಟು ಶಾಲೆಗಳಲ್ಲಿ ಶೌಚಾಲಯಗಳಿಲ್ಲ.ಶೇಕಡ ೬೭.೦೦ ರಷ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿಲ್ಲ . ಜೊತೆಗೆ ಎಷ್ಟೋ ಶಾಲೆಗಳಲ್ಲಿ ಮಕ್ಕಳಿಗೆ ಆಟವಾಡಲು ಆಟದ ಮೈದಾನವಿಲ್ಲ. ಈ ಹಿನ್ನೆಲೆಯಲ್ಲಿ ನಾವು ಅಧ್ಯಯನ ನಡೆಸಿದ ಶಾಲೆಗಳಲ್ಲಿ ಇರುವ ಬೌದ್ಧಿಕ ಮತ್ತು ಭೌತಿಕ ಮೂಲಸೌಲಭ್ಯಗಳ ಕುರಿತ ವಿಶ್ಲೇಷಣೆ ಈ ಅಧ್ಯಾಯದಲ್ಲಿದೆ.

೧. ಕೊಠಡಿಗಳ ಸ್ಥಿತಿ -ಗತಿ :

ಶಾಲೆಗಳಿಗೆ ಪ್ರತಿ ತರಗತಿಯ ಪ್ರತ್ಯೇಕ ಬೋಧನೆಗೆ ಪ್ರತ್ಯೇಕ ಕೊಠಡಿ ಅತ್ಯಂತ ಅವಶ್ಯಕ. ಶಾಲೆಯಲ್ಲಿನ ತರಗತಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳು ಇರಬೇಕು. ಇದು ಸರಕಾರಗಳ ನಿಯಮ ಕೂಡ. ಮುಂಬಯಿ - ಕರ್ನಾಟಕದ ಗಡಿನಾಡಿನ ಭಾಗಗಳಲ್ಲಿರುವ ೨೬೫ ಗ್ರಾಮಗಳ ಶಾಲೆಗಳಲ್ಲಿ ಅಗತ್ಯವಾಗಿ ಇರಬೇಕಾದ ಕೊಠಡಿಗಳ ಸಂಖ್ಯೆ ೧೪೬೬, ಆದರೆ ಈ ಶಾಲೆಗಳಲ್ಲಿ ಪ್ರಸ್ತುತ ಇರುವ ಕೊಠಡಿಗಳ ಸಂಖ್ಯೆ ೧೨೭೨, ಈ ಶಾಲೆಗಳಿಗೆ ಅವಶ್ಯಕವಾಗಿ ಬೇಕಾಗಿರುವ ಕೊಠಡಿಗಳ ಸಂಖ್ಯೆ ೧೯೪ . ಈ ಮೇಲಿನ ಶಾಲೆಗಳಲ್ಲಿ ಇರುವ೧೧೪೬ ಕೊಠಡಿಗಳಲ್ಲಿ ಹೆಚ್ಚಾಗಿ ಮೇಲ್ ಚಾವಣಿ ಹಂಚನ್ನು ಹೊಂದಿವೆ. ಕೆಲವು ಶಾಲೆಗಳು ಇತ್ತೀಚಿಗೆ ನಿರ್ಮಾಣವಾಗಿವೆ. ಕೆಲವೊಂದು ಶಾಲೆಗಳ ಕೊಠಡಿಗಳ ಮೇಲ್ ಚಾವಣಿ ಆರ್.ಸಿ.ಸಿ. ಯಾಗಿದ್ದರೆ, ಕೆಲವೊಂದು ಮೇಲ್ ಚಾವಣಿ ಶೀಟನ್ನು ಹೊಂದಿರುತ್ತವೆ.



ಬೆಳಗಾವಿ ನಗರದಲ್ಲಿನ ಸರಕಾರಿ ಶಾಲೆಯೊಂದರ ದುಸ್ಥಿತಿ! ಅನೇಕ ಕಡೆ ಒಂದೇ ಕೊಠಡಿಯಲ್ಲಿ ಏಕಕಾಲಕ್ಕೆ ಹಲವು ತರಗತಿಗಳಿಗೆ ಪಾಠ-ಪ್ರವಚನ ನಡೆಯುತ್ತದೆ.



ನಿಪ್ಪಾಣಿಯ ಶಿವಾಜಿನಗರದಲ್ಲಿ ಎರಡು ವರ್ಷಗಳ ಹಿಂದೆಯೇ ಮುರಿದು ಬಿದ್ದಿರುವ ಕನ್ನಡ ಶಾಲೆಯ ಹಿಂಬದಿ



ಬೆಳಗಾವಿ ತಾಲೂಕಿನ ನಾವಗೆಯ ಕನ್ನಡ ಶಾಲೆಯಲ್ಲಿ
ಸ್ಥಳದ ಅಭಾವದಿಂದ ಹೊರಗೆ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು



ಬೆಳಗಾವಿ ತಾಲೂಕಿನ ನಾವಗೆಯ ಕನ್ನಡ ಶಾಲೆಗೆ ಗೋಣಿ ಚೀಲ ಹಿಡಿದು
ಬರುತ್ತಿರುವ ವಿದ್ಯಾರ್ಥಿಗಳು

ಕೆಲವು ಶಾಲೆಗಳ ಕೊಠಡಿಗಳ ನೆಲ ಸಿಮೆಂಟ್- ಮರಳು-ಜಲ್ಲಿಯಿಂದ ನಿರ್ಮಿಸಲಾಗಿದೆ. ಹಂಚಿನ ಕೊಠಡಿಗಳು ಹಾಗೂ ತುಂಬಾ ಹಿಂದೆ ನಿರ್ಮಿಸಲಾಗಿರುವ ಶಾಲಾ ಕೊಠಡಿಗಳ ಗೋಡೆಗಳನ್ನು ಗಾರೆಯಿಂದ ನಿರ್ಮಿಸಲಾಗಿದೆ. ಆದರೆ ಇತ್ತೀಚಿಗೆ ಅಂದರೆ ಸುಮಾರು ೫-೧೦ ವರ್ಷಗಳ ಹಿಂದೆ ನಿರ್ಮಿಸಲಾಗಿರುವ ಕೊಠಡಿಗಳ ಕಟ್ಟಡಕ್ಕೆ ಸಿಮೆಂಟ್ ಬಳಸಲಾಗಿದೆ. ಆದರೆ ಎಲ್ಲ ಶಾಲೆಗಳಲ್ಲಿ ಇರುವ ಕೊಠಡಿಗಳ ಆಕಾರ ಒಂದೇ ರೀತಿಯಲ್ಲಿ ಇರುವುದಿಲ್ಲ. ಸರಕಾರದಿಂದ ಮಂಜೂರಾದ ವಿವಿಧ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಚರಣೆಗೆ ತರುವಾಗ ವಿವಿಧ ಇಲಾಖೆಗಳು ಕಟ್ಟಿ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ.

ಹೊಸದಾಗಿ ನಿರ್ಮಿಸಲಾಗಿರುವ ಕೆಲವು ಶಾಲಾ ಕೊಠಡಿಗಳನ್ನು ಹೊರತು ಪಡಿಸಿದರೆ ಬಹುತೇಕ ಶಾಲೆಗಳ ಕೊಠಡಿಗಳನ್ನು ರಿಪೇರಿ ಮಾಡುವ ಅವಶ್ಯಕತೆ ತುಂಬಾ ಇದೆ ಬಹಳ ಶಾಲೆಗಳ ಹಂಚಿನ ಮೇಲ್ ಚಾವಣಿ ಇರುವ ಕೊಠಡಿಗಳಲ್ಲಿ ಹಿಂಭಾಗಮತ್ತು ಮುಂಭಾಗದ ಹಂಚುಗಳು ಮಳೆಗಾಳಿಗೆ ಹಾರಿ ಹೋಗಿವೆ ಕೆಲವು ಕೊಠಡಿಗಳ ಶೀಟಗಳು ಹಾಳಾಗಿವೆ. ಕೆಲವು ಕೊಠಡಿಗಳ ನೆಲ ಸಂಪೂರ್ಣವಾಗಿ ಕಿತ್ತುಹೋಗಿದೆ. ಆಕೊಠಡಿಗಳಲ್ಲಿ ಮಕ್ಕಳು ಅಲ್ಲಿಯೇ ಕುಳಿತುಕೊಳ್ಳುತ್ತಿದ್ದಾರೆ. ಇಂಥ ಕೊಠಡಿಗಳಲ್ಲಿ ಬೋಧನೆ ಕಲಿಕೆ ಕಷ್ಟ ಸಾಧ್ಯವಾದ ಮಾತು . ಈ ರೀತಿ ಆಗಲು ಕಾರಣವೆಂದರೆ ಅಧಿಕೃತವಾಗಿ ಮಂಜೂರಾತಿ ದೊರೆತ ಕಟ್ಟಡದ ಮೂಲ ಪ್ಲ್ಯಾನ್ ನಿರ್ಮಿಸುವಾಗ ಬದಲಾವಣೆಯಾಗಿರುವುದು, ನಿರುತ್ಸಾಹದಾಯಕವಾದ ಕಟ್ಟಡ ನಿರ್ಮಾಣ, ಕಟ್ಟಡ ನಿರ್ಮಾಣಕ್ಕೆ ಕಡಿಮೆ ಗುಣಮಟ್ಟದ ಸಾಮಗ್ರಿಗಳ ಬಳಕೆ ಅಸಾಮಾನ್ಯ ಎಂದು ಪರಿಗಣಿಸಲು ಸಾಧ್ಯವಿಲ್ಲ. ಶಾಲಾ ಕೊಠಡಿಗಳ ನಿರ್ಮಾಣದಲ್ಲಿ ಉಂಟಾಗಿರುವ ಕೊರತೆ ಮತ್ತು ತೊಂದರೆಗಳು ಹಲವಾರು. ಇದಕ್ಕೆ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಮೇಲ್ ಉಸ್ತುವಾರಿನೋಡುತ್ತಿದ್ದ ಅಧಿಕಾರಿಗಳು ಗುತ್ತಿಗೆದಾರರಿಂದ ಹಣ ತೆಗೆದುಕೊಂಡು ನಿರ್ದಿಷ್ಟ ಪ್ರಮಾಣದಲ್ಲಿ ನಿರ್ಮಾಣ ಸಾಮಗ್ರಿಗಳನ್ನು ಬಳಸದೆ ಕನಿಷ್ಟ ಮಟ್ಟದ ನಿರ್ಮಾಣ ಮಾಡಿದ್ದಾರೆ. ಅಲ್ಲದೇ ಶಾಲಾ ಕೊಠಡಿಗಳ ನಿರ್ಮಾಣದಲ್ಲಿ ಶಿಕ್ಷಣ ಇಲಾಖೆಯ ಪಾತ್ರ ಇರುವುದಿಲ್ಲ. ಜಿಲ್ಲಾ ಪಂಚಾಯತಿ ಅಥವಾ ಕರ್ನಾಟಕ ಭೂ ಸೇನಾ ನಿಗಮ ಅಥವಾ ಪಿ.ಡಬ್ಲ್ಯೂ.ಡಿ ಇಲಾಖೆಯವರು ಸಾಮಾನ್ಯವಾಗಿ ಶಾಲಾ ಕಟ್ಟಡದ ಯೋಜನೆಯನ್ನು ತಯಾರು ಮಾಡುತ್ತಾರೆ. ಹೀಗಾಗಿ ಶಾಲಾ ಕೊಠಡಿಗಳನ್ನು ತರಗತಿಗೆ ಉಪಯೋಗವಾಗುವ ರೀತಿ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಹೀಗೆ ಇನ್ನೂ ಅನೇಕ ಒತ್ತಡಗಳು ಮತ್ತು ಕಾರಣಗಳಿಂದಾಗಿ ಉತ್ತಮ ಗುಣಮಟ್ಟದ ಕೊಠಡಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಾಣ ಮಾಡಲು ಸಾಧ್ಯವಾಗದ ಪರಿಸ್ಥಿತಿಯೇ ಹೆಚ್ಚಾಗಿ ಕಂಡುಬರುತ್ತದೆ.

೨. ಕುಡಿಯುವ ನೀರು :

ಪ್ರಾಥಮಿಕ ಶಾಲೆ ಕಾರ್ಯ ನಿರ್ವಹಿಸಲು ಕುಡಿಯುವ ನೀರಿನ ಅವಶ್ಯಕತೆ ಇದೆ. ಮಕ್ಕಳಿಗೆ ಕುಡಿಯುವ ನೀರನ್ನು ಶಾಲೆಯ ಆವರಣದಲ್ಲಿ ಪೂರೈಸಲು ಸಾಧ್ಯವಾಗದೇ ಇದ್ದಾಗ, ಇದಕ್ಕೆ ಮಕ್ಕಳು

ಶಾಲೆಯಿಂದ ಹೊರಗೆ ಹೋಗಿ ನೀರು ಕುಡಿದು ಶಾಲೆಗೆ ಮರಳುವುದು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಹಳ ಕಷ್ಟ. ಭಾರತದಲ್ಲಿ ಶೇಕಡ ೫೯ಕ್ಕಿಂತಲೂ ಹೆಚ್ಚಿನ ಪ್ರಾಥಮಿಕ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಪ್ರಸ್ತುತ ಅಧ್ಯಯನದ ಗಡಿ ಭಾಗದ ಒಟ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಶಾಲೆಯ ಆವರಣದಲ್ಲಿ ಇರುವುದು ೧೪೯ ಶಾಲೆಗಳಲ್ಲಿ, ಅಂದರೆ ಶೇಕಡ ೫೫ ರಷ್ಟು ಶಾಲೆಗಳು ಮಾತ್ರ. ಇನ್ನೂ ಉಳಿದ ಶೇಕಡ ೪೫ ರಷ್ಟು ಶಾಲೆಗಳಲ್ಲಿನ ಶಾಲಾ ಆವರಣದಲ್ಲಿ ಯಾವುದೇ ಬಗೆಯ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ.

ತಾಲೂಕಾವಾರು ಗಡಿನಾಡ ಶಾಲೆಗಳಲ್ಲಿ ಕುಡಿಯುವ ನೀರು, ಕಂಪೌಂಡು, ಶೌಚಾಲಯ, ಸೌಲಭ್ಯ ವಿವರ :

ಕ್ರ.ಸಂ.	ತಾಲೂಕ ಗ್ರಾಮಗಳು	ಕುಡಿಯುವ ನೀರು			ಕಂಪೌಂಡು			ಶೌಚಾಲಯ		
		ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು	ಇದೆ	ಇಲ್ಲ	ಒಟ್ಟು
೧.	ಅಥಣಿ(ಉರ್ದು ಶಾಲೆಗಳು)೫	೩	೨	೫	೧	೪	೫	೫	-	೫
೨.	ಇಂಡಿ(ಕನ್ನಡ ಶಾಲೆಗಳು) ೩೪	೧೯	೧೫	೩೪	೫	೨೯	೩೪	೨೫	೯	೩೪
೩.	ಚಿಕ್ಕೋಡಿ/ನಿಪ್ಪಾಣಿ ಶಾ.೪೯	೧೯	೩೦	೪೯	೧೪	೩೫	೪೯	೨೨	೨೭	೪೯
೪.	ಅಥಣಿ (ಕನ್ನಡ ಶಾಲೆಗಳು) ೨೭	೧೩	೧೪	೨೭	೧೧	೧೬	೨೭	೨೧	೬	೨೭
೫.	ಹುಕ್ಕೇರಿ(ಕನ್ನಡ ಶಾಲೆಗಳು)೮	೩	೫	೮	೨	೬	೮	೪	೪	೮
೬.	ಹುಕ್ಕೇರಿ(ಮರಾಠಿ ಶಾಲೆಗಳು)೨೫	೧೬	೯	೨೫	-	೨೫	೨೫	೨೪	೧	೨೫
೭.	ಖಾನಾಪೂರ(ಮರಾಠಿ) ೧೬	೧	೧೫	೧೬	೭	೯	೧೬	೪	೧೨	೧೬
೮.	ಚಿಕ್ಕೋಡಿ/ನಿಪ್ಪಾಣಿ೬೦	೪೭	೧೩	೬೦	೨೦	೪೦	೬೦	೫೧	೯	೬೦
೯.	ರಾಯಬಾಗ(ಕ.ಶಾಲೆಗಳು) ೨	೨	-	೨	೨	-	೨	೨	-	೨
೧೦.	ಕಾರವಾರ(ಕ.ಮಾ ಶಾಲೆಗಳು)೮	೬	೨	೮	೫	೩	೮	೭	೧	೮
೧೧.	ಜೋಯಿಡಾ(ಕ.ಮಾ ಶಾಲೆಗಳು)	೨೨	೯	೩೧	೧೪	೧೭	೩೧	೨೨	೯	೩೧
	ಒಟ್ಟು ೨೬೫	೧೫೧	೧೧೪	೨೬೫	೮೧	೧೮೪	೨೬೫	೧೮೭	೭೮	೨೬೫

೩. ಶೌಚಾಲಯ :

ಗ್ರಾಮ ಪರಿಸರದಲ್ಲಿ ಶೌಚಾಲಯ ವ್ಯವಸ್ಥೆಯು ಅವಶ್ಯಕ. ಗ್ರಾಮಗಳಲ್ಲಿ ಇತ್ತೀಚಿಗೆ ಕಡಿಮೆಯಾಗುತ್ತಿರುವ ವಿಶಾಲ ಪ್ರದೇಶ, ಅನುಕೂಲವಾದ ಸ್ಥಳದಲ್ಲಿ ಶೌಚಾಲಯಗಳು ಅಗತ್ಯವಾದ ಪ್ರಮಾಣದಲ್ಲಿ ಇಲ್ಲದಿರುವುದು ಶಾಲೆಯ ಹತ್ತಿರ ಅಥವಾ ಸುತ್ತಮುತ್ತಲಿನ ಪರಿಸರ ಅಮೇಧ್ಯ ಮತ್ತು ಹೊಲಸು ಅಸ್ತಿತ್ವಕ್ಕೆ ಬರಲು ಪೂರಕವಾಗಿದೆ. ಇದು ವಿಶೇಷವಾಗಿ ಹೆಣ್ಣುಮಕ್ಕಳಿಗೆ ಮತ್ತು ಮಹಿಳಾ ಶಿಕ್ಷಕಿಯರಿಗೆ ಬಹಳ ಮುಜುಗರ ಮತ್ತು ಅನಾನುಕೂಲತೆಯನ್ನು ಸೃಷ್ಟಿಸುತ್ತದೆ. ಭಾರತದಲ್ಲಿ ಶೇಕಡ ೮೯ರಷ್ಟು ಪ್ರಾಥಮಿಕ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇದೆಯಾದರೂ, ಶೇಕಡ೮೫ಕ್ಕಿಂತ ಹೆಚ್ಚಿನ ಶಾಲೆಗಳಲ್ಲಿ ಶೌಚಾಲಯಗಳು ಉಪಯೋಗಿಸುವ ಸ್ಥಿತಿಯಲ್ಲಿ ಇಲ್ಲ. ಕೆಲವು ಶಾಲೆಗಳಲ್ಲಿ ಇರುವ ಶೌಚಾಲಯವನ್ನು ಶಿಕ್ಷಕರು ಉಪಯೋಗಿಸುತ್ತಿದ್ದಾರೆ.

ಗಡಿನಾಡಿನ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ಶೌಚಾಲಯವನ್ನು ಇತ್ತೀಚಿಗೆ ಕೆಲವೊಂದನ್ನು ಮಾತ್ರ ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮದಲ್ಲಿ ನಿರ್ಮಿಸಲಾಗಿದೆ. ಸುಮಾರು ೨೬೫ ಗ್ರಾಮಗಳ ಶಾಲೆಗಳಲ್ಲಿ ೧೮೭ ರಲ್ಲಿ ಮಾತ್ರ ಶೌಚಾಲಯಗಳನ್ನು ಕಾಣುತ್ತೇವೆ. ಉಳಿದ ೭೮ ಶಾಲೆಗಳಲ್ಲಿ ಶೌಚಾಲಯದ ಸೌಲಭ್ಯ ಮರಿಚಿಕೆಯಾಗಿದೆ. ಬೆಳಗಾವಿ ಜಿಲ್ಲೆಯ ಗಡಿಭಾಗದ ತಾಲೂಕುಗಳಾದ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲೂಕಿನ ಸುಮಾರು ೨೭ ಗ್ರಾಮಗಳಲ್ಲಿ ಶೌಚಾಲಯದ ವ್ಯವಸ್ಥೆ ಇರುವುದಿಲ್ಲ. ಕೆಲವೊಂದು ಶಾಲೆಗಳಲ್ಲಿ ಇರುವ ಶೌಚಾಲಯವನ್ನು ಶಿಕ್ಷಕರು ಮಾತ್ರ ಉಪಯೋಗಿಸಿ, ನಂತರ ಬೀಗ ಹಾಕುತ್ತಾರೆ. ಇದಕ್ಕೆ ಶಿಕ್ಷಕರೇ ನೀಡುವ ಕಾರಣ ಮಕ್ಕಳಿಗೆ ಶೌಚಾಲಯವನ್ನು ಸರಿಯಾಗಿ ಉಪಯೋಗಿಸಲು ಬರುವುದಿಲ್ಲ. ಹೀಗಾಗಿ ಅದು ಗಲೀಜು ಆಗುತ್ತದೆ. ಆದಕ್ಕೆ ನಾವುಗಳು ಮಾತ್ರ ಅದನ್ನು ಉಪಯೋಗಿಸಿ ಬೀಗ ಹಾಕುತ್ತೇವೆ ಎಂದು ಹೇಳುತ್ತಾರೆ.

ಕೆಲವೊಂದು ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಇರುವ ಶೌಚಾಲಯದಲ್ಲಿ ಕಸಕಡ್ಡಿಗಳು ತುಂಬಿಕೊಂಡಿವೆ. ಮತ್ತೆ ಕೆಲವು ಶಾಲೆಗಳಲ್ಲಿ ಶೌಚಾಲಯಗಳ ಸ್ಥಿತಿ ಉಪಯೋಗದ ಸ್ಥಿತಿಯಲ್ಲಿದ್ದರೆ, ಅವುಗಳನ್ನು ಶಿಕ್ಷಕರು ಮಾತ್ರ ಉಪಯೋಗಿಸುತ್ತಿದ್ದಾರೆ. ಇಲ್ಲವಾದರೆ ಅವುಗಳು ಉಪಯೋಗಿಸಲಾರದ ಸ್ಥಿತಿಯಲ್ಲಿವೆ. ಕೆಲವು ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲು ಶಾಲೆಯ ಆವರಣದಲ್ಲಿ ಸ್ಥಳ ಅವಕಾಶವಿಲ್ಲ.

೪. ಕಂಪೌಂಡ :

ಶಾಲೆಯು ಗಡಿಬೇಲಿ ಅಥವಾ ಕಂಪೌಂಡನ್ನು ಅವಶ್ಯಕವಾಗಿ ಹೊಂದಿರಬೇಕು. ಕಂಪೌಂಡ

ಇದ್ದರೆ ಶಾಲೆಗೆ ಅನೇಕ ಅನುಕೂಲಗಳು ಇರುತ್ತವೆ. ಶಾಲೆಗೆ ಸೇರಿದ ಆಸ್ತಿ ಮತ್ತು ಆವರಣವನ್ನು ಒತ್ತುವರಿ ಮಾಡದಂತೆ ತಡೆಯಬಹುದು. ಸಾರ್ವಜನಿಕರಿಂದ ಮತ್ತು ಹೊರಗಿನಿಂದ ಶಾಲೆಯಲ್ಲಿ ತರಗತಿ ನಡೆಸಲು ಆಗಬಹುದಾದ ಶಬ್ದ -ಗಲಾಟೆಯನ್ನು ಕಡಿಮೆಯಾಗುವಂತೆ ತಡೆಯಬಹುದು. ಗ್ರಾಮದಲ್ಲಿನ ಕೆಲವು ಪ್ರಾಣಿಗಳು ಶಾಲೆಯ ಜಗುಲಿಗೆ ಬಾರದಂತೆ ತಡೆಯಬಹುದು ಇಂಥ ಅನೇಕ ತೊಂದರೆಗಳಿಂದ ಶಾಲೆಯನ್ನು ರಕ್ಷಿಸಲು ಕಂಪೌಂಡ ಅವಶ್ಯಕ. ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಬಹಳ ಮಟ್ಟಿಗೆ ಕಂಪೌಂಡ ಹೊಂದಿರುವುದಿಲ್ಲ.

ಮುಂಬಯಿ ಕರ್ನಾಟಕದ ಗಡಿನಾಡ ಭಾಗದಲ್ಲಿರುವ ಸುಮಾರು ೨೬೫ ಗ್ರಾಮಗಳ ಶೇಕಡ ೭೦ ರಷ್ಟು ಶಾಲೆಗಳಲ್ಲಿ ಶಾಲೆಯ ಗಡಿಬೇಲಿ ಅಥವಾ ಕಂಪೌಂಡ ಇರುವುದಿಲ್ಲ. ಶೇಕಡ ೩೦ ರಷ್ಟು ಶಾಲೆಗಳಲ್ಲಿ ಕಂಪೌಂಡ ಇದೆ. ಹುಕ್ಕೇರಿ ತಾಲೂಕಿನ ೨೫ ಗ್ರಾಮಗಳ ಶಾಲೆಗಳಿಗೆ ಯಾವುದೇ ರೀತಿಯ ಕಂಪೌಂಡ ಇರುವುದಿಲ್ಲ. ಇಂಡಿ ತಾಲೂಕಿನ ೩೪ ಕನ್ನಡ ಶಾಲೆಗಳಲ್ಲಿ ೫ ಶಾಲೆಗಳಿಗೆ ಮಾತ್ರ ಕಂಪೌಂಡ ಇದ್ದು ಉಳಿದ ೨೯ ಶಾಲೆಗಳಿಗೆ ಕಂಪೌಂಡ ಸೌಕರ್ಯ ಇರುವುದಿಲ್ಲ. ಚಿಕ್ಕೋಡಿ/ನಿಪ್ಪಾಣಿ ತಾಲೂಕಿನ ೪೯ ಶಾಲೆಗಳಲ್ಲಿ ೧೪ ಶಾಲೆಗಳಿಗೆ ಕಂಪೌಂಡ ವ್ಯವಸ್ಥೆ ಇದ್ದು, ಉಳಿದ ೩೫ ಶಾಲೆಗಳಿಗೆ ಕಂಪೌಂಡ ವ್ಯವಸ್ಥೆ ಇರುವುದಿಲ್ಲ. ಜೋಯಿಡಾ ತಾಲೂಕಿನ ೧೭ ಶಾಲೆಗಳಿಗೆ ಕಾರವಾರ ತಾಲೂಕಿನ ೩ ಶಾಲೆಗಳಿಗೆ ಕಂಪೌಂಡ ವ್ಯವಸ್ಥೆ ಇಲ್ಲ. ಒಟ್ಟಾರೆ, ೨೬೫ ಶಾಲೆಗಳಲ್ಲಿ ೮೧ ಶಾಲೆಗಳಿಗೆ ಕಂಪೌಂಡ ವ್ಯವಸ್ಥೆ ಇರುತ್ತದೆ. ಉಳಿದ ೧೮೪ ಶಾಲೆಗಳಿಗೆ ಕಂಪೌಂಡ ವ್ಯವಸ್ಥೆ ಇರುವುದಿಲ್ಲ. ಕೆಲವೊಂದು ಗ್ರಾಮಗಳಲ್ಲಿ ಶಾಲಾ ತರಗತಿಗಳು ಬೇರೆ ಬೇರೆ ಸ್ಥಳ ಹಾಗೂ ಕಟ್ಟಡಗಳಲ್ಲಿ ನಡೆಯುತ್ತಿರುವುದರಿಂದ ಕಂಪೌಂಡ ಕಲ್ಪಿಸ ಬಹುದಾದ ಸ್ಥಿತಿಯಲ್ಲಿ ಆ ಶಾಲೆಗಳು ಇಲ್ಲ. ಇಂತಹ ಶಾಲೆಗಳಲ್ಲಿ ಗಡಿಬೇಲಿ ನಿರ್ಮಿಸಬೇಕಾದರೆ ಶಾಲೆಯ ಆವರಣವನ್ನು ಸ್ಥಳಾಂತರಿಸಬೇಕು ಎಷ್ಟೋ ಗ್ರಾಮಗಳಲ್ಲಿ ಶಾಲೆಗೆ ಕಂಪೌಂಡ ಸೌಕರ್ಯ ಇಲ್ಲದಿರುವುದರಿಂದ, ಹೆಚ್ಚು ಕಡಿಮೆ ಶಾಲೆಯ ಹೊರಭಾಗದ ಆವರಣವನ್ನು ಸಾರ್ವಜನಿಕರು ಬಳಸುತ್ತಿರುವುದು ಕಂಡುಬಂದಿದೆ. ಕೆಲವು ಜನರು ಶಾಲೆಗೆ ಬಹಳ ಸಮೀಪದಲ್ಲಿ ಸುಗ್ಗಿಯ ಕಾಲದಲ್ಲಿ ಜೋಳ , ಸೂರ್ಯಕಾಂತಿ, ಮೆಣಸಿನಕಾಯಿ ಇತ್ಯಾದಿ ಬೆಳೆಗಳ ವಕ್ಕಣೆಯನ್ನು ಮಾಡುತ್ತಿರುತ್ತಾರೆ. ಕೆಲವೊಂದು ಗ್ರಾಮದ ಶಾಲೆಯ ಆವರಣ ಪ್ರಾಣಿಗಳ ವಾಸಸ್ಥಾನವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗೆ ಅನೇಕ ಸಲ ದೂರು ನೀಡಿದರೂ ಏನೂ ಪ್ರಯೋಜನವಾಗಿರುವುದಿಲ್ಲ. ಗಲಾಟೆಗಳು ಆಗಿರುವ ನಿದರ್ಶನಗಳುಂಟು. ಗ್ರಾಮಸ್ಥರು ಸ್ವಯಂ ಪ್ರೇರಣೆಯಿಂದ ಮಾತ್ರಶಾಲೆಯ ಸುತ್ತಮುತ್ತಲಿನ ಪರಸರವನ್ನು ಉತ್ತಮವಾಗಿಡಲು ಸಾಧ್ಯ. ಇದಕ್ಕೆ ಶಿಕ್ಷಣ ಇಲಾಖೆ ಮತ್ತು ಸರಕಾರ ಕೆಲವು ಸೂಕ್ತ ಕ್ರಮವಹಿಸುವ ಅಗತ್ಯವಿದೆ.

೫. ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು :

ಬೋಧನಾ ಮತ್ತು ಕಲಿಕೆಯ ಸಾಮಗ್ರಿಗಳು ಶಿಕ್ಷಣದ ಗುಣಾತ್ಮಕ ಪ್ರಗತಿಗೆ ಅವಶ್ಯಕವಾಗಿಬೇಕು. ಇವುಗಳ ಕೊರತೆ ಮತ್ತು ದಾಸ್ತಾನು ಬಹಳ ಶಾಲೆಗಳಲ್ಲಿ ಇದೆ ಎಂಬುದು ಸಾಮಾನ್ಯ ಅಭಿಪ್ರಾಯ. ಇದು ಸ್ವಲ್ಪ ಮಟ್ಟಿಗೆ ವಾಸ್ತವವು ಹೌದು. ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು ಸಾಕಾಗುವಷ್ಟು ಪ್ರಮಾಣದಲ್ಲಿ ಎಲ್ಲ ಶಾಲೆಗಳಲ್ಲಿ ದೊರಕದೆ ಇರಬಹುದು. ಬಹಳ ಶಾಲೆಗಳಲ್ಲಿ ಈಗಾಗಲೇ ಇರುವ ಬೋಧನಾ ಸಾಮಗ್ರಿಗಳನ್ನು ಬಹಳ ಮಟ್ಟಿಗೆ ಉಪಯೋಗಿಸದೇ ಇರುವ ಸ್ಥಿತಿಯನ್ನು ಕಾಣಬಹುದು. ಅವುಮಕ್ಕಳಿಗೆ ಸಿಗದ ಹಾಗೆ ಜೋಪಾನವಾಗಿ, ಬೀಗ ಹಾಕಿ ಕಪಾಟುಗಳಲ್ಲಿ ಇಡಲಾಗಿದೆ. ಈ ಸ್ಥಿತಿ ಏಕೆ? ಎಂದು ಶಿಕ್ಷಕರನ್ನು ಕೇಳಿದಾಗ, ಪ್ರಾಥಮಿಕ ಹಂತದಲ್ಲಿ ಇವುಗಳನ್ನು (ಬೋಧನಾ ಮತ್ತು ಕಲಿಕಾ ಸಾಮಗ್ರಿ) ಉಪಯೋಗಿಸುವುದು ಬಹಳ ಕಷ್ಟ. ಮಕ್ಕಳಿಗೆ ಇವುಗಳನ್ನು ಉಪಯೋಗಿಸಲು ಬರುವುದಿಲ್ಲ, ಅವುಗಳನ್ನು ಹಾಳು ಮಾಡುತ್ತಾರೆ. ಬೋಧನಾ ಸಾಮಗ್ರಿಗಳನ್ನು ಬಳಸಿ ಬೋಧನೆ ಮಾಡಿದರೂ ಮಕ್ಕಳಿಗೆ ಅರ್ಥವಾಗುವುದಿಲ್ಲ. ಹೀಗಾಗಿ ಅವುಗಳನ್ನು ಮಾಧ್ಯಮಿಕ ಹಂತದಲ್ಲಿ ಬೋಧನೆ ಮತ್ತು ಕಲಿಕೆಗಾಗಿ ಆಗಾಗ ಉಪಯೋಗಿಸುತ್ತೇವೆ ಎಂದು ಶಿಕ್ಷಕರು ಹೇಳುತ್ತಾರೆ. ನಾವು ಉತ್ತಮಗುಣಮಟ್ಟದ ಶಿಕ್ಷಣಕ್ಕೆ ಬುನಾದಿ ಹಾಕಬೇಕಾಗಿರುವುದು ಪ್ರಾಥಮಿಕ ಹಂತದಲ್ಲಿ. ಈ ಹಂತದಲ್ಲಿ ಬುನಾದಿಯನ್ನು ಕ್ರಮಬದ್ಧವಾಗಿ ಹಾಕದೇ, ಮಾಧ್ಯಮಿಕ ಹಂತದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣಕ್ಕಾಗಿ ಪ್ರಯತ್ನಿಸುತ್ತಿರುವುದು ಎಷ್ಟರಮಟ್ಟಿಗೆ ಸರಿ. ಇನ್ನಾದರೂ ಈಗಾಗಲೇ ಇರುವ ಬೋಧನಾ ಮತ್ತು ಕಲಿಕಾ ಉಪಕರಣಗಳ ಸಮರ್ಪಕ ಬಳಕೆ ಸರಿಯಾದ ರೀತಿಯಲ್ಲಿ ನಡೆಯಬೇಕು.

ನಮ್ಮ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಗಡಿನಾಡ ಭಾಗದ ೨೬೫ಗ್ರಾಮಗಳ ೨೬೫ ಶಾಲೆಗಳಲ್ಲಿ ಇರುವ ಅತ್ಯಂತ ಗಂಭೀರವಾದ ಸಮಸ್ಯೆ ಎಂದರೆ ಇರುವ ಸೌಲಭ್ಯಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು ಮತ್ತು ಉಪಯೋಗಿಸದಿರುವುದು. ಕೊರತೆ ಇರುವ ಸೌಲಭ್ಯಗಳನ್ನು ನೀಡಿದರೆ, ಅವುಗಳನ್ನು ಕ್ರಮಬದ್ಧವಾಗಿ ನಿರ್ವಹಣೆ ಮಾಡುವ ಮತ್ತು ಪರಿಣಾಮಕಾರಿಯಾಗಿ ಉಪಯೋಗಿಸುವ ನಂಬಿಕೆಯು ಸಹ ಇರಬೇಕು. ಅಲ್ಲದೇ ಸ್ಥಳೀಯವಾಗಿ ಇರುವ ಸವಲತ್ತುಗಳನ್ನು ಪಡೆದು ಶಾಲೆಗಳಲ್ಲಿ ಕಲಿಕೆಯ ಅವಕಾಶಗಳನ್ನು ವಾಸ್ತವಿಕ ನೆಲೆಯಲ್ಲಿ ಹುಟ್ಟು ಹಾಕುವ ಮೂಲಕ ಬೋಧನೆ ಮತ್ತು ಕಲಿಕೆಗೆ ಹಿತಕರ ಶಾಲಾ ಪರಿಸರವನ್ನು ಕಟ್ಟಬಹುದು ಎಂಬುದಕ್ಕೆ ಅನೇಕ ಉದಾಹರಣೆಗಳಿವೆ.

ಮುಂಬಯಿ-ಕರ್ನಾಟಕದ ಗಡಿನಾಡಿನ ತಾಲೂಕುಗಳಾದ ಹುಕ್ಕೇರಿ, ಚಿಕ್ಕೋಡಿ, ನಿಪ್ಪಾಣಿ, ಕಾರವಾರ, ಜೋಯಿಡಾ, ಇಂಡಿ, ರಾಯಬಾಗ, ಸಂಕೇಶ್ವರ, ಖಾನಾಪೂರ, ಬೆಳಗಾವಿ

ಗ್ರಾಮೀಣ, ಬೆಳಗಾವಿನಗರಗಳಲ್ಲಿನ ೨೬೫ಗ್ರಾಮಗಳ ೨೬೫ ಶಾಲೆಗಳಲ್ಲಿ, ೨೦೩ ಶಾಲೆಗಳಲ್ಲಿ ಮಾತ್ರ ಪೀಠೋಪಕರಣಗಳು ಮತ್ತು ೬೨ ಶಾಲೆಗಳಲ್ಲಿ ಬೋಧನೋಪಕರಣಗಳು ಲಭ್ಯವಿದೆ. ೭೮ ಶಾಲೆಗಳಿಗೆ ಬೋಧನೋಪಕರಣಗಳ ಕೊರತೆ ಇದೆ. ಆದರೆ ಇತ್ತೀಚಿಗೆ ಇವುಗಳನ್ನು ಕಪ್ಪುಹಲಗೆ ಕಾರ್ಯಕ್ರಮ, ಡಿ.ಪಿ. ಇ.ಪಿ. ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳಲ್ಲಿ ಪೂರೈಸಲಾಗಿದೆ. ಆದರೆ ಇವುಗಳನ್ನು ಉಪಯೋಗಿಸದ ಮಾದರಿಯಲ್ಲಿ ಇರುವುದು ಎಲ್ಲ ಶಾಲೆಗಳಲ್ಲಿ ಸಾಮಾನ್ಯ. ಅದೇನೆಂದರೆ ಈಗಾಗಲೇ ಇರುವ ಬೋಧನೋಪಕರಣಗಳು ಮತ್ತು ಪೀಠೋಪಕರಣಗಳನ್ನು ಪೆಟ್ಟಿಗೆಯಲ್ಲಿ ಬೀಗ ಹಾಕಿ ಮಕ್ಕಳಿಗೆ ಸಿಗದಂತೆ ಎತ್ತರವಾದ ಸ್ಥಳದಲ್ಲಿ ಇಡಲಾಗಿದೆ. ಸಾಮಗ್ರಿಗಳು ಕಳೆದು ಹೋಗುವ ಅಥವಾ ಒಡೆದು ಹೋಗುವ ಭಯ ಶಿಕ್ಷಕರಲ್ಲಿ ಬಹಳ ಸಾಮಾನ್ಯವಾಗಿ ಕಂಡುಬರುತ್ತದೆ.

ಕೆಲವು ಸಾಮಗ್ರಿಗಳು ಶಾಲೆಯ ದಾಸ್ತಾನಿನಲ್ಲಿ ಮಾತ್ರ ಇವೆ. ಕೆಲವು ಶಿಕ್ಷಕರ ಮನೆಯಲ್ಲಿ ಇರುವ ಪರಿಸ್ಥಿತಿಯೂ ಕಂಡು ಬರುತ್ತದೆ. ಹೀಗೆ ಬೋಧನೋಪಕರಣಗಳು ಮತ್ತು ಕಲಿಕಾ ಸಾಮಗ್ರಿಗಳ ಕೊರತೆಯು ಶಾಲೆಗಳಲ್ಲಿ ಇರುವುದಕ್ಕೆ ಅನೇಕ ಕಾರಣಗಳು ಇವೆ. ಇದರ ಜೊತೆಗೆ ಕೆಲವು ಶಿಕ್ಷಕರು ಬೋಧನಾ ಕಲಿಕಾ ಸಾಮಗ್ರಿಗಳನ್ನು ತರಗತಿಗಳಲ್ಲಿ ಉಪಯೋಗಿಸಲು ಅಸಹಾಯಕರಾಗಿದ್ದಾರೆ. ನಮ್ಮ ಗಡಿಭಾಗದ ಶೇಕಡಾ ೬೦ ಕ್ಕಿಂತಲೂ ಕಡಿಮೆ ಶಿಕ್ಷಕರು ಬೋಧನಾ ಕಲಿಕಾ ಸಾಮಗ್ರಿಗಳನ್ನು ಉಪಯೋಗಿಸುತ್ತಿರುವುದು ಕಂಡು ಬಂದಿದೆ. ಇತ್ತೀಚಿನ ದಿನಗಳಲ್ಲಿ ಅನೇಕ ತೊಡಕುಗಳಿಂದ ಬೋಧನಾ ಕಲಿಕೆಯ ಉಪಕರಣಗಳ ಬಳಕೆ ಮತ್ತು ನಿರ್ವಹಣೆಯಲ್ಲಿನ ಪರಿಣಾಮ ಶೂನ್ಯವಾಗಿದೆ.

ಗಡಿನಾಡ ಶಾಲೆಗಳಲ್ಲಿ ಇನ್ನೂ ಕೆಲವೊಂದು ಭೌತಿಕ ಸೌಲಭ್ಯಗಳಲ್ಲಿ ಮುಖ್ಯವಾಗಿ ಆಟದ ಮೈದಾನ. ಇದು ವಿದ್ಯಾರ್ಥಿಗಳಿಗೆ ಅತ್ಯವಶ್ಯವಾಗಿ ಭೌತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಉತ್ತಮವಾದ ಆಟದ ಮೈದಾನ ಬೇಕು. ಆದರೆ ನಮ್ಮ ಗಡಿನಾಡ ಭಾಗದ ಸುಮಾರು ೨೬೫ ಶಾಲೆಗಳಲ್ಲಿ ೧೩೦ ಶಾಲೆಗಳಿಗೆ ಮಾತ್ರ ಆಟದ ಮೈದಾನವಿದೆ. ಇನ್ನೂ ೧೩೫ ಶಾಲೆಗಳಿಗೆ ಈ ವ್ಯವಸ್ಥೆ ಇರುವುದಿಲ್ಲ. ಅದೇ ರೀತಿ ವಿದ್ಯುತ್ ವ್ಯವಸ್ಥೆ ೧೬೫ ಶಾಲೆಗಳಿಗೆ ಇದೆ. ೧೦೦ ಶಾಲೆಗಳಿಗೆ ವಿದ್ಯುತ್ ವ್ಯವಸ್ಥೆ ಇರುವುದಿಲ್ಲ. ಬೌದ್ಧಿಕ ಉಪಕರಣಗಳಿಗಿಂತ ಹೆಚ್ಚಾಗಿ, ಸ್ಥಳೀಯವಾಗಿ ದೊರಕುವ ಸಂಪನ್ಮೂಲಗಳ ಬಳಕೆಯಿಂದ ಕಲಿಕೆಗೆ ಹಿತಕರ ಮತ್ತು ಆಕರ್ಷಕವಾದ ಪರಿಸರವನ್ನು ಶಾಲಾ ಆವರಣದಲ್ಲಿ ಹುಟ್ಟು ಹಾಕಲು ಗಡಿನಾಡಿನ ಶಾಲೆಗಳು ವಿಫಲವಾಗಿವೆ. ಹೆಚ್ಚಿನ ವ್ಯವಹಾರಿಕ ಶಾಲೆಗಳು (ಖಾಸಗಿ) ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ, ಸರಳ ಕಲಿಕಾ ಶಾಲಾ ಪರಸರವನ್ನು ಉತ್ತಮ ಭೌತಿಕ ಪರಿಸರವಾಗಿ ಪರಿವರ್ತಿಸುವಲ್ಲಿ ಸ್ವಲ್ಪಮಟ್ಟಿಗೆ ಸಫಲವಾಗಿವೆ.

ಗಡಿನಾಡ ಕನ್ನಡ ಶಾಲೆಗಳ ಭೌತಿಕ ಸೌಲಭ್ಯಗಳ ಕುರಿತು ವಿವರ ತಾಲೂಕ: ಅಥಣಿ

ಕ್ರ ಸಂ.	ಶಾಲೆಯ ಹೆಸರು	ಶಾಲೆ ಪ್ರಾರಂಭಿಸಿದ ದಿನಾಂಕ	ಬೋಧನಾ ಮಾಧ್ಯಮ	ಮಂಜೂರಾದ ಶಿಕ್ಷಕರ ಹುದ್ದೆಗಳು	ಕೆಲಸ ನಿರ್ವಹಿಸುತ್ತಿರುವವರು/ಖಾಲಿ ಹುದ್ದೆಗಳ ಸಂಖ್ಯೆ	ಈಗಿರುವ ಕೊಠಡಿಗಳ ಸಂಖ್ಯೆ	ವಿದ್ಯಾರ್ಥಿ/ ಶಿಕ್ಷಕರ ಅನುಪಾತದಂತೆ ಹೆಚ್ಚುವರಿ ಶಿಕ್ಷಕರ ಅವಶ್ಯಕತೆ	ಶಿಕ್ಷಕರ ಲಭ್ಯತೆಗನುಗುಣವಾಗಿ ಕೊಠಡಿ ಇರುವ ಬಗ್ಗೆ ವಿವರ	ಹೆಚ್ಚಿನ ಕೊಠಡಿ ಅವಶ್ಯಕತೆ	ಕುಡಿಯುವ ನೀರು ಇದೆ/ಇಲ್ಲ	ಶೌಚಾಲಯ ಇದೆ/ ಇಲ್ಲ	ಆಟದ ಮೈದಾನ ಇದೆ/ ಇಲ್ಲ	ಕಂಪೌಂಡ ಗೋಡೆ ಇದೆ/ ಇಲ್ಲ	ವಿದ್ಯುತ್ ಇದೆ/ ಇಲ್ಲ	ರ್‍ಯಾಂಪ್ಸ್ ಇದೆ/ ಇಲ್ಲ	ಪೀಠೋಪಕರಣಗಳ ಲಭ್ಯತೆ	ಬೋಧನೋಪಕರಣಗಳು	ಕಳೆದ 3ವರ್ಷಗಳಿಂದ ಮಕ್ಕಳ ದಾಖಲಾತಿ/ ಹಾಜರಾತಿ ವಿವರ					
																		೨೦೦೩-೦೪		೨೦೦೪-೦೫		೨೦೦೫-೦೬	
																		ದಾ	ಹಾ	ದಾ	ಹಾ	ದಾ	ಹಾ
೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬	೧೭	೧೮	೧೯	೨೦	೨೧	೨೨	೨೩	೨೪
೧	ಸ.ಪ್ರಾ.ಶಾಲೆ ಯಲ್ಲಮ್ಮನ ಗುಡಿ ತೋಟ	-	ಕನ್ನಡ	೩	-	೩	ಇಲ್ಲ	-	-	ಇದೆ	ಇದೆ	-	ಇಲ್ಲ	-	-	-	-	೧೬	೧೬	೧೮	೧೮	೧೬	೧೬
೨	ಕೆ.ಎಚ್.ಪಿ. ಎಸ್.ಕೊಟ್ಟಲಗಿ	-	ಕನ್ನಡ	೧೦	-	೧೨	ಇದೆ೨	-	-	ಇದೆ	ಇದೆ	-	ಇದೆ	-	-	-	-	೩೦೮	೨೮೦	೨೬೦	೨೬೦	೨೭೩	೨೭೩
೩	ಕ.ಹಿ.ಪ್ರಾ.ಶಾಲೆ ಅನಂತಪೂರ ತೋಟ	-	ಕನ್ನಡ	೪	೩-೧ ನಿಯೋಜನೆ	೪	ಇಲ್ಲ	ಇದೆ	ಇಲ್ಲ	ಇಲ್ಲ	ಇದೆ	ಕಡಿಮೆ ಇದೆ	ಇಲ್ಲ	ಇಲ್ಲ	ಇಲ್ಲ	ಇದೆ	ಇದೆ	೧೨೩	೯೭	೧೧೨	೧೧೧	೧೩೮	೧೩೦

ಮುಂದುವರೆದಿದೆ

ಗಡಿನಾಡ ಕನ್ನಡ ಶಾಲೆಗಳ ಶೈಕ್ಷಣಿಕ ಸೌಲಭ್ಯಗಳ ಕುರಿತು ವಿವರ ತಾಲೂಕ: ಅಥಣಿ

ಅಧಿಕಾರಿಗಳ ಶಾಲಾ ತಪಾಸಣೆ ಕೈಗೊಂಡ ವಿವರ	ಕಳೆದ ೩ ವರ್ಷಗಳ ೫ ಮತ್ತು ೭ನೇ ವರ್ಗದ ವಿದ್ಯಾರ್ಥಿಗಳ ಫಲಿತಾಂಶ												ಮಕ್ಕಳ ಗುಣಮಟ್ಟ ಸುಧಾರಣೆಗೆ ಶಿಕ್ಷಕರು ಕೈಗೊಂಡ ಕ್ರಮಗಳು ಏನು?	ಕನ್ನಡ ಭಾಷಾ ಸುಧಾರಣೆಗೆ ಶಿಕ್ಷಕರು ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು	ಪಠ್ಯ ಪುಸ್ತಕ ಪೂರೈಕೆ ಕುರಿತು	ಸಮವಸ್ತ್ರ ವಿತರಣೆ ಬಗ್ಗೆ	ಅಕ್ಷರ ದಾಸೋಹ ಕಾರ್ಯಕ್ರಮ ಕುರಿತು	ಒಟ್ಟಾರೆ ಶಾಲೆಯ ಬಗ್ಗೆ ಅಭಿಪ್ರಾಯ
	೫ನೇ ತರಗತಿ						೭ನೇ ತರಗತಿ											
	೨೦೦೨-೦೩		೨೦೦೩-೦೪		೨೦೦೪-೦೫		೨೦೦೨-೦೩		೨೦೦೩-೦೪		೨೦೦೪-೦೫							
	ಕುಳಿತವರು	ಪಾಸಾದವರು	ಕುಳಿತವರು	ಪಾಸಾದವರು	ಕುಳಿತವರು	ಪಾಸಾದವರು	ಕುಳಿತವರು	ಪಾಸಾದವರು	ಕುಳಿತವರು	ಪಾಸಾದವರು	ಕುಳಿತವರು	ಪಾಸಾದವರು						
೨೫	೨೬	೨೭	೨೮	೨೯	೩೦	೩೧	೩೨	೩೩	೩೪	೩೫	೩೬	೩೭	೩೮	೩೯	೪೦	೪೧	೪೨	೪೩
೧೬-೮-೨೦೦೫	೧೬	೧೬	೧೮	೧೮	೧೬	೧೬	-	-	-	-	-	-	ನಾಟಕ, ನೃತ್ಯ ಪ್ರತಿಭಾ ಕಾರಂಜಿಗಳಲ್ಲಿ ಭಾಗವಹಿಸುವುದು ಇತ್ಯಾದಿ	-	ವಿತರಿಸಿದ್ದಾರೆ	ವಿತರಿಸಿದ್ದಾರೆ	ಸಾಗಿದೆ	ಪ್ರಗತಿಯಲ್ಲಿದೆ
೧೬-೮-೨೦೦೫	೧೦೪	೬೫	೪೪	೪೪	೬೫	೬೫	-	-	-	-	-	-	ಬೋಧನೋಪಕರಣಗಳು, ಕಾಪಿ ಪುಸ್ತಕ, ಸಮ್ಮೇಳನಗಳು ಇತ್ಯಾದಿ	ನಾಟಕ ನೃತ್ಯ ಹಾಗೂ ಇತರೆ ಚಟುವಟಿಕೆಗಳಲ್ಲಿ ಭಾಗವಹಿಸುವುದು	ವಿತರಿಸಿದ್ದಾರೆ	ವಿತರಿಸಿದ್ದಾರೆ	ಸಾಗಿದೆ	ಪ್ರಗತಿಯಲ್ಲಿದೆ
-	-	-	-	-	೨೩	೨೩	-	-	-	-	-	-	ಗುಂಪು ಚಟುವಟಿಕೆ, ಅಕ್ಷರ ಜೋಡನೆ	ಭಾಷಣ ಸ್ಪರ್ಧೆ ಹಾಗೂ ಸಂಭಾಷಣೆ	ವಿತರಿಸಿದ್ದಾರೆ	ವಿತರಿಸಿದ್ದಾರೆ	ಜಾರಿಯಲ್ಲಿದೆ	ಪ್ರಗತಿಯಲ್ಲಿದೆ

ಮುಂದುವರೆದ ಭಾಗ

ಗಡಿನಾಡ ಕನ್ನಡ ಶಾಲೆಗಳ ಭೌತಿಕ ಸೌಲಭ್ಯಗಳ ಕುರಿತು ವಿವರ ತಾಲೂಕ: ಅಥಣಿ

೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬	೧೭	೧೮	೧೯	೨೦	೨೧	೨೨	೨೩	೨೪
೪	ಸ.ಕ.ಪ್ರಾ.ಶಾಲೆ ಜೇಡರಹಟ್ಟಿ	೧೯೬೨	ಕನ್ನಡ	೮	೮	೫	೧	೧	೧	ಇಲ್ಲ	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇದೆ	ಇದೆ	೨೬೮	೨೬೨	೨೩೨	೨೨೦	೨೩೫	೨೦೦
೫	ಸ.ಕ.ಹಿ.ಪ್ರಾ. ಶಾಲೆ ಅನಂತಪೂರ	೧೯೬೯	ಕನ್ನಡ	೧೩	೧೧	೧೧	ಇದೆ	೧೧	೧	ಇಲ್ಲ	ಇದೆ	ಇದೆ	ಇದೆ	ಇಲ್ಲ	ಇದೆ	ಇದೆ	ಇದೆ	೫೦೨	೫೦೨	೪೬೮	೪೬೮	೪೫೦	೪೫೦
೬	ಸ.ಹಿ.ಪ್ರಾ. ಶಾಲೆ ಮಂಗಾವತಿ	೦೯-೧೦-೧೯೩೪	ಕನ್ನಡ	೭	೭	೮	ಇಲ್ಲ	೮	ಇಲ್ಲ	ಇದೆ	ಇದೆ	ಇದೆ	ಇದೆ	ಇದೆ	ಇದೆ	ಇದೆ	ಇದೆ	೬೨	೬೨	೬೪	೬೪	೫೧	೫೧
೭	ಸ.ಹಿ.ಪ್ರಾ. ಶಾಲೆ ಲೋಕೂರ	-	ಕನ್ನಡ	೫	೫	೭	ಇಲ್ಲ	ಇದೆ	ಇಲ್ಲ	ಇದೆ	ಇದೆ	ಇದೆ	ಇದೆ	ಇದೆ	ಇದೆ	ಇದೆ	ಇದೆ	೧೫೧	೧೫೧	-	-	-	-
೮	ಸ.ಕ.ಗಂ.ಶಾಲೆ ಉಗಾರಖುರ್ದ	೧೮೭೮	ಕನ್ನಡ	೧೯	೧೯	೧೨	-	೧೨	೧೦	೪	೧೧	ಇದೆ	ಇದೆ	ಇದೆ	ಇದೆ	ಇದೆ	ಇದೆ	೭೫೪	೭೦೮	೬೯೭	೬೯೭	೬೦೩	೬೦೩

ಮುಂದುವರೆದಿದೆ

ಗಡಿನಾಡ ಕನ್ನಡ ಶಾಲೆಗಳ ಶೈಕ್ಷಣಿಕ ಸೌಲಭ್ಯಗಳ ಕುರಿತು ವಿವರ ತಾಲೂಕ: ಅಥಣಿ

೨೫	೨೬	೨೭	೨೮	೨೯	೩೦	೩೧	೩೨	೩೩	೩೪	೩೫	೩೬	೩೭	೩೮	೩೯	೪೦	೪೧	೪೨	೪೩
೨೦೦೫-೦೬ ನೇ ಸಾಲಿನಲ್ಲಿ ಮಾಡಿರುತ್ತಾರೆ	೩೩	೩೧	೩೩	೩೧	೨೪	೨೨	೨೬	೨೪	೩೭	೩೭	೨೬	೨೨	ಚಿತ್ರಪಟ, ಪರಿಹಾರ ಬೋಧನೆ	ನಾಟಕ, ಗಾಯನ ಸ್ಪರ್ಧೆ, ಚಿತ್ರಕಲೆ	ವಿತರಿಸಿದ್ದಾರೆ	ವಿತರಿಸಿ ದ್ದಾರೆ	ಜಾರಿ ಯಲ್ಲಿ ದೆ	ಪ್ರಗತಿಯಲ್ಲಿದೆ
೨೬-೦೯-೨೦೦೫	೫೭	೫೫	೫೩	೫೩	೪೪	೪೪	೧೧೩	೧೧೩	೧೧೪	೧೧೪	೯೧	೯೧	ಹೊಸ ಪಾಠಗಳ ಪರಿಚಯ, ಗೋಡೆಬರಹ ಮಾಡಲಾಗಿದೆ	ಭಾವೈಕ್ಯತೆ ಗೀತಗಾಯನ ಏರ್ಪಡಿಸಲಾಗಿದೆ	ವಿತರಿಸಿದ್ದಾರೆ	ವಿತರಿಸಿ ದ್ದಾರೆ	ಜಾರಿ ಯಲ್ಲಿ ದೆ	ಪ್ರಗತಿ ಯಲ್ಲಿದೆ
೨೦-೧-೨೦೦೬	೨೯	೨೯	೨೭	೨೭	೨೨	೨೨	೩೩	೩೩	೩೭	೩೭	೨೯	೨೯	ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆ	ಚಿಕ್ಕನಾಟಕ, ವಾರಕ್ಕೊಂದು ಸಭೆ	ವಿತರಿಸಿದ್ದಾರೆ	ವಿತರಿಸಿ ದ್ದಾರೆ	ಜಾರಿ ಯಲ್ಲಿ ದೆ	ಪ್ರಗ ತಿಯಲ್ಲಿದೆ
೨೨-೧೦-೨೦೦೫	೨೫	೧೯	೧೯	೧೯	೨೦	೨೦	೨೦	೨೦	೧೭	೧೭	೧೯	೧೯	ಚರ್ಚಾಕೂಟ, ಪರಿಹಾರ ಬೋಧನೆ	ಪ್ರತಿಭಾಕಾರಂಜಿ	ವಿತರಿಸಿದ್ದಾರೆ	ಪೂರೈಕೆ ಯಾಗಿದೆ	ನಡೆದಿ ದೆ	ಸಮಾಧಾನ ಕರ
ಕೈಗೊಂಡಿದ್ದಾರೆ	-	-	೧೫೦	೧೫೦	೨೦೦	-	೧೮೫	-	೧೫೫	೧೫೫	೧೫೭	೧೫೭	ಪರಿಹಾರ ಬೋಧನೆ	ಜಾನಪದ, ನಾಡಭಕ್ತಿ ಗೀತೆ	ವಿತರಿಸಿದ್ದಾರೆ	ಪೂರೈಕೆ ಯಾಗಿದೆ	ನಡೆದಿ ದೆ	ಸಮಾಧಾನ ಕರ

ಮುಂದುವರೆದ ಭಾಗ

ಗಡಿನಾಡ ಕನ್ನಡ ಶಾಲೆಗಳ ಭೌತಿಕ ಸೌಲಭ್ಯಗಳ ಕುರಿತು ವಿವರ ತಾಲೂಕ: ಅಥಣಿ

೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬	೧೭	೧೮	೧೯	೨೦	೨೧	೨೨	೨೩	೨೪
೯	ಶಾ.ಮಾ. ಶಾಲೆ ಉಗಾರ ಬಿ.ಕೆ	-	ಕನ್ನಡ	೧೨	೬	೧೧	-	ಇದೆ	ಇಲ್ಲ	ಇದೆ	ಇದೆ	ಇದೆ	ಇದೆ	ಇದೆ	ಇದೆ	ಇದೆ	ಇದೆ	೪೪೬	೪೪೬	೪೭೧	೪೭೧	-	-
೧೦	ಸ.ಕ.ಹೆ.ಮ. ಶಾಲೆ ಶೇಡಬಾಳ	೧೯೪೩	ಕನ್ನಡ	೧೦	೭	೧೪	-	ಇದೆ	ಇಲ್ಲ	ಇದೆ	ಇದೆ	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇದೆ	೪೦೪	೪೦೪	೩೯೬	೩೯೬	೩೮೭	೩೮೭
೧೧	ಸ.ಕ.ಗ. ಮ.ಶಾಲೆ ಮಂಗಸೂಳಿ	-	ಕನ್ನಡ	೮	೭	೭	೧	೭	ಇಲ್ಲ	ಇದೆ	ಇದೆ	ಇದೆ	ಇಲ್ಲ	ಇದೆ	ಇದೆ	ಇದೆ	ಇದೆ	೩೨೮	೩೨೮	೩೧೫	೩೧೫	೩೨೪	೩೨೪
೧೨	ಸ.ಹಿ.ಪ್ರಾ.ಶಾಲ ಜಂಬಗಿ	೧೯೬೦	ಕನ್ನಡ	೬	೬	-	-	-	-	ಇಲ್ಲ	ಇದೆ	ಇದೆ	ಇದೆ	ಇಲ್ಲ	ಇದೆ	ಇದೆ	ಇದೆ	೧೮೨	೧೭೭	೧೭೭	೧೬೫	೧೮೭	೧೬೯
೧೩	ಸ.ಹಿ.ಪ್ರಾ.ಶಾಲ ಸಂಬರಗಿ	೧೯೩೮	ಕನ್ನಡ	೬	೫	೬	೧	ಇದೆ	೧	ಇಲ್ಲ	ಇಲ್ಲ	ಇದೆ	ಇದೆ	ಇದೆ	ಇದೆ	ಇದೆ	ಇದೆ	೨೧೯	೨೧೯	೨೧೦	೨೧೦	೨೨೬	೨೨೬
೧೪	ಸ.ಹಿ.ಪ್ರಾ.ಶಾಲ ಖಿಳೇಗಾಂವ	-	ಕನ್ನಡ	೭	೫	೧೦	-	ಇದೆ	ಇಲ್ಲ	ಇಲ್ಲ	ಇದೆ	ಇದೆ	ಇಲ್ಲ	ಇದೆ	ಇಲ್ಲ	ಇದೆ	ಇದೆ	೨೨೪	೨೧೬	೨೨೭	೨೨೧	೧೮೮	೧೮೬
೧೫	ಸ.ಹಿ.ಪ್ರಾ. ಶಾಲೆ ಹರಳಿಹಟ್ಟಿ	೧೯೧೮	ಕನ್ನಡ	೩	೧	೨	ಇದೆ	ಇದೆ	ಇಲ್ಲ	ಇಲ್ಲ	ಇದೆ	ಇದೆ	ಇದೆ	ಇಲ್ಲ	ಇಲ್ಲ	ಇದೆ	ಇದೆ	೪೦	೪೦	೩೯	೩೯	೩೪	೩೪

ಮುಂಬಯಿ- ಕರ್ನಾಟಕ ಗಡಿನಾಡ ಭಾಗದ ಹುಕ್ಕೇರಿ, ನಿಪ್ಪಾಣಿ, ಖಾನಾಪೂರ, ಜೋಯಿಡಾ, ಬೆಳಗಾವಿ ಗ್ರಾಮೀಣ/ ನಗರ, ಅಥಣಿ, ಇಂಡಿ, ರಾಯಬಾಗ ತಾಲೂಕುಗಳ ೧೨೬ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ. ಅಲ್ಲದೇ ಮಕ್ಕಳ ಹಾಜರಾತಿಯ ಕೊರತೆಯು ಕಂಡುಬರುತ್ತದೆ. ಆದರೆ ಮರಾಠಿ ಮತ್ತು ಉರ್ದುಮಾಧ್ಯಮದ ಸುಮಾರು ೧೦೬ ಶಾಲೆಗಳಲ್ಲಿ ದಾಖಲಾತಿ ಮತ್ತು ಹಾಜರಾತಿಯಲ್ಲಿ ಕೊರತೆ ಕಂಡು ಬಂದಿರುವುದಿಲ್ಲ. ಕಾರಣ ಈ ಶಾಲೆಗಳ ಬಗೆಗೆ ಮರಾಠಿ ಜನಾಂಗದವರ ವಿಶೇಷ ಕಾಳಜಿ ಮತ್ತು ಪ್ರಭಾವ ಇರುವುದರಿಂದ. ಆದರೆ ಕನ್ನಡ ಮಾಧ್ಯಮದ ಶಾಲೆಗಳ ಬಗ್ಗೆ ಕಾಳಜಿ ವಹಿಸಬೇಕಾದ ಸಂಸ್ಥೆಗಳಲ್ಲಿ ಕನ್ನಡಿಗರ ಪ್ರಾಭಲ್ಯವಿರದೇ ಇರುವುದು, ಗಡಿನಾಡ ಭಾಗದ ಅನೇಕ ಶಾಲಾ ಸುಧಾರಣಾ ಸಮಿತಿಗಳ ಅಧ್ಯಕ್ಷಸ್ಥಾನದಲ್ಲಿ ಬಹುತೇಕ ಕಡೆಗಳಲ್ಲಿ ಹಾಗೂ ಮಹಾನಗರ ಸಭೆಗಳಲ್ಲಿ ಮರಾಠಿ ಜನಾಂಗದ ಜನರೇ ಸದಸ್ಯರುಗಳಿದ್ದಾರೆ. ಹೀಗಾಗಿ ಪ್ರತಿಶತ೮೦ರಷ್ಟು ಸದಸ್ಯರು ಕನ್ನಡ ಮಾಧ್ಯಮದ ಶಾಲೆಗಳತ್ತ ಇಣುಕಿಯೂ ನೋಡುವುದಿಲ್ಲವೆಂಬ ಅಂಶ ಸ್ಪಷ್ಟವಾಗಿ ಕಂಡುಬರುತ್ತದೆ. ಕಳೆದ ಮೂರು ವರ್ಷಗಳಿಂದ ಅಂದರೆ ೨೦೦೨-೦೩ರಿಂದ ೨೦೦೪-೦೫ ರವರೆಗೆ ಮಕ್ಕಳ ದಾಖಲಾತಿ ಹೆಚ್ಚಿಗೆ ಕಂಡರೂ, ಹಾಜರಾತಿಯಲ್ಲಿ ಬಹಳ ಇಳಿಮುಖವಾಗಿರುವುದು ಸ್ಪಷ್ಟವಾಗಿ ಕಂಡುಬಂದಿದೆ.

ಸರಕಾರವು ಪ್ರೋತ್ಸಾಹದಾಯಕ ಕಾರ್ಯಕ್ರಮಗಳಾದ ವಿಶೇಷ ದಾಖಲಾತಿ ಆಂದೋಲನ, ಉಚಿತ ಪಠ್ಯಪುಸ್ತಕ ವಿತರಣೆ, ಉಚಿತ ಸಮವಸ್ತ್ರ ವಿತರಣೆ, ಉಚಿತ ಶಾಲಾ ಬ್ಯಾಗ್ ವಿತರಣೆ, ಕೇಂದ್ರ ಸರಕಾರದ ನೆರವಿನ ಮಧ್ಯಾಹ್ನ ಉಪಹಾರ ಯೋಜನೆಗಳನ್ನು ಹಮ್ಮಿಕೊಂಡಿದ್ದರೂ ಕೂಡ ಗಡಿಭಾಗದ ಪ್ರಾಥಮಿಕ ಹಂತದಲ್ಲಿ ಮಕ್ಕಳ ಶಾಲೆ ಪ್ರಮಾಣ ಗಣನೀಯವಾಗಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಬಿಸಿಯೂಟದಂತಹ ಕಾರ್ಯಕ್ರಮ ಜಾರಿಗೆ ಬಂದರೂ ಕೂಡ ಶಾಲಾ ದಾಖಲಾತಿ ಮತ್ತು ಹಾಜರಾತಿಯಲ್ಲಿ ಕೊರತೆ

ಕಂಡುಬಂದಿರುವುದು. ಸರಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗಡಿಭಾಗದ ಸರಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಕಡ್ಡಾಯ ಮತ್ತು ವ್ಯಾಪಕ ಶಾಲಾ ತಪಾಸಣಾ ಕಾರ್ಯಕ್ರಮ ಕೈಗೊಳ್ಳದಿರುವುದು, ಶೈಕ್ಷಣಿಕ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಜಾರಿಗೆ ತಂದು ದಾಖಲಾತಿ ಮತ್ತು ಹಾಜರಾತಿ ಪ್ರಮಾಣವನ್ನು ಹೆಚ್ಚಿಗೆ ಮಾಡುವಲ್ಲಿ ವಿಶೇಷವಾದಂತಹ ಆಸಕ್ತಿಯನ್ನು ತೋರುತ್ತಿಲ್ಲವಾದ್ದರಿಂದ ಗಡಿಭಾಗದ ಶಾಲೆಗಳಲ್ಲಿ ದಾಖಲಾತಿ ಮತ್ತು ಹಾಜರಾತಿಯ ಕೊರತೆ ಕಂಡು ಬರುತ್ತಿದೆ.

೪. ಗಡಿನಾಡ ಶಾಲೆಗಳಲ್ಲಿ ಗ್ರಂಥಾಲಯ, ಪ್ರಯೋಗಾಲಯಗಳ ಕೊರತೆ :

ಗಡಿನಾಡ ಭಾಗದ ಅನೇಕ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಗ್ರಂಥಾಲಯ ಹಾಗೂ ಪ್ರಯೋಗಾಲಯಗಳ ಕೊರತೆ ಬೃಹತ್ ಪ್ರಮಾಣದಲ್ಲಿದೆ. ಕಂಪ್ಯೂಟರ್ ಯುಗದ ಈ ದಿನಗಳಲ್ಲಿ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ವಿಜ್ಞಾನ ಬೋಧನೆಗಾಗಿ ಪ್ರಯೋಗಮಾಡಿ ತೋರಿಸಲು ಪ್ರಯೋಗಾಲಯಗಳು ಬೇಕು ಹಾಗೂ ಇದಕ್ಕೆ ಪ್ರತ್ಯೇಕ ಕೊಠಡಿಯಿರಬೇಕು. ಆದರೆ ಇವೆಲ್ಲವೂ ಗಡಿನಾಡ ಶಾಲೆಗಳ ಮಕ್ಕಳ ಪಾಲಿಗೆ ಗಗನ ಕುಸುಮಗಳೆನಿಸಿವೆ.

ಸರಕಾರವು ಗಂಭೀರವಾಗಿ ಈ ವಿಷಯ ಕುರಿತು ಆಲೋಚಿಸಿ ಅವುಗಳನ್ನೊದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಶಾಲೆಗಳಲ್ಲಿ ಗಣಿತವನ್ನು ಸರಳವಾಗಿ ಆಕರ್ಷಕವಾಗಿ ಬೋಧಿಸುವ ದೃಷ್ಟಿಯಿಂದ ಡಿ.ಪಿ. ಇ.ಪಿ. ಯ ಮೂಲಕ ಬಿ. ಆರ್.ಸಿ./ ಸಿ. ಆರ್.ಸಿ ಗಣಿತದ ಕಿಟ್‌ಗಳನ್ನು ಸರಬರಾಜು ಮಾಡಿದ್ದಾರೆ. ಈ ಯೋಜನೆಯ ಲಾಭ ಈ ಗಡಿನಾಡ ಶಾಲೆಗಳಿಗೆ ದೊರೆತಿರುವುದಿಲ್ಲ.

ಮಕ್ಕಳಲ್ಲಿ ಓದುವ ಅಭಿರುಚಿಯನ್ನು ಹುಟ್ಟಿಸಲು ಮಕ್ಕಳ ವಾಚನಾಲಯಗಳಿರುವುದು ಅವಶ್ಯ. ಬೇರೆ ಬೇರೆ ಮಕ್ಕಳ ಪತ್ರಿಕೆಗಳು, ಮಕ್ಕಳಿಗಾಗಿ ಬರೆಯಲ್ಪಟ್ಟ ಸಚಿತ್ರ, ಸರಳಭಾಷೆಯ ಪುಸ್ತಕಗಳೂ, ಓದುವಲ್ಲಿ ಶಿಕ್ಷಕರ ಮಾರ್ಗದರ್ಶನವೂ ದೊರೆತರೆ ಮಕ್ಕಳಲ್ಲಿ ಭಾವನಾಭಿರುಚಿ ಹುಟ್ಟುತ್ತದೆ, ಅವರು ಮುಂದೆ ತಾವೇ ಓದಿ ತಿಳಿದು ವಿದ್ಯಾರ್ಜನೆ ಮಾಡಲು ಸಮರ್ಥರಾಗುತ್ತಾರೆ. ಆದರೆ ಗಡಿನಾಡ ಭಾಗದ ಯಾವುದೇ ಸರಕಾರಿ/ ಅರೆಸರಕಾರಿ ಶಾಲೆಗಳಲ್ಲಿ ಗ್ರಂಥಾಲಯವಾಗಲಿ ಅಥವಾ ಪ್ರತ್ಯೇಕ ಗ್ರಂಥಾಲಯ ಕಟ್ಟಡವಾಗಲಿ ಇರುವುದಿಲ್ಲ.

೫. ಪಠ್ಯ ಪುಸ್ತಕಗಳ ಅಭಾವ :

ಮಕ್ಕಳನ್ನು ಆಕರ್ಷಿಸುವ ರಂಗುರಂಗಿನ ಚಿತ್ರಪುಸ್ತಕಗಳ ಅಭಾವ ಮತ್ತು ಶಿಕ್ಷಣ ಸಾಧನಗಳ ಅಭಾವದಿಂದ ಪಾಠವನ್ನು ಕಲಿಸುವಾಗ ವಿಧ್ಯಾರ್ಥಿಗಳಿಗೆ ಅಭಿರುಚಿಯನ್ನು ಹೆಚ್ಚಿಸಲು ಸಾಧ್ಯವಾಗುತ್ತಿಲ್ಲ. ಮಕ್ಕಳ ವಯೋಮಾನಕ್ಕೆ ತಕ್ಕಂತ ಬೇರೆ ಬೇರೆ ವಿಷಯಗಳಿಗಾಗಿ ಒಳ್ಳೆಯ

ಪಠ್ಯಪುಸ್ತಕಗಳ ಕೊರತೆ ಗಡಿನಾಡ ಶಾಲೆಗಳಲ್ಲಿ ಇದೆ. ಆದರೆ ಪಕ್ಕದ ರಾಜ್ಯವಾದ ಮಹಾರಾಷ್ಟ್ರ ಸರಕಾರವು ಮಕ್ಕಳಿಗೆ ಆಕರ್ಷಕ ಪಠ್ಯಪುಸ್ತಕಗಳನ್ನು ಒದಗಿಸುವಲ್ಲಿ ಮಾದರಿಯೆನಿಸಿದೆ. ಮಕ್ಕಳಿಗೆ ಆಕರ್ಷಕ ಪಠ್ಯ ಪುಸ್ತಕಗಳನ್ನು ಒದಗಿಸಿದರೆ ಶಿಕ್ಷಕರ ಶ್ರಮವೂ ಕಡಿಮೆಯಾಗುವುದು. ಅಲ್ಲದೇ ಗಡಿಭಾಗದಲ್ಲಿರುವ ಕನ್ನಡ ಶಾಲೆಗಳಿಗೆ ಪಠ್ಯಪುಸ್ತಕಗಳ ವಿತರಣೆ ಸರಿಯಾಗಿ ಆಗುತ್ತಿಲ್ಲ.

೬. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ಕಾರ್ಯಕ್ಕೆ ಸಂಬಂಧಿಸಿದ ಕೇಂದ್ರ ಮತ್ತು ರಾಜ್ಯ ಸರಕಾರದ ಕಾರ್ಯಕ್ರಮಗಳ ಮತ್ತು ಯೋಜನೆಗಳ ಬಗ್ಗೆ ಗಡಿನಾಡ ಶಾಲಾ ಶಿಕ್ಷಕರಿಗೆ ಹಾಗೂ ಸ್ಥಳೀಯರಿಗೆ ವಿವರವಾದ ತಿಳುವಳಿಕೆಯ ಕೊರತೆ:

ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಕಂಡುಬರುವ ಅಸಮಾನತೆ ಹಾಗೂ ಮೂಲ ಸೌಲಭ್ಯಗಳ ಕೊರತೆ ಮತ್ತು ಪ್ರಾಥಮಿಕ ಶಿಕ್ಷಣದ ಅಭಿವೃದ್ದಿಗೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿವೆ. ಇಂತಹ ಕಾರ್ಯಕ್ರಮಗಳ ಮೂಲ ಉದ್ದೇಶ ಪ್ರಾಥಮಿಕ ಶಿಕ್ಷಣ ಪರಿಸರದ ಭೌತಿಕ ಮತ್ತು ಬೌದ್ಧಿಕ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು. ಅಂದರೆ ತರಗತಿಯ ಒಳಗೆ ಉತ್ತಮ ಗುಣಮಟ್ಟದ ಬೋಧನೆಯನ್ನು ಒದಗಿಸುವುದು, ಶಾಲಾ ಪರಿಸರವನ್ನು ಉತ್ತಮ ಪಡಿಸುವುದು ಮತ್ತು ಶಾಲೆಯ ಹೊರಗಿನ ಅಂದರೆ ಗ್ರಾಮದಲ್ಲಿ ಶಿಕ್ಷಣ ಮತ್ತು ಸಾಕ್ಷರತೆ ಅಭಿವೃದ್ಧಿಗೆ ಪೂರಕವಾಗುವ ಪರಿಸರವನ್ನು ಹುಟ್ಟುಹಾಕುವುದು.

ಮೂಲ ಸೌಲಭ್ಯಗಳನ್ನು ಅಭಿವೃದ್ದಿ ಪಡಿಸಲು ರೂಪಗೊಂಡ ಕಾರ್ಯಕ್ರಮಗಳಾದ ಕೇಂದ್ರ ಪ್ರಾಯೋಜಿತ ಕಪ್ಪು ಹಲಗೆ ಯೋಜನೆ, ವಿಶ್ವಬ್ಯಾಂಕ್ ನೆರವಿನ ಕೇಂದ್ರ ಪುರಸ್ಕೃತ ಯೋಜನೆಯಾದ ಜಿಲ್ಲಾ ಪ್ರಾಥಮಿಕ ಶಿಕ್ಷಣಕಾರ್ಯಕ್ರಮ (ಡಿ.ಪಿ. ಇ.ಪಿ.) ಭಾರತ ಸರಕಾರ ಮತ್ತು ವಿಶ್ವ ಸಂಸ್ಥೆಯ ೫ ಅಂಗಸಂಸ್ಥೆಗಳ ಸಹಯೋಗದ ಸಮುದಾಯ ಆಧಾರಿತ ಪ್ರಾಥಮಿಕ ಯೋಜನೆ ಕೇಂದ್ರ ಸರಕಾರದ ನೆರವಿನ ಮಧ್ಯಾಹ್ನ ಉಪಹಾರ ಯೋಜನೆ, ಅಂಗವಿಕಲ ಮಕ್ಕಳ ಸಮನ್ವಯ ಶಿಕ್ಷಣ ಯೋಜನೆ, ಕನಿಷ್ಠ ಕಲಿಕಾ ಮಟ್ಟಗಳ ಕಾರ್ಯಕ್ರಮ ಅನುಷ್ಠಾನ ಕಡ್ಡಾಯ ಮತ್ತು ವ್ಯಾಪಕ ಶಾಲಾ ತಪಾಸಣಾ ಕಾರ್ಯಕ್ರಮ, ಸರ್ವಶಿಕ್ಷಾ ಅಭಿಯಾನ,ಶಿಕ್ಷಣ ಖಾತರಿ ಯೋಜನೆ, ಮರಳಿ ಬಾ ಶಾಲೆಗೆ, ಗುಣಾತ್ಮಕ ಶಿಕ್ಷಣದತ್ತ ಕರ್ನಾಟಕದ ಶಾಲೆಗಳು ಕಾರ್ಯಕ್ರಮ, ಸಂಪೂರ್ಣ ಸಾಕ್ಷರತಾ ಆಂದೋಲನ, ಬೌದ್ಧಿಕ ಪರಿಸರವನ್ನು ಅಭಿವೃದ್ಧಿ ಪಡಿಸುವ ಚಿಣ್ಣರ ಅಂಗಳ, ಸೇತುಬಂಧ ಶಿಕ್ಷಣಕಾರ್ಯಕ್ರಮ, ಟೆಂಟ್ ಶಾಲೆಗಳು, ಸಂಚಾರಿ ಶಾಲೆಗಳು, ಪರಿಹಾರ ಬೋಧನೆ, ಗೃಹ ಆಧಾರಿತ ಶಿಕ್ಷಣ, ವಿಶೇಷ ದಾಖಲಾತಿ ಆಂದೋಲನ, ಕಲಿ- ನಲಿ, ಕಲಿಕಾ- ಖಾತರಿ, ಶಿಕ್ಷಕರಿಗೆ

ವಿಷಯವಾರು ಪುನರ್‌ಮನನ ಶಿಬಿರಗಳು, ಚೈತನ್ಯ ಹಾಗೂ ವಿವಿಧ ತರಬೇತಿಗಳು ,ಶಾಲಾ ಪ್ರೋತ್ಸಾಹಕ ಕಾರ್ಯಕ್ರಮಗಳಾದ ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ವಿತರಣೆ, ಗ್ರಾಮೀಣ ಹೆಣ್ಣು ಮಕ್ಕಳ ಶಾಲಾ ಹಾಜರಾತಿಗೆ ಪ್ರೋತ್ಸಾಹಧನ, ಉಚಿತ ಶಾಲಾ -ಬ್ಯಾಗವಿತರಣೆ, ಮಕ್ಕಳ ಶಾಲಾ ಹಾಜರಾತಿಗೆ ಆಹಾರಧಾನ್ಯ ವಿತರಣೆ , ಶಾಲಾ ಬಿಸಿಯೂಟ ಇತ್ಯಾದಿಗಳು,ಶಿಕ್ಷಕ ತರಬೇತಿಗಾಗಿ ಡಿ.ಪಿ. ಇ.ಪಿಯವರು ಹಮ್ಮಿಕೊಂಡ ಚಿಗುರು, ಮಂಥನ, ಆಡೋಣಬಾ, ಜೆಂಡರ ತರಬೇತಿ , ಬಿ. ಆರ್.ಸಿ./ ಸಿ. ಆರ್.ಸಿ. ಸಿಬ್ಬಂದಿಯ ಅನುಭವ ಹಂಚಿಕೆ ಕಾರ್ಯಾಗಾರಗಳು, ಅಕ್ಷರ ದಾಸೋಹ ಕಾರ್ಯಕ್ರಮಗಳು ಇವೆಲ್ಲವೂ ಒಂದು ಮತ್ತೊಂದರ ಸಂಬಂಧ ಸಂಪರ್ಕವನ್ನು ಹೊಂದಿವೆ,ಅಲ್ಲದೇ ಜೊತೆಗೆ ಪೋಷಕರು- ಮಕ್ಕಳು- ಶಾಲೆ-ಶಿಕ್ಷಣ ವ್ಯವಸ್ಥೆಯ ನಡುವೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಒಂದು ಕಾರ್ಯಕ್ರಮ ಮತ್ತೊಂದು ಕಾರ್ಯಕ್ರಮದಲ್ಲಿ ಬೆರೆತುಕೊಂಡಿದೆ. ಆದರೆ ಈ ಎಲ್ಲ ಕಾರ್ಯಕ್ರಮಗಳ ಉದ್ದೇಶ ಮಾತ್ರ ಒಂದೇ. ಅದೇನೆಂದರೆ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ ೬-೧೪ ವಯೋಮಾನದ ಎಲ್ಲ ಮಕ್ಕಳು ಶಾಲೆಗೆ ಸೇರುವಂತೆ ಮತ್ತು ಕಲಿಕೆಯನ್ನು ಮುಂದುವರೆಸುವಂತೆ ನೋಡಿಕೊಳ್ಳುವುದು. ಆ ಮೂಲಕ ಶಾಲಾ ದಾಖಲಾತಿ - ಹಾಜರಾತಿಯನ್ನು ಗರಿಷ್ಠ ಮಟ್ಟದಲ್ಲಿ ಹೆಚ್ಚಿಸಿ, ಮಧ್ಯದಲ್ಲಿ ಶಾಲೆ ಬಿಡುವ ೬-೧೪ ವಯೋಮಾನದ ಮಕ್ಕಳ ಸಂಖ್ಯೆಯನ್ನು ಕನಿಷ್ಠ ಮಟ್ಟಕ್ಕೂ ಇಳಿಸುವುದು.

ಹೀಗೆ ಶೈಕ್ಷಣಿಕ ಅಭಿವೃದ್ಧಿಗಾಗಿ ಜಾರಿಗೆ ತಂದಿರುವ ಕಾರ್ಯಕ್ರಮಗಳಲ್ಲಿ ಗಡಿನಾಡ ಗ್ರಾಮದ ಸ್ಥಳೀಯರು ಹೆಚ್ಚು ಕ್ರಿಯಾಶೀಲರಾಗಿ ಭಾಗವಹಿಸುತ್ತಿಲ್ಲ ಹಾಗೂ ಇವೆಲ್ಲ ಯಶಸ್ವಿಯಾಗಬೇಕಾದರೆ ಈ ಯೋಜನೆಗಳ ಬಗ್ಗೆ ಶಿಕ್ಷಕರಿಗೆ ವಿವರವಾದ ತಿಳುವಳಿಕೆ ಅಗತ್ಯ. ಈ ಗಡಿನಾಡ ಭಾಗದ ಶಿಕ್ಷಕರಿಗೆ ಈ ಕಾರ್ಯಕ್ರಮಗಳ ಕುರಿತು ಪರಿಪೂರ್ಣ ವಿವರ ಸರಿಯಾಗಿ ತಿಳಿದಿಲ್ಲ ಹಾಗೂ ಸರಕಾರ ಮತ್ತು ಶಿಕ್ಷಣ ಇಲಾಖೆಗಳು ಕೂಡ ಕಟ್ಟುನಿಟ್ಟಿನ ಕ್ರಮಕೈಗೊಂಡಿರುವುದಿಲ್ಲ. ಅಕ್ಷರ ದಾಸೋಹ ಬಿಸಿಯೂಟದಂತಹ ಕಾರ್ಯಕ್ರಮಗಳು ಗಡಿನಾಡ ಭಾಗದ ಎಲ್ಲ ಶಾಲೆಗಳಲ್ಲಿ ಸಮರ್ಪಕವಾಗಿ ನಡೆದಿಲ್ಲ. ಕೆಲವೊಂದು ಕಡೆ ಸರಿಯಾಗಿ ನಡೆದಿದ್ದು, ಕೆಲವುಕಡೆ ಪ್ರಗತಿಯಲ್ಲಿದೆ, ಕೆಲವೊಂದು ಕಡೆ ಈಗ ಮುಂದುವರೆದಿದೆ, ಕೆಲವುಶಾಲೆಗಳಲ್ಲಿ ಈಗ ಜಾರಿಯಲ್ಲಿದೆ ಎಂಬ ವಿವರವಾದ ಅಂಶ ನಾವು ಕ್ಷೇತ್ರ ಕಾರ್ಯ ನಡೆಸಿದಾಗ ಕಂಡು ಬಂದಿದೆ. ಹೀಗಾಗಿ ಗಡಿನಾಡ ಶಾಲೆಗಳ ಶಿಕ್ಷಣವ್ಯವಸ್ಥೆ ಮತ್ತು ಸಮಾಜದ ನಡುವೆ ಅನೇಕ ಅಂತರಗಳು ಕಂಡುಬಂದಿವೆ. ಈ ಅಂತರವನ್ನು ಕಡಿಮೆಮಾಡದ ಹೊರತು ಶೈಕ್ಷಣಿಕ ಅಭಿವೃದ್ಧಿ ಸಾಧ್ಯವಿಲ್ಲ. ಶೈಕ್ಷಣಿಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸ್ಥಳೀಯ ಸಮುದಾಯ ಭಾಗವಹಿಸುವುದರ ಬಗ್ಗೆ ಬಹಳ ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವನ್ನು ಶಿಕ್ಷಣ ತಜ್ಞರು, ಶಿಕ್ಷಣದ ನೀತಿ- ನಿಯಮ ಶೈಕ್ಷಣಿಕ ಅಧ್ಯಯನಗಳ ಮತ್ತು ಶಿಕ್ಷಣ ಆಯೋಗಗಳ ಸಾಹಿತ್ಯದಲ್ಲಿ ಒತ್ತಿ ಹೇಳಲಾಗಿದೆ.



ಬೆಳಗಾವಿ ಗಣಪತ ಗಲ್ಲಿಯ ಮರಾಠಿ ಮಾಧ್ಯಮ ಶಾಲೆಯ ಹೆಸರು
ಕೇವಲ ಮರಾಠಿಯಲ್ಲಿರುವುದು



ನಾಡು- ನುಡಿ ಗಂಧಗಾಳಿ ಇಲ್ಲದ ಬೆಳಗಾವಿಯ ಶಹಾಪೂರದಲ್ಲಿನ ಮರಾಠಿ ಶಾಲೆ



ಖಾನಾಪೂರ ತಾಲೂಕಿನ ನಿಲಾವಡೆಗೆ ಮಂಜೂರಾಗಿದ್ದ ಕನ್ನಡ ಶಾಲೆ,
ಸರಕಾರಿ ಮರಾಠಿ ಮಾಧ್ಯಮಿಕ ವಿದ್ಯಾಲಯವಾಗಿ ಪರಿವರ್ತಿತವಾಗಿದೆ.



ಬೆಳಗಾವಿ ಮಾರುತಿಗಲ್ಲಿಯಲ್ಲಿರುವ ಮರಾಠಿ ಮಾಧ್ಯಮ ಶಾಲೆಗೆ ಆದ್ಯತೆ ನೀಡಿ
ರಾಜ್ಯ ಭಾಷೆ ಕನ್ನಡವನ್ನು ನಿರ್ಲಕ್ಷಿಸಿರುವುದು.

೭) ಶಾಲೆಗಳ ತಪಾಸಣೆ, ಮೇಲ್ವಿಚಾರಣೆಯಲ್ಲಿ ನಿರೀಕ್ಷಿತ ಮಟ್ಟದ ಪ್ರಗತಿಯಾಗಿಲ್ಲ:

ಮುಂಬಯಿ- ಕರ್ನಾಟಕದ ಗಡಿನಾಡ ಶಾಲೆಗಳ ತಪಾಸಣೆ ಮತ್ತು ಮೇಲ್ವಿಚಾರಣೆಯು ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ ಎಂದು ನಾವು ಕ್ಷೇತ್ರಕಾರ್ಯ ಅಧ್ಯಯನ ಕೈಗೊಂಡ ಸಮಯದಲ್ಲಿ ತಿಳಿದುಬಂದಿತು. ಉದಾ :ಖಾನಾಪೂರ ತಾಲೂಕಿನ ಎಂ. ಎಚ್.ಪಿ. ಎಸ್. ಚೋರ್ಲಾ ಶಾಲೆ, ಎಂ. ಎಲ್.ಪಿ. ಎಸ್ ಸಡಾ, ಎಂ. ಎಚ್.ಪಿ. ಎಸ್. ತಳಾವಡೆ, ಎಂ. ಎಚ್. ಪಿ. ಎಸ್. ಗೋಲ್ಯಾಳಿ, ಮತ್ತು ಹುಕ್ಕೇರಿ ತಾಲೂಕಿನ ಮರಾಠಿ ಮಾಧ್ಯಮದ ಸ.ಹಿ.ಪ್ರಾ.ಶಾಲೆ ತುರಮುರಿ ಮತ್ತು ಯಳೆಬೈಲ , ಬೋಡಕೇನಹಟ್ಟಿ ,ಚಲವಿನಹಟ್ಟಿ, ಅತಿವಾಡ ಗ್ರಾಮದ ಶಾಲೆಗಳು ಹುಕ್ಕೇರಿ ತಾಲೂಕಿನ ತುರಮುರಿ, ಕರಿಹಾಳ, ಹಂದಿಗನೂರು, ಕಲ್ಲೆಹೋಳ, ಬೆಕ್ಕಿನಕೇರಿ ಬೋಡಕೇನಹಟ್ಟಿ ಗ್ರಾಮದ ಕನ್ನಡ ಶಾಲೆಗಳಲ್ಲಿ ಸುಮಾರು ವರ್ಷಗಳಿಂದ ತಪಾಸಣೆ ಆಗಿರುವುದಿಲ್ಲ. ಖಾನಾಪೂರ ತಾಲೂಕಿನ ಕೆಳಲಿ, ಅಮಗಾಂವ, ಕೃಷ್ಣಾಪುರ ಗ್ರಾಮದ ಮರಾಠಿ ಮಾಧ್ಯಮದ ಮೂರು ಶಾಲೆಗಳು .ಅಥಣಿ ತಾಲೂಕಿನ ಉರ್ದು ಮಾಧ್ಯಮದ ಮಂಗಸೂಳಿ ಗ್ರಾಮದ ಒಂದು ಶಾಲೆ. ಹುಕ್ಕೇರಿ ತಾಲೂಕು ಗೊಜಗಿ ಗ್ರಾಮದ ಕನ್ನಡ ಶಾಲೆ. ಅಥಣಿ ತಾಲೂಕಿನ ಕನ್ನಡ ಮಾಧ್ಯಮದ ತೋಟ, ಬೆಳಗಾಂವ , ಜಂಬಗಿ ಗ್ರಾಮದ ಶಾಲೆಗಳು, ಇಂಡಿ ತಾಲೂಕಿನ ಗುಬ್ಬೆವಾಡ ಗ್ರಾಮದ ಕನ್ನಡ ಶಾಲೆಗಳ ಹಾಗೂ ಚಿಕ್ಕೋಡಿ ನಿಪ್ಪಾಣಿ ವಲಯದ ಕನ್ನಡ ಮಾಧ್ಯಮದ ರಾಮಾಪುರ, ಶಿರಗುಪ್ಪ , ಯರನಾಳ, ಅಪ್ಪಾಚಿವಾಡ, ಯಮಗರಣಿ, ಮತ್ತಿನಾಡ, ಗಜಬರವಾಡಿ, ಸುಳಿಗಾಂವ ಗ್ರಾಮದ ಶಾಲೆಗಳ ತಪಾಸಣೆ ಮಾಡಿದ ಮಾಹಿತಿಯೇ ಇರುವುದಿಲ್ಲ. ಜೋಯಿಡಾ ತಾಲೂಕಿನ ೨೧ ಶಾಲೆಗಳಿಗೆ ತಪಾಸಣೆ ಆಗಿರುವುದಿಲ್ಲ.

ಕರ್ನಾಟಕ ಏಕೀಕರಣಗೊಂಡು ''ಸುವರ್ಣ ಸಂಭ್ರಮ ''ವನ್ನು ಆಚರಿಸುತ್ತಿದ್ದೇವೆ. ಆದರೆ ನಿಪ್ಪಾಣಿಯ ಶಿವಾಜಿನಗರದ ಕನ್ನಡ ಶಾಲೆ, ಬೆಳಗಾವಿ ನಗರದ ಕುಲಕರ್ಣಿ ಬೀದಿಯ ಬಾಡಿಗೆ ಕಟ್ಟಡದಲ್ಲಿರುವ ಕನ್ನಡ ಶಾಲೆ, ಬೆಳಗಾವಿ ಶಹರದ ಸರದಾರ ಹೈಸ್ಕೂಲ್, ಬೆಳಗಾವಿಯ ಶಹಪೂರ ಹೊಸೂರಿನ ಕನ್ನಡ ಮಾಧ್ಯಮದ ಶಾಲೆಗಳ ದುಸ್ಥಿತಿಯನ್ನು ನೋಡಿದ ಮೇಲೆ, ನಾವು ಕರ್ನಾಟಕದವರು ನಿನ್ನೆ ಮೊನ್ನೆ ಏಕೀಕರಣ ಹೊಂದಿದ್ದೇವೆ ಎಂಬ ಭಾವನೆ ವ್ಯಕ್ತವಾಗುತ್ತದೆ. ಏಕೆಂದರೆ ಗಡಿಭಾಗದ ಎಷ್ಟೋ ಶಾಲೆಗಳಿಗೆ ಮರಾಠಿ ಭಾಷೆಯಲ್ಲಿಯೇ ನಾಮಫಲಕ, ಕನ್ನಡ ಶಾಲೆಗಳಲ್ಲಿ ಮರಾಠಿ ಮಾಧ್ಯಮದಲ್ಲಿ ಬೋಧನೆ ಮಾಡುವುದು, ಕರ್ನಾಟಕ ಸರಕಾರ ಮತ್ತು ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿಗಳು, ಶಾಲಾ ತಪಾಸಣಾಧಿಕಾರಿಗಳು ಮೇಲಿಂದ ಮೇಲೆ ತಪಾಸಣೆ ಕೈಗೊಂಡು, ಅಲ್ಲಿಯ ಸಮಸ್ಯೆಗಳನ್ನು ಮೇಲಿಂದ ಮೇಲೆ ಉನ್ನತ ಅಧಿಕಾರಿಗಳ ಗಮನಕ್ಕೆ ತಂದು, ಪರಿಹಾರೋಪಾಯಗಳನ್ನು ಕೈಗೊಳ್ಳವಲ್ಲಿ ವಿಫಲರಾಗಿದ್ದಾರೆ. ಹೀಗಾಗಿ ತನಿಖೆ ಸಕಾಲದಲ್ಲಿ



ಬೆಳಗಾವಿ ಸರದಾರ್ಸ್ ಹೈಸ್ಕೂಲ್‌ಗೆ ಜಿಲ್ಲಾಧಿಕಾರಿ ಶಾಲಿನಿ ರಜನೀಶ ಭೇಟಿ ನೀಡಿ ಪರಿಶೀಲಿಸುತ್ತಿರುವುದು



ಬೆಳಗಾವಿ ನಗರದಲ್ಲಿನ ಆಕಾಶ ಕಾಣುತ್ತಿರುವ ಕುಲಕರ್ಣಿ ಬೀದಿಯ ಕನ್ನಡ ಶಾಲೆ ನಂ. ೨ ಮೇಲ್ಛಾವಣಿ

ಆಗದೇ ಶಾಲೆಗಳು ತೃಪ್ತಿಕರವಾಗಿ ಸಾಗುತ್ತಿಲ್ಲ. ಸರಕಾರವು ಜಾರಿಗೆ ತಂದಂತಹ ಕಾರ್ಯಕ್ರಮಗಳು, ಯೋಜನೆಗಳು ಜಾರಿಗೆ ಬಾರದೇ ಗಡಿನಾಡ ಕನ್ನಡಿಗರ ಶಾಲೆಗಳು ದುಸ್ಥಿತಿಯಲ್ಲಿವೆ.

೮. ಗಡಿನಾಡ ಭಾಗದಲ್ಲಿಯ ಅನೇಕ ಕನ್ನಡ ಶಾಲೆಗಳು ಮುಚ್ಚಲ್ಪಟ್ಟಿವೆ:

ಮುಂಬಯಿ- ಕರ್ನಾಟಕದ ಗಡಿನಾಡ ಭಾಗದ ಚಿಕ್ಕೋಡಿ /ನಿಪ್ಪಾಣಿ ವಲಯದಲ್ಲಿರುವ ಯರನಾಳ ಗ್ರಾಮದ ಎರಡು ಕನ್ನಡ ಮಾಧ್ಯಮದ ಶಾಲೆಗಳು ಅಪ್ಪಾಚಿವಾಡಿ, ಹದನಾಳ, ಸುಳಗಾಂವ, ಗಜಬರವಾಡಿ, ಮತ್ತಿವಾಡೆ ಗ್ರಾಮದ ಕನ್ನಡ ಶಾಲೆಗಳು ಕಳೆದ ಸುಮಾರು ೨೦೦೨-೦೩ ರಿಂದ ಮೂರು ವರ್ಷಗಳಿಂದ ಬಂದ್ ಆಗಿರುತ್ತವೆ. ಈ ಶಾಲೆಗಳು ಬಂದ್ ಆಗಲು ಕಾರಣಗಳಾದರು ಎನು? ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಇದಕ್ಕೆ ಕಾರಣ ಮರಾಠಿ ಭಾಷೆ, ಮಾಧ್ಯಮ ಅಧಿಕಾರಿ ವರ್ಗದವರ ಪ್ರಭಾವ, ಮರಾಠಿಗರ ಆಕ್ರಮಕಾರಕ ಸ್ವಭಾವವೇ ಈ ಕನ್ನಡ ಶಾಲೆಗಳು ಮುಚ್ಚಲು ಕಾರಣವಾಗಿವೆ. ಕನ್ನಡ ಶಾಲೆಗಳ ಸಂಬಂಧದಲ್ಲಿ ರಾಜ್ಯ ಸರಕಾರ ಗಡಿಭಾಗದ ಶಾಲೆಗಳ ಮೇಲೆ ಉಗ್ರ ಕ್ರಮಕೈಗೊಂಡರೆ ಕನ್ನಡ ಶಾಲೆಗಳು ಉಳಿಯುತ್ತವೆ. ಇಲ್ಲವಾದರೆ ಕ್ರಮೇಣ ಗಡಿನಾಡಿನಲ್ಲಿ ಇರುವಂತಹ ಕನ್ನಡ ಶಾಲೆಗಳು ಒಂದೊಂದಾಗಿ ಮರೆಯಾಗುವುದರಲ್ಲಿ ಸಂಶಯವಿಲ್ಲ.

೯. ಜಿಲ್ಲಾ ಕೇಂದ್ರ/ ಸರಕಾರದ ವಿಭಾಗೀಯ ವಲಯವಾದ ಬೆಳಗಾವಿಯಲ್ಲೇ ಅನೇಕ ಶಾಲೆಗಳು ದುಸ್ಥಿತಿಯಲ್ಲಿವೆ:

ಮುಂಬಯಿ - ಕರ್ನಾಟಕದ ಗಡಿನಾಡಿನ ಹೃದಯಭಾಗವಾದ ಬೆಳಗಾವಿ ನಗರ ಹಾಗೂ ಉಪನಗರಗಳಾದ ಖಾಸಬಾಗ, ವಡಗಾಂವ, ಶಹಾಪೂರ ಮತ್ತಿತರ ಪ್ರದೇಶಗಳಲ್ಲಿನ ಅನೇಕ ಕನ್ನಡ ಶಾಲೆಗಳು ಬಹಳ ದುಸ್ಥಿತಿಯಲ್ಲಿವೆ. ಬಹಳಷ್ಟು ಕನ್ನಡ ಶಾಲೆಗಳು ೧೯೬೦ರ ದಶಕದಲ್ಲಿ ಕಟ್ಟಲ್ಪಟ್ಟಿವೆ. ಈ ಶಾಲೆಗಳನ್ನು ಕಟ್ಟಿದ ನಂತರ ಅವುಗಳ ಸಂರಕ್ಷಣೆಯತ್ತ ಕಿಂಚಿತ್ತು ಗಮನ ಹರಿಸಿಲ್ಲ. ಬೃಹತ್ ಕಟ್ಟಡಗಳಾಗಿರುವ ಈ ಶಾಲೆಗಳಿಗೆ ಪ್ರತಿವರ್ಷ ಸುಣ್ಣ- ಬಣ್ಣ ಬಳೆಯುವುದಕ್ಕೂ, ಕಟ್ಟಡದ ದುರಸ್ಥಿಗೂ ಸಾಧ್ಯವಾಗಿಲ್ಲ. ಪ್ರಾಥಮಿಕ ಶಾಲೆಗಳು ಸರಕಾರದ ಎಲ್ಲ ಯೋಜನೆಗಳಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿವೆ ಹಾಗೂ ಸರಕಾರದಲ್ಲಿರುವವರ ದೃಷ್ಟಿಯಲ್ಲಿ ಅತ್ಯಂತ ನಿಕೃಷ್ಟವಾಗಿ ಕಾಣಲ್ಪಡುತ್ತಿದೆ ಎಂದರೆ ಅತಿಶಯೋಕ್ತಿಯೆನಿಸಲಾರದು.

ಜಿಲ್ಲಾ ಕೇಂದ್ರವಾದ ಹಾಗೂ ವಿಭಾಗೀಯ ಕೇಂದ್ರವಾದ ಬೆಳಗಾವಿಯಲ್ಲಿ ಸರಕಾರಿ ಕನ್ನಡ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವವರೆ ದುರ್ಬಲ ವರ್ಗದವರು ,ಬಡವರು, ಕಾರ್ಮಿಕರು ಈ ಜನರು ಕನ್ನಡ ಶಾಲೆಗಳ ಸುಧಾರಣೆಗೆ ಹಣಕಾಸು ನೆರವು ನೀಡುವ ಸ್ಥಿತಿಯಲ್ಲಿರುವುದಿಲ್ಲ.



೮೦ ವರ್ಷ ಹಳೆಯ ಬೆಳಗಾವಿ ಕುಲಕರ್ಣಿ ಬೀದಿಯ ಶಾಲೆ



ಬೆಳಗಾವಿ ನಗರದಲ್ಲಿರುವ ಕುಲಕರ್ಣಿ ಬೀದಿಯ ಕನ್ನಡ ಶಾಲೆ ನಂ. ೨ದ
ಓಬೀರಾಯನ ಕಾಲದ ಶಾಲಾ ಕಟ್ಟಡದ ಒಳಭಾಗ

ಸುಸ್ಥಿತಿಯಲ್ಲಿರುವವರು ತಮ್ಮ ಮಕ್ಕಳನ್ನು ಇಂಗ್ಲೀಷ ಮಾಧ್ಯಮ ಶಾಲೆಗಳಿಗೆ ಕಳುಹಿಸುವುದರಿಂದ ಕನ್ನಡ ಶಾಲೆಗಳ ನೆರವಿಗೆ ಮುಂದೆ ಬರುವ ಪ್ರಶ್ನೆಯೇ ಇಲ್ಲ. ಹೀಗಾಗಿ ಬೆಳಗಾವಿ ಕನ್ನಡ ಶಾಲೆಗಳ ಸ್ಥಿತಿ ಸುಧಾರಿಸುವ ಬದಲು ಅಧೋಗತಿಗೆ ಇಳಿಯುತ್ತ ನಡೆದಿದೆ. ಸುಸ್ಥಿತಿಯಲ್ಲಿರುವ ಕನ್ನಡಾಭಿಮಾನ ಪಾಲಕರು ತಮ್ಮ ಮಕ್ಕಳನ್ನು ಖಾಸಗಿ ಸಂಸ್ಥೆಗಳ ಕನ್ನಡ ಕಾನ್ವೆಂಟ್ ಶಾಲೆಗಳಿಗೆ ಕಳುಹಿಸುತ್ತಾರೆ.

ಬೆಳಗಾವಿ ನಗರದ ಬಹಳಷ್ಟು ಸರಕಾರಿ ಕನ್ನಡ ಪ್ರಾಥಮಿಕ ಶಾಲೆಗಳು ಬಾಡಿಗೆ ಕಟ್ಟಡದಲ್ಲಿವೆ. ೩-೪ ದಶಕಗಳಿಂದ ಬಾಡಿಗೆ ಕಟ್ಟಡದಲ್ಲಿರುವ ಈ ಶಾಲೆಗಳಿಗೆ ಸರಕಾರ ನೀಡುವ ಬಾಡಿಗೆ ಅತ್ಯಂತ ಕಡಿಮೆ. ಈ ದುರಸ್ಥಿಗೆ ಕಟ್ಟಡದ ಮಾಲಿಕರು ಕೈಹಾಕುವುದಿಲ್ಲ. ದುರಸ್ಥಿ ಮಾಡಿಸಲು ಶಿಕ್ಷಣಾಧಿಕಾರಿಗಳ ಬಳಿ ಸಾಕಷ್ಟು ಹಣವಿರುವುದಿಲ್ಲ. ಹೀಗಾಗಿ ಬೆಳಗಾವಿ ನಗರದ ಬಹುತೇಕ ಕನ್ನಡ ಶಾಲೆಗಳು ''ಸೋರುವ ಶಾಲೆಗಳು'' ಎಂದು ಕರೆಯಲ್ಪಡುತ್ತವೆ.

ಬೆಳಗಾವಿಯನಗರದ ಹೃದಯಭಾಗದಲ್ಲಿರುವ ರವಿವಾರ ಪೇಟೆಗೆ ಹೊಂದಿಕೊಂಡಿರುವ ಮಾಳೀ ಬೀದಿಯಲ್ಲಿರುವ ೧೧ನೇ ಸಂಖ್ಯೆಯ ಗಂಡುಮಕ್ಕಳ ಶಾಲೆ, ಫುಲಬಾಗ ಬೀದಿಯ ಕನ್ನಡ ಹೆಣ್ಣು ಮಕ್ಕಳ ೭ನೇ ನಂಬರಿನ ಶಾಲೆ, ಕೇಂದ್ರಿಯ ಬಸ್ ನಿಲ್ದಾಣದ ಸಮೀಪವೇ ಇರುವ ಶೆಟ್ಟಬೀದಿಯ ಕನ್ನಡ ಶಾಲೆ, ಖಾಸಬಾಗದ ಕನ್ನಡ ಗಂಡುಮಕ್ಕಳ ೩ನೇ ನಂಬರಿನ ಶಾಲೆ , ವಡಗಾವಿಯ ಜಿಲ್ಲಾ ಆರೋಗ್ಯ ಕಾರ್ಯಾಲಯದ ಎದುರಿಗೆ ಇರುವ ಕನ್ನಡ ಗಂಡು ಮಕ್ಕಳ ಶಾಲೆ ಸಂಖ್ಯೆ ೧೪, ಶಹಾಪೂರ ಹೊಸೂರಿನ ಕನ್ನಡ ಗಂಡುಮಕ್ಕಳ ಶಾಲೆ ಸಂಖ್ಯೆ೩ , ಭೋವಿಗಲ್ಲಿಯ ಕನ್ನಡ ಗಂಡುಮಕ್ಕಳ ಶಾಲೆ ಸಂಖ್ಯೆ ೧೦, ಬೆಳಗಾವಿ ಮಧ್ಯಭಾಗದಲ್ಲಿರುವ ಕನ್ನಡ ಗಂಡು ಹಾಗೂ ಹೆಣ್ಣು ಮಕ್ಕಳ ಶಾಲೆ ಸಂಖ್ಯೆ ೧, ಶಾಸ್ತ್ರೀನಗರ, ಚೆನ್ನಮ್ಮನಗರ , ಅಜಮ್‌ನಗರ, ಶಾಹೂನಗರ , ಭಾಗ್ಯನಗರ ,ಚಿದಂಬರನಗರ, ಜೇಡಗಲ್ಲಿಶಹಾಪೂರ , ಹಿಂದವಾಡಿ ಗೋಮಟೇಶನಗರ , ಗಾಂಧೀನಗರ, ಕುಲಕರ್ಣಿಬೀದಿ, ಮಾರುತಿಗಲ್ಲಿ ತಹಸೀಲ್ದಾರ ಗಲ್ಲಿಯ ಅನೇಕ ಕನ್ನಡ ಶಾಲೆಗಳ ಸ್ಥಿತಿ- ಗತಿಯು ತುಂಬಾ ಶೋಚನೀಯ ಸ್ಥಿತಿಯಲ್ಲಿವೆ. ಸ್ವಂತ ಕಟ್ಟಡಗಳಿಲ್ಲ. ಭೌತಿಕ-ಶೈಕ್ಷಣಿಕ ಸೌಲಭ್ಯಗಳಿಲ್ಲ, ಬಾಡಿಗೆ ಕಟ್ಟಡಗಳಲ್ಲೇ ನಡೆಯುತ್ತಿವೆ. ಇವುಗಳಿಗೆ ಸರಕಾರವು ಸ್ವಂತ ಕಟ್ಟಡ ಒದಗಿಸುವ ಯಾವುದೇ ಪ್ರಯತ್ನಗಳು ನಡೆದಿಲ್ಲ.

ಬೆಳಗಾವಿ ಗ್ರಾಮೀಣ ಪ್ರದೇಶಗಳಾದ ಕಂಗ್ರಾಳಿ ಖುರ್ದ್, ನಿಲಜಗಿ,ಬೆಕ್ಕಿನಕೇರಿ, ಗೌಂಡವಾಡ, ಅಂಬೇವಾಡಿ, ಕಲ್ಲೇಹೋಳ, ಹಂಗರಗಿ, ಸಾವಗಾವಿ ,ಕಿಣಯೆ, ತುರಮುರಿ, ಸೊನೋಲಿ, ರಕ್ಕಸಕೊಪ್ಪ, ಬೆಳವಟ್ಟಿ, ಬೆನಕನಹಳ್ಳಿ ಹಾಗೂ ಕರ್ಲೆ ಗ್ರಾಮಗಳಲ್ಲಿ ಇತ್ತೀಚಿಗೆ ಕನ್ನಡ ಶಾಲೆಗಳನ್ನು ಆರಂಭಿಸಿದ್ದಾರೆ. ಈ ಮೇಲಿನ ಗ್ರಾಮಗಳ ಹೊರತಾಗಿಯು ಇನ್ನೂ ಇತರ ೧೪

ಗ್ರಾಮಗಳ ಕನ್ನಡ ಶಾಲೆಗಳಲ್ಲಿ ಒಟ್ಟಾರೆ ಬೆಳಗಾವಿ ತಾಲೂಕಿನ ೨೮ ಗ್ರಾಮಗಳಲ್ಲಿ ಇನ್ನೂ ಕನ್ನಡ ಶಾಲೆಗಳಿಲ್ಲ. ಕಾರಣ ಬೆಳಗಾವಿ ಗ್ರಾಮೀಣ ಪ್ರದೇಶಗಳಲ್ಲಿ ಮರಾಠಿಗರ ಪ್ರಾಬಲ್ಯವಿರುವ ಗ್ರಾಮಗಳಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸುವುದೇ ಒಂದು ಸಮಸ್ಯೆ .ಈ ಶಾಲೆಗಳಲ್ಲಿ ಸೇವೆ ಸಲ್ಲಿಸುವ ಶಿಕ್ಷಕರು ,ಕಲಿಯುವ ಮಕ್ಕಳು ಮರಾಠಿಗರಿಂದ ಎದುರಿಸುವ ಕಿರುಕುಳ, ಮಾನಸಿಕ ಹಿಂಸೆ ಹೇಳತೀರದು. ಗಡಿಭಾಗದಿಂದ ಆಯ್ಕೆಯಾಗುವ ಎಂ. ಇ. ಎಸ್. ಶಾಸಕರು ಕನ್ನಡ ಶಾಲೆಗಳನ್ನು ಆರಂಭಿಸದಂತೆ, ಹೊಸ ಕಟ್ಟಡಗಳನ್ನು ಕಟ್ಟಿಸದಂತೆ ಅಧಿಕಾರಿ ವರ್ಗದವರ ಮೇಲೆ ಸತತವಾಗಿ ಪ್ರಭಾವ ಬೀರುತ್ತಲೇ ಬಂದಿದ್ದಾರೆ. ಇದರಿಂದಾಗಿಯೇ ಕನ್ನಡ ಶಾಲೆಗಳು ದುಸ್ಥಿತಿಯಲ್ಲಿವೆ. ಕೆಲ ಅಧಿಕಾರಿಗಳೂ ಸಹ ಮರಾಠಿ ಪ್ರಭಾವಿ ವ್ಯಕ್ತಿಗಳ ಒತ್ತಡಕ್ಕೆ ಸಿಲುಕಿ, ಸಹಜವಾಗಿ ಆಗುವ ಕನ್ನಡ ಶಾಲೆಗಳ ಕೆಲಸಗಳಿಗೆ ಯಾವುದೊ ಶಕ್ತಿಗಳ ಒತ್ತಡಕ್ಕೆ ಒಳಗಾಗಿ, ಕನ್ನಡಕ್ಕೆ ಸಂಬಂಧಿಸಿದ ಕೆಲಸಗಳನ್ನು ಮುನ್ನುಗ್ಗಿ ಮಾಡಲು ಹಿಂದೇಟು ಹಾಕುವುದು ಆಗಾಗ ಬೆಳಕಿಗೆ ಬರುತ್ತಲೇ ಇರುತ್ತದೆ.

೧೦. ಗಡಿನಾಡ ಪ್ರದೇಶದ ಕೆಲವು ಮರಾಠಿ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಮತ್ತೆ ಕೆಲವು ಕನ್ನಡ ಶಾಲೆಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಶಿಕ್ಷಕರಿರುವುದು ಕಂಡು ಬಂದಿದೆ:

ಮುಂಬಯಿ- ಕರ್ನಾಟಕದ ಗಡಿನಾಡ ಭಾಗದ ಕೆಲವು ಮರಾಠಿ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಇದು ನಿಜವಾಗಿದೆ. ಏಕೆಂದರೆ ನಾವು ಕ್ಷೇತ್ರ ಅಧ್ಯಯನ ಕೈಗೊಂಡಾಗ ಅನೇಕ ಶಾಲೆಗಳಲ್ಲಿ ಕನ್ನಡ ಶಿಕ್ಷಕರು ನಿಯೋಜನೆ ಮೇರೆಗೆ ಬೇರೆ ಪ್ರದೇಶಕ್ಕೂ ಅಥವಾ ರಜೆಯ ಮೇಲೆ ಎಲ್ಲೋ ಹೋಗಿರುವ ಅಂಶ ತಿಳಿದು ಬಂದಿತು. ಉದಾಹರಣೆಗಾಗಿ ಖಾನಾಪೂರ ತಾಲೂಕಿನ ಎಂ. ಎಚ್.ಪಿ. ಎಸ್. ಗೋಲ್ಯಾಳಿ ಎಂ.ಎಲ್.ಪಿ. ಎಸ್. ಮೆಂಡಿಲ ಶಾಲೆಗಳು, ಅಥಣಿ ತಾಲೂಕಿನ ಕೆ. ಎಚ್.ಪಿ . ಎಸ್. ಅನಂತಪೂರ,ಸ.ಕಿ. ಪ್ರಾಥಮಿಕ ಶಾಲೆ ಬಸವನಗರ, ಬೆಳಗಾವಿನಗರದ ಶಹಾಪೂರ ಹೊಸೂರಿನ ಕನ್ನಡ ಗಂಡು ಮಕ್ಕಳ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು ಕಂಡುಬಂದಿತು. ಇದು ಸರಕಾರಕ್ಕೆ ಗೊತ್ತಿದ್ದರೂ ಸಹ ಏನೂ ಪ್ರಯೋಜನವಾಗಿಲ್ಲ.

ಕೆಲವು ಕನ್ನಡ ಶಾಲೆಗಳಲ್ಲಿ ಅಗತ್ಯಗಿಂತ ಹೆಚ್ಚಾಗಿ ಶಿಕ್ಷಕರಿರುವುದು ಸಹ ಕಂಡುಬಂದಿದೆ. ನಮ್ಮ ಅಧ್ಯಯನಕ್ಕೆ ಒಳಪಡಿಸಿದ ಶಾಲೆಗಳಲ್ಲಿ ಇರುವ ಶಿಕ್ಷಕ-ಮಕ್ಕಳ ಪರಿಮಾಣವನ್ನು ಕುರಿತು ವಿವರಿಸಿದ್ದೇವೆ. ಶಾಲೆಗೆ ಮಕ್ಕಳ ದಾಖಲಾತಿ ಪ್ರಮಾಣ ಮತ್ತು ನಿರ್ದಿಷ್ಟ ಪ್ರಾಥಮಿಕ ಶಾಲೆಗೆ ನೇಮಕಗೊಂಡಿರುವ ಶಿಕ್ಷಕರ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಆದರೆ ಗಡಿನಾಡ ಭಾಗದ ಚಿಕ್ಕೋಡಿ : ನಿಪ್ಪಾಣಿ ತಾಲೂಕಿನ ಬೋರಗಾಂವದ ಎರಡು ಕನ್ನಡ ಶಾಲೆಗಳಲ್ಲಿ, ಶಾಂತಿಸಾಗರ

ಪ್ರೌಢಶಾಲೆ, ಮಾಂಜರಿ ಹುಕ್ಕೇರಿ ತಾಲೂಕಿನ ತುರಮುರಿಯ ಹಿರಿಯ ಪ್ರಾಥಮಿಕ ಶಾಲೆ, ಇಂಡಿ ತಾಲೂಕಿನ ಹಾಲಹಳ್ಳಿ, ಉಮರಜ, ಶಿರಾಡೋಣ, ದೇವರ ನಿಂಬರಗಿ, ಅಗರಖೇಡ ಗ್ರಾಮಗಳಲ್ಲಿರುವ ಕನ್ನಡ ಮಾಧ್ಯಮಶಾಲೆಗಳಲ್ಲಿ ಮಕ್ಕಳ ಪರಿಮಾಣಕ್ಕಿಂತ ಹೆಚ್ಚು ಶಿಕ್ಷಕರಿರುವುದು ಕಂಡು ಬಂದಿತು. ಇದಕ್ಕೆ ಕಾರಣ ಸರಕಾರವು ಹೊಸದಾಗಿ ಮಂಜೂರಾದ ಹೆಚ್ಚುವರಿ ಶಿಕ್ಷಕರ ಹುದ್ದೆಗಳು ಹಾಗೂ ನಿವೃತ್ತಿಯಿಂದ ಖಾಲಿಯಾದ ಹುದ್ದೆಗಳನ್ನು ಪ್ರತಿ ವರ್ಷ ನೇಮಕಾತಿ ಮಾಡುತ್ತದೆ. ನೇಮಕಾತಿಯನ್ನು ಮಾಡುವಾಗ, ಯಾವ ಯಾವ ಶಾಲೆಗೆ ಎಷ್ಟು ಶಿಕ್ಷಕರು ಬೇಕಾಗಿದ್ದಾರೆ ಅಥವಾ ಅವಶ್ಯಕತೆ ಇದೆ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳದೆ, ಪ್ರತಿಭೆ ಮತ್ತು ಮೀಸಲಾತಿಯನ್ನು ಗಮನಿಸದೆ, ನೇಮಕಾತಿ ಮಾಡುವುದರಿಂದ ಕೆಲವೊಂದು ಶಾಲೆಗಳಲ್ಲಿ ಅಗತ್ಯಕ್ಕಿಂತ ಹೆಚ್ಚಾಗಿ ಶಿಕ್ಷಕರಿರುವುದು ಸ್ವಾಭಾವಿಕ.

೧೧. ಮರಾಠಿ ಶಾಲೆಗಳಲ್ಲಿ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳ ಕೊರತೆ ಹಾಗೂ ಸಮನ್ವಯದ ಕೊರತೆ ಎದ್ದು ಕಾಣುತ್ತದೆ:

ಮುಂಬಯಿ-ಕರ್ನಾಟಕದ ಗಡಿನಾಡ ಭಾಗದ ಬೆಳಗಾವಿ ಗ್ರಾಮೀಣ, ಬೆಳಗಾವಿನಗರ, ಚಿಕ್ಕೋಡಿ, ನಿಪ್ಪಾಣಿ, ಕಾರವಾರ, ಜೋಯಿಡಾ, ಖಾನಾಪೂರ, ಹುಕ್ಕೇರಿ, ಮತ್ತು ಗೋವಾಗಡಿಗೆ ಹೊಂದಿಕೊಂಡಿರುವ ಸುಮಾರು ೧೩೨ ಮರಾಠಿ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳ ಕೊರತೆ ಹಾಗೂ ಸಮನ್ವಯದ ಕೊರತೆ ನಾವು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಕಂಡು ಬಂದ ಅಂಶ. ಮರಾಠಿ ಮಾಧ್ಯಮದ ಶಾಲೆಗಳಲ್ಲಿ ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ವಿಕಾಸಕ್ರಮವು ಪಠ್ಯಗಳ ಮೂಲಕ ಪ್ರಕಟವಾಗುತ್ತ ಹೋಗಬೇಕು. ಸಾಹಿತ್ಯ, ಕಲೆ, ಜಾನಪದ, ಪುರಾಣ, ಸ್ಥಳೀಯ ಸಂಸ್ಕೃತಿಯ ವಿಶೇಷ ಘಟನೆಗಳು, ಸೂಫಿ ಸಂಸ್ಕೃತಿಯ ವಿಷಯಗಳು, ಸಾಮರಸ್ಯದ ನೆಲೆಗಳು, ನಾಟಕ, ನಾಡಗೀತೆ, ನಾಡಿನ ನಾಯಕರ ವೇಷ ಭೂಷಣ, ನೃತ್ಯ, ಚಿತ್ರಕಲೆ, ಸಾಮೂಹಿಕ ಗೀತೆ, ಕರ್ನಾಟಕ ರಾಜ್ಯೋತ್ಸವ, ಕನ್ನಡ ಭಾಷೆ ಸಂಸ್ಕೃತಿಗೆ ಸಂಬಂಧಿಸಿದಂತೆ ಚರ್ಚೆ, ಭಾಷಣ, ಕವಿಗಳು-ಕಲಾವಿದರು-ತತ್ವ ಪದಕಾರರು ಮುಂತಾದ ಮುಖ್ಯ ವ್ಯಕ್ತಿ ಚಿತ್ರಗಳು ಅಥವಾ ಅವರ ಕೃತಿಗಳ ಮೂಲಕ ಪರಿಚಯ- ಹೀಗೆ ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನು ವಿವಿಧ ಕಾರ್ಯಕ್ರಮಗಳನ್ನು ನಡೆಸಿ, ಈ ಕಾರ್ಯಕ್ರಮಗಳ ಮೂಲಕ ಸಮನ್ವಯವನ್ನು ಸಾಧಿಸುವುದು ಪ್ರಾಥಮಿಕ ಹಂತದಲ್ಲಿ ಸಾಧ್ಯ. ಮಕ್ಕಳಲ್ಲಿ ಧಾರ್ಮಿಕ ಸಾಮರಸ್ಯ ಏಕತೆ ಮತ್ತು ಶಾಂತಿ ಹಾಗೂ ಭಾವೈಕ್ಯವನ್ನುಂಟು ಮಾಡಲು ವಿವಿಧ ಧರ್ಮಗಳ ಮೂಲ ತತ್ವಗಳ ಪರಿಚಯ ಅವರಿಗೆ ಮಾಡಿಕೊಡುವುದು ಅವಶ್ಯ. ಧರ್ಮದ ತತ್ವ ಹಾಗೂ ಆಚರಣೆಯ ಸ್ಥೂಲ ಪರಿಚಯ ಮಾಡಿದರೆ - ತಾರತಮ್ಯ, ಮೇಲು- ಕೀಳು ಅನ್ನುವ ಭಾವನೆ ಹಾಗೂ ಸ್ವಧರ್ಮದ ಬಗೆಗೆ ದುರಭಿಮಾನ,

ಪರಧರ್ಮದ ಬಗೆಗಿನ ಅಜ್ಞಾನ ಇಲ್ಲವಾಗುತ್ತದೆ. ಸರ್ವ ಧರ್ಮಗಳ ಸಮನ್ವಯದ ಕೊರತೆ ಕಡಿಮೆಯಾಗುತ್ತದೆ. ಈ ಗುರುತರವಾದ ಕಾರ್ಯದಲ್ಲಿ ಶಿಕ್ಷಕರು ನಿರ್ವಹಿಸಬೇಕಾದ ಪಾತ್ರವು ಹಿರಿದಾಗಿದೆ. ಆದರೆ ಮರಾಠಿ ಮಾಧ್ಯಮದ ಶಾಲೆಗಳಲ್ಲಿ ಈ ಮೇಲಿನ ಯಾವ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಲಿ, ನಡೆಸಿರುವ ಮಾಹಿತಿ ಕೂಡ ಕಂಡುಬರುವುದಿಲ್ಲ. ಮರಾಠಿ ಭಾಷೆ, ಮರಾಠಿಸಂಸ್ಕೃತಿ, ಮಹಾರಾಷ್ಟ್ರದ ಪರಿಕಲ್ಪನೆ, ನಾವು ಮರಾಠಿಗರು, ಮಹಾರಾಷ್ಟ್ರದವರು ಎಂಬ ಪ್ರಾಥಮಿಕ ಕಲ್ಪನೆಯನ್ನು ಪ್ರಾಥಮಿಕ ಹಂತದಲ್ಲಿ ಹುಟ್ಟುಹಾಕುತ್ತಿದ್ದಾರೆ ಎಂಬ ಭಾವನೆ ನಾವು ಅಧ್ಯಯನ ನಡೆಸಿದ ಶಾಲೆಗಳಲ್ಲಿ ಕಂಡು ಬಂದಿದೆ. ಆದಷ್ಟು ಬೇಗನೆ ಸರಕಾರ ಮತ್ತು ಸರಕಾರದ ಪ್ರತಿನಿಧಿಗಳು ಹಾಗೂ ಶಿಕ್ಷಣ ಇಲಾಖೆಯವರು ಮರಾಠಿ ಮಾಧ್ಯಮದ ಶಾಲೆಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ಕನ್ನಡ - ಕನ್ನಡಿಗ- ಕರ್ನಾಟಕ ಎಂಬ ಭಾವನೆ ಬೆಳೆಯಲು ಮತ್ತು ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಆದೇಶ ನೀಡಬೇಕು.

೧೨. ಗಡಿನಾಡ ಭಾಗದ ಶಾಲಾ ಕಟ್ಟಡ ಹಾಗೂ ಇತರ ಭೌತಿಕ ಕಾಮಗಾರಿಗಳನ್ನು ಕೈಗೊಳ್ಳಲು ತೊಂದರೆಯಾಗಿ ನಿರ್ಮಾಣ ಕಾರ್ಯಕುಂಠಿತಗೊಂಡಿವೆ:

ಮುಂಬಯಿ- ಕರ್ನಾಟಕದ ಗಡಿನಾಡ ಭಾಗದ ಅನೇಕ ಶಾಲೆಗಳ ಭೌತಿಕ ಕಾಮಗಾರಿಗಳು ಕುಂಠಿತಗೊಂಡಿವೆ. ಶಾಲಾಕಟ್ಟಡ, ಶೌಚಾಲಯ, ಕಂಪೌಂಡ್, ಆಟದ ಮೈದಾನ, ಕುಡಿಯುವ ನೀರು ಮುಂತಾದ ಕಾಮಗಾರಿ ಕುಂಠಿತವಾಗಲು ಕಾರಣ ಗಡಿಭಾಗದಿಂದ ಆಯ್ಕೆಯಾಗುವ ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು ಕನ್ನಡ ಶಾಲೆಗಳನ್ನು ಆರಂಭಿಸದಂತೆ, ಹೊಸ ಕಟ್ಟಡಗಳನ್ನು ಕಟ್ಟಿಸದಂತೆ ಹಾಗೂ ಇತರ ಭೌತಿಕ ಕಾಮಕಾರಿಗಳನ್ನು ಕೈಗೊಳ್ಳದಂತೆ ಅಧಿಕಾರಿ ವರ್ಗದವರ ಮೇಲೆ ಸತತವಾಗಿ ಪ್ರಭಾವ ಬೀರುತ್ತಲೇ ಬಂದಿದ್ದಾರೆ. ಬೆಳಗಾವಿ ಜಿಲ್ಲಾ ಪಂಚಾಯತದಲ್ಲಿ ಕನ್ನಡಿಗರದೇ ಪ್ರಾಬಲ್ಯವಿದ್ದರೂ, ಬೆಳಗಾವಿ ತಾಲೂಕಾ ಪಂಚಾಯತನಲ್ಲಿ ಮರಾಠಿಗರ ಪ್ರಾಬಲ್ಯವಿದೆ. ಶಾಲೆಗಳ ಕಟ್ಟಡ ನಿರ್ಮಾಣ ದುರಸ್ತಿಗೆ ಸಂಬಂಧಿಸಿದಂತೆ ವಲಯ ಶಿಕ್ಷಣಾಧಿಕಾರಿಗಳು ತಾಲೂಕಾ ಪಂಚಾಯತಿಗೆ ಬರೆಯುತ್ತಾರೆ. ತಾಲೂಕಾ ಪಂಚಾಯತ ಅಧಿಕಾರಿಗಳು ಅಲ್ಲಿಯ ಚುನಾಯಿತ ಪ್ರತಿನಿಧಿಗಳ ಪ್ರಭಾವದಡಿ ಕೆಲಸ ಮಾಡುವುದರಿಂದ ಕನ್ನಡ ಶಾಲೆಗಳು ಸಹಜವಾಗಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿವೆ. ಬೆಳಗಾವಿ ತಾಲೂಕಾ ಪಂಚಾಯತ ಕಾರ್ಯಾಲಯದಲ್ಲಂತೂ ಎಂ. ಇ. ಎಸ್. ಸಮಿತಿಯ ಶಾಸಕರೊಬ್ಬರಿಗೆ ಶಾಶ್ವತವಾಗಿ ಕಾರ್ಯಾಲಯ ಮತ್ತು ಸಿಬ್ಬಂದಿಯನ್ನು ಒದಗಿಸಲಾಗಿದೆ. ಶಾಸಕರು ಅಲ್ಲಿಯೇ ದಿನನಿತ್ಯ ಬಿಡಾರ ಹೂಡಿ, ಅಧಿಕಾರಿಗಳಿಗೆ ಆದೇಶ ಕೊಡುತ್ತಿರುತ್ತಾರೆ. ಹೀಗಾಗಿ ತಾಲೂಕಾ ಪಂಚಾಯತನಲ್ಲಿಯ ಅಧಿಕಾರಿಗಳು ಕನ್ನಡ ವಿಷಯ ಬಂದರೆ ಮೆಲು ಧ್ವನಿಯಲ್ಲಿ ಮಾತನಾಡುತ್ತಾರೆ.

ಬೆಳಗಾವಿ ವಲಯವು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಮಂಡಳಿಯಲ್ಲಿ ಪ್ರಾಥಮಿಕ ಶಾಲೆಗಳ ಕಟ್ಟಡ ಕಟ್ಟಲು ಹಣವಿರುತ್ತದೆ. ಈ ಮಂಡಳಿಯಲ್ಲಿ ಬೆಳಗಾವಿ ಮತ್ತು ಉಚಗಾಂವ ವಿಧಾನಸಭಾ ಮತಕ್ಷೇತ್ರಗಳ ಎಂ. ಇ. ಎಸ್.ನ ಶಾಸಕರಿದ್ದಾರೆ. ಅವರು ಮರಾಠಿ ಪ್ರಾಥಮಿಕ ಶಾಲೆಗಳನ್ನು ಕಟ್ಟಲು, ಶಾಲೆಗೆ ಸಂಬಂಧಪಟ್ಟ ಇತರ ಬಹುತೇಕ ಕಾಮಗಾರಿಗಳನ್ನು ಕೈಗೊಳ್ಳಲು ಬಹಳಷ್ಟು ಶ್ರಮ ಪಡುತ್ತಾರೆ. ಆದರೆ ಬೆಳಗಾವಿನಗರ ಮತ್ತು ಗ್ರಾಮೀಣ ಭಾಗದ ಕನ್ನಡ ಶಾಲೆಗಳ ಕಟ್ಟಡಗಳಿಗಾಗಿ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಹಣ ಬಿಡುಗಡೆ ಮಾಡಿಸುವವರು ಯಾರು? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಮಹಾರಾಷ್ಟ್ರ ಏಕೀಕರಣ ಸಮಿತಿಯ ಬೆಳಗಾವಿನಗರ ಶಾಸಕರು ಬೆಳಗಾವಿ ನಗರದ ಹೃದಯಭಾಗದಲ್ಲಿರುವ ರವಿವಾರ ಪೇಟೆಗೆ ಹೊಂದಿಕೊಂಡಿರುವ ಮಾಳಿ ಬೀದಿಯ ಶಾಲೆಗೆ ೨ಲಕ್ಷ ರೂಪಾಯಿ ಬಿಡುಗಡೆ ಮಾಡಿಸಿದರೆಂಬ ಕಾರಣಕ್ಕಾಗಿ ಮಾಳಿ ಬೀದಿಯಲ್ಲಿ ನೂತನವಾಗಿ ಕಟ್ಟಲಾದ ಕನ್ನಡ, ಮರಾಠಿ, ಉರ್ದು ಮಕ್ಕಳ ಶಾಲೆಯಲ್ಲಿ ಕನ್ನಡ ಮತ್ತು ಉರ್ದು ಮಕ್ಕಳಿಗಾಗಿ ಪ್ರವೇಶ ನಿರಾಕರಿಸಲಾಯಿತು. ಮೂಲತಃ ಈ ಶಾಲೆಯನ್ನು ಮೂರು ಭಾಷಿಕ ಮಕ್ಕಳಿಗಾಗಿ ಕಟ್ಟಬೇಕೆಂದು ಮಹಾನಗರಸಭೆಯು ೧೯೯೬ರಲ್ಲಿ ನಿರ್ಣಯ ಅಂಗೀಕರಿಸಿದೆ.ಅಲ್ಲದೇ ಮಾಳೀಬೀದಿಯ ಜಾಗೆಯನ್ನು ಕೊಟ್ಟ ಅಲ್ಲಿಯ ಕನ್ನಡಿಗರು ಮೂರು ಭಾಷಿಕ ಶಾಲೆಗೆಂದೇ ಜಾಗೆ ಕೊಟ್ಟಿದ್ದಾರೆ. ಆದರೆ ಈಗ ನೂತನ ಕಟ್ಟಡದಲ್ಲಿ ಮರಾಠಿಗರ ಮಕ್ಕಳು ಕಲಿಯುತ್ತಾರೆ, ಕನ್ನಡಿಗರ ಮಕ್ಕಳು ಮುರುಕುಲಾದ, ದನದ ಕೊಟ್ಟಿಗೆಯಂತಿರುವ ಶಾಲೆಯಲ್ಲಿಯೇ ವಿದ್ಯಾಭ್ಯಾಸ ಮುಂದುವರೆಸಿದ್ದಾರೆ. ಮರಾಠಿಗರ ಆಕ್ರಮಣಕಾರಕ ಸ್ವಭಾವವು ಶಾಲೆಗಳ ಸಂಬಂಧದಲ್ಲೂ ನಡೆದಿದೆ.ಅವರಿಗೆ ಕನ್ನಡಿಗರಾದ ಅಧಿಕಾರಿಗಳು ಸೊಪ್ಪು ಹಾಕುತ್ತಿರುವುದೇ ಕನ್ನಡ ಶಾಲೆಗಳ ದುಸ್ಥಿತಿಗೆ ಮತ್ತೊಂದು ಕಾರಣ.

ಎರಡು ದಶಕಗಳ ಹಿಂದೆ ಕರ್ನಾಟಕ, ಕನ್ನಡ ಅಧಿಕಾರಿಗಳೆಂದರೆ ಮೂಗು ಮುರಿಯುತ್ತಿದ್ದ ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು, ಮತ್ತಿತರ ಚುನಾಯಿತ ಪ್ರತಿನಿಧಿಗಳು ಇತ್ತೀಚಿನ ವರ್ಷಗಳಲ್ಲಿ ಹೊಸ ಪದ್ಧತಿಯನ್ನು ಕಲಿತಿದ್ದಾರೆ. ಹಿರಿಯ ಅಧಿಕಾರಿಗಳನ್ನು ತಮ್ಮ ಸಮಾರಂಭಗಳಿಗೆ ಆಹ್ವಾನಿಸಿ, ಮರಾಠಿ ಪತ್ರಿಕೆಗಳಲ್ಲಿ ಪ್ರಚಾರ ಕೊಡಲಾಗುತ್ತಿದೆ. ಇದನ್ನು ಕಂಡ ಅಧೀನ ಅಧಿಕಾರಿಗಳು ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರ ಆದೇಶಗಳನ್ನು ಚಾಚು ತಪ್ಪದೇ ಪಾಲಿಸುತ್ತಾರೆ. ಇಂಥ 'ಪಾಲಿಸಿ'ಯೂ ಕನ್ನಡದ ಹಿತಾಸಕ್ತಿಗಳಿಗೆ ಮಾರಕವಾಗಿ ಪರಿಣಮಿಸಿದೆ. ಬೆಳಗಾವಿ ಜಿಲ್ಲೆಗೆ ಬರುವ ಬಹುತೇಕ ಹಿರಿಯ ಅಧಿಕಾರಿಗಳಿಗೆ ಇಲ್ಲಿಯ ಪರಿಸ್ಥಿತಿಯ ಕಲ್ಪನೆ ಇರುವುದಿಲ್ಲ, ಕಲ್ಪನೆ ಬರುವ ಹೊತ್ತಿಗೆ ಅವರು ವರ್ಗವಾಗಿ ಹೋಗಿಬಿಡುತ್ತಾರೆ.

ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು ಮರಾಠಿ ಶಾಲೆಗಳ ಕಟ್ಟಡ ಹಾಗೂ ದುರಸ್ತಿಗಾಗಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯನ್ನು ಅವಲಂಬಿಸಿರುವಂತೆ, ಕನ್ನಡಿಗರು ಅವಲಂಬಿಸುವ ಪರಿಸ್ಥಿತಿಯಿಲ್ಲ. ಜಿಲ್ಲಾ ಪಂಚಾಯತದಲ್ಲೂ ಬೆಳಗಾವಿ ಗ್ರಾಮೀಣ ಭಾಗದ ಮರಾಠಿ ಸದಸ್ಯರು ಇರುವುದರಿಂದ, ಅಲ್ಲಿಯ ಕನ್ನಡ ಶಾಲೆಗಳಿಗೆ ಕೊಕ್ಕೆ ಬೀಳುತ್ತದೆ. ಇದ್ದ ಬಿದ್ದ ಹಣವನ್ನು ಜಿಲ್ಲೆಯ ಇತರ ತಾಲೂಕುಗಳ ಪ್ರತಿನಿಧಿಗಳು ತಮ್ಮ ಭಾಗದ ಅಭಿವೃದ್ಧಿಗಾಗಿ ಮಂಜೂರು ಮಾಡಿಸಿಕೊಳ್ಳುವುದು ಸಹಜವಾಗಿದೆ. ಕಳೆದ ಹತ್ತು ವರ್ಷಗಳಿಂದ ಜಿಲ್ಲಾ ಪಂಚಾಯತ ಪ್ರತಿವರ್ಷ ೫೦ ಕನ್ನಡ ಶಾಲಾ ಕಟ್ಟಡಗಳಿಗೆ (ಇಡೀ ಜಿಲ್ಲೆಯಲ್ಲಿ) ಮಂಜೂರಿ ನೀಡಿದರೆ, ೨೬ ಮರಾಠಿ ಶಾಲಾ ಕಟ್ಟಡಗಳಿಗೆ ಮಂಜೂರಿ ನೀಡಿದೆ. ಅಂದರೆ ಬಹುತೇಕ ಅರ್ಧದಷ್ಟು ಹಣವನ್ನು ಮರಾಠಿ ಶಾಲೆಗಳಿಗೆ ನೀಡಲಾಗಿದೆಯೆಂದರೆ ಮರಾಠಿಗರ ಪ್ರಭಾವ ಹೇಗೆ ಕೆಲಸ ಮಾಡುತ್ತದೆಯೆಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ಜಿಲ್ಲಾ ಪಂಚಾಯತಿಯಲ್ಲೇ ಗಡಿಭಾಗದ ಕನ್ನಡ ಶಾಲೆಗಳನ್ನು ಕೇಳುವವರಿಲ್ಲ.

೧೩. ಗಡಿನಾಡ ಭಾಗದ ಶಾಲೆಗಳು ಎಲ್ಲರಿಗೂ ಸರಿಯಾಗಿ ದೊರೆಯುತ್ತಿಲ್ಲ:

ಗಡಿನಾಡ ಭಾಗದಲ್ಲಿರುವ ಶಾಲೆಗಳು ಎಲ್ಲರಿಗೂ ಇನ್ನೂ ಸರಿಯಾಗಿ ದೊರೆಯುವುದಿಲ್ಲ, ಸ್ವಾತಂತ್ರ್ಯಾನಂತರ ಶಾಲಾ ವ್ಯವಸ್ಥೆಯನ್ನು ಸುಧಾರಿಸಲು ಅನೇಕ ಪ್ರಗತಿಪರ ಯೋಜನೆಗಳು ರೂಪಿತವಾಗಿವೆ. ಉದಾಹರಣೆಗೆ ಪ್ರಾಥಮಿಕ ಶಾಲೆಗಳ ಒಟ್ಟು ಸಂಖ್ಯೆಯಲ್ಲಿ ಮೂರುಪಟ್ಟು ಹೆಚ್ಚಳವಾಗಿದೆ. ಗ್ರಾಮೀಣ ಜನರು ಒಂದು ಕಿ.ಮೀ ಒಳಗೆ ಪ್ರಾಥಮಿಕ ಶಾಲೆಗಳು ಇರುವಲ್ಲಿ ವಾಸಿಸುತ್ತಿದ್ದಾರೆ. ಶಾಲೆ ಮತ್ತು ಮನೆಯ ನಡುವಿನ ಬೌದ್ಧಿಕ ಅಂತರದ ಸಮಸ್ಯೆಗಳು ಕಡಿಮೆಯಾಗಿವೆ ಎಂಬುದು ಇಲ್ಲಿ ಸ್ಪಷ್ಟ. ಹೀಗಾಗಿ ಪ್ರಾಥಮಿಕ ಶಾಲೆಗೆ ಬಹಳ ದೂರದವರೆಗೆ ಕ್ರಮಿಸಬೇಕಾದ ಪ್ರಸಂಗ ಬಹಳ ಮಟ್ಟಿಗೆ ಇಂದು ಪರಿಹಾರಗೊಂಡಿದೆ ಅಂದರೂ ಗಡಿಭಾಗದಲ್ಲಿ ಇನ್ನೂ ಪರಿಹಾರವಾಗದೇ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ.

ಭಾರತದ ಒಟ್ಟು ಜನವಸತಿ ನೆಲೆಗಳಲ್ಲಿ ಶೇಕಡ ೫೦ ಕ್ಕಿಂತಲೂ ಹೆಚ್ಚಿನ ಜನವಸತಿ ನೆಲೆಗಳು ಪ್ರಾಥಮಿಕ ಶಾಲೆಯನ್ನು ಹೊಂದಿವೆ. ಕರ್ನಾಟಕದಲ್ಲಿ ಈ ನಮೂನೆಯಲ್ಲಿನ ಹಾಗೆಯೇ ಗಡಿನಾಡ ಭಾಗದ ಖಾನಾಪೂರ ತಾಲೂಕಿನ ತಳೆವಾಡಿ ಗ್ರಾಮದಲ್ಲಿ ಇ ಜಿ ಎಸ್ ಕೇಂದ್ರವಿದೆ. ಇಲ್ಲಿ ಶಾಲೆ ಇಲ್ಲ. ಆರು ಕಿ.ಮೀ ದೂರದಲ್ಲಿರುವ ದೇವಗಾಂವಕ್ಕೆ ಹೋಗಬೇಕು. ನದಿ ,ಹಳ್ಳ, ಜಂಗಲ್‌ನಲ್ಲೇ ಹೋಗಬೇಕು. ಗೋಲ್ಯಾಳಿ, ತಳೆವಾಡಿ, ಮೆಂಡಿಲ, ಕೃಷ್ಣಾಪೂರ, ಅಮಗಾಂವ , ಚಿಗುಳೆ, ಹೋಲ್ಡಾ, ಕೇಳಿಲ, ಚೋರ್ಲಾ, ಪಾರವಾಡ, ಸಡಾ, ಮಾನ, ಹಳೆಹುಳಂದ ಮತ್ತು ಇನ್ನೂ ಅನೇಕ ಗ್ರಾಮಗಳು ಗೋವಾಗಡಿಗೆ ಹೊಂದಿಕೊಂಡಿದ್ದು ಅಲ್ಲಿಯ ಜನರಿಗೆ ಸರಿಯಾಗಿ ಶಾಲೆಗಳ ವ್ಯವಸ್ಥೆ ಇರುವುದಿಲ್ಲ.

ಕಾಡಿನ ಮಧ್ಯ ನದಿ, ಹಳ್ಳ-ಕೊಳ್ಳಗಳನ್ನು ದಾಟಿ, ಪ್ರಾಣಿಗಳ ಭಯದಲ್ಲಿ ಸಾಗಿ ಬೇರೆ ಊರಿಗೆ ಸುಮಾರು ಒಂದು ಕಿ.ಮೀ. ದಿಂದ ೮ಕಿ.ಮೀ ವರೆಗೆ ನಡೆಯುವ ಪ್ರಸಂಗ ಅನೇಕ ಗ್ರಾಮಗಳಲ್ಲಿ ಈಗಲೂ ಇದೆ. ಕೆಲವೊಂದು ಗ್ರಾಮದ ಶಾಲೆಗಳು ಕಾಡಿನ ಮಧ್ಯದಲ್ಲಿ ಇರುವುದು ನಮ್ಮ ಗಮನಕ್ಕೆ ಬಂದಿದೆ. ಬೆಳಗಾವಿ ತಾಲೂಕಿನ ನಾವಗೆಯ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಗೆ ಒಂದು ಕೀ.ಮೀ ನಡೆದೇ ಹೋಗಬೇಕು. ಮಹಾರಾಷ್ಟ್ರ ಗಡಿಭಾಗ, ಗೋವಾರಾಜ್ಯದ ಗಡಿಭಾಗದ ಅನೇಕ ಗ್ರಾಮಗಳಲ್ಲಿ ಸರಕಾರಿ ಕನ್ನಡ ಶಾಲೆಗಳು ಸ್ಥಾಪನೆಯಾಗಿಲ್ಲ. ಉತ್ತರ ಕರ್ನಾಟಕದಲ್ಲಿ ಹಾಗೂ ಕರಾವಳಿ ಕರ್ನಾಟಕದ ಗುಡ್ಡಗಾಡುಗಳಲ್ಲಿ ಇಂತಹ ಜನವಸತಿ ನೆಲೆಗಳು ಅರ್ಧಕ್ಕಿಂತ ಹೆಚ್ಚಾಗಿವೆ.

ಈ ಮೇಲಿನ ಮಹತ್ವದ ಸಮಸ್ಯೆಗಳಲ್ಲದೇ ಇನ್ನೂ ಸಣ್ಣಪ್ರಮಾಣದ ಹಲವಾರು ಸಮಸ್ಯೆಗಳು ಈ ಗಡಿನಾಡಿನಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಈ ಕೆಳಗಿನವುಗಳು ಸಹ ಅಷ್ಟೇ ಪ್ರಮುಖವಾಗಿವೆ:

೧ ಗಡಿನಾಡಿನ ಭಾಗದ ಕೆಲವೊಂದು ಶಾಲೆಯ ವರ್ಗಗಳಲ್ಲಿ ಮಿತಿ ಮೀರಿದ ಮಕ್ಕಳ ಸಂಖ್ಯೆಯಿಂದಾಗಿ ವೈಯಕ್ತಿಕ ಗಮನದ ಅಭಾವ.

೨. ಶಿಕ್ಷಣ ಮಾಧ್ಯಮದ ಗೊಂದಲ.

೩. ಗಡಿನಾಡಿನ ಭಾಗದ ಮಕ್ಕಳ ಶಿಕ್ಷಣದ ಕಡೆಗೆ ಗಮನ ಹರಿಸದ ಪಾಲಕರು. ಬಡತನ, ಅಜ್ಞಾನ ಹಾಗೂ ಮಕ್ಕಳ ಭವಿಷ್ಯದ ಬಗೆಗೆ ಚಿಂತಿಸದ ಅಲಕ್ಷ್ಯತನ.

೪. ಶಾರೀರಿಕ ಶಿಕ್ಷಣದ ಕೊರತೆ.

೫. ದಿನದ ಎಲ್ಲ ಅವಧಿಯಲ್ಲಿ ವಿದ್ಯಾರ್ಥಿಗಳು ಕ್ಲಾಸಿಗೆ ಹಾಜರಾಗದೇ ಇರುವುದು.

೬. ಗಡಿಭಾಗದ ಶಾಲೆಯ ಶಿಕ್ಷಕರು ವಿಷಯ ತಯಾರಿ ಮಾಡಿಕೊಳ್ಳದೇ ಕಲಿಸಲು ಹೋಗುವುದು.

೭. ಗಡಿಭಾಗದ ವಿದ್ಯಾರ್ಥಿಗಳಲ್ಲಿ ಸಾಮಾನ್ಯವಾಗಿ ಕಲಿಯುವ ಆಸಕ್ತಿ ಕಡಿಮೆಯಾಗುತ್ತಿರುವುದು.

೮. ಗಡಿಭಾಗದಲ್ಲಿ ಸರಕಾರಿ ಶಾಲೆಗಳಿಗಿಂತ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾರಂಭಿಸಿದ ಶಾಲೆಗಳು ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಮುಂಚೂಣಿಯಲ್ಲಿರುವುದು. ಸರಕಾರ ಮಾಡಬೇಕಾದ ಕೆಲಸವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಮಾಡುತ್ತಿವೆ.

೯. ಗಡಿನಾಡಿನ ಭಾಗದ ಶಿಕ್ಷಣ ಕ್ಷೇತ್ರದಲ್ಲಿ ಸ್ಥಳೀಯರ ಸಹಾಯ ಸಹಕಾರದ ಕೊರತೆ.

೧೦. ಗಡಿಭಾಗದ ಶಾಲೆಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಮಧ್ಯ ಆತ್ಮೀಯ ಸಂಬಂಧದ ಅಭಾವ.

೧೧. ಗಡಿಭಾಗದಲ್ಲಿ ಸರಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಸುಧಾರಣೆಗಳಿಗೆ ನೀಡಿದ ಶಿಫಾರಸ್ಸುಗಳು, ಸಮಿತಿಗಳು, ಆಯೋಗಗಳು, ವರದಿಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದು, ಸರಿಯಾಗಿ ಜಾರಿಗೆ ಬಾರದಿರುವುದು.

೧೨. ಗಡಿನಾಡಿನ ಶಾಲೆಗಳಲ್ಲಿ ಬಾಲಕಿಯರ ಶಿಕ್ಷಣ ಕುಂಠಿತ ಹಾಗೂ ಶಿಕ್ಷಕಿಯರ ನೇಮಕದ ಅಭಾವ.

೧೩. ಗಡಿನಾಡಿನ ಭಾಗದಲ್ಲಿರುವ ಅವಕಾಶವಂಚಿತ ಸಮುದಾಯಗಳಾದ ಎಸ್.ಸಿ./ ಎಸ್. ಟಿ. ಮತ್ತು ಓ.ಬಿ.ಸಿ. ಮಕ್ಕಳ ಶಿಕ್ಷಣಮಟ್ಟ ಕುಂಠಿತ ಹಾಗೂ ಸರಕಾರವು ಇವರ ಶೈಕ್ಷಣಿಕ ಅಭಿವೃದ್ಧಿಗಾಗಿ ಜಾರಿಗೆ ತಂದಂತಹ ಕಾರ್ಯಕ್ರಮಗಳು, ಯೋಜನೆಗಳು ಕುಂಠಿತ ಗೊಂಡಿರುವುದು.

ಈ ರೀತಿಯಾಗಿ ಮುಂಬಯಿ ಕರ್ನಾಟಕದ ಗಡಿನಾಡ ಭಾಗದ ಪ್ರದೇಶಗಳ ಕನ್ನಡಿಗರ ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಸಮಗ್ರವಾಗಿ ಮತ್ತು ಸಂಕ್ಷಿಪ್ತವಾಗಿ ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಸಮಸ್ಯೆಗಳು ನಾವು ಕ್ಷೇತ್ರ ಅಧ್ಯಯನ ಕಾರ್ಯಕೈಗೊಂಡಾಗ ಕಂಡು ಬಂದಂತಹ ಶೈಕ್ಷಣಿಕ ಸಮಸ್ಯೆಗಳಾಗಿವೆ.

ಟಿಪ್ಪಣಿಗಳು :

೧. ಸೆನ್ಸಸ್ ಆಫ್ ಇಂಡಿಯಾ ೨೦೦೧, ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ ಕರ್ನಾಟಕ, ಡೈರೆಕ್ಟರ್ ಜನರಲ್ ಪಾಪುಲೇಶನ್ ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, ಬೆಂಗಳೂರು.

೨. ಮುಳಗುಂದ ಚ.ವಿ., ಹೆಗಡೆ ಜಿ. ಎಂ. 'ಸುವರ್ಣ ಕರ್ನಾಟಕ : ಸಮಾಜ ಮತ್ತು ಸಂಸ್ಕೃತಿ', ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ, ೨೦೦೬ ಪುಟ-೩೯೫.

೩. ಗುರುಲಿಂಗ ಕಾಪಸೆ (ಸಂ), 'ಕನ್ನಡ ಕಾವಲು', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫ ಪುಟ-XXiii, XXiv.

೪. 'ಕನ್ನಡ ಅಧ್ಯಯನ' (ವಿಶೇಷ ಸಂಚಿಕೆ) ತ್ರೈಮಾಸಿಕ ಪತ್ರಿಕೆ, ಸಂಪುಟ ೮, ಸಂಚಿಕೆ ೨ ಮತ್ತು ೩ (ಅಕ್ಟೋಬರ್ ೨೦೦೧ - ಮಾರ್ಚ್ ೨೦೦೨) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧ ಪುಟ-೨೩೫.

ಅಧ್ಯಾಯ - ೭
ಉಪಸಂಹಾರ

ಯಾವುದೇ ಒಂದು ಪ್ರದೇಶದ ಬಗ್ಗೆ ಅಥವಾ ವಿಷಯದ ಬಗ್ಗೆ ಪ್ರಬಂಧ ಬರೆಯಲು ಅನೇಕ ವಿಧದ ಆಕರಗಳ ಸಂಶೋಧನೆ ಅಧ್ಯಯನಗಳು ಅನಿವಾರ್ಯವೆನಿಸುತ್ತದೆ. ಗಡಿನಾಡ ಪ್ರದೇಶದ ಕನ್ನಡಿಗರ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳು ಸಾಕಷ್ಟು ಕಡಿಮೆ ಎಂದು ಭಾವಿಸಲಾಗಿದೆ. ಎಲ್ಲ ಅಗತ್ಯ ಕ್ರಮಗಳಿಗನುಸಾರವಾಗಿ ಪ್ರಯತ್ನಿಸಿದರೆ ಸಾಕಷ್ಟು ಉತ್ತಮ ಪ್ರಬಂಧವನ್ನು ಬರೆಯಲು ಸಾಧ್ಯವಿದೆ. ಇಂಥ ಒಂದು ಕಿರುಪ್ರಯತ್ನದ ಫಲಿತಾಂಶವೇ ಈ ಸಂಕ್ಷಿಪ್ತ ಪ್ರಬಂಧ.

ಮುಂಬಯಿ- ಕರ್ನಾಟಕದ ಗಡಿನಾಡ ಪ್ರದೇಶವು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಾಗೂ ಶೈಕ್ಷಣಿಕವಾಗಿ ಒಂದು ಮಹತ್ವದ ಸ್ಥಳವಾಗಿದೆ. ಗಡಿನಾಡ ಜನರ ಪರಿಸರದ ಬದುಕಿನ ಸಂಬಂಧವನ್ನು ಅರಿವಿನ ತಿಳುವಳಿಕೆ ನೆಲೆಯಲ್ಲಿ ಶಿಕ್ಷಣದ ಮೂಲವನ್ನು ಅರಿತುಕೊಳ್ಳಲು ಪ್ರಯತ್ನಿಸಲಾಗಿದೆ. ಸಂಶೋಧನೆಯನ್ನು ಕೈಗೊಂಡಾಗ ಅಲ್ಲಿಯ ಜನರ ದಿನನಿತ್ಯದ ಬದುಕು ತೊಂದರೆದಾಯಕವಾಗಿ ಕಾಣಿಸುತ್ತದೆ. ಅವುಗಳಿಂದ ಮುಕ್ತಿಗಾಗಿ ಈಗಿನ ಶೈಕ್ಷಣಿಕ ವ್ಯವಸ್ಥೆ ಬದಲಾಗಬೇಕೆಂಬ ಸಾಮಾಜಿಕ ಪರಿವರ್ತನೆಗೆ ಎಡೆಮಾಡಿಕೊಡುತ್ತದೆ. ಈಗಿದ್ದ ವಾತಾವರಣದ ಸಂಸ್ಕೃತಿಯಲ್ಲಿ ಚಾರಿತ್ರಿಕವಾಗಿ ರೂಪಗೊಂಡ ಸಾಮಾಜಿಕ ಸಂಸ್ಥೆಗಳನ್ನು ಗಣನೆಗೆ ತೆಗೆದುಕೊಂಡು, ಅವುಗಳನ್ನು ಪುನರ್ ಸ್ಥಾಪಿಸುವ ಮೂಲಕ ನಮ್ಮ ವರ್ತಮಾನದ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ. ವರ್ತಮಾನವನ್ನು ಭೂತಕಾಲಕ್ಕೆ ಹೋಲಿಸಿ ತಿದ್ದಿಕೊಳ್ಳುವ, ಇಲ್ಲವೇ ಪರಿವರ್ತನೆಗೆ ಪ್ರಯತ್ನಿಸುವ ಕೆಲಸವನ್ನು ಈ ಪ್ರಬಂಧದ ಮೂಲಕ ಪ್ರಯತ್ನಿಸಲಾಗಿದೆ. ಆದ್ದರಿಂದ ಈ ಸಂಶೋಧನೆಯು ಗಡಿನಾಡಿನ ಶೈಕ್ಷಣಿಕ ಸ್ಥಿತಿಗತಿಗಳ ಮೇಲೆ ಹೊಸ ಬೆಳಕು ಚೆಲ್ಲುವ ಸೃಷ್ಟಿ ಶೀಲ ಕ್ರಿಯೆಯಾಗಿದೆ.

ಈ ಪ್ರಬಂಧದ ಆರಂಭದಲ್ಲಿರುವ ಪ್ರಾಸ್ತಾವಿಕ ಅಧ್ಯಾಯದಲ್ಲಿ ಮುಂಬಯಿ -ಕರ್ನಾಟಕದ ಗಡಿನಾಡ ಭಾಗದ ಶೈಕ್ಷಣಿಕ ಮಹತ್ವವನ್ನು ರಾಜ್ಯಮಟ್ಟದಲ್ಲಿ ಮತ್ತು ಪ್ರಾದೇಶಿಕ

ಮಟ್ಟದಲ್ಲಿ ಅದಕ್ಕೆ ಸಿಗಬೇಕಾದ ಸ್ಥಾನಮಾನಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಗಡಿನಾಡ ಪ್ರದೇಶಕ್ಕೆ ಸಂಬಂಧಿಸಿದಂತೆ ಆಗಿರುವ ಅಧ್ಯಯನ ತುಂಬಾ ಕಡಿಮೆ ಎಂದು ಹೇಳಬಹುದು. ಇಲ್ಲಿ ಅನೇಕ ಮಹತ್ವದ ಪ್ರದೇಶಗಳಿದ್ದು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಸಮಾನತೆಗಳಿಂದ ಕೂಡಿದ ಪ್ರದೇಶಗಳು ಬಹಳಷ್ಟು ಇರುವವು. ಈ ಪ್ರದೇಶದ ಪ್ರತಿಯೊಂದು ಹಳ್ಳಿಯನ್ನು ಅಧ್ಯಯನ ಮಾಡುವುದು ತುಂಬಾ ಅಗತ್ಯವಿದೆ. ಈ ಪ್ರದೇಶದ ಎಷ್ಟೋ ಗ್ರಾಮಗಳು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತವಾಗಿವೆ. ಇಲ್ಲಿನ ಜನರು ಪ್ರಾದೇಶಿಕ ಅಸಮತೋಲನದ ಹೆಸರಿನಲ್ಲಿ ತಮ್ಮ ಶೈಕ್ಷಣಿಕ ಮತ್ತು ಉದ್ಯೋಗಿತನ ಗಳಿಸುವುದಕ್ಕೆ ವಿಫಲರಾಗುತ್ತಿದ್ದಾರೆ. ೧೯೫೬ರಲ್ಲಿ ವಿಶಾಲಕರ್ನಾಟಕ ರಾಜ್ಯ ಉದಯವಾದಾಗ ಕಾಣಿಸಿಕೊಂಡ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮತೋಲನಗಳು ಇಂದಿಗೂ ಕಾಣಿಸಿಕೊಳ್ಳುತ್ತಿರುವುದು ಒಂದು ದುರಂತ. ೧೯೭೩ರ ನವಂಬರ ೧ರಿಂದ 'ಕರ್ನಾಟಕ ರಾಜ್ಯ' ಎಂಬ ಹೆಸರಿನಿಂದ ಬೆಳಗುತ್ತಿದ್ದು, ೧೯೭೪ರ ನವಂಬರ ೧ರಿಂದ ಕರ್ನಾಟಕ ಆಡಳಿತ ಭಾಷೆ 'ಕನ್ನಡ' ವೆಂದು ಅಧಿಕೃತವಾಗಿ ಘೋಷಿಸಲ್ಪಟ್ಟರೂ ಕೂಡಾ ಗಡಿನಾಡಿನ ಕನ್ನಡಿಗರಿಗೆ ಇದು ಇಂದಿಗೂ ಬಾಯಿ ತೆರೆಯದಂತೆ ಮಾಡಿದೆ. ಗಡಿನಾಡಿನ ಕನ್ನಡಿಗರು ಅನುಭವಿಸುತ್ತಿರುವ ಅನೇಕ ಸಂಕಷ್ಟಗಳಿವೆ. ಗಡಿನಾಡಿನ ಕನ್ನಡಿಗರಿಗೆ ಉನ್ನತ ಶಿಕ್ಷಣವಿರಲಿ; ಪ್ರಾಥಮಿಕ ಶಿಕ್ಷಣದಲ್ಲಿಯೇ ಅನೇಕ ತೊಂದರೆಗಳು ಎದ್ದು ಕಾಣುತ್ತವೆ. ಆದ್ದರಿಂದ ಈ ಪ್ರದೇಶದ ಸಮಗ್ರ ಅಧ್ಯಯನವನ್ನು ಕ್ಷೇತ್ರ ಮುಖ್ಯವಾಗಿಟ್ಟುಕೊಂಡು ಗಡಿನಾಡಿನ ಕನ್ನಡಿಗರ ಶೈಕ್ಷಣಿಕ ಸಮಸ್ಯೆಗಳ ಕುರಿತು ಆಳವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ ಮತ್ತು ಈ ಪ್ರದೇಶದ ಅಧ್ಯಯನದ ಸ್ವರೂಪ ಮತ್ತು ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಲು ಆಧ್ಯಯನ ವ್ಯಾಪ್ತಿಯಲ್ಲಿ ಮುಂಬಯಿ- ಕರ್ನಾಟಕದ ಗಡಿಯಲ್ಲಿರುವ ತಾಲೂಕುಗಳನ್ನು ಶೈಕ್ಷಣಿಕ ಸ್ಥಿತಿಗಳನ್ನು ಗುರುತಿಸಲು ಆಯ್ಕೆಮಾಡಿಕೊಳ್ಳಲಾಗಿದೆ ಹಾಗೂ ಇಲ್ಲಿಯ ಶಿಕ್ಷಣದ ಮೂಲ ಸೌಲಭ್ಯಗಳನ್ನು ಪರಿಶೀಲಿಸಲಾಗಿದೆ. ಈ ಕ್ಷೇತ್ರದ ವಿಸ್ತಾರದಲ್ಲಿ ಐತಿಹಾಸಿಕ, ರಾಜಕೀಯ, ಸಾಹಿತ್ಯಿಕ, ಶೈಕ್ಷಣಿಕ ಬೆಳವಣಿಯ ಘಟನೆಗಳ ಅವಲೋಕನ ಮಾಡಲಾಗಿದೆ. ಭಾಷೆ- ಸಂಪ್ರದಾಯಗಳ ವಿಸ್ತಾರಗಳನ್ನು ಅನುಲಕ್ಷಿಸಿ ಈ ಪ್ರದೇಶವನ್ನು ಆಯ್ದುಕೊಳ್ಳಲಾಗಿದೆ. ಬಿಜಾಪೂರ, ಬೆಳಗಾವಿ, ಧಾರವಾಡ, ಉತ್ತರ ಕನ್ನಡ, ಹಾವೇರಿ, ಗದಗ, ಬಾಗಲಕೋಟ ಜಿಲ್ಲೆಗಳು ಮುಂಬಯಿ - ಕರ್ನಾಟಕದ ವ್ಯಾಪ್ತಿಯಲ್ಲಿ ಸೇರಿವೆ.

ಮೂಲ ಆಕರಗಳು- ಸಂಶೋಧನ ವಿಧಾನದಲ್ಲಿ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿ-ಗತಿಗಳಿಗೆ ಸಂಬಂಧಿಸಿದಂತೆ ಈಗಾಗಲೆ ಕೆಲವು ಲೇಖಕರು- ಸಾಹಿತಿಗಳು, ಚಿಂತಕರ ಗ್ರಂಥಗಳು, ಸಣ್ಣ ಲೇಖನಗಳು, ವರದಿಗಳನ್ನು ಬಳಸಿಕೊಂಡು ಸವಿವರವಾಗಿ ವಿವರಿಸಲಾಗಿದೆ. ಇವುಗಳಿಂದ ಸ್ವಲ್ಪಮಟ್ಟಿಗೆ ಗಡಿನಾಡಿನ ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿಯಲು ಸಹಾಯಕವಾಗಿದೆ. ಇವುಗಳನ್ನು

ಮೂಲ ಕೇಂದ್ರವಾಗಿಟ್ಟುಕೊಂಡು ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡಲು ಸಹಾಯವಾಗಿದೆ. ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಸ್ಥಿತಿ- ಗತಿಗಳನ್ನು ಪರಿಶೀಲಿಸಿ ತಾಳೆನೋಡಲಾಗಿದೆ. ಸ್ಥಳೀಯ ವಾಸ್ತವಿಕ ಅಂಶಗಳನ್ನು ವಿವರಣಾತ್ಮಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಪ್ರಾಥಮಿಕ ಮತ್ತು ಅನುಸಂಗಿಕ ಅಂಕಿ-ಅಂಶಗಳ ಮಾಹಿತಿಯ ಮೇಲೆ ಅಧ್ಯಯನವು ಅವಲಂಬಿಸಿದೆ. ಶೈಕ್ಷಣಿಕ ಸ್ಥಿತಿಗತಿಯ ವಸ್ತುವನ್ನು ನೋಡುವ ನೋಟ ಹಾಗೂ ವಿಧಾನಗಳನ್ನು ಬಳಸಿಕೊಳ್ಳುವ ಪ್ರಯತ್ನ ಮಾಡಲಾಗಿದೆಹಾಗೂ ಪ್ರಶ್ನಾವಳಿ ತಯಾರಿಸಿ ಮುಂಬಯಿ- ಕರ್ನಾಟಕದ ಗಡಿನಾಡಿನ ಜನರಿಂದ ಮಾಹಿತಿ ಸಂಗ್ರಹಿಸಿಕೊಂಡು ಅಧ್ಯಯನ ಮಾಡಲಾಗಿದೆ. ಒಟ್ಟಿನಲ್ಲಿ ಇದು ಗಡಿನಾಡಿನ ಜನರ ಉತ್ತಮ ಭವಿಷ್ಯಕ್ಕಾಗಿ ಚಿಂತನಶೀಲರಾಗುವಂತೆ ಮತ್ತು ಕಾರ್ಯಶೀಲರಾಗುವಂತೆ ಪ್ರೇರೇಪಿಸುವುದಕ್ಕೆ ಈ ಅಧ್ಯಯನವು ಉಪಯುಕ್ತವಾಗಿದೆ.

ಮುಂಬಯಿ-ಕರ್ನಾಟಕದ ಐತಿಹಾಸಿಕ ಮತ್ತು ಶೈಕ್ಷಣಿಕ ಹಿನ್ನೆಲೆಯಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಬಹುದು. ಈ ಪ್ರದೇಶವು ಪೌರಾಣಿಕ ಹಿನ್ನೆಲೆಯನ್ನು ಒಳಗೊಂಡಂತಹ ಪ್ರದೇಶವಾಗಿದೆ. ಈ ಪ್ರದೇಶವನ್ನು ಆಳಿದ ದೊರೆಗಳ ಬಗ್ಗೆ ಸಂಕ್ಷಿಪ್ತವಾಗಿ ರಾಜವಂಶಗಳ ಹೆಸರನ್ನು ಇಲ್ಲಿ ಕೊಡಲಾಗಿದೆ. ಶಾತವಾಹನ ಅರಸರಿಂದ ಹಿಡಿದು ಇಂಗ್ಲೀಷರು ಮತ್ತು ಸಣ್ಣಪುಟ್ಟ ರಾಜರುಗಳವರೆಗೆ ಆಳ್ವಿಕೆ ನಡೆಸಿದ ಮಾಹಿತಿಯನ್ನು ನೀಡಲಾಗಿದೆ ಹಾಗೂ ಆಡಳಿತಾತ್ಮಕ ವಿಭಾಗಗಳನ್ನು ಸಹ ಕುರಿತು ಚರ್ಚಿಸಲಾಗಿದೆ. ಮುಂಬಯಿ- ಕರ್ನಾಟಕದ ಶೈಕ್ಷಣಿಕ ಹಿನ್ನೆಲೆಯಲ್ಲಿ ಈ ಭಾಗದಲ್ಲಿ ಬೆಳೆದು ಬಂದ ಶಿಕ್ಷಣ ಪದ್ಧತಿ ಹಂತಹಂತವಾಗಿ ಯಾವ ರೀತಿಯಲ್ಲಿ ಬೆಳೆದು ಬಂದಿತು ಮತ್ತು ಮರಾಠಿ ಭಾಷೆಯ ಪ್ರಭಾವ ಈ ಭಾಗದ ಜನರಲ್ಲಿ ಯಾವ ಪರಿಣಾಮ ಬೀರಿತ್ತು ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಮುಂಬಯಿ- ಕರ್ನಾಟಕದ ಗಡಿನಾಡ ಪ್ರದೇಶಗಳಲ್ಲಿಯ ಶೈಕ್ಷಣಿಕ ಸ್ವರೂಪದಲ್ಲಿ ಪ್ರಕಟಿತ ಆಕರಗಳನ್ನು ಬಳಸಿಕೊಂಡು ಪ್ರದೇಶದ ಎಲ್ಲ ಭಾಗಗಳಲ್ಲಿಯ ಹಳ್ಳಿಗಳನ್ನು ಕ್ಷೇತ್ರಕಾರ್ಯನಡೆಸಿ ಆಕರಗಳನ್ನು ಸ್ವತ: ಅಧ್ಯಯನ ಮಾಡಲಾಗಿದೆ. ಕನ್ನಡ ಭಾಷೆಗೆ ಇತರ ಭಾಷೆಗಳಾದ ಮರಾಠಿ, ಉರ್ದು, ಬಂಗಾಳಿ, ಕೊಂಕಣಿ, ಮತ್ತು ಗುಜರಾತಿ ಭಾಷೆಗಳು ಯಾವ ಪ್ರಮಾಣದಲ್ಲಿ ಆತಂಕ ಒಡ್ಡಿದ್ದವು, ಮರಾಠಿ ಭಾಷೆ ಈ ಭಾಗದಲ್ಲಿ ಯಾವ ಉನ್ನತ ಸ್ಥಾನವನ್ನು ಹೊಂದಿತ್ತು, ವಿವಿಧ ವಿದ್ವಾಂಸರು ಕನ್ನಡವನ್ನು ಕಡ್ಡಾಯವಾಗಿ ಕಲಿಸಲು ಕನ್ನಡವನ್ನು ಹುಟ್ಟುಹಾಕಲು ಕೈಗೊಂಡ ಕ್ರಮಗಳು ಮತ್ತು ಕರ್ನಾಟಕ ಏಕೀಕರಣಗೊಂಡಾಗ ಮುಂಬಯಿ ಗಡಿಗೆ ಹೊಂದಿಕೊಂಡಂತಹ ಜಿಲ್ಲೆಗಳು ಮತ್ತು ತಾಲೂಕುಗಳು ಹಾಗೂ ತಾಲೂಕಿನ ಸ್ಥಿತಿಗತಿಗೆ ತಕ್ಕಂತೆ ಅವಶ್ಯಕವಿರುವ ಶೈಕ್ಷಣಿಕ

ಹಾಗೂ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ಮಾಹಿತಿಯನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಮುಂಬಯಿ-ಕರ್ನಾಟಕದ ಗಡಿನಾಡ ಕನ್ನಡಿಗರ ತಾಲೂಕುವಾರು ಜನಸಂಖ್ಯೆ ಹಾಗೂ ಸಾಕ್ಷರತೆ ವಿವರಗಳನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಪ್ರತ್ಯೇಕವಾಗಿ ನೀಡಲಾಗಿದೆ.

ಗಡಿನಾಡ ಕನ್ನಡಿಗರ ಶಿಕ್ಷಣ ಪದ್ಧತಿಗಳ ಅನುಷ್ಠಾನದ ವಿವಿಧ ಆಯೋಗ /ಸಮಿತಿಗಳ ಶಿಫಾರಸ್ಸುಗಳ ಪರಿಶೀಲನೆಯ ಅಧ್ಯಾಯದಲ್ಲಿ ೧೯೫೬ರಿಂದ೨೦೦೬ರ ವರೆಗಿನ ಅವಧಿಯಲ್ಲಿ ಸುಮಾರು ೧೮ ಆಯೋಗಗಳು, ವರದಿಗಳು , ಸಮಿತಿಗಳು , ಶಿಫಾರಸ್ಸುಗಳು ಗಡಿನಾಡ ಕನ್ನಡಿಗರ ಶಿಕ್ಷಣಪದ್ಧತಿಗಳ ಅನುಷ್ಠಾನಕ್ಕೆ, ಗಡಿನಾಡಿನ ಜನರ ಶಿಕ್ಷಣದ ಸುಧಾರಣೆಯ ಬಗ್ಗೆ ವರದಿಗಳನ್ನು ಒಪ್ಪಿಸಿದ್ದು, ಅವುಗಳ ಪ್ರಮುಖ ಆಯಾಮಗಳನ್ನು ಪರಿಶೀಲನೆ ಮಾಡುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕೆಲವೊಂದು ಪ್ರಮುಖ ವರದಿಗಳನ್ನು ವಿವರಣಾತ್ಮಕವಾಗಿ ವಿಶ್ಲೇಷಿಸಿ ಗಡಿನಾಡಿನ ಕನ್ನಡಿಗರಿಗೆ ಅವು ಎಷ್ಟು ಉಪಯುಕ್ತವಾಗಿವೆ, ಗಡಿನಾಡಿನ ಕನ್ನಡ ಶಾಲೆಗಳ ಸ್ಥಿತಿ-ಗತಿಗೆ ಕಾರಣ, ಪರಿಹಾರೋಪಾಯಗಳ ಕುರಿತು ಮತ್ತು ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಎಂತಹ ಕ್ರಮಗಳನ್ನು ಕೈಗೊಂಡಿವೆ ಎಂಬುದನ್ನು ಸವಿವರವಾಗಿ ವಿವರಿಸಲಾಗಿದೆ.

ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿ- ಗತಿಗಳ ವಿಶ್ಲೇಷಣೆ ಮತ್ತು ಅರ್ಥವಿವರಣೆಯ ಅಧ್ಯಾಯದಲ್ಲಿ ಶಾಲೆಗಳಲ್ಲಿ ಇರುವ ಭೌತಿಕ, ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ಪರಿಸ್ಥಿತಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇವುಗಳನ್ನು ಗುರುತಿಸುವಾಗ ವಿವಿಧ ಶೈಕ್ಷಣಿಕ ಅಭಿವೃದ್ಧಿ ಕಾರ್ಯಗಳ ಮತ್ತು ಸರ್ಕಾರದ ಗುರಿಗಳನ್ನು ಮಾನದಂಡವಾಗಿ ಬಳಸಿಕೊಳ್ಳಲಾಗಿದೆ. ವಿವಿಧ ಶೈಕ್ಷಣಿಕ ಕಾರ್ಯಗಳ ಗುರಿ ಹಾಗೂ ಭೌತಿಕ ಸೌಲಭ್ಯಗಳ ವಿಶ್ಲೇಷಣೆ ಮಾಡುವ ಜೊತೆಗೆ ಭೌತಿಕ ಸೌಲಭ್ಯಗಳ ಸ್ಥಿತಿ- ಗತಿಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಬೋಧನಾ ಮತ್ತು ಕಲಿಕಾ ಸಾಮಗ್ರಿಗಳ ವಿಶ್ಲೇಷಣೆಯ ಜೊತೆಗೆ ಅವುಗಳ ಬಳಕೆಯನ್ನು ಮತ್ತು ಕಳೆದ ಮೂರು ವರ್ಷಗಳಿಂದ ಅಂದರೆ ೨೦೦೨-೦೩ರಿಂದ ೨೦೦೪-೦೫ರವರೆಗಿನ ಮಕ್ಕಳ ದಾಖಲಾತಿ ಹಾಜರಾತಿಯ ವಿವರವನ್ನು ಕೋಷ್ಟಕದಲ್ಲಿ ಗುರುತಿಸಲಾಗಿದೆ. ಜೊತೆಗೆ ಗಡಿನಾಡ ಶಾಲೆಗಳ ಶೈಕ್ಷಣಿಕ ಸೌಲಭ್ಯಗಳಲ್ಲಿ ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ೫ನೇ ತರಗತಿಯಿಂದ ೭ನೇ ತರಗತಿಯ ವಿದ್ಯಾರ್ಥಿಗಳ ಫಲಿತಾಂಶ, ಶಾಲಾ ತಾಪಾಸಣೆ ಅಧಿಕಾರಿಗಳು ಕೈಗೊಂಡ ವಿವರ, ಮಕ್ಕಳ ಗುಣಮಟ್ಟ ಸುಧಾರಣೆಗೆ ಶಿಕ್ಷಕರು ಕೈಗೊಂಡ ಕ್ರಮಗಳು, ಕನ್ನಡ ಭಾಷಾ ಸುಧಾರಣೆಗೆ ಶಿಕ್ಷಕರು ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಪಠ್ಯಪುಸ್ತಕ, ಸಮವಸ್ತ್ರಹಾಗೂ ಅಕ್ಷರದಾಸೋಹದಂತಹ ಕಾರ್ಯಕ್ರಮಗಳನ್ನು ಕುರಿತು ಪ್ರತಿಯೊಂದು ಶಾಲೆಯ ಬಗ್ಗೆ ಕೋಷ್ಟಕಗಳಲ್ಲಿ ಗುರುತಿಸಿ ವಿಶ್ಲೇಷಣೆ

ಮಾಡಲಾಗಿದೆ. ಈ ಮೇಲಿನ ಪ್ರತಿಯೊಂದು ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳು ಗಡಿನಾಡಿನ ಭಾಗದ ಶಾಲೆಯಲ್ಲಿ ಹೇಗೆ ಇವೆ ಎಂಬುದನ್ನು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ಈ ಭಾಗದ ಶಾಲೆಗಳಲ್ಲಿ ಸರಕಾರವು ಜಾರಿಗೆ ತಂದಂತಹ ಕಾರ್ಯಕ್ರಮಗಳು ಯಾವ ರೀತಿಯಾಗಿ ಜಾರಿಗೆ ಬಂದಿವೆ ಹಾಗೂ ಅವುಗಳ ಸಫಲತೆ ಮತ್ತು ವಿಫಲತೆಗಳನ್ನು ಸಹ ವಿವರಿಸಲಾಗಿದೆ.

ಗಡಿನಾಡ ಕನ್ನಡಿಗರ ಶೈಕ್ಷಣಿಕ ಸಮಸ್ಯೆಗಳು ಎಂಬ ಅಧ್ಯಾಯದಲ್ಲಿ ಮುಂಬಯಿ -ಕರ್ನಾಟಕ ಗಡಿಭಾಗದ ಪ್ರದೇಶಗಳ ಕನ್ನಡಿಗರ ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮುಂಬಯಿ-ಕರ್ನಾಟಕದ ಗಡಿನಾಡ ಭಾಗದ ಜಿಲ್ಲೆಗಳಾದ ಬೆಳಗಾವಿ, ಉತ್ತರ ಕನ್ನಡ, ಬಿಜಾಪೂರ, ಬಾಗಲಕೋಟ ಜಿಲ್ಲೆಗಳ ತಾಲೂಕಿನ ಗಡಿಭಾಗದ ಅನೇಕ ಗ್ರಾಮಗಳ ಶಾಲೆಗಳಲ್ಲಿರುವ ಶೈಕ್ಷಣಿಕ ಸಮಸ್ಯೆಗಳು ಮತ್ತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಭಿನ್ನತೆ, ಪ್ರಾದೇಶಿಕ ಅಸಮಾನತೆ ಮತ್ತು ಮೂಲಭೂತ ಸೌಲಭ್ಯಗಳಲ್ಲಿ ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳ ಕೊರತೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಅಭಿವೃದ್ಧಿಗೆ ಇರುವ ಎಲ್ಲ ಕಾರ್ಯಕ್ರಮಗಳು ಸರಿಯಾಗಿ ಏಕೆ ಜಾರಿಗೆ ಬಂದಿರುವುದಿಲ್ಲ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಜಾರಿಗೆ ತಂದಿರುವ ಕಾರ್ಯಕ್ರಮಗಳ ಬಗ್ಗೆ ಸ್ಥಳೀಯರಿಗೆ ತಿಳುವಳಿಕೆ ಜ್ಞಾನ ಏಕೆ ಇರುವುದಿಲ್ಲ, ಶಿಕ್ಷಣದ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಾರಿಗೆ ತಂದಿರುವ ವಿವಿಧ ಶಿಫಾರಸ್ಸುಗಳು, ವರದಿಗಳು ಗಡಿಭಾಗದಲ್ಲಿ ಜಾರಿಗೆ ಬಾರದಿರುವುದರ ಬಗ್ಗೆ, ಇದರಿಂದಾಗಿ ಗಡಿನಾಡು ಭಾಗದ ಕನ್ನಡಿಗರಲ್ಲಿ ಉಂಟಾಗಿರುವ ಶೈಕ್ಷಣಿಕ ಸಮಸ್ಯೆಗಳನ್ನು ಕುರಿತು ಸಮಗ್ರವಾಗಿ ವಿಶ್ಲೇಷಿಸಲಾಗಿದೆ.

ಹೀಗೆ ''ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಶೈಕ್ಷಣಿಕ ಸ್ಥಿತಿ-ಗತಿ'' ಒಂದು ಅಧ್ಯಯನದಲ್ಲಿ ಶೈಕ್ಷಣಿಕ ಕ್ಷೇತ್ರದ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಲಾಗಿದೆ. ನೂರಾರು ಶೈಕ್ಷಣಿಕ ಸಮಸ್ಯೆಗಳನ್ನು ತಮ್ಮೊಳಗೆ ಹುದುಗಿಸಿಕೊಂಡಿರುವ ಗಡಿನಾಡ ಪ್ರದೇಶವು ಅಧ್ಯಯನದ ದೃಷ್ಟಿಯಿಂದ ತುಂಬಾ ಆಶಾದಾಯಕವಾಗಿದೆ. ಮುಂಬಯಿ- ಕರ್ನಾಟಕದ ಗಡಿನಾಡ ಕನ್ನಡಿಗರ ಪ್ರದೇಶದಲ್ಲಿ ಶೈಕ್ಷಣಿಕ ಶೋಧಕರಿಗೆ ವಿಪುಲ ಸರಕು ಲಭ್ಯವಿದ್ದು, ಇನ್ನೂ ಸರಿಯಾದ ನಿಟ್ಟಿನಲ್ಲಿ ಕ್ರಮಬದ್ಧ ಅಧ್ಯಯನ ಹಾಗೂ ಸಂಶೋಧನೆಗಳನ್ನು ಕೈಗೊಳ್ಳುವವರಿಗೆ ಅವಕಾಶವಿದೆ.

ಆಧಾರ ಗ್ರಂಥಗಳು

I. ಕನ್ನಡ ಪತ್ರಿಕೆ ಮತ್ತು ನಿಯತಕಾಲಿಕೆಗಳು :

೧. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ
೨. ಕನ್ನಡ ಪ್ರಭ
೩. ಕರ್ಮವೀರ
೪. ಕರ್ನಾಟಕ ವಿಕಾಸ
೫. ಕನ್ನಡಿಗ
೬. ಟೀಚರ್ (ಶೈಕ್ಷಣಿಕ ಮಾಸ ಪತ್ರಿಕೆ)
೭. ಜಯ ಕರ್ನಾಟಕ
೮. ಜಯಂತಿ
೯. ಜೀವನ ಶಿಕ್ಷಣ
೧೦. ತರುಣ ಭಾರತ
೧೧. ನವಕರ್ನಾಟಕ
೧೨. ನವಯುಗ
೧೩. ನಾಗರಿಕ
೧೪. ಪ್ರಜಾಮತ
೧೫. ಪ್ರಪಂಚ
೧೬. ಪ್ರಜಾವಾಣಿ
೧೭. ಪ್ರಭುದ್ಧ ಕರ್ನಾಟಕ
೧೮. ಮಲ್ಲಿಗೆ
೧೯. ಮಾರ್ಗದರ್ಶಿ
೨೦. ವಾಗ್ಭೂಷಣ
೨೧. ಲೋಕ ಬಂಧು
೨೨. ವಿಶಾಲ ಕರ್ನಾಟಕ
೨೩. ವಿಜಯ ಕರ್ನಾಟಕ
೨೪. ವಿಶ್ವವಾಣಿ
೨೫. ಶರಣ ಸಾಹಿತ್ಯ
೨೬. ಶಿಕ್ಷಣ ಧ್ವನಿ
೨೭. ಶಿಕ್ಷಣ ಪ್ರಭೆ (ಶೈಕ್ಷಣಿಕ ಮಾಸಪತ್ರಿಕೆ)
೨೮. ಶಿಕ್ಷಣ ವಾರ್ತೆ
೨೯. ಸಂಯುಕ್ತ ಕರ್ನಾಟಕ
೩೦. ಸ್ಪರ್ಧಾ ಪ್ರಪಂಚ
೩೧. ಸಮರ್ಥ
೩೨. ಸ್ವದೇಶಾಭಿಮಾನಿ
೩೩. ಸುಬೋಧ
೩೪. ಸೂರ್ಯ

II ಕನ್ನಡ ಗ್ರಂಥಗಳು

೧.ಆಲೂರು ವೆಂಕಟರಾವ್ : 'ನನ್ನ ಜೀವನ ಸ್ಮೃತಿಗಳು' ೧೯೭೪ ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

೨.ಆಲೂರು ವೆಂಕಟರಾವ್ : 'ಕರ್ನಾಟಕತ್ವದ ವಿಕಾಸ' ೧೯೫೭ ನವಜೀವನ ಗ್ರಂಥ ಭಂಡಾರ, ಧಾರವಾಡ.

೩.. ಕಪಟಾಳ ಕೃಷ್ಣರಾವ್ : 'ನಮ್ಮ ನಾಡು ನುಡಿಯ ಇತಿಹಾಸ' ೧೯೭೦ ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಉಷಾ ಸಾಹಿತ್ಯ ಮಾಲೆ, ಮೈಸೂರು.

೪. ಸೂರ್ಯನಾಥ ಕಾಮತ್ : 'ಧಾರವಾಡ ಜಿಲ್ಲಾ ಗ್ಯಾಜಟಿಯರ್' ೧೯೯೫ ಕರ್ನಾಟಕ ಸರಕಾರ, ಬೆಂಗಳೂರು.

೫.ಸೂರ್ಯನಾಥ ಕಾಮತ್(ಸಂ) : 'ಕರ್ನಾಟಕ ರಾಜ್ಯ ಗ್ಯಾಜಟಿಯರ್' ಭಾಗ-೧, ೧೯೮೪ ಕರ್ನಾಟಕ ಸರಕಾರ, ಬೆಂಗಳೂರು.

೬.ಸೂರ್ಯನಾಥ ಕಾಮತ್ : 'ಕರ್ನಾಟಕತ್ವದ ಜಾಗೃತಿ' ೧೯೮೧ ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೭.ಓಂಕಾರ ಕಾಕಡೆ : 'ಮಹಾಜನ ವರದಿಯ ಅವಲೋಕನ' ೨೦೦೩ ಕನ್ನಡ ಜಾಗೃತಿ ಪುಸ್ತಕಮಾಲೆ, ಚಿಂಚಣಿ, ಬೆಳಗಾವಿ.

೮. ಕುಲಕರ್ಣಿ ಭೀ.ಗು. : 'ಕರ್ನಾಟಕ ವಿದ್ಯಾವರ್ಧಕ ಸಂಘ; ಅಷ್ಟದಶಕಗಳ ಬೆಳಕು' ೧೯೭೩ ವಾಗ್ಭೂಷಣ (ಸಂ.ಕೆ.ಎಸ್. ದೇಶಪಾಂಡೆ) ಧಾರವಾಡ.

೯. ಕೃಷ್ಣರಾವ್ ಎಂ.ವ್ಹಿ.ಮತ್ತು ಎಂ. ಕೇಶವ ಭಟ್ : 'ಕರ್ನಾಟಕ ಇತಿಹಾಸ ದರ್ಶನ' ೧೯೭೦ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೧೦. ಕೆರೂರ ಎನ್.ಜಿ. : 'ಶಿಕ್ಷಣ ಮಾರ್ಗ' ೨೦೦೪ ಎಸ್.ವಿ. ಎಸ್. ಪ್ರಕಾಶನ, ಬೆಂಗಳೂರು.

೧೧. ಕೆಂಪೇಗೌಡ ಕೆ. : 'ಕನ್ನಡ ಉಪಭಾಷೆಗಳ ಅಧ್ಯಯನ' ೨೦೦೩ ಭಾರತೀ ಪ್ರಕಾಶನ, ಮೈಸೂರು.

೧೨.ಕೇಶವಮೂರ್ತಿ ಎಸ್. : 'ಪ್ರಾಥಮಿಕ ಶಿಕ್ಷಣ' ೧೯೯೮ ರಮ್ಯ ಪಬ್ಲಿಕೇಷನ್ಸ್, ಮೈಸೂರು.

೧೩. ಕೊಂಗವಾಡ ಎನ್.ಬಿ. : 'ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು' ೧೯೯೫ ವಿದ್ಯಾನಿಧಿ ಪ್ರಕಾಶನ, ಗದಗ

೧೪.ಗುರುಲಿಂಗ ಕಾಪಸೆ (ಸಂ) : 'ಕನ್ನಡ ಕಾವಲು' ೧೯೯೫ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಗೋಕಾಕ ವಿ. ಕೃ. : 'ಕನ್ನಡದ ಕಾಲು ಶತಮಾನ' ೧೯೭೫ ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ.

೧೬.ಗೋಪಾಲರಾವ್ ಎಚ್. ಎಸ್. : 'ನಮ್ಮ ಕನ್ನಡನಾಡು' ೧೯೯೬ ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೭.ಗೋಪಾಲರಾವ್ ಎಚ್. ಎಸ್. : 'ಕರ್ನಾಟಕ ಏಕೀಕರಣದ ಇತಿಹಾಸ' ೧೯೯೬ ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೮. ಗೋವಿಂದರಾಜು ಸಿ. ಆರ್. : 'ಕರ್ನಾಟಕದ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ' ೨೦೦೦ ಎಸ್.ಬಿ.ಎಸ್.ಪ್ರಕಾಶನ, ಬೆಂಗಳೂರು.

೧೯. ಚಂದ್ರಶೇಖರ ಆರ್. ಎನ್. : ' ಇದು ನಮ್ಮ ಕರ್ನಾಟಕ' (ಆಗುಹೋಗುಗಳು) ೨೦೦೫ ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೦.ಚಿನ್ನಸ್ವಾಮಿ ಎನ್. ಸೋಸಲೆ : 'ಗಡಿ ಚಳವಳಿಗಳು' ೧೯೯೯ ಪ್ರಾಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೧. ಚಂದ್ರಶೇಖರ ಟಿ. ಆರ್.ಮತ್ತು ಚಂದ್ರ ಪೂಜಾರಿ ಎಂ. (ಸಂ) : 'ಅಭಿವೃದ್ಧಿ ಅಧ್ಯಯನ' (ಸಮಾಜ ವಿಜ್ಞಾನದ ಅರ್ಧ ವಾರ್ಷಿಕ ಪತ್ರಿಕೆ) ಸಂಪುಟ.೨ ಸಂಚಿಕೆ ೧-೨೦೦೩. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೨. ಚಿದಾನಂದ ಮೂರ್ತಿ ಎಂ. : 'ಕರ್ನಾಟಕ ಸಂಸ್ಕೃತಿ' ೨೦೦೩, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೩.ಜಯಕುಮಾರ್ ಅನಗೋಳ್ : 'ಕಡ್ಡಾಯದ ಪ್ರಾಥಮಿಕ ಶಿಕ್ಷಣ' ೨೦೦೩ ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೪. ಧಾರವಾಡಕರ ರಾ.ಯ. : 'ಹೊಸಗನ್ನಡ ಸಾಹಿತ್ಯದ ಉದಯ ಕಾಲ' ೧೯೭೫, ಕ.ವಿ.ವಿ. ಧಾರವಾಡ.

೨೫. ದಿವಾಕರ .ರಂ.ರಾ. : 'ಕರ್ನಾಟಕ ಏಕೀಕರಣ ಕಥೆ' (ಎರಡನೇಮುದ್ರಣ) ೧೯೫೬, ಹುಬ್ಬಳ್ಳಿ.

೨೬. ದಿವಾಕರ .ರಂ.ರಾ. : 'ಕರ್ನಾಟಕ ಪರಂಪರೆ' ಸಂಪುಟ-೨. ೧೯೯೨ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೨೭.ನಂಬೂದರಿಪ್ಪಾದ್ ಇ.ಎಂ.ಎಸ್. : ',ಬಾರತದ ಚರಿತ್ರೆಯ ಸಿಂಹಾವಲೋಕನ' ೧೯೮೮ (ಅನುವಾದ . ಮಾಧವ ಬಿ) ಮೈಸೂರು.

೨೮. ನಾಯಕ . ಹಾ.ಮಾ.(ಪ್ರ.ಸಂ) : 'ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ' ೧೯೭೯ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೯. ನಾಗೇಶ ಎಚ್.ವಿ.(ಪ್ರ.ಸಂ) : 'ಸಾರ್ಥಕ ಶಿಕ್ಷಣ' ೧೯೯೮ ಪ್ರೊ. ಎನ್.ವಜ್ರಕುಮಾರ ನಾಗರಿಕ ಸನ್ಮಾನ ಸಮಿತಿ, ಧಾರವಾಡ.

೩೦.ನಿರ್ದೇಶಕರು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ : 'ಕರ್ನಾಟಕ ಅಂಕಿ- ಅಂಶಗಳ ನೋಟ' ೧೯೯೯-೨೦೦೦ ಬೆಂಗಳೂರು. ೧೫-೦೯-೨೦೦೦.

೩೧. ಪಾಟೀಲ ತಲ್ಲೂರ ರಾಯನಗೌಡ : 'ಕರ್ನಾಟಕ ಗಡಿಗೆರೆಗಳು' ೧೯೪೯ ಜನತಾ ಸೇವಕ ಸಮಾಜ, ಬೈಲಹೊಂಗಲ.

೩೨.ಪಾಟೀಲ ಪುಟ್ಟಪ್ಪ : 'ಕನ್ನಡದ ಕಂಪು' ೨೦೦೩ ಸಾಹಿತ್ಯಪ್ರಕಾಶನ, ಹುಬ್ಬಳ್ಳಿ.

೩೩.ಪಾಟೀಲ ಪುಟ್ಟಪ್ಪ :'ನಮ್ಮ ಚೆಲುವ ಕನ್ನಡನಾಡು' ೨೦೦೩ಸಪ್ನ ಬುಕ್‌ಹೌಸ್, ಬೆಂಗಳೂರು.

೩೪.ಪಾಟೀಲ ಪುಟ್ಟಪ್ಪ : 'ಕರ್ನಾಟಕದ ಕಥೆ' ೨೦೦೩. ಸಪ್ನ ಬುಕ್ ಹೌಸ್, ಬೆಂಗಳೂರು.

೩೫.ಪಾಟೀಲ ಎಸ್.ವಿ. : 'ನಮ್ಮ ನಾಡು, ನುಡಿ ಮತ್ತು ಗಡಿ'೨೦೦೫ ಕನ್ನಡ ಜಾಗೃತಿ ಪುಸ್ತಕ ಮಾಲೆ, ಚಿಂಚಣಿ ಬೆಳಗಾವಿ ಜಿಲ್ಲೆ.

೩೬. ಪ್ರಶಾಂತ್ ಎಚ್.ಡಿ. : 'ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ' ೨೦೦೫ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೭. ಪದ್ಮಪ್ರಸಾದ್ ಎಸ್.ಪಿ. : 'ಭಾರತದಲ್ಲಿ ಪ್ರೌಢ ಶಿಕ್ಷಣ' ೨೦೦೫ ಸುಮುಖ ಪ್ರಕಾಶನ, ಬೆಂಗಳೂರು.

೩೮. ಪದ್ಮಪ್ರಸಾದ್ ಎಸ್.ಪಿ. : 'ಶೈಕ್ಷಣಿಕ ಸಂಶೋಧನೆ' ೧೯೯೪ ಡೆಪ್ಯೂಟಿ ಚನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ, ಧಾರವಾಡ.

೩೯.ಬರಗೂರು ರಾಮಚಂದ್ರಪ್ಪ : 'ಕನ್ನಡಾಭಿಮಾನ' ೨೦೦೨ ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

೪೦. ಬಿಂದು ಮಾಧವ ಬುರ್ಲಿ(ಸಂ) : 'ಕರ್ನಾಟಕ ದರ್ಶನ', ೧೯೩೭ ಮಿಂಚಿನಬಳ್ಳಿ ಚಾವಡಿ, ದೇಸಾಯಿ ಓಣಿ, ಧಾರವಾಡ.

೪೧. ಬೇಂದ್ರೆ ದ.ರಾ. : 'ಸಾಹಿತ್ಯ ಸಂಶೋಧನೆ' ಮನೋಹರ ಗ್ರಂಥ ಮಾಲೆ, ಧಾರವಾಡ.

೪೨.ಮಂಗಳವೇಡು ಶ್ರೀನಿವಾಸರಾವ್ ಮತ್ತು ಸಂಗಮನಾರಾಯಣ : 'ಕರ್ನಾಟಕ ಏಕೀಕರಣ', ೧೯೪೬ ಲೋಕ ಶಿಕ್ಷಣ ವಾಙ್ಮಯ, ಹುಬ್ಬಳ್ಳಿ.

೪೩.ಮಹಾದೇವಯ್ಯ ಟಿ. ಆರ್.(ಸಂ) : 'ಚನ್ನ ಶಿಕ್ಷಣಸಿರಿ' ೧೯೯೯ ಪಂ.ಚನ್ನಪ್ಪ ಎರೇಸೀಮಿ ಅಭಿನಂದನ ಸಮಿತಿ, ಬೆಂಗಳೂರು.

೪೪. ಮುಳಗುಂದ ಚ.ವಿ. ಮತ್ತು ಹೆಗಡೆ ಜಿ. ಎಂ. : 'ಸುವರ್ಣ ಕರ್ನಾಟಕ: ಸಮಾಜ ಮತ್ತು ಸಂಸ್ಕೃತಿ' ೨೦೦೬ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

೪೫. ಯಾದವಾಡ ಎಸ್.ಬಿ. : 'ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ', ೨೦೦೪ ವಿದ್ಯಾನಿಧಿ ಪ್ರಕಾಶನ, ಗದಗ.

೪೬. ರಹಮತ್ ತರೀಕೆರೆ(ಸಂ) : 'ಕನ್ನಡ ಅಧ್ಯಯನ' (ವಿಶೇಷ ಸಂಚಿಕೆ) ತ್ರೈಮಾಸಿಕ ಪತ್ರಿಕೆ, ಸಂಪುಟ-೮, ಸಂಚಿಕೆ ೨ ಮತ್ತು ೩, (ಅಕ್ಟೋಬರ ೨೦೦೧-ಮಾರ್ಚ್ ೨೦೦೨) ೨೦೦೧ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ರಾಜಕುಮಾರ್ ಕೆ. (ಸಂ) : 'ಮಹಿಷಿವರದಿ ಮತ್ತು ಸರ್ಕಾರಿ ಆಜ್ಞೆ' ೧೯೯೧ ಸಿರಿಗನ್ನಡ ಪ್ರಕಾಶನ, ಬೆಂಗಳೂರು.

೪೮. ರಾಘವೇಂದ್ರ ಎಲ್. : 'ಕರ್ನಾಟಕ ಶಿಕ್ಷಣ ಅಧಿನಿಯಮ ೧೯೮೩' ೨೦೦೧ ಶ್ರೀ ರಾಘವೇಂದ್ರ ಪ್ರಕಾಶನ, ಬೆಂಗಳೂರು.

೪೯. ವೆಂಕಟ ರಂಗೋ ಕಟ್ಟಿ(ಅನುವಾದ) : 'ಗ್ಯಾಜಿಟಿಯರ್ ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಧಾರವಾಡ, ಬೆಳಗಾವಿ, ಬಿಜಾಪೂರ, ಕೆನರೀಜ್ ಜಿಲ್ಲೆಗಳದ್ದು ೧೯೮೪, ಏಶಿಯನ್ ಏಜ್ಯುಕೇಷನ್ ಸರ್ವಿಸಿಸ್, ಹೊಸದೆಹಲಿ.

೫೦. ವೆಂಕಟಾಚಲ ಶಾಸ್ತ್ರೀ ಟಿ.ವ್ಹಿ. :'ನಮ್ಮ ಕರ್ನಾಟಕ'೨೦೦೧ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫೧. ವೀರಭದ್ರಪ್ಪ ಬಿ.ವ್ಹಿ. : 'ಶಿಕ್ಷಣ ಮತ್ತು ಸಂಸ್ಕೃತಿ' ೨೦೦೫ ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೨. ಶೇಷಗಿರಿರಾವ್ ಎಲ್. ಎಸ್. : 'ಕನ್ನಡ- ಕನ್ನಡಿಗ- ಕರ್ನಾಟಕ' ೧೯೯೬ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫೩. ಶಂಕರ ನಾರಾಯಣ ರಾವ್ ಎನ್.ಪಿ. : 'ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು' ೧೯೯೧, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೪. ಸಾಲೆತ್ತೊರೆ ಬಿ. ಎ.ಮತ್ತು ದೇಸಾಯಿ ಪಾಂಡುರಂಗರಾಯರು : 'ಕನ್ನಡ ನಾಡಿನ ಚರಿತ್ರೆ' ಭಾಗ-೧ ೧೯೯೭ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

III ENGLISH BOOKS, REPORTS, GAZETTEER

1. Annual Report of D.P.I. : Education Department Bombay 1865-66.
2. Belgaum City-Integral part of Maharashtra.
   By : Maharashtra Ekikaran Samiti
3. Census of India :Series II , Karnataka part B (1)
   primary Census Abstract Director General population
   Directorete of Census operation Bangalore - 1991
4. Census of India : primary Census Abstract Director General population Directorete of Census operation Bangalore - 2001
5. D.P. Karmarkar : Cultural History of Karnataka - 1974 K.V.V. Sangha, Dharwad.
6. Gazetteer of Bombay state : Dharwad District (revised edition) Vol xxii of the original gazetteer of the Bombay presidency relating to Dharwad. Government Central press BOmbay 1959
7. Gazetteer of Bombay presidency : Vol. xv part II Canara Government Central Press Bombay 1883
8. Gazetteer of Mysore : Bijapur District 1966. Government press Bangalore
9. H.J. Stokes : An Historical Account of the Belgaum District in the Bombay presidency . 1870. Educational Society's press Bombay.
10. Imperical Gazetteer of India Vol. VII oxford clarendon press 1908
11. J.F.Fleet : Dynasties of the Canarees Districts of the Bombay presidency Government Central Press, Bombay 1882

12. Karnataka Provincial Committee : Karnataka Handbook Editorial Board K.P.C.C publication Banglore.

13. National Council of Educational Research and Training sixth All India Educational Survey, National Table, Vol. I New Delhi 1997.

14. Probe : Public Report An Basic Education in India (Team) Oxford University press New Delhi 1999

15. Report of the states Reorganisation Commission, Fazal Ali, (1955) Government of India, Delhi.

16. R.S. Mugali : The Heritage of Karnataka 1946 Satyashodhana publishing House, Bangalore.

17. Report of the Director of public Inspector Bombay 1865-66.

18. Survey of Indigenies Education in the province of Bombay 1829-39.

19. S.Sri Kanthashastri :Sources of Karnataka History Vol - I 1940 Mysore University, Mysore.

20. The Report of the Representatives of Mysore on the Maharashtra-Mysore Border Disputes Committee (1962)

21. Venkat Rango Katti : Gazetteer of Bombay Karnataka ,1893.Government Central press, Bombay.

22. West Adward : A memoire of the states of the Southern Maratha country, 1869, Educational Society's Press, Bombay.